ವಿತ್ತೀಯ ಕಾರ್ಯಕಲಾಪಗಳು

1995-96ನೇ ಸಾಲಿನ ಆಯವ್ಯಯದ ಮೇಲಿನ ಸಾಮಾನ್ಯ ಚರ್ಚೆ(ಮುಂದುವರಿದುದು)

ಅಧ್ಯಕ್ಷರು: ಮಾನ್ಯ ವೀರಪ್ಪಮೊಯಿಲಿ ರವರು ಚರ್ಚೆಯನ್ನು ಮುಂದುವರೆಸಿ.

ಶ್ರೀ ಎಂ. ವೀರಪ್ಪಮೊಯಿಲಿ (ಕಾರ್ಕಳ):- ಸನ್ಮಾನ್ಯ ಅಧ್ಯಕ್ಷರೇ, ಈ ಆಯವ್ಯಯದ ಮೇಲೆ ಸ್ಥೂಲವಾದಂಥ ವಿಚಾರಗಳನ್ನು ಹೇಳುವ ಮೊದಲು ತೆರಿಗೆಗಳ ಬಗ್ಗೆ ಮೊದಲು ಮಾತನಾಡಿದರೆ ಬಹುಶ: ಒಳ್ಳೆಯದೆಂದು ನನಗನ್ನಿಸುತ್ತದೆ. ಮುಖ್ಯವಾಗಿ ಸುಮಾರು ಒಂಭತ್ತು ಜಿಲ್ಲೆಗಳಲ್ಲಿ ಖಾಸಗೀ ಬಸ್ಸುಗಳವರು ಮುಷ್ಕರ ಮಾಡುತ್ತಿದ್ದಾರೆ. ಅದು ತಮಗೆ ಗೊತ್ತಿರಬಹುದು. ನಮ್ಮ ದಕ್ಷಿಣ ಕನ್ನಡ ಜಿಲ್ಲೆಯೂ ಸೇರಿ ಒಂಭತ್ತು ಜಿಲ್ಲೆಗಳಲ್ಲಿ ಮುಷ್ಕರ ಮಾಡುತ್ತಿದ್ದಾರೆ. ಇದಕ್ಕೆ ಪರ್ಯಾಯ ವ್ಯವಸ್ಥೆ ಮಾಡುತ್ತೇವೆಂದು ಒಂದು ಕಡೆ ಹೇಳಿಕೆ ಕೊಟ್ಟಿದ್ದಾರೆ. ಈ ಒಂಭತ್ತು ಜಿಲ್ಲೆಗಳಲ್ಲಿ ಸುಮಾರು ಮೂರೂವರೆ ಸಾವಿರ ಖಾಸಗೀ ಬಸ್ಸುಗಳು ಓಡಾಡುತ್ತಿವೆ. ಇವರು 75 ಬಸ್ಸುಗಳನ್ನು ಪರ್ಯಾಯವಾಗಿ ಓಡಿಸುತ್ತೇವೆಂದು ಹೇಳುತ್ತಾರೆ. ಇವರಿಗೆ ದೂರದ ಊರುಗಳಿಗೆ ಹೋಗುವ 30 ಬಸ್ಸುಗಳನ್ನು ನಿಲ್ಲಿಸಿ ಅವುಗಳನ್ನು ಮಾತ್ರ ಇಲ್ಲಿಗೆ ಕೊಡಲು ಸಾಧ್ಯವಾಗುತ್ತದೆಂದು ಸ್ಥಳೀಯ ಅಧಿಕಾರಿಗಳು ಹೇಳುತ್ತಾರೆ. ಈಗ ಖಾಸಗಿ ಬಸ್ಸುಗಳ ಓಡಾಟ ಸಂಪೂರ್ಣವಾಗಿ ಬಂದ್ ಆಗಿದೆ. ಮುರ್ನಾಲ್ಕು ಕೆಎಸ್ಆರ್‌ಟಿಸಿ ಬಸ್ಸುಗಳು ಓಡಾಡುತ್ತಿರುವುದನ್ನು ಬಿಟ್ಟರೆ ಉಳಿದ ಬಸ್ಸುಗಳ ಸಂಚಾರ ಸಂಪೂರ್ಣವಾಗಿ ಸ್ಥಗಿತವಾಗಿದೆ. ಇದಕ್ಕೆ ಕಾರಣ ತಾವೇ, ಸಾರಿಗೆ ಸಚಿವರು ಇದಕ್ಕೆ ಕಾರಣವೆಂದು ಹೇಳಬೇಕಾದ ಅವಶ್ಯಕತೆ ಇಲ್ಲ, ಹಣಕಾಸು ಸಚಿವರೇ ಇದಕ್ಕೆ ಕಾರಣ. ಎಲ್ಲಿ ಈ ಸಾರಿಗೆ ವ್ಯವಸ್ಥೆ ಇದೆಯೋ ಅದರ ಮೇಲೆ ಎಷ್ಟು ರೀತಿಯಾದ ತೆರಿಗೆಯನ್ನು ಹಾಕಬಹುದು ಅದಷ್ಟನ್ನು ಹಾಕಿದ್ದೀರಿ, ಎಲ್ಲಾ ಕಡೆಗಳಿಂದಲೂ ಸಾರಿಗೆಯ ಮೇಲೆ ತೆರಿಗೆಯನ್ನು ಹಾಕಿದ್ದೀರಿ, ಬಹಳವಾದ ಏಟನ್ನು ಕೊಟ್ಟಿದ್ದೀರಿ, ಒಂದು ಭಾಗದಲ್ಲಿ ಏಟನ್ನು ಕೊಟ್ಟಿದ್ದರೆ ಸುಧಾರಿಸಿಕೊಳ್ಳಬಹುದಾಗಿತ್ತು. ಆದರೆ ತಾವು ಯಾವುದೇ ರೀತಿಯಾದ ಕರುಣೆ ಇಲ್ಲದೆ ಅಮಾನುಷವಾಗಿ ತೆರಿಗೆಯನ್ನು ಇವರ ಮೇಲೆ ಹಾಕಿದ್ದೀರೆಂದು ಹೇಳಿದರೆ ತಪ್ಪಾಗುವುದಿಲ್ಲ. ಮಾನವೀಯತೆಯ ಭಾವನೆ ಇಲ್ಲದೆ ತಾವು ತೆರಿಗೆಯನ್ನು ಹೇರತಕ್ಕ ಪ್ರಯತ್ನ ಮಾಡಿದ್ದೀರಿ, ತೆರಿಗೆಯನ್ನು ಹೇರುದರಲ್ಲಿ ತಾವು ಅದ್ವಿತೀಯರಾಗಿದ್ದೀರೆಂದು ಹೇಳಿದರೆ ತಪ್ಪಾಗದು.

(ಗೊಂದಲ)

ಶ್ರೀ ವಸಂತ ವಿ. ಸಾಲಿಯಾನ:- ನಮ್ಮ ಭಾಗದಲ್ಲಿ ಬಸ್ಸುಗಳಿಲ್ಲದೆ ಪರೀಕ್ಷೆಗೆ ಹೋಗಲು ವಿದ್ಯಾರ್ಥಿಗಳಿಗೆ ಆಗುತ್ತಿಲ್ಲ. ಎಲ್ಲಾ ಬಸ್ಸುಗಳು ನಿಂತಿವೆ.

ಅಧ್ಯಕ್ಷರು: ತಾವುಗಳೆಲ್ಲರೂ ಸೇರಿ ಪ್ರಸ್ತಾಪ ಮಾಡಲು ಇರುವ ವಿಷಯ ಸಾರಿಗೆಯ ಮುಷ್ಕರದ ಬಗ್ಗೆ. ಅದರ ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರೇ ಮಾತನಾಡುತ್ತಾರೆ. ಅವರೂ ಸಹ ತಮ್ಮ ಭಾಗದಿಂದಲೇ ಬಂದವರು. ಕೆಎಸ್. ಈಶ್ವರಪ್ಪನವರೊಬ್ಬರನ್ನು ಬಿಟ್ಟು ನಿಂತುಕೊಂಡಿರುವವರೆಲ್ಲರ ಸಮಸ್ಯೆ ಒಂದೇ ಆಗಿದೆ.

ಶ್ರೀ ಕೆ.ಎಸ್. ಈಶ್ವರಪ್ಪ (ಶಿವಮೊಗ್ಗ): ಅಧ್ಯಕ್ಷರೇ, ಇಡೀ ರಾಜ್ಯದಲ್ಲಿ ಖಾಸಗೀ ಬಸ್ಸುಗಳ ಸಂಖ್ಯೆ ಜಾಸ್ತಿ ಇರತಕ್ಕದ್ದು ಶಿವಮೊಗ್ಗ ಜಿಲ್ಲೆಯಲ್ಲಿ, ನನ್ನ ಕ್ಷೇತ್ರದಲ್ಲಿ ಬಸ್ಸುಗಳವರು ಮುಷ್ಕರ ಮಾಡುತ್ತಿದ್ದಾರೆ ಅದಕ್ಕೆ ಪರ್ಯಾಯವಾದ ವ್ಯವಸ್ಥೆ ಮಾಡುತ್ತೇವೆಂದು ನಿನ್ನೆ ಉತ್ತರವನ್ನು ಕೊಟ್ಟರು. ಅದೇ ಪ್ರಕಾರ ಅಧ್ಯಾಪಕರು ಮುಷ್ಕರ ಮಾಡುತ್ತಿದ್ದಾರೆ. ಅವರಿಗೆ ಪರ್ಯಾಯವಾದ ವ್ಯವಸ್ಥೆಯನ್ನು ಮಾಡಿಕೊಂಡು ಹೋದರೆ ಪ್ರಜಾಪ್ರಭುತ್ವ ನಾಶವಾಗಿ ಹೋಗುತ್ತದೆ. ಅವರು ನಮ್ಮ ಬೇಡಿಕೆಗಳ ಬಗ್ಗೆ ಗಮನ ಹರಿಸಬೇಕಾಗುತ್ತದೆ. ಇಡೀ ದೇಶದಲ್ಲೆ ಬಸ್ಸುಗಳ ವಿಶೇಷವಾದ ವ್ಯವಸ್ಥೆ ಮಾಡಲು ಅವಕಾಶವನ್ನು ಕೊಡುತ್ತಾರೆ. ಆದರೆ ನಮ್ಮ ರಾಜ್ಯದಲ್ಲಿ ಮಾತ್ರ ಆ ರೀತಿ ಇಲ್ಲ. ನಮ್ಮ ರಾಜ್ಯ ಇಡೀ ದೇಶದಿಂದ ಬೇರೆಯಾಗಿದೆಯೇ, ಎಂಬುದನ್ನು ಮಾನ್ಯ ಮಂತ್ರಿಗಳು ಹೇಳಲಿ.

ಅಧ್ಯಕ್ಷರು:- ತೆರಿಗೆಗಳ ಬಗ್ಗೆ ಅನಂತರ ಮಾತನಾಡಿ. ಈಗ ವಿಷಯ ಇರತಕ್ಕದ್ದು ಖಾಸಗೀ ಬಸ್ಸುಗಳವರು ಮುಷ್ಕರ ಮಾಡುತ್ತಿರುವುದರಿಂದ ಸಾರ್ವಜನಿಕರ ಸ್ಥಿತಿ ಹದಗೆಟ್ಟಿದೆ, ಸಾರ್ವಜನಿಕರ ಹಿತಕ್ಕೆ ಧಕ್ಕೆಯಾಗಿದೆ ಎಂದು ಹೇಳಿದ್ದಾರೆ.

ಶ್ರೀ ಕೆ.ಎಸ್. ಈಶ್ವರಪ್ಪ:- ನಾನೂ ಸಹ ಅದರ ಬಗ್ಗೆ ಮಾತನಾಡುತ್ತೇನೆ.

ಅಧ್ಯಕ್ಷರು: ತಾವು ದಯಮಾಡಿ ಕುಳಿತುಕೊಳ್ಳಿ. ಹಿರಿಯ ಸದಸ್ಯರಾದ ವೀರಪ್ಪ ಮೊಯಿಲಿ ಅವರನ್ನು ಕರೆದಿದ್ದೇನೆ. ಅವರು ತೆರಿಗೆಯ ಬಗ್ಗೆ ಮಾತನಾಡುತ್ತಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಮಂತ್ರಿಗಳೇ ಇದರ ಬಗ್ಗೆ ಸ್ಪಷ್ಟವಾಗಿ ಹೇಳಿದ್ದಾರೆ. ನಾನು ನಾಲ್ಕೇ ಅಂಶಗಳನ್ನು ಇಲ್ಲಿ ಹೇಳುತ್ತೇನೆ. ಹದಗೆಟ್ಟಿರುವ ರಸ್ತೆಗಳನ್ನು ದುರಸ್ತಿ ಮಾಡಬೇಕೆಂದು ಅವರುಗಳು ಕೇಳಿಕೊಂಡಿದ್ದಾರೆ. ಇದಕ್ಕೆ ಪರ್ಯಾಯವಾದ ವ್ಯವಸ್ಥೆ ಮಾಡುತ್ತೇವೆಂದರೆ ಹೇಗೆ? ಶಿವಮೊಗ್ಗದಿಂದ ಬೆಂಗಳೂರಿಗೆ ಬರಲು ಬಸ್ಸುಗಳಿಲ್ಲ, ನಾವೇನು ನಡೆದುಕೊಂಡು ಬರಬೇಕೆ? ಇದರ ಬಗ್ಗೆ ಎಷ್ಟು ಪತ್ರವನ್ನು ಬರೆದರೂ ಸಹ ಒಂದಕ್ಕೂ ಉತ್ತರವಿಲ್ಲ.

ಅಧ್ಯಕ್ಷರು:- ಜೆ.ಎಚ್. ಪಟೇಲ್ ರವರನ್ನು ಕೇಳಿದರೆ ಹೆಲಿಕಾಫ್ಟರ್‌ನ್ನು ಇಳಿಸುತ್ತಾರಲ್ಲಾ,

ಶ್ರೀ ಕೆ ಎಸ್. ಈಶ್ವರಪ್ಪ:- ನನಗೆ ಆಶ್ಚರ್ಯವಾಯಿತು, ನಾನು ಚೆನ್ನಗಿರಿಗೆ ಹೋಗಿದ್ದಾಗ ಅಲ್ಲಿ ವಿದ್ಯುತ್ ಇಲ್ಲವೆಂದು ಸಾರ್ವಜನಿಕರು ಕೇಳಿದರೆ ನನ್ನ ಮನೆಗೆ ಎರಡು ಲ್ಯಾಟೀನ್ ದೀಪಗಳನ್ನು ತಂದಿದ್ದೇನೆಂದು ಪಟೇಲರು ಉತ್ತರವನ್ನು ಕೊಟ್ಟಿದ್ದಾರೆ. ಇಡೀ ರಾಜ್ಯದಲ್ಲಿ ಖಾಸಗೀ ಬಸ್ಸುಗಳವರು ಮುಷ್ಕರ ಮಾಡುತ್ತಿರುವುದರಿಂದ ಜನರ ಜೀವನ ಅಸ್ತವ್ಯಸ್ತವಾಗಿದೆ, ಇದಕ್ಕೆ ಸರ್ಕಾರ ಪರ್ಯಾಯವಾದ ವ್ಯವಸ್ಥೆ ಮಾಡುವುದಕ್ಕೆ ಹೋಗಬಾರದು. ಮುಷ್ಕರವನ್ನು ನಿಲ್ಲಿಸಿ ಅದರ ಮೂಲಕ ಜನಸಾಮಾನ್ಯರಿಗೆ ಅನುಕೂಲವನ್ನು ಮಾಡಬೇಕು. ಖಾಸಗೀಯವರು ಹದಗೆಟ್ಟಿರುವ ರಸ್ತೆಗಳನ್ನು ದುರಸ್ತಿ

ಮಾಡಿಕೊಡಿ ಎಂದು ಕೇಳಿದ್ದಾರೆ. ಆದಕ್ಕೆ ನೀವು ಪರ್ಯಾಯವಾದ ವ್ಯವಸ್ಥೆ ಮಾಡುತ್ತೀರಾ? ಈ ಬೇಡಿಕೆಗಳು ಬಹಳ ಸಣ್ಣ ಬೇಡಿಕೆಗಳು, ಅವುಗಳನ್ನು ಸರ್ಕಾರ ಈಡೇರಿಸಬೇಕು.

ಒಬ್ಬಮಾನ್ಯ ಸದಸ್ಯರು:- ಖಾಸಗೀ ಸಾರಿಗೆ ವ್ಯವಸ್ಥೆ ಸ್ಥಬ್ದವಾಗಿರುವುದರಿಂದ ನಮ್ಮ ಭಾಗದಲ್ಲಿ ಬಹಳ ತೊಂದರೆಯಾಗಿದೆ. ಆದ್ದರಿಂದ ಇದರ ಬಗ್ಗೆ ಮಾತನಾಡಲು ನಮಗೂ ಸಹ ಅವಕಾಶ ಮಾಡಿಕೊಡಬೇಕು.

ಅಧ್ಯಕ್ಷರು:- ಇಲ್ಲಿ ಎಲ್ಲರೂ ಮಾತನಾಡಲು ಅವಕಾಶವಿಲ್ಲ. ಎಲ್ಲಾರೂ ದಯಮಾಡಿ ಕುಳಿತುಕೊಳ್ಳಿ. ಇಷ್ಟೆಲ್ಲಾ ಸದಸ್ಯರು ನಿಂತುಕೊಂಡು ಕೇಳುತ್ತಿರುವ ವಿಚಾರ ಒಂದೇ ಆಗಿದೆ. ಖಾಸಗೀ ಬಸ್ಸಿನವರು ಮುಷ್ಕರ ಹೂಡಿರುವುದರಿಂದ ಜನಸಾಮಾನ್ಯರಿಗೆ ತೊಂದರೆಯಾಗಿರುವ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯಬೇಕೆಂದು ನಿಮ್ಮಗಳೆಲ್ಲರ ಅಭಿಪ್ರಾಯ ಅದಕ್ಕಾಗಿ ನೀವುಗಳೆಲ್ಲರೂ ಪ್ರಯತ್ನ ಮಾಡುತ್ತಿದ್ದೀರಿ. ಸುಮ್ಮನೆ ಎಲ್ಲಾರೂ ಉದ್ದ ಉದ್ದವಾದ ಭಾಷಣಗಳನ್ನು ಮಾಡುವುದರಿಂದ ಪ್ರಯೋಜನವಾಗುವುದಿಲ್ಲ. ವಿಷಯದ ಬಗ್ಗೆ ತೀವ್ರವಾಗಿ ಹೇಳಿದ್ದಾರೆ. ದಯಮಾಡಿ ಮಾನ್ಯ ವೀರಪ್ಪಮೊಯಿಲಿ ರವರೆ ಭಾಷಣವನ್ನು ಮುಂದುವರೆಸಿ.

ಶ್ರೀ ಅರಗ ಜ್ಞಾನೇಂದ್ರ:- ನಮ್ಮ ಶಿವಮೊಗ್ಗದ ಆಸ್ಪತ್ರೆಗೆ ಹೋಗಲು ಸಾಧ್ಯವಾಗದ ಪರಿಸ್ಥಿತಿ ಇದರಿಂದಾಗಿದೆ.

ಅಧ್ಯಕ್ಷರು:- ಈಶ್ವರಪ್ಪನವರ ಶಿವಮೊಗ್ಗ, ತಮ್ಮ ಶಿವಮೊಗ್ಗ ಬೇರೆ ಬೇರೆಯಲ್ಲ ನಿಮ್ಮ ಪಕ್ಷದ ಅಧ್ಯಕ್ಷರು ಮಾತನಾಡುತ್ತಿರಬೇಕಾದರೆ ನೀವು ಕುಳಿತುಕೊಳ್ಳಿ.

ಶ್ರೀ ಕೆ.ಎಸ್. ಈಶ್ವರಪ್ಪ:- ತಾವು ಹೇಳಿರುವ ವಿಚಾರ ಸರಿ. ನನ್ನ.

ಅಧ್ಯಕ್ಷರು:- ಈಶ್ವರಪ್ಪನವರೇ ತಾವು ಈ ರೀತಿ ಮಾಡಿದರೆ ಹೇಗೆ? ಮಾನ್ಯ ಮೊಯಿಲಿರವರು ಹಿರಿಯ ಸದಸ್ಯರು ಹಾಗೂ ಮಾಜಿ ಮುಖ್ಯಮಂತ್ರಿಗಳು; ಅವರು ಮಾತನಾಡಲು ನಿಂತಿದ್ದಾರೆ, ಅವರಿಗೆ ಮಾತನಾಡಲು ಅವಕಾಶ ಮಾಡಿಕೊಡಿ. ನಿಮ್ಮ ಬೇಡಿಕೆಗೆ ಸರ್ಕಾರದವರು ಉತ್ತರ ಕೊಡುತ್ತಾರೆ.

ಶ್ರೀ ಎಂ. ವೀರಪ್ಪಮೊಯಿಲಿ ನಮ್ಮ ಕಳಕಳಿ ಏಕೆಂದರೆ ಈಗ ಮಕ್ಕಳಿಗೆ ಪರೀಕ್ಷೆ ಪ್ರಾರಂಭವಾಗಿದೆ, ಬಸ್ಸುಗಳಿಲ್ಲದೆ ಪರೀಕ್ಷೆಗೆ ಹೋಗಲು ಆಗುತ್ತಿಲ್ಲ.

ಅಧ್ಯಕ್ಷರು:- ಪರೀಕ್ಷೆ ಇಲ್ಲದಿದ್ದರೂ ಬಸ್ಸುಗಳು ಬೇಕಲ್ಲವೇ? ಇದು ಸರ್ಕಾರಕ್ಕೆ ಪರೀಕ್ಷೆಯಷ್ಟೆ.

28 MARCH 1995

ಶ್ರೀ ಎಂ. ವೀರಪ್ಪಮೊಯಿಲಿ:- ಸರ್ಕಾರದವರಿಗೆ ಪರೀಕ್ಷೆಯೂ ಬೇಡ ಯಾವುದೂ ಬೇಡ, ಅಮಾನುಷವಾಗಿ ತೆರಿಗೆಯನ್ನು ಹಾಕಿದ್ದಾರೆ. ಹಿಂದೆ ಅಧಿಕಾರದಲ್ಲಿದ್ದಾಗಲೂ ಸಹ ಇದೇ ರೀತಿ ಮಾಡಿದ್ದರು. ಇವರ ಸರ್ಕಾರ ಹಿಂದೆ ಅಧಿಕಾರದಲ್ಲಿದ್ದಾಗ ಒಂದು ಸೀಟಿಗೆ 250 ರೂ. ಇದ್ದುದನ್ನು ರಾಮಕೃಷ್ಣ ಹೆಗಡೆಯವರು ತಕ್ಷಣವೇ 350 ರೂ. ಮಾಡಿದರು. ನಮ್ಮ ಬಂಗಾರಪ್ಪನವರ ಕಾಲದಲ್ಲಿ 400 ರೂಪಾಯಿ ಮಾಡಿದರು. ನಾನು ಕೇವಲ ಸೀಟಿಗೆ ಜಾಸ್ತಿ ಮಾಡಿದ್ದಾರೆಂದು ಹೇಳುತ್ತಿಲ್ಲ, ಇದಕ್ಕೆ ಸಂಬಂಧಪಟ್ಟ ಎಲ್ಲಾ ಕಡೆಗಳಲ್ಲೂ ಜಾಸ್ತಿ ಮಾಡಿದ್ದಾರೆ. ಜನರಿಂದ ಹಣ ಬರುತ್ತದೆಂದು ಸರ್ಕಾರದವರಾದ ನಾವು ದರೋಡೆಕೋರರಾಗಿ ಕೆಲಸ ಮಾಡಬಾರದು. ಆ ರೀತಿ ಮಾಡಿದರೆ ಹೇಗೆ? ನಾನು ಸಾಕಷ್ಟು ವರ್ಷಗಳ ಕಾಲ ಹಣಕಾಸಿನ ಸಚಿವನಾಗಿ ಕೆಲಸ ಮಾಡಿದ್ದೇನೆ. ಆದರೆ ಇಂದಿನ ಬಜೆಟ್‌ನಲ್ಲಿ ಅದರಲ್ಲೂ ಇದರ ಬಗ್ಗೆ ಮಾನವೀಯತೆಯ ವಾಸನೆಯೇ ಇಲ್ಲದಂತಾಗಿದೆ. ತೆರಿಗೆ ಎಲ್ಲೆಲ್ಲಿ ಬರುತ್ತದೊ ಅಲ್ಲೆಲ್ಲಾ ಹಾಕಿದ್ದಾರೆ. ಈ ರೀತಿ ಯಾವಾಗಲೂ ಮಾಡಿರಲಿಲ್ಲ. ನಾನು ಅಧಿಕಾರದಲ್ಲಿದ್ದಾಗ ಎರಡು ವರ್ಷಗಳ ಕಾಲ ಮಾಡಲಿಲ್ಲ. ಏಕೆಂದರೆ ನಮ್ಮ ಕೆಎಸ್ ಆರ್ ಟಿಸಿ ಯವರಿಗೆ ಸರಿಯಾದಂಥ ಸೇವೆಯನ್ನು ಒಂದಗಿಸುವುದಕ್ಕೆ ಆಗುವುದಿಲ್ಲವೆಂದಾಗ ಖಾಸಗಿಯವರಾದರೂ ಸಹ ಆ ಸೇವೆಯನ್ನು ಮಾಡಬೇಕಾಗಿರುವ ಅವಶ್ಯಕತೆ ಇದೆ. ಅದಕ್ಕೆ ಪ್ರೋತ್ಸಾಹ ಕೊಡಬೇಕಾಗುತ್ತದೆ. ಅದಕ್ಕೆ ಪರ್ಯಾಯವಾದ ವ್ಯವಸ್ಥೆಯನ್ನು ಕೆಎಸ್ ಆರ್ ಟಿಸಿ ಮತ್ತು ಬಿಟಿಎಸ್ ಮೂಲಕ ಮಾಡತಕ್ಕ ಶಕ್ತಿ ನಮಗೆ ಇದ್ದರೆ ನಾವು ಅವರ ಮೇಲೆ ಗಧಾಪ್ರಹಾರ ಮಾಡಬಹುದು. ಆದರೆ ಈಗ ಈಮನಾಪಲಿ ಇಲ್ಲ.

ಅಮೊಸಿನ್‌ಗಳನ್ನು ಸಿಂಗಪುರದಿಂದ ತರುವುದಕ್ಕೆ ಹೊರಟಿದ್ದಾರೆ. ಹಾಗಿರುವಾಗ ಇವತ್ತು ಜನರಿಗೆ ಸಂಪೂರ್ಣವಾದಂತಹ ಹೊರೆಯನ್ನು ಹೇರತಕ್ಕಂಥ ಪ್ರಯತ್ನ ಏನು ಮಾಡಿದ್ದೀರಿ ಇದು ಖಂಡಿತ ಸಾಧುವಲ್ಲ. ಇವತ್ತು 400 ರೂ. ಸೀಟ್ ಪರ್‌ಕ್ವಾರ್ಟರ್ ಇದ್ದುದ್ದನ್ನು 450 ರೂಪಾಯಿ ಮಾಡಿದ್ದೀರಿ. ಬೊಂಬಾಯಿಯಲ್ಲಿ ವಾಸ ಮಾಡಬೇಕಾದರೆ ಪರ್ಮಿಟ್ ಬೇಕು ಎಂದು ಮನೋಹರ್ ಜೋಷಿ ಅವರು ಇನ್‌ಡೈರೆಕ್ಟ್ ಆಗಿ ಹೇಳಿದ ಹಾಗೆ ಬೆಂಗಳೂರಿನಲ್ಲಿಯು ಆಗಿದೆ. ಇದರ ಬಗ್ಗೆ ನಾನು ವಿವರವಾಗಿ ಹೇಳುತ್ತೇನೆ. ನೀವು ಪೆಟ್ರೋಲ್ ಬೆಲೆ ಏರಿಕೆ ಮಾಡಿದಿರಿ ಮತ್ತು ಉಳಿದಿದ್ದನ್ನು ಸಹ ಏರಿಸಿದ್ದೀರಿ. ನಾವು ಎರಡು ವರ್ಷ ಪೆಟ್ರೋಲ್ ದರ ಕೂಡ ಏರಿಸಲಿಲ್ಲ. ಏಕೆಂದರೆ ಜನ ಸಾಮಾನ್ಯರು ಏನಿದ್ದಾರೆ ಅವರಿಗೆ ಇದು ಹೊರೆಯಾಗಬಾರದು. ಯಾವುದೇ ಒಂದು ಅಭಿವೃದ್ಧಿಗೆ ಸಂಪರ್ಕ ಸಾಧನ ಬಳಿ ಪ್ರಾಮುಖ್ಯ. ಇದು ಒಂದು ಮೂಲಭೂತವಾದಂತಹ ಅವಶ್ಯಕತೆ. ತಾವು ಒಂದು ಮೋಟಾರ್ ವೆಹಿಕಲ್ ಇಟ್ಟುಕೊಳ್ಳುವುದು ಲಕ್ಸುರಿ ಎಂದು ತಿಳಿದುಕೊಳ್ಳುವ ಕಾಲ ಹೊರಟುಹೋಯಿತು. ಅದು ಲಕ್ಸುರಿ ಅಲ್ಲವೇ ಅಲ್ಲ. ಜನ ಪ್ರಯಾಣ ಮಾಡತಕ್ಕಂಥ ಮೂಲಭೂತವಾದಂತಹ ಅವಶ್ಯಕತೆ. ತಾವು ಡೀಸೆಲ್ ಜಾಸ್ತಿ ಮಾಡಿದ್ದೀರಿ, ಆಮೇಲೆ ಪೆಟ್ರೋಲ್ ಜಾಸ್ತಿಯಾಗಿದೆ. ಮತ್ತೆ ರಬ್ಬರ್‌ಗೆ ಒಂದು ಇಡೆ ಟ್ಯಾಕ್ಸೇಷನ್ ಜಾಸ್ತಿ ಮಾಡಿದ್ದೀರಿ. ಟೈರ್ ಕೂಡ ಜಾಸ್ತಿ ಮಾಡಿದ್ದೀರಿ. ರಬ್ಬರ್ ವುತ್ತು ಟೈರ್‌ಗೆ ಟ್ಯಾಕ್ಸೇಷನ್ ಜಾಸ್ತಿ ಮಾಡತಕ್ಕಂಥ ವಿಚಾರಕ್ಕೆ ತಾವು ಹೋಗಿದ್ದೀರಿ. ಅಂಬಾಸಡರ್ ಟ್ಯಾಕ್ಸಿ ಹೆಚ್ಚಿಗೆ ಇದೆ. ಅದಕ್ಕೆ ಲೈಫ್ ಟೆಂ ಟ್ಯಾಕ್ಸ್ ಇವತ್ತು 15,20,25 ಸಾವಿರ ಒಂದೇ ಕಂತಿಗೆ ಕೊಡತಕ್ಕಂಥ ಮಾಡಿದ್ದೀರಿ. ನೀವು ಸ್ಪೇರ್

ಪಾರ್ಟ್ಸ್‌ಗೆ ಹಾಕಿದ್ದೀರಿ. ಸ್ಪ್ರಿಂಗ್ ಪ್ಲೇಟಿಗೆ ಹಾಕಿದ್ದೀರಿ, ಅದು ಸ್ಪೇರ್ ಪಾರ್ಟ್ ಅಲ್ಲವೇ? ನೀವು ಯಾವುದನ್ನು ಬಿಟಿದ್ದೀರಿ. ಯಾವಾಗಲೂ ಕೂಡ ಹಾಗೆ ತೆರಿಗೆ ಹಾಕುವಾಗ ಮಾನ್ಯ ಸಚಿವರು ಎಲ್ಲ ಮೂಲಭೂತ ವಿಚಾರಗಳನ್ನು ಗಣನೆಗೆ ತೆಗೆದುಕೊಳ್ಳಬೇಕು. ಮೋಟಾರ್ ವೆಹಿಕಲ್ ಟ್ಯಾಕ್ಸ್ ಜಾಸ್ತಿ ಮಾಡಿದ್ದೀರಿ. ಆದರ ಪರಿಣಾಮ ಪ್ರಯಾಣಿಕರ ಮೇಲೆ ಮತ್ತು ಕೈಗಾರಿಕೆ ಮೇಲೆ ಬೀಳುತ್ತದೆ. ತಾವು ಎಲ್ಲಿ ತೆರಿಗೆ ಹಾಬೇಕು ಎನ್ನುವುದನ್ನು ನೋಡಬೇಕೇ ಹೊರತು, ಎಲ್ಲಿ ಸಾಧ್ಯವಿದೆ ಎಂದು ಎಲ್ಲಾ ಕಡೆಯೂ ತೆರಿಗೆಯನ್ನು ಹಾಕತಕ್ಕಂಥ ಪ್ರಯತ್ನ ಮಾಡುತಿದ್ದೀರಿ. ಈ ಸ್ಲಿಪಿಂಗ್ ಟ್ಯಾಕ್ಸ್ ಏನಿದೆ ಇದು ಕರ್ನಾಟಕ ರಾಜ್ಯದ, ದೇಶದ ಇತಿಹಾಸದಲ್ಲಿ ಮೊದಲು ಎಂದು ಹೇಳಿದರೂ ಕೂಡ ಇದು ಇಡೀ ಕೈಗಾರಿಕೆಗೆ, ಪ್ರಯಾಣಿಕರಿಗೆ, ಪ್ರವಾಸೋದ್ಯಮಕ್ಕೆ ಮಾರಕವಾಗುತ್ತದೆ. ಮತ್ತು ಯಾವುದೇ ರೀತಿಯಲ್ಲಿ ಜನ ಅಥವಾ ಉದ್ಯಮ ತಲೆ ಎತ್ತಿ ನಿಲ್ಲದೆ ಇರತಕ್ಕಂಥ ಒಂದು ಪ್ರಯತ್ನ ಏನು ಮಾಡಿದ್ದೀರಿ ಇದು, It is conscious, deliberate attempt to cause disastrous effect on the Industry.

ಇವತ್ತು ಕೈಗಾರೀಕರಣ ಆಗಬೇಕು, ಪ್ರವಾಸೋಸ್ಯಮ ಬೆಳೆಯಬೇಕು ಎನ್ನುವ ಕಾಲದಲ್ಲಿ ಇಷ್ಟು ದೊಡ್ಡ ತೆರಿಗೆಯ ಭಾಗವನ್ನು ತಾವು ಏನು ಹಾಕಿದ್ದೀರಿ ಆದರ ಬಗ್ಗೆ ತಾವು ತಕ್ಷಣ ಮರುಚಿಂತನೆ ಮಾಡಬೇಕಾದಂತಹ ಅವಶ್ಯಕತೆ ಇದೆ. ನನಗೆ ಗೊತ್ತಿದ್ದ ಪ್ರಕಾರ ಚೇಂಬರ್ ಆಫ್ ಕಾಮರ್ಸ್ ಮತ್ತು ಕಾನ್‌ಫೆರೇಷನ್ ಆಫ್ ಇಂಡಸ್ಟ್ರಿಯವರು ಮಾನ್ಯ ಮುಖ್ಯ ಮಂತ್ರಿಯವರ ಜೊತೆ ಸಂದರ್ಶನ ಕೇಳಿದರು. ಆದರೆ ಸಂದರ್ಶನ ನೀಡಲಿಲ್ಲ. ಸಿದ್ದರಾಮಯ್ಯನವರೇ ತಮ್ಮನೂ ಕೂಡ ನೋಡುವುದಕ್ಕೆ ಪ್ರಯತ್ನ ಪಟ್ಟರು. ಆದರೆ ತಮಗೆ ನೋಡುವುದಕ್ಕೆ ಅವಕಾಶ ಸಿಗಲಿಲ್ಲ. ಯಾವಾಗಲೂ ಕೂಡ ಇಂತಹ ಟ್ಯಾಕ್ಸೇಷನ್ ಹಾಕುವಾಗ ಎಲ್ಲಾ ಜನರನ್ನು ಒಂದು ಅಭಿಪ್ರಾಯ ಕೇಳಬೇಕು. ನಾವು ಅವರನ್ನು ಕರೆದು ಮಾತುಕತೆ ಮಾಡಲಿಲ್ಲ. ಅವರು ಪೇಪರ್ ಮಾತ್ರ ಇಟ್ಟರು. ಅದರಲ್ಲೂ ಕಾನ್‌ಫರೇಷನ್ ಆಫ್ ಇಂಡಸ್ಟ್ರಿನವರು ಮೋಟಾರ್ ವೆಹಿಕಲ್ ಅಸೋಸಿಯೇಷನ್ ಅವರನ್ನು ಸಹ ತಾವು ಚರ್ಚೆಗೆ ಕರೆದಿಲ್ಲ. ನಾನು ಇದನ್ನು ಅಧಿಕೃತವಾದ ಮೂಲದಿಂದ ಖಚಿತಪಡಿಸಿಕೊಂಡು ಹೇಳುತ್ತದ್ದೇನೆ. ಇವತ್ತು ಈ ರೀತಿ ಟ್ಯಾಕ್ಸೇಷನ್ ಮಾಡುವುದರಿಂದ ಮುಂದೆ ಬರತಕ್ಕಂಥ ಸಂಪನ್ಮೂಲದ ದೃಷ್ಟಿಯಿಂದ ಬಜೆಟ್ ಪ್ರಿಪರೇಷನ್‌ಗೆ ಇದು ವಿಪರೀತವಾದ ತೊಂದರೆಯಾಗುತ್ತದೆಂದು ನಾನು ಹೇಳುವುದಕ್ಕೆ ಆಪೇಕ್ಷೆ ಪಡುತ್ತಿದ್ದೇನೆ. ಆದುದರಿಂದ ಅಧ್ಯಕ್ಷರೆ, ತಮ್ಮ ಮುಖಾಂತರ ನಾನು ಕೆಳಿಕೊಳ್ಳುವುದೇನೆಂದರೆ ಇದರ ಬಗ್ಗೆ ದಯಮಾಡಿ ಮರುಚಿಂತನೆ ಮಾಡಿ ಅದನ್ನು ರಿವೈಸ್ ಮಾಡತಕ್ಕಂಥ ಅವಶ್ಯಕತೆ ಇದೆ. ಇಂತಹ ದೊಡ್ಡ ಭಾರವನ್ನು ಉದ್ಯಮದ ಮೇಲೆ, ಜನ ಸಾಮಾನ್ಯರ ಮೇಲೆ ತಾವು ಏನು ಹಾಕುತ್ತೀರಿ, ಅದನ್ನು ಸಡಿಲಗೊಳಿಸತಕ್ಕಂಥ ಪ್ರಯತ್ನ ತಾವು ಮಾಡಬೇಕು ಮತ್ತು ತಾವು ಸಂಬಂಧಪಟ್ಟವರನ್ನು ಕರೆದು ಮರುಚಿಂತನೆ ಮಾಡಿ ಇದಕ್ಕೆ ಪರಿಹಾರೋಪಾಯವನ್ನು ಮಾಡಬೇಕು. ಏಕೆಂದರೆ ಪರೀಕ್ಷೆಗಳು, ಮತ್ತೊಂದು ಇರುವ ಕಾರಣ ಇದನ್ನು ತಡ ಮಾಡತಕ್ಕಂಥಾದ್ದು ಸೂಕ್ತವಲ್ಲವೆಂದು ನಾನು ತಮಗೆ ಹೇಳುವುದಕ್ಕೆ ಇಷ್ಟಪಡುತ್ತೇನೆ. ಅನೇಕ ವಿಚಾರವನ್ನು ಸ್ಥೂಲವಾಗಿ ಪ್ರಸ್ತಾಪ ಮಾಡುವಾಗ ತಾವು ಅನೇಕ ವಿಚಾರಗಳು ಏನು ಹೇಳಿದ್ದೀರಿ, ರಾಜಕೀಯ ಸಂಕಲ್ಪದ ಅಭಾವ, ವ್ಯವಸ್ಥೆಯ ಶಿಥಿಲತೆ, ಹಿಂದಿನ ಸರ್ಕಾರದ್ದು ಇತ್ತು ಎಂದು ತಾವು ವಿಚಾರ ಹೇಳಿದ್ದೀರಿ ಅದರ ಬಗ್ಗೆ ನಾನು ವಿವರವಾಗಿ

ವಿಶ್ಲೇಷಣೆ ಇನ್ನು ಮುಂದೆ ಮಾಡುತ್ತೇನೆ. ತಾವು ಬಜೆಟ್‌ನಲ್ಲಿ ರಾಷ್ಟ್ರದ ಅರ್ಥವ್ಯವಸ್ಥೆಯನ್ನು ಪ್ರಸ್ತಾಪಮಾಡಿದ್ದೀರಿ. ಅದು ಅಷ್ಟೊಂದು ಪ್ರಸ್ತುತ ಇರಲಿಲ್ಲ. ತಾವು ಇದನ್ನು ಬಜೆಟ್‌ನಲ್ಲಿ ಸಾಕಷ್ಟು ಸವಿಸ್ತಾರವಾಗಿ ಮಾಡಿದ ಕಾರಣ ಒಂದೆರಡು ಮಾತುಗಳನ್ನು ಇವತ್ತು ರಾಷ್ಟ್ರದ ಅರ್ಥವ್ಯವಸ್ಥೆ ಬಗ್ಗೆ ನಾನು ಹೇಳಬೇಕಾಗಿ ಬಂತು.though it may not be relevant for the purpose of the Budget.

ತಾವು ಟ್ಯಾಕ್ಸ್ ಒಂದನ್ನೇ ಕೇಂದ್ರ ಬಿಂಧುವನ್ನಾಗಿ ಇಟ್ಟುಕೊಂಡು ರಾಜಕೀಯ ಕಸುಬನ್ನಾಗಿ ತಾವು ಉಪಯೋಗ ಮಾಡಿದ್ದೀರಿ. ಅದಕ್ಕೆ ಸೀಮಿತವಾಗಿ ಮಾತ್ರ ಇವತ್ತು ನಾನು ಹೇಳುವುದಕ್ಕೆ ಅಪೇಕ್ಷೆ ಪಡುತ್ತಿದ್ದೇನೆ. ಆರ್ಥಿಕ ಅಭಿವೃದ್ಧಿ ಅದು ಒಂದು ಪರ್ಸೆಂಟ್‌ಗಿಂತಲೂ ಕಡಿಮೆ ಇತ್ತು. ಅದು ನಾವು ಅಧಿಕಾರ ತೆಗೆದುಕೊಂಡಾಗ 91-92ರಲ್ಲಿ, ಒಂದು ಅತ್ಯಂತ ಉತ್ಕೃಷ್ಟವಾದಂತಹ ಮಟ್ಟಕ್ಕೆ ಎಂದರೆ 5.3 ಪರ್ಸೆಂಟ್‌ಗೆ ಏರಿಸಿದ್ದೀರಿ. ಇವತ್ತು 5.3 ಪರ್ಸೆಂಟ್ ಕೇಂದ್ರ ಸರ್ಕಾರ ಆರ್ಥಿಕ ಅಭಿವೃದ್ಧಿ ಇದೆ. ಕೈಗಾರಿಕಾ ಅಭಿವೃದ್ಧಿ ಇದು ಒಂದು ಪರ್ಸೆಂಟ್ ಇದ್ದಿದ್ದು 91-92ರಲ್ಲಿ, 94ನೇ ಇಸವಿಗೆ ಬರುವಾಗ 8.7 ಪರ್ಸೆಂಟ್‌ಗೆ ಹೆಚ್ಚುವರಿಯಾಗಿದೆ. ಅತ್ಯಂತ ಉತ್ಕ ಷ್ಟ ಮಟ್ಟದ, ಶ್ರೇಷ್ಟ ಮಟ್ಟದ ಒಂದು ಕೈಗಾರಿಕಾ ಅಭಿವೃದ್ಧಿ ಆಗಿತ್ತು.

ಆಹಾರ ಧಾನ್ಯಗಳ ವಿಷಯವನ್ನು ತೆಗೆದುಕೊಂಡರೆ 1991-92ರಲ್ಲಿ 168 ಮಿಲಿಯನ್ ಟನ್‌ನಷ್ಟು ಆಹಾರ ಧಾನ್ಯಗಳ ಉತ್ಪಾದನೆ ಇದ್ದರೆ, ಈಗ 185 ಮಿಲಿಯನ್ ಟನ್‌ಗಳಷ್ಟು ಏರಿಕೆಯಾಗಿದೆ. ಎಕ್ಸ್‌ಪೋರ್ಟ್ ಅರ್ನಿಂಗ್ಸ್ ನೋಡಿದರೆ ಜನವರಿಯಲ್ಲಿ 1991ರಲ್ಲಿ ಒಂದು ಮಿಲಿಯನ್ ಡಾಲರ್ಸ್ ಇದ್ದದ್ದು ಈಗ 20ಮಿಲಿಯನ್ ಡಾಲರ್ಸ್‌ರಳಿಗೆ ಏರಿಕೆಯಾಗಿದೆ. ನಮ್ಮ ಆಹಾರ ಧಾನ್ಯಗಳ ಶೇಕರಣೆ 1991-92ರಲ್ಲಿ 14.7 ಮಿಲಿಯನ್ ಟನ್ ಇದ್ದರೆ ಇವತ್ತು 31 ಮಿಲಿಯನ್ ಟನ್‌ಗೆ ಏರಿಕೆಯಾಗಿದೆ. ಇದರಿಂದ ಆಹಾರಧಾನ್ಯಗಳ ಶೇಕರಣೆ ಕೂಡ ಹೆಚ್ಚಿದೆ. ಎಕ್ಸ್‌ಪೋರ್ಟ್ ಅರ್ನಿಂಗ್ಸ್ ಶೇ.90ರಷ್ಟು ರೀಚ್ ಆಗಿದೆ. ಅದು 1980ರಲ್ಲಿ ಕೇವಲ ಶೇ. 60ರಷ್ಟು ಇತ್ತು. ಫಿಸ್ಕಲ್ ದೆಫಿಸಿಟ್ ಶೇ. 8.4 ಇದ್ದದ್ದು ಈಗ ಶೇ. 5ಕ್ಕೆ ಇಳಿದಿದೆ. ಅದುದರಿಂದ ಇವತ್ತು ವಿದೇಶ ಸಾಲದ ಬಗ್ಗೆಯೂ ಕೂಡ ಸುಮಾರು 4,400 ಕೋಟಿ ರೂಪಾಯಿಗಳನ್ನು ಇಂಟರ್ ನ್ಯಾಷನಲ್ ಮಾನಿಟರಿ ಫಂಡ್‌ನಿಂದ ತೆಗೆದುಕೊಂಡಿದ್ದೇವೆ. ಅದನ್ನು ಹಿಂದಿಕ್ಕೆ ಕೊಡುವಂತಹ ದೊಡ್ಡ ಪ್ರಯತ್ನವನ್ನು ಇಂದು ಕೇಂದ್ರ ಸರ್ಕಾರ ಮಾಡಿದೆ. ಇನ್ನು ಮುಖ್ಯವಾಗಿ ಹಣದುಬ್ಬರ ಶೇ. 71ರಷ್ಟು ಇತ್ತು ಅದು 1995-96ರಲ್ಲಿ ಶೇ. 10ಕ್ಕೆ ಕಡಿಮೆಯಾಗಿದೆ. ಅಧಿಕಾರವನ್ನು ಬಿಟ್ಟು ಕೊಡುವಾಗ ದೇಶದಲ್ಲಿ ಮೊನ್ನೆ ಬಜೆಟ್‌ನಲ್ಲಿ ಶೇ. 11 ಇದ್ದದ್ದು ಈಗ ಇಳಿಮುಖವಾದಂತಹ ಲೋಪದೋಷಗಳನ್ನು ತಮ್ಮ ವರದಿಯಲ್ಲಿ ನೀಡುತ್ತಾ ಇದ್ದೀರಿ. ಇವತ್ತು ಕೇಂದ್ರದ ಅರ್ಥವ್ಯವಸ್ಥೆಯಲ್ಲಿ ರಾಷ್ಟ್ರೀಯ ಅರ್ಥವ್ಯವಸ್ಥೆ ಬಹಳ ದು:ಸ್ಥಿತಿಗೆ

ಇಳಿದಿದೆ ಎಂದು ತಾವು ಹೇಳುವಂತಹ ಮಾತು ಏನಿದೆ ಅದನ್ನು ರಾಜಕೀಯವಾಗಿ ಉಪಯೋಗ ಮಾಡಿದ್ದಿರೇ ಹೊರತು ಅದರ ವಾಸ್ತವಿಕ ವಿಚಾರದಿಂದ ತಾವು ದೂರ ಇದ್ದೀರಿ. ಕೇಂದ್ರ ಸರ್ಕಾರದ 1995-96ರ ಆಯವ್ಯಯದಲ್ಲಿ ಕೊಟ್ಟಂತ ವಿಚಾರವನ್ನು ಕೂಡ ತಾವು ಪ್ರಸ್ತಾಪ ಮಾಡಿದ್ದೀರಿ. ಇವತ್ತು ಡಾ. ಮನ್‌ಮೋಹನ ಸಿಂಗ್‌ರವರು ಪ್ರಗತಿಪರವಾದಂತಹ ಬಜೆಟ್ ಏನು ಕೊಟ್ಟಿದ್ದಾರೆ, ಇದು ದೇಶದ ಅಭಿವೃದ್ಧಿಯ ಬಗ್ಗೆ ಕೊಟ್ಟಿರುವಂತಹ ಕಾರ್ಯಕ್ರಮವಾಗಿದೆ. ಕೇಂದ್ರ ಬಜೆಟ್ ಅಭಿವೃದ್ಧಿ ದೃಷ್ಟಿಯಿಂದ ಒಂದು ದಿಕ್ಕಿನಲ್ಲಿ ಹೋಗುತ್ತಾ ಇದ್ದರೆ, ನೀವು ವಿಮುಖವಾದಂತಹ ದೃಷ್ಟಿಯಲ್ಲಿ ಹೋಗುತ್ತಾ ಇದ್ದೀರಿ. ಎಲಿಮೆಂಟರಿ ಎಜುಕೇಷನ್‌ಗಾಗಿ ಶೇ. 25 ಇದ್ದದ್ದು ಶೇ.30 ಕೊಟ್ಟಿದ್ದಾರೆ. ಆಪರೇಶನ್ ಬ್ಲಾಕ್ ಬೋರ್ಡ್ ಎಂದು ಏನು ಪ್ರಾಥಮಿಕ ಶಾಲೆಗಳಿಗೆ ಕೊಠಡಿಗಳನ್ನು ಕಟ್ಟುವಂತಹ ಕಾರ್ಯಕ್ರಮವೇನಿದೆ ಅದರಲ್ಲಿ ಶೇ. 30ರಷ್ಟು ಹೆಚ್ಚಳ ಮಾಡಿದ್ದೀರಿ. ಆದರೆ ಇದಕ್ಕೆ ವಿಶೇಷವಾದಂತಹ ಹಣಕಾಸಿನ ವ್ಯವಸ್ಥೆಯನ್ನು ಕೇಂದ್ರ ಸರ್ಕಾರದ ಈ ಬಜೆಟ್‌ನಲ್ಲಿ ಮುಖ್ಯವಾಗಿ ಮಾಡಿದೆ. ಗ್ರಾಮಾಂತರ ಪ್ರದೇಶದಲ್ಲಿ ಉದ್ಯೋಗ ನಿರ್ಮಾಣವಾಗುವಂತಹ ದಿಸೆಯಲ್ಲಿ ಆರ್ಥಿಕ ಕ್ಷೇತ್ರದಲ್ಲಿ 34 ವರ್ಷಗಳಲ್ಲಿ ಆಗಿರುವಂತಹ ಪ್ರಗತಿ ವುತ್ತು ಹೆಚ್ಚು ಬಂಡವಾಳವನ್ನು ಹೂಡುವಂತಹ ದೊಡ್ಡ ಪ್ರಯತ್ನ ಏನಿದೆ ಅದರ ಬಗ್ಗೆ ವಿಶೇಷವಾದಂತಹ ಗಮನವನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಆ ಧಾಟಿಯಲ್ಲಿ ನೀವು ಕೂಡ ನಮ್ಮ ರಾಜ್ಯವನ್ನು ಮುಂದುವರೆಸುವುದಕ್ಕೆ ಸಾಧ್ಯವಿದೆ. ತಮ್ಮ ಬಜೆಟ್‌ನಲ್ಲಿ ಏನಾಗಿದೆ ಎಂದರೆ ಈ ವಿಚಾರ ಯಾವ ಪಕ್ಷವೇ ಅಧಿಕಾರಕ್ಕೆ ಬರಲಿ, ಸಾಧಾರಣವಾಗಿ ಈ ರಾಜ್ಯದ ಹಣಕಾಸಿನ ವ್ಯವಸ್ಥೆಯ ಅಂಕಿಸಂಖ್ಯೆಯನ್ನು ಬದಲಾವಣೆ ಮಾಡುವಂತಹ ಪ್ರಯತ್ನ ಯಾವ ಸರ್ಕಾರದವರು ಯಾವ ಸಮಯದಲ್ಲೂ ಮಾಡಿಲ್ಲ ಆಕ್ಸೆಪ್ಟೆದೆ ಆಕೌಂಟ್ ಇವತ್ತು feding of accounts ಇದನ್ನು ಬದಲಾವಣೆ ಮಾಡುವುದರಿಂದ you have done that fedging of accounts.

ಇದನ್ನು ತಾವು ರಾಜಕೀಯ ಉದ್ದೇಶದಿಂದ ಮಾಡಿದ್ದಿರೋ, ಸರಿಯಾದ ಮಾಹಿತಿ ಇಲ್ಲದೆ ಮಾಡಿದ್ದಿರೋ ಗೊತ್ತಿಲ್ಲ. ಆದರೆ ಇವತ್ತು ಈ ಕೆಲಸವನ್ನು ಯಶಸ್ವಿಯಾಗಿ ಮಾಡಿದ್ದೀರಿ. ಇದರ ಪರಿಣಾಮ ರಾಜ್ಯದ ಆಯವ್ಯಯದ ಮೇಲೆ ಜನಜೀವನದ ಮೇಲೆ ಆಗುತ್ತದೆ. It may result in refunding lot of grants from the Government of India.

ಈ ಪರಿಸ್ಥಿತಿಗೆ ತಾವು ಬರಬಹುದು. ಇದನ್ನು ತಾವು ಏನೋ ಮಾಡುವುದಕ್ಕೆ ಹೋಗಿ ಯಾವುದೋ ಒಂದು ದುಷ್ಪರಿಣಾಮವಾಗುತ್ತದೆ ಎಂಬುದನ್ನು ತಾವು ಗಮನದಲ್ಲಿಟ್ಟುಕೊಂಡಿದ್ದರೆ ತಾವು ಈ ಕೆಲಸಕ್ಕೆ ಕೈಹಾಕುತ್ತಿರಲಿಲ್ಲ. ಇಲ್ಲಿ ವಿಶೇಷವಾಗಿ ಅಪ್ರಾಮಾಣಿಕವಾದಂತಹ ಕೆಲಸವನ್ನು ಸರ್ಕಾರ ಮಾಡಿದೆ ಎಂದರೆ ಅತಿಶಯೋಕ್ತಿ

ಆಗುವುದಿಲ್ಲ. ನನ್ನ ಹತ್ತಿರ ಪ್ಲಾನಿಂಗ್ ಕಮೀಷನ್ ಡಾಕ್ಯೂಮೆಂಟ್ಸ್ ಇದೆ. ಅನ್ಯೂಯಲ್ ಪ್ಲಾನಿಂಗ್ ಪ್ರೊಜೆಕ್ಷನ್ ಏನು ಕೊಟ್ಟಿದ್ದೀರಿ. 1995-96ರ ಯೋಜನೆಗಳಿಗೆ ಏನು ಆಧಾರವನ್ನು ಇಟ್ಟುಕೊಂಡು ಈ ಯೋಜನೆಯನ್ನು ಮಂಜೂರು ಮಾಡಿದ್ದೀರಿ, ಇದನ್ನು ತಾವು ಗಮನಿಸಬೇಕಾದ ವಿಷಯವಾಗಿದೆ. ತಾವು 1994-95ರ ಯೋಜನೆಯನ್ನು ಆಧಾರವಾಗಿಟ್ಟುಕೊಂಡು 1995-96ರ ಯೋಜನೆಯನ್ನು ತಾವು ಮಾಡಿದ್ದೀರಿ. ಅದನ್ನೇ ತಿರುಚುವಂತಹ ದೊಡ್ಡ ಪ್ರಯತ್ನ ಖಂಡಿತ ಆಗಿದೆ.

ನಾವು ಟಾರ್ಗೆಟ್ ಇಟ್ಟಿದ್ದು ರೂ.8639.70 ಕೋಟಿ ಆದರೆ what we have achieved ultimately is Rs.9084.35 crores.

ಸುಮಾರು ನಾಲ್ಕು ನೂರು ಕೋಟಿ ರೂಪಾಯಿಯ ಹೆಚ್ಚು ನಾವು ಬಜೆಟ್ ಮಾಡುವುದಕ್ಕಿಂತಲೂ ಹೆಚ್ಚು ಆದಾಯ ಸರ್ಕಾರಕ್ಕೆ ಬರುವುದಿದ್ದರೆ ಅಲ್ಲಿ deficit ಹೇಗೆ ಆಗುತ್ತದೆ? ಅಲ್ಲಿ shortage ಹೇಗೆ ಆಗುತ್ತದೆ? how can it be? It is very easy.

ತಾವು ಏನಾದರೂ ಹೇಳಬಹುದು. ಆದರೆ you can show it on the long term plan and plan cut. What is the sanctity of this account? ವಾಸ್ತವಾಂಶವೇ? ಫೈ ನಾನ್ಷಿಯಲ್ statment ಏನು ನೀವು ಟಾರ್ಗೆಟ್ ಇಟ್ಟಿದ್ದೀರಿ, ಆದಕ್ಕಿಂತ ಹೆಚ್ಚು ಆದಾಯ ನಾವು ತಂದು ಕೊಟ್ಟಿದ್ದೇವೆ. How can you blame me? How can you blame the previous Government? ತಾವು ಯಾವ ಮಾರ್ಗವನ್ನು ಉಪಯೋಗ ಮಾಡಿದ್ದೀರಿ, ಅಡ್ಡದಾರಿ ಹಿಡಿದ್ದೀರಿ. ತಾವು ಏನು ಇದನ್ನು ಎತ್ತಿ ತೋರಿಸುತ್ತಿದ್ದೀರಿ ಎಂದರೆ, ಆ ರೀತಿಯ ಒಂದು ಆರ್ಥಿಕವಾದ ಒಂದು ವ್ಯವಸ್ಥೆಗಳಲ್ಲಿ ಒಂದು ವಾಮ ಮಾರ್ಗದಲ್ಲಿ ಇವತ್ತು ಸರ್ಕಾರ ಯಾವ ರೀತಿಯಲ್ಲಿ ಉಪಯೋಗ ಮಾಡಿಕೊಳ್ಳಲಿಕ್ಕೆ ಸಾಧ್ಯ ಇದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಮತ್ತೊಂದು ಇರುವುದಿಲ್ಲ. When the receipts are more than what we have planned, how can you cut the Plan? How can you show a lesser Plan?

ಇದೇ ಪ್ರಕಾರವಾಗಿ 94-95ರಲ್ಲಿ of course that accounts was with you. ಅದರಲ್ಲೂ ಕೂಡ ಅಷ್ಟೇ. What was budgeted was ರೆವಿನ್ಯೂ ಅಕೌಂಟ್‌ನಲ್ಲಿ 8168.36 ಕೋಟಿ. ಕ್ಯಾಪಿಟಲ್ ಅಕೌಂಟ್‌ನಲ್ಲಿ 1728.33 ಕೋಟಿ. ಅಂದರೆ 9896.69 ಕೋಟಿಗಳು. ರಿವೈಸ್ಡ್ ಎಸ್ಟಿಮೇಟ್‌ನಲ್ಲಿ 11 ಸಾವಿರ, ಕ್ಯಾಪಿಟಲ್ ಅಕೌಂಟ್ಸ್‌ನಲ್ಲಿ, ರೆವಿನ್ಯೂ ಅಕೌಂಟ್ಸ್‌ನಲ್ಲಿ 7464.87 ಕೋಟಿ. ಕ್ಯಾಪಿಟಲ್ ಅಕೌಂಟ್ಸ್‌ನಲ್ಲಿ 1838.76 ಕೋಟಿ ಅಂದರೆ 9303.63 ಕೋಟಿ. ಅಲ್ಲಿಗೆ

deficit is 593.06 crores.

ಇದರಲ್ಲಿ ಆರ್.ಇ.ಯದು ಎಷ್ಟರಮಟ್ಟಿಗೆ ಸಮಂಜಸ ಎಂಬುದನ್ನು ನಾನು ಕಮಿಟ್ ಮಾಡುವುದಕ್ಕೆ ಹೋಗುವುದಿಲ್ಲ. But I will come to that subject separately. ಸಂಪನ್ಮೂಲದ ವ್ಯವಸ್ಥೆ ಬಗ್ಗೆ ಅದು ಏನು ಇದೆ ಎಂದು ಹೇಳಿ. 94-95ರಲ್ಲಿ ಏನು ಮಾಡಿದ್ದೀರಿ, You have froduced the plan and increased the non-plan in order to sabotage the plan. ನಾನ್ ಪ್ಲಾನ್‌ನಲ್ಲಿ, ನಾನ್ ದೆವಲಪ್‌ಮೆಂಟ್‌ನಲ್ಲಿ ತಾವು ಪ್ಲಾನ್‌ನ್ನು ಪ್ರಿಸರ್ವ್ ಮಾಡತಕ್ಕಂಥ ಒಂದು sanctity ಏನು ಇದೆ ಇದನ್ನು ಮರೆತು ಬಿಟ್ಟಿದ್ದೀರಿ. You have to protect the plan always. Maybe it may be my plan or somebody else's plan. ಇದು ಕರ್ನಾಟಕ ರಾಜ್ಯದ ಪ್ಲಾನ್ ಎಂಬುದನ್ನು ಮರೆತು ಬಿಟ್ಟಿದ್ದೀರಿ. ಇದು ಕಾಂಗ್ರೆಸ್‌ನ ಪ್ಲಾನ್ ಎಂದು ತೆಗೆದುಕೊಂಡಿದ್ದೀರಿ. ಹಣಕಾಸಿನ ವ್ಯವಸ್ಥೆಯನ್ನು ನೋಡಿಕೊಳ್ಳುವುದರಲ್ಲಿ ಇದು ಖಂಡಿತವಾಗಿಯೂ ಮನೋಭೂಮಿಕೆಯ ಆರೋಗ್ಯಕರವಾದ ಲಕ್ಷಣವಲ್ಲ. It is our Plan. In 1992-93 by November what was spent on the plan as on November 1992 was Rs.777 crores. But still we ended with Rs.1200 crores in 5 months. I don't say it is a credit only for me. It is a credit for the entire Government. ಏಕೆಂದರೆ ನವೆಂಬರ್‌ರವರೆಗೆ ಮಾತ್ರ ಕಲೆಕ್ಷನ್ ಮಾಡಿದ್ದುದು ಒಬ್ಬರ ಲೆಕ್ಕಕ್ಕೆ. 5 ತಿಂಗಳಿನಲ್ಲಿ ಕಲೆಕ್ಷನ್ ಮಾಡಿದ್ದುದು ಮತ್ತೊಬ್ಬರ ಲೆಕ್ಕಕ್ಕೆ ಎಂದು ಹೋಗುವುದಿಲ್ಲ. Unless the tempo and environment is created throughout the year, you cannot reap that kind of fruits. ಹಾಗೆ ಎಂದು ಹೇಳಿ 477 ಕೋಟಿ ರೂ. ನವೆಂಬರ್ 94ಕ್ಕೆ ಆಯಿತು. ಅಲ್ಲಿಗೆ ಎಲ್ಲಾ ಕೆಲಸಗಳನ್ನು ನಿಲ್ಲಿಸಿದ್ದೀರಿ. ಆಶ್ರಯ ಕಾರ್ಯಕ್ರಮವನ್ನು ನಿಲ್ಲಿಸಿದ್ದೀರಿ, ಎಲ್ಲಾ ಅಭಿವೃದ್ಧಿ ಕಾರ್ಯಗಳನ್ನು ನಿಲ್ಲಿಸಿದ್ದೀರಿ. ನೀರಾವರಿ ಕಾರ್ಯಕ್ರಮಗಳನ್ನು ಬಹುತೇಕವಾಗಿ ನಿಲ್ಲಿಸಿದ್ದೀರಿ. ಇದನ್ನು ನೀವು ನಿಲ್ಲಿಸದಿದ್ದಲ್ಲಿ ಪ್ಲಾನ್‌ನಲ್ಲಿ ಯಾವುದೂ ಕಟ್ಟಾಗುವುದಿಲ್ಲ. ಇವತ್ತು ನಾನ್ ಪ್ಲಾನ್‌ನಲ್ಲಿ, ನಾನ್ ದೆವಲಪ್‌ಮೆಂಟ್‌ನಲ್ಲಿ ಲೆಕ್ಕ ತೋರಿಸಿ ಇವತ್ತು ಪ್ಲಾನ್‌ನಲ್ಲಿ ಸಬೊಟೇಜ್ ಮಾಡತಕ್ಕ ಕಾರ್ಯಕ್ರಮ ಮಾಡಿದ್ದೀರಿ. ಇದರಿಂದ ನಿಮ್ಮ ಉದ್ದೇಶ ಏನು ಎಂಬುದು ನನಗೆ ಗೊತ್ತಾಗಿದೆ. ಅದು ನೂರಕ್ಕೆ ನೂರರಷ್ಟು ರಾಜಕೀಯ, ಅಪ್ರಮಾಣಿಕವಾದ ಉದ್ದೇಶ. ಇವತ್ತು ಉದ್ದೇಶ ಏನಿತ್ತು, ಇದು ಕಾಂಗ್ರೆಸ್‌ನವರ ಪ್ಲಾನ್. ಇದು ನಾವು ಕಂಪ್ಲೀಟ್ ಮಾಡಿ ಬಿಟ್ಟರೆ ಆ ಕ್ರೆಡಿಟ್ ಅವರಿಗೆ ಹೋಗುತ್ತದೆ. ಆದ್ದರಿಂದ ನಾವು ಮುಂದೆ 95-96 plan is hundred percent our plan. ಅದನ್ನು ಇಂಪ್ಲಿಮೆಂಟ್ ಮಾಡುವುದಕ್ಕೆ ಏನು ಶಕ್ತಿಯನ್ನು ಕ್ರೋಡೀಕರಣ ಮಾಡಬೇಕು, ಅದನ್ನು ಮಾಡೋಣ ಎಂದು ಒಂದು

ಇಚ್ಛೆ ಇದೆ. We have all been in politics for 23-25 years. ಆದರೆ ಈ ರೀತಿಯ ಒಂದು ರಾಜಕೀಯ ಮಾತ್ರ ನಾವು ಮುಖ್ಯವಾಗಿ ಪ್ಲಾನ್‌ನಲ್ಲಿ ಮಾಡಿಲ್ಲ. ಅದಕ್ಕಾಗಿ ಈಗ ನಾನು ಹೇಳಿದೆ As on November 1992 expenditure under the plan was Rs.776.50 crores but we performed the plan of 1915 crores. Expenditure on the plan was Rs.2032 crores. ಹಾಗೆ ಎಂದು ಹೇಳಿ 1500 ಕೋಟಿ ರೂ. ನನ್ನ ಕ್ರೆಡಿಟ್‌ಗೆ ಹಾಕುತ್ತೇನೊ? ಅಥವಾ ಮತೊಬ್ಬರನ್ನು ದೂರಲಿಕ್ಕೆ ಪ್ರಯತ್ನ ಮಾಡಲಿಕ್ಕೆ did I fudge the account? What is due to somebody else, let us give to them. Don't try to snatch it away. ನೀವು ಹಿಂದಕ್ಕೆ ತೆಗೆದುಕೊಳ್ಳಬಹುದು. ಆದರೆ ಜನ ಇವತ್ತಲ್ಲ ನಾಳೆ ವಿಮರ್ಶೆ ಮಾಡುತ್ತಾರೆ, ಮಾಡುತ್ತಿದ್ದಾರೆ. We are happy about it. We are proud about it. ಆದರೆ ಆ ರೀತಿಯ ಒಂದು ಪ್ರೌಢಿಮೆ ಜನರಲ್ಲಿರುವುದರಿಂದ, ಇರಿಥಾದ್ದು ಸರ್ಕಾರಕ್ಕೆ ಖಂಡಿತ ಹೆಸ್ಸರು ತರುವುದಿಲ್ಲ. You can laugh at it. I don't mind. ಆದ್ದರಿಂದ ಇಡೀ ರಾಜ್ಯದ, ಇಡೀ ಪ್ರಗತಿಯ ಅಥವಾ ಯೋಜನೆಯ ವ್ಯವಸ್ಥೆಯನ್ನೇ ನನ್ನ ಈ ಒಂದು ಗೆಲುವಿನ್ನ ಹೆಮ್ಮೆಯಿಂದ ಇದನ್ನು ಸಮಾಧಿ ಮಾಡಿಬಿಡುತ್ತೇನೆ ಎಂದು ಹೇಳತಕ್ಕಂಥ ಒಂದು ಮನೋಭೂಮಿಕೆ ಸರ್ಕಾರಕ್ಕೆ ಇದ್ದರೆ you laugh at it, you enjoy it. If you want to have that kind of sadistic affection by sabotaging the plan, one day or the other the people will also realise. You don't forget, in 1989 you have been reduced tô fashes. You were also came down to 22. You were reduced to ashes.

(ಮಾನ್ಯ ಉಪಾಧ್ಯಕ್ಷರು ಪೀಠವನ್ನು ಅಲಂಕರಿಸಿದರು)

ನಿಮ್ಮ ಮುಖ್ಯಮಂತ್ರಿಯವರು ಕೂಡ ಎರಡು ಅಸೆಂಬ್ಲಿ ಚುನಾವಣೆಯಲ್ಲಿ ಆಗ ಸೋತಿ ದ್ದರು, ಆದ್ದರಿಂದ defeat or sucess ಅದರ ಬಗ್ಗೆ ನಾವು ಕನ್‌ಸಾಲ್‌ಟೆಂಟ್ ಮಾಡಬೇಕು. ಅದರ ಬಗ್ಗೆ ಅದೇ ನಾಂದಿ, ಅದೇ ಕೊನೆ ಎಂದು ಹೇಳತಕ್ಕಂಥ ಒಂದು ರಾಜಕೀಯ ವ್ಯವಸ್ಥೆಗೆ ದಯಮಾಡಿ ಒಗ್ಗಿಕೊಳ್ಳುವುದಕ್ಕೆ ಹೋಗಬೇಡಿ.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಉಪಾಧ್ಯಕ್ಷರೇ, ಈಗ ನಮ್ಮ ಪಕ್ಷವನ್ನು ಹೇಗೆ ಕನ್‌ಸಾಲಿಡೇಟ್ ಮಾಡಬೇಕು ಎಂಬುದನ್ನು ನಮಗೆ ಬಿಡಿ. ಸನ್ಮಾನ್ಯ ವೀರಪ್ಪಮೊಯಿಲಿಯವರು ಈಗ ಸಧ್ಯದ ಪರಿಸ್ಥಿತಿಯಲ್ಲಿ ಅವರ ಪಕ್ಷವನ್ನು

ಕನ್‌ಸಾಲಿಡೇಟ್ ಮಾಡುವ ಪರಿಸ್ಥಿತಿಗೆ ಹೋಗಿದ್ದಾರೆ. ತಾವು ತಮ್ಮ ಪಕ್ಷವನ್ನು ನೋಡಿಕೊಂಡರೆ ಸಾಕು. ನಿಮ್ಮಿಂದ ಅಡ್ವೈಸ್ ನಮಗೇನೂ ಬೇಕಾಗಿಲ್ಲ.

ಶ್ರೀ ಕೆ.ಎಸ್.ಈಶ್ವರಪ್ಪ:- ಸನ್ಮಾನ್ಯ ಅಧ್ಯಕ್ಷರೇ ನಮ್ಮ ಸಿದ್ದರಾಮಯ್ಯನವರು ನಮ್ಮ ಕರ್ನಾಟಕವನ್ನು ಮಾತ್ರ ನೋಡುತ್ತಿದ್ದಾರೆ. ಅವರು ಇಡೀ ದೇಶವನ್ನೇ ನೊಡಬೇಕು. ಈ ಕರ್ನಾಟಕದಲ್ಲಿ ಆಕಸ್ಮಿಕವಾಗಿ ಅಣಬೆ ಎದ್ದಹಾಗೆ ಎದ್ದುಬಿಟ್ಟಿದ್ದಾರೆ. ಒಂದು ರೀತಿಯ ಆಕ್ಸಿಡೆಂಟ್ ರೂಪದಲ್ಲಿ ಬಂದಿದ್ದೀರಿ. ಒಂದು ರೀತಿ ಆಘಾತ ಆತಂಕದಲ್ಲಿ ಬಂದು ಬಿಟ್ಟಿದ್ದೀರಿ. ಇಡೀ ದೇಶದಲ್ಲಿ ನಿಮ್ಮ ಪಕ್ಷ ಎಲ್ಲಿದೆ ಎಂದು ಭೂತಗನ್ನಡಿ ಹಿಡಿದುಕೊಂಡು ಹುಡುಕಬೇಕಾಗಿದೆ.

ಶ್ರೀ ಸಿದ್ದರಾಮಯ್ಯ:- ಭ್ರಮನಿರಶನ ಆಗಿರುವುದು ನಿಮಗೆ, ನೀವೇನೋ ಅಧಿಕಾರದಲ್ಲಿ ಬಂದು ಕುಳಿತುಕೊಂಡು ಬಿಡುತ್ತೇವೆ ಎಂದು ಅಂದುಕೊಂಡಿದ್ದೀರಿ, ಕುದುರೆಯ ಮೇಲೆ ಓಡುತ್ತೀರಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಪ್ರಪಂಚದ ಇತಿಹಾಸದಲ್ಲಿ ನಾಲ್ಕು ಸ್ಥಾನದಿಂದ ಸ್ಥಾನಕ್ಕೆ ಹೋಗಿ ಒಂದು ಸಾವಿರ ಪರ್‌ಸೆಂಟ್ ನಷ್ಟು...

(ಗೊಂದಲ)

ಶ್ರೀ ಕೆ.ಎಸ್.ಈಶ್ವರಪ್ಪ:- ಬಿ. ಜೆ. ಪಿ. ಗೆ ಒಂದು ಸಾವಿರ ಪರ್‌ಸೆಂಟ್ ಬಂದಿದೆ...

ಉಪಸಭಾಧ್ಯಕ್ಷರು:- ಈಶ್ವರಪ್ಪನವರೇ ನೀವು ಕುಳಿತುಕೊಳ್ಳಿ, ವಿಷಯ ಇರುವುದು ಬಜೆಟ್ ಮೇಲೆ, ಬೇರೆ ವಿಷಯದ ಮೇಲಲ್ಲ, ಮೊಯಿಲಿಯವರೇ, ನೀವು ಮುಂದುವರಿಸಿ...

ಶ್ರೀ ಎಂ.ವೀರಪ್ಪಮೊಯಿಲಿ:- ಸಚಿವರು ರಾಜಕೀಯದ ಬಗ್ಗೆ ಮಾತನಾಡದಿದ್ದು ತಾವು ಅವರಿಗೆ ಹೇಳಿ, ನಾನು ಬಜೆಟ್ ಮೇಲೆ ಮಾತನಾಡುತ್ತಿದ್ದೇನೆ I am telling that they have been twisted, the plan has been sabotaged. Alright if they don't want to give advice. I withdraw all my advice. They want to dance at the pyrrhic victory.

ಶ್ರೀ ಸಿದ್ದರಾಮಯ್ಯ:- ಪ್ಲಾನ್ ಸಬೋಟೇಜ್ ಮಾಡಿದ್ದೇವೆ ಎಂದು ಹೇಳುವುದೇ ರಾಜಕಾರಣ.

ಶ್ರೀ ಎಂ.ವೀರಪ್ಪಮೊಯಿಲಿ:- ತಾವು ಇದರಲ್ಲಿ ಬರೆದದ್ದೆಲ್ಲಾ ಯಾವುದೂ ರಾಜಕೀಯ ಅಲ್ಲ. ಬಹಳ ಶುದ್ದವಾಗಿ ತಾವು ಬರೆದಿದ್ದೀರಿ. ಹೌದು ತಾವು ಹೇಳಿದ್ದೀರಿ.

ಇವರು ಪ್ರತಿಷ್ಠೆಯಿಂದ ಏನಾಗಿದೆ ಎಂದರೆ ಜನ ಸಾಮಾನ್ಯರು ಎಷ್ಟು ನೊಂದುಕೊಂಡಿದ್ದಾರೆ, ಎಷ್ಟು ಒದ್ದಾಡುತ್ತಿದ್ದಾರೆ ಎಂದರೆ ನಮ್ಮ ಕ್ಷೇತ್ರದಲ್ಲಿ ಹೋಗಿ ನೋಡಿ. ಸಾರ್ವಜನಿಕ ಬಸ್ಸುಗಳು ಇಲ್ಲದೇ ಎಷ್ಟು ಒದ್ದಾಡುತ್ತಿದ್ದಾರೆ ಎಂಬುದನ್ನು ತಾವು ನೋಡಿ. ಕೇವಲ 25 ಬಸ್ಸುಗಳನ್ನು ಸರ್ಕಾರದಿಂದ ಕೊಟ್ಟಿದ್ದೀರಿ.

ಉಪಾಧ್ಯಕ್ಷರು:- ದಯಮಾಡಿ ಮಾನ್ಯ ವೀರಪ್ಪ ಮೊಯಿಲಿಯವರು ಮುಂದುವರೆಸಿ.

ಶ್ರೀ ಎಂ. ವೀರಪ್ಪ ಮೊಯಿಲಿ:- ಸನ್ಮಾನ್ಯ ಅಧ್ಯಕ್ಷರೇ, ಈಗ 1993-94ರಲ್ಲಿ what we have planned was 325 ಕೋಟಿ. ಅದರಲ್ಲಿ 53 ಪರ್ಸೆಂಟ್ ಹೆಚ್ಚಿದೆ. ಈಗ ಈ ಅಕೌಂಟ್ಸ್ ಏನು ಬದಲಾವಣೆ ಮಾಡಬೇಕೆಂದು ತಾವು ಹೊರಟಿದ್ದೀರಿ, ಇದರ ಬಗ್ಗೆ ನಾನು ಮಾತನಾಡುತ್ತಿದ್ದೇನೆ. ತಾವು ದಯಮಾಡಿ ಇನ್‌ವೆಸ್ಟ್‌ಮೆಂಟ್ ಇನ್ ರುಪೀಸ್ ಪರ್ ಕ್ಯಾಪಿಟ ಇನ್ ಪ್ಲಾನ್ ಔಟಲೆ, ಇದನ್ನು ಸ್ವಲ್ಪ ದಯಮಾಡಿ ಪರಾಂಬರಿಸಿ ನೋಡಬೇಕು. ಆನ್ಯುಯಲ್ ಪ್ಲಾನ್ ಏನು ಸೆವೆನ್ತ್ ಪ್ಲಾನ್ ಎಂದು ಹೇಳಿದರೆ ಅದು ತಾವು ಅಧಿಕಾರದಲ್ಲಿದ್ದಂತಹ ಕಾಲ ಪ್ಲಾನ್ ಆಗಿದ್ದು ಬೈ ಅಂಡ್ ಲಾರ್ಜ್. ಅಲ್ಲಿ ಕರ್ನಾಟಕದ್ದು 830 ಕೋಟಿ ರೂಪಾಯಿಗಳು. ಆಲ್ ಇಂಡಿಯಾ 1054 ಕೋಟಿ ರೂಪಾಯಿಗಳು. ಪರ್ಸೆಂಟೇಜ್ ಆಫ್ ಕರ್ನಾಟಕ ಓವರ್ ಆಲ್ ಇಂಡಿಯಾ ವಾಸ್ 79 ಪರ್ಸೆಂಟ್. It was below the national average compared to all India. ಆಲ್ ಇಂಡಿಯಾ ಆವ್‌ರೇಜ್‌ಗಿಂತ ಇದು ಕಡಿಮೆ. ಪರ್ ಕ್ಯಾಪಿಟ ಪ್ಲಾನ್ ಓಟ್‌ಲೆ. ಹಿಂದೆ ಜನತಾದಳ ಕಾಲದಲ್ಲಿ, ತಾವು ಆಗ ಅಧಿಕಾರದಲ್ಲಿ ಇದ್ದೀರಿ. 1990-91 ಕರ್ನಾಟಕ 252 ಕೋಟಿ ರೂಪಾಯಿಗಳು. ಆಲ್ ಇಂಡಿಯಾ 285. ಪರ್ಸ್‌ಟೇಜ್ ಆಫ್ ಕರ್ನಾಟಕ ಟು ಆಲ್ ಇಂಡಿಯಾ 88. ಇಲ್ಲಿ ನಮ್ಮ ಸ್ನೇಹಿತರಾದ ಶ್ರೀಮಾನ್ ಯಡಿಯೂರಪ್ಪನವರು ಮತ್ತು ರಾಮಕೃಷ್ಣರವರು ಇಲ್ಲಿ ಇಲ್ಲ. ನಮ್ಮದೇ ಸರ್ಕಾರ ಇತ್ತು. ನಾನೂ ಕೂಡ ಮಂತ್ರಿಯಾಗಿದ್ದೆ ಆಗ. ಮಾನ್ಯ ಯಡಿಯೂರಪ್ಪನವರು ಹೇಳಿದ್ದಾರಲ್ಲಾ. ಬಹಳ ಬೊಕ್ಕಸಕ್ಕೆ ಹಣ ಇತ್ತು. ಶ್ರೀಮಾನ್ ವೀರೇಂದ್ರ ಪಾಟೀಲ್‌ನವರ ಸಚಿವ ಸಂಪುಟದಲ್ಲಿದ್ದ ಶ್ರೀಮಾನ್ ರಾಜಶೇಖರಮೂರ್ತಿಯವರು ಬಹಳ ಹಣ ಬೊಕ್ಕಸಕ್ಕೆ ಇಟ್ಟು ಹೋದರು ಎಂದು ಹೇಳಿದಂಥ ಕಾಲದಲ್ಲಿ ಪರ್ ಕ್ಯಾಪಿಟ ಪ್ಲಾನ್ ಔಟ್‌ಲೆ ಈಸ್ ಬಿಲೋ ನ್ಯಾಷನಲ್ ಲೆವೆಲ್ ಇತ್ತು. 1991-92, 332, ಕರ್ನಾಟಕ. ಆಲ್ ಇಂಡಿಯಾ 322 ಕೋಟಿ ರೂಪಾಯಿಗಳು, ಪರ್ಸೆಂಟೇಜ್ ಆಫ್ ಕರ್ನಾಟಕ ಟು ಆಲ್ ಇಂಡಿಯಾ ವಾಸ್ 101. 1991-92ರಿಂದ ನಮ್ಮ ಪರ್ ಕ್ಯಾಪಿಟ ಪ್ಲಾನ್ ಎಕ್ಸ್‌ಪೆಂಡಿಚರ್ ಜಾಸ್ತಿ ಆಯಿತು. 1992-93ರಲ್ಲಿ ವಿಹ್ಯಾವ್ ಕೆಪ್ಟ್ ಆಫ್. 417 ಕರ್ನಾಟಕ, 353 ಕೋಟಿ ರೂಪಾಯಿ ಆಲ್ ಇಂಡಿಯಾ. ಆಮೇಲೆ ಪರ್ಸೆಂಟೇಜ್ ಆಫ್ ಕರ್ನಾಟಕ ಟು ಆಲ್ ಇಂಡಿಯಾ

ವಾಸ್ 118. 1993-94 ಕರ್ನಾಟಕ 648 ಕೋಟಿ ರೂಪಾಯಿಗಳು. ಆಲ್ ಇಂಡಿಯಾ 3882 ಕೋಟಿ ರೂಪಾಯಿಗಳು. ಪರ್ಸೆಂಟೇಜ್ ಆಫ್ ಕರ್ನಾಟಕ ಆಲ್ ಇಂಡಿಯಾ 167 ಪರ್ಸೆಂಟ್. 1994-95, ಅಂಡ್ ಆಲ್‌ಸೋ .95-96 ಆಲ್ ಇಂಡಿಯಾ 439 ಕೋಟಿ ರೂಪಾಯಿಗಳು. ಅಂಡ್ 157 ಕೋಟಿ ರೂಪಾಯಿಗಳು. 1991-92ರಿಂದ ಇವತ್ತು ನಮ್ಮ ಪರ್ ಕ್ಯಾಪಿಟ ಪ್ಲಾನ್ ಎಕ್ಸ್‌ಪೆಂಡಿಚರ್ ಇನ್‌ಕ್ರೀಸ್ ಆಗುತ್ತಿದೆ. It is above the national level. ಒಂದು ರೀತಿಯಲ್ಲಿ ಇದಕ್ಕಾಗಿ ಪರ್ ಕ್ಯಾಪಿಟಗಾಗಿ ಸಿ.ಎಂ.ಐ. ಡಾಕ್ಯುಮೆಂಟ್ ಅಥವಾ ನ್ಯಾಷನಲ್ ಪ್ಲಾನಿಂಗ್ ಡಾಕ್ಯುಮೆಂಟ್ಸ್‌ನ್ನು ದಯಮಾಡಿ ತಾವು ಪರಾಂಬರಿಸಿ ನೋಡಿದರೆ 1993-94ರಲ್ಲಿ ನಾವು ಪ್ರಥಮ ಸ್ಥಾನದಲ್ಲಿದ್ದೇವು. ಇದು ನಮ್ಮ ಕ್ಲಾಸಿಫಿಕೇಷನ್ ಅಲ್ಲ. ನಾವು ನಮ್ಮ ರಾಜ್ಯದಲ್ಲಿ ಮಾಡಿದಂಥ ಒಂದು ಅಂಕಿ ಸಂಖ್ಯೆ ಅಲ್ಲ. ಬಹುಶ: ಇದನ್ನೆಲ್ಲಾ ನಮ್ಮ ವಿರೋಧ ಪಕ್ಷದ ನಾಯಕರು ಆದ ಶ್ರೀಮಾನ್ ಯಡಿಯೂರಪ್ಪನವರು ಅಭ್ಯಾಸ ಮಾಡಿಕೊಂಡು ಭಾಷಣ ಮಾಡುತ್ತಾರೆಂದು ಹೇಳಿದರೆ, ಈ ಅಂಕಿ ಸಂಖ್ಯೆಯನ್ನೆಲ್ಲಾ ಯಾವುದೂ ನೋಡದೇ ಸಾರಾಸಗಟಾಗಿ ಜನರಿಗೆ ಒಂದು indiscriminate ಆಗಿ ಸರ್ಟಿಫಿಕೇಟ್ ಕೊಡುತ್ತಾ ಹೋಗಿದ್ದಕ್ಕೆ ನಾನು ಹೇಳಿದೆ. ಇದರಲ್ಲಿ ಜಾತಿ ರಾಜಕೀಯ ಬೇರೆ ಏನೂ ಇಲ್ಲ. ದಯಮಾಡಿ ನೋಡಿ. ತಾವು ಸ್ವಲ್ಪ ಅಧಿಕಾರ ಪಡೆದಿದ್ದೀರಿ. ಅನೇಕ ರಾಜ್ಯಗಳಿಂದ ಮಾಹಿತಿಗಳನ್ನು ಸಂಗ್ರಹ ಮಾಡಿ ಮಾನ್ಯ ವಿರೋಧ ಪಕ್ಷದ ನಾಯಕರಾಗಿ ಜವಾಬ್ದಾರಿಯಿಂದ ನಿರ್ವಹಿಸಿದ್ದರೆ ಅವರಿಗೂ ಶೋಭೆ ಮತ್ತು ರಾಜ್ಯಕ್ಕೂ ಶೋಭೆ. ರಾಜ್ಯದ ಈ ಒಂದು ವ್ಯವಸ್ಥೆಗೆ ಸ್ಪಂಧಿಸತಕ್ಕಂಥ ಒಂದು ಕೆಲಸ ಮಾಡಿದಂತಾಗುತ್ತಿತ್ತು. ಇಲ್ಲದಿದ್ದರೆ ಏನು ಆಗುತ್ತದೆ. ಈ ತರಹ ಸಾರಾಸಗಟಾಗಿ ಕೆಲವರು ಬರುತ್ತಾರಲ್ಲಾ ಸರ್ಟಿಫಿಕೇಟ್‌ಗಳಿಗೆ ದಸ್ಕತ್ ಹಾಕುತ್ತಲೇ ಹೋಗುತ್ತಾರಲ್ಲಾ, ಈ ರೀತಿ ನೀವು ದಸ್ಕತ್ ಹಾಕುತ್ತಲೇ ಹೋದರೆ ಅವರು ಎಡವಿ ಬೀಳುತ್ತಾರೆ ಎಂಬುದನ್ನು ಮಾತ್ರ ಅವರ ಗಮನಿಕ್ಕೆ ಇದನ್ನು ಹೇಳುತ್ತಿದ್ದೇನೆ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಆಗ ನಾನೇ ಪ್ಲಾನಿಂಗ್ ಮಿನಿಸ್ಟರ್ ಆಗಿದ್ದೆ. ಹೆದರಬೇಡಿ ನಮ್ಮ ಪಕ್ಷದ ಬಗ್ಗೆ ನಮಗೆ ಇಲ್ಲದ ಆಸಕ್ತಿ ನಿಮಗೇಕೆ ಬಂತು ಎಂಬುದೇ ನನ್ನ ಪ್ರಶ್ನೆ. ಬೇರೆ ಯಾವುದಕ್ಕೂ ಅಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪ ಮೊಯಿಲಿ:- ಆದರೆ ಸ್ವಾಟಿಸಟಿಕ್ಸ್ ಕೊಟ್ಟಿದ್ದಾರಲ್ಲ. ಪರ್

ಕಾಪಿಟ ಪ್ಲಾನಿಂಗ್ ಎಕ್ಸ್‌ಪೆಂಡಿಚರ್ ವಾಸ್ ಬಿಲೋ ದ ಆವರೇಜ್. ಈವನ್ up to 1990-91. ಅಂಡ್ ಥ್ರೂಔಟ್ ದ ಪೀರಿಯಡ್ ಆಫ್ ಜನತಾದಳ್. ಒಂದೇ ವರ್ಷದಲ್ಲಿ ಅದನ್ನು ಮಾಡಲಿಕ್ಕಾಗುವುದಿಲ್ಲ.

(ಗೊಂದಲ)

ಶ್ರೀ ಎಂ. ವೀರಪ್ಪಮೊಯಿಲಿ:- ಆದ್ದರಿಂದ ಇವತ್ತು ಇದನ್ನು ಸ್ವಲ್ಪ ಸಂಗ್ರಹಿಸಿ ಮಾತನಾಡುತ್ತಾ ಇದ್ದರೆ ಜನ ಅಷ್ಟೇ ನಂಬುತ್ತಾರೆ. ಇದು ಯಾವುದನ್ನು ಗಮನಕ್ಕೆ ತೆಗೆದುಕೊಳ್ಳದೇ ನಾವು ಸಾರಾಸಗಟಾಗಿ ಸರ್ಟಿಫಿಕೇಟ್ ಕೊಡಲಿಕ್ಕೆ ಅಡ್ಡಿ ಏನೂ ಇಲ್ಲ, ಆದರೆ ಸರ್ಟಿಫಿಕೇಟ್ ಒಬ್ಬ ಮುಖ್ಯಮಂತ್ರಿಗೆ ಕೊಟ್ಟ ಮೇಲೆ ಬಾಕಿಯವರಿಗೂ ಕೊಡಬೇಕಲ್ಲಾ! ಪರ್ ಕ್ಯಾಪಿಟಾ ಪ್ಲಾನ್ ಎಕ್ಸ್‌ಪೆಂಡಿಚರ್ ಅನ್ನು ಎಬೋವ್ ನ್ಯಾಷನಲ್ ಲೆವೆಲ್ ಮಾಡಿಕೊಂಡು ಇವತ್ತು ರಾಜ್ಯದ ಪರ್ ಕ್ಯಾಪಿಟ ಪ್ಲಾನಿಂಗ್ ಎಕ್ಸ್‌ಪೆಂಡಿಚರ್ ಜಾಸ್ತಿ ಮಾಡಿದಾಗ ಬೊಕ್ಕಸಕ್ಕೆ ಇವತ್ತು ಗ್ರಹಣ ಹಿಡಿದಿದೆ ಎಂದು ಹೇಳತಕ್ಕಂಥ ಒಂದು ಪ್ರಯತ್ನ ನಮ್ಮ ವಿರೋಧ ಪಕ್ಷದವರು ಮಾಡಿದ್ದಾರಲ್ಲಾ ಇದು ಸರಿಯಲ್ಲ. ಗ್ರಹಣ ಅವರ ವಿಚಾರ ಶಕ್ತಿಗೆ ಹಿಡಿದಿದೆಯೇ ಹೊರತು ರಾಜ್ಯದ ಆರ್ಥಿಕ ಶಕ್ತಿಗೆ ಹಿಡಿದಿಲ್ಲ ಎಂಬುದನ್ನು ಹೇಳಲಿಕ್ಕೆ ನಾನು ಅಪೇಕ್ಷೆ ಪಡುತ್ತೇನೆ. ಆದ್ದರಿಂದ ಇವತ್ತು 1992-93ನಲ್ಲಿ ನಮ್ಮದು ರ್‍ಯಾಂಕ್ ನಂಬರ್ ಸಿಕ್ಸ್ತ್. 1993-94ನಲ್ಲಿ ನಂಬರ್ ವನ್ ಪ್ಲೇಸ್. And we have maintained the same status. 1994-95ನಲ್ಲಿ ಕೂಡ ಇವತ್ತು ಹೇಳಿದ್ದೇವೆ. ಆಮೇಲೆ ಮುಖ್ಯವಾಗಿ ಒಂದು ರಾಜ್ಯದ ಆರೋಗ್ಯ ಪರಿಸ್ಥಿತಿ ಒಳ್ಳೆಯದು ಇದೆಯೇ ಅಥವಾ ಅದು ಯಾವುದನ್ನು ಹೊಂದಿಕೊಂಡಿದೆ ಎಂದರೆ ಆಯಾ ರಾಜ್ಯ ಮಾಡತಕ್ಕ ಆದಾಯದ ಸಂಪನ್ಮೂಲನದ ರಣಕ್ಕೆ ಹೊಂದಿಕೊಂಡಿರುತ್ತದೆ. ಬೇರೆ ಯಾವುದು ಎಕ್ಸ್‌ಟ್ರೇನಿಯಸ್ ಎಲೆಮೆಂಟ್ಸ್ ಇಲ್ಲ. ಆ ರಾಜ್ಯದ ಆದಾಯವನ್ನು ಕ್ರೋಢಿಕರಣ ಮಾಡುವಲ್ಲಿ ಆ ರಾಜ್ಯದ ಯೋಜನೆಯನ್ನು ಸಪೋರ್ಟ್ ಮಾಡುವುದರಲ್ಲಿ ಯಾವ ಸರ್ಕಾರ ಯಾವ ರೀತಿಯ ಒಂದು ಶಕ್ತಿಯನ್ನು ಪಡೆದಿತ್ತು ಎಂಬುದನ್ನು ಕೂಡ ನಾವು ಆಧಾರವನ್ನಾಗಿ ಇಟ್ಟುಕೊಂಡು ಮಾತನಾಡಬೇಕಾಗಿದೆಯೇ ಹೊರತು ಬೇರೆ ಎಕ್ಸ್‌ಟ್ರೇನಿಯಸ್ ವಿಚಾರಗಳನ್ನು ಮಾತನಾಡಬೇಕಾದ ಅವಶ್ಯಕತೆ ಇಲ್ಲ. ಈ ರಾಜ್ಯದ ಬಜೆಟ್ ಬಗ್ಗೆ ಮಾತನಾಡುವಾಗ, state's own resources for funding annual plan has been 55.18% in 92-93. 93-94ನಲ್ಲಿ 70.71%. ಇದೆಲ್ಲಾ ಹಿಂದೆ ಕೆಳಗೆ ಇತ್ತು. 1994-95ರಲ್ಲಿ ರಿಸೋರ್ಸೆಸ್ ಶೇಕಡ 64 ಇತ್ತು. That is the support the state government has given from its own resources to fund the plan.

ಇನ್ನು ಯಾವ ಸರ್ಟಿಫಿಕೇಟ್ ಬೇಕು? ಇದಕ್ಕೆ ಯಾವ ಸರ್ಟಿಫಿಕೇಟೂ ಬೇಕಾಗಿಲ್ಲ. ಇವೊತ್ತು ಸಂಪನ್ಮೂಲಗಳನ್ನು ಆಧಾರವನ್ನಾಗಿ ಇಟ್ಟುಕೊಂಡು ರಾಜ್ಯದ ಯೋಜನೆಗಳನ್ನು

ಬೆಂಬಲವಾಗಿ ಇಟ್ಟುಕೊಂಡು ಸಮರ್ಥಿಸಿಕೊಳ್ಳುತಕ್ಕ ಹಿಂದಿನ ಸರ್ಕಾರ ಕೊಟ್ಟಿತ್ತೋ ಇಲ್ಲವೋ ಅದರ ಬಗ್ಗೆ ಮಾತನಾಡಬೇಕು. ಅಗ್ರಿಗೇಟ್ ಸೋರ್ಸ್‌ಸ್ 1994-95ರಲ್ಲಿ 3138.78 ಕೋಟಿ, ಇದನ್ನು ನ್ಯಾಷನಲ್ ಪ್ಲಾನಿಂಗ್ ಕಮಿಷನ್‌ನವರು ಲೆಕ್ಕ ಹಾಕಿದ್ದುದು 136.27 ಕೋಟಿ ಕೊರತೆ. ಇದನ್ನು ನ್ಯಾಷನಲ್ ಪ್ಲಾನಿಂಗ್ ಕಮಿಷನ್‌ಗೆ ತಾವೇ ಬರೆದು ಕೊಟ್ಟಿದ್ದೀರಿ. ಡಿಸೆಂಬರ್‌ನಲ್ಲಿ ಬಹುಶ: ಪೇಪರ್ ಕೊಟ್ಟಿದ್ದಾರೆ. ಅದರಲ್ಲಿ 136.27 ಕೋಟಿ ಮಾತ್ರ ಶಾರ್ಟೇಜ್ ಬರಬಹುದು ಎಂದು ಹೇಳಿದ್ದೀರಿ. ಇದಕ್ಕೆ ಮುಂದೆ ಹೋಗಿ ಏನು ಹೇಳಿದ್ದೀರಿ ಎಂಬುದನ್ನು ಹೇಳುತ್ತೇನೆ. ಇವೊತ್ತು 1994-95ರಲ್ಲಿ ಏನು ಪ್ರಾಜೆಕ್ಷನ್ ಕೊಟ್ಟಿದ್ದೀರಿ ಅದಕ್ಕೆ ತದ್ವಿರುದ್ಧವಾದಂಥ ಒಂದು ಪ್ರಾಜೆಕ್ಷನ್‌ನ್ನು ಇವೊತ್ತು ಬಡ್ಜೆಟ್‌ನಲ್ಲಿ ಕೊಟ್ಟಿದ್ದೀರಿ. ಇದಕ್ಕೆ ತಾಳ ಮೇಳ ಇಲ್ಲ. ಇದು ಯಾವ ರೀತಿ ಲೆಕ್ಕ ಆಗಿದೆ ಎಂದರೆ ವ್ಯಾಪಾರಸ್ಥರು ಯಾವ ರೀತಿ ರಾಮನ ಲೆಕ್ಕ, ಕೃಷ್ಣನ ಲೆಕ್ಕ ಇಟ್ಟುಕೊಂಡಿರುತ್ತಾರೆ ಆ ರೀತಿ ಇದು ಆಗಿರುತ್ತದೆ. ರಾಜ್ಯಕ್ಕೆ ರಾಮನ ಲೆಕ್ಕ ಅಥವಾ ಇಲ್ಲಿಗೆ ಕೃಷ್ಣನ ಲೆಕ್ಕ ಅಲ್ಲಿಗೆ ರಾಮನ ಲೆಕ್ಕ.

ಶ್ರೀ ಸಿದ್ದರಾಮಯ್ಯ:- ಹೇಳೋಣ ಯಾವ ಯಾವುದು ಎಂಬುದನ್ನು.

SRI M.VEERAPPA MOILY:- It is all based upon the documents I am speaking only with reference to the documents. Is it not fudging the account? What else it is?

ಎರಡು ಲೆಕ್ಕ ಮಾಡತಕ್ಕದ್ದು. You have said there ‘We may even perform the plan.’

ಅಲ್ಲೊಂದು ಲೆಕ್ಕವನ್ನು ಕೊಡುವುದು, ಇಲ್ಲಿ ಒಂದು ಹೇಳುವುದು, ಅಲ್ಲಿ 136 ಕೋಟಿ ರೂಪಾಯಿ ಎಂದು ಹೇಳುವುದು ಅಥವಾ ಅದಕ್ಕಿಂತ ಕೊರತೆ ಕಡಿಮೆ ಬರಬಹುದು ಎಂದು ಹೇಳುವುದು; ಇಲ್ಲಿ ಬೇರೆ ರೀತಿ ಹೇಳುವುದು, ನೀವು ಈ ರೀತಿ ಹೇಳಿಕೊಂಡು ಬಂದಿದ್ದೀರಿ. ನ್ಯಾಶನಲ್ ಪ್ಲಾನಿಂಗ್ ಕಮಿಷನ್‌ನವರು ಏನು ಅಬಸರ್ವ್ ಮಾಡಿದ್ದಾರೆ ಅವರ ಡಾಕ್ಯೂಮೆಂಟ್‌ನಲ್ಲಿ ಅದನ್ನು ಹೇಳುತ್ತೇನೆ.

‘In other words the State would beutilising about 67% of the 8th five-year plan outlay in first 3 years itself.

That is a credit for us only not to you. In three years 67% of the Plan outlay is achieved. Karnataka is the only State which was done it. No other State has done

it. Do you want to discredit the State? Do you want to dishonour the State?

ನ್ಯಾಶನಲ್ ಪ್ಲಾನಿಂಗ್ ಕಮಿಷನ್ ಡಾಕ್ಯೂಮೆಂಟ್‌ನಲ್ಲಿ ಏನು ಹೇಳಿದ್ದಾರೆ ಎಂಬುದು ಮುಖ್ಯ. 'These higher outlays during 93-94 and 94-95 are due to the very good position ofthe State's own resources for funding the plan. This is not the certificate given by me. It is given by the National Planning Commission in their document. It is not a political document.

ಇದನ್ನು ಪ್ರಣವ್‌ಕುಮಾರ್ ಮುಖರ್ಜಿಯವರು ಕೊಟ್ಟಿದ್ದಲ್ಲ. It is a document prepared by the advisors of the Planning Commission on the basis of thef figures furnished by you.

ಹಣಕಾಸಿನ ಮಂತ್ರಿಗಳು ಮಾಡಿದಂಥಹ ಡಾಕ್ಯುವೆಂಟ್ ಅಲ್ಲ.

'Considering this trend, increase in the size of the annual plan particularly with good financial position of the State resources, it is quite obvious that the total 8th Plan outlay of Karnataka, would cross the approval outlay ofRs.12,300 crores.'

It is because of very good financial posistion of the State's fresources.

ನೀವು ಪ್ಲಾನಿಂಗ್ ಕಮೀಷನ್‌ನ ಡಿಸ್‌ಕಷನ್‌ನಲ್ಲಿ ಇದನ್ನು ಒಪ್ಪಿಕೊಳ್ಳುತ್ತೀರಿ. ಇಲ್ಲಿಗೆ ಬಂದ ಮೇಲೆ ಈ ಬಡ್ಜೆಟ್‌ನಲ್ಲಿ ರಾಜ್ಯದ ಜನತೆಗೆ ಹೇಳುವಾಗ ಎರಡು ಮುಖವಾಡ ಏಕೆ ಹೇಳುತ್ತೀರಿ? ಎರಡು ಮುಖವಾಡ ಇಟ್ಟುಕೊಂಡು ತಾವು ಈ ರಾಜ್ಯದ ಜನತೆಯನ್ನು ವಂಚಿಸಿಕೊಂಡು ಹೋಗಬಹುದು ಎಂದು ತಿಳಿದುಕೊಳ್ಳಬೇಡಿ. ಇವೊತ್ತು ಜಯದ ಒಂದು ಉತ್ಸಾಹದಲ್ಲಿ ಇದ್ದೀರಿ. You enjoy it. I don't want to hinder you. ಈವತ್ತು ಪ್ಲಾನಿಂಗ್ ಕಮೀಷನರ್‌ರವರು ಒಂದು ಪ್ಲಾನ್ ಬಗ್ಗೆ ಹೇಳಿರತಕ್ಕ ಸಂದರ್ಭದಲ್ಲಿ ಅದನ್ನು ತಿರುವುದಕ್ಕೆ ಕೆಲಸವನ್ನು ಏನು ಮಾಡುತ್ತಿದ್ದೀರಿ ಅದು ಖಂಡಿತವಾಗಿ ನಿಮಗೆ ಒಂದು ಶೋಭೆ ತರುವುದಿಲ್ಲ ಎಂಬುದನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾದ ಅವಶ್ಯಕತೆ ಇದೆ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಲಿಕ್ಕೆ ಅಪೇಕ್ಷೆ ಪಡುವುದಿಲ್ಲ. ಪ್ಲಾನಿಂಗ್ ಕಮೀಷನ್‌ನವರು ಹೇಳಿದಂತಹ ವಿಚಾರದ ಬಗ್ಗೆ ಹೇಳುತ್ತೇನೆ. ಅವರ ಡಿಸ್‌ಕಷನ್‌ನಲ್ಲಿ ಏನು ಬಂದಿದೆ ಎಂಬುದನ್ನು ಹೇಳುತ್ತೇನೆ.

I will read out the same document.

" Annual plan 94-95: The Karnataka's 8th plan 92-97 was approved at Rs.12,300 crores and the State's annual plan 92-93 at Rs.1915 crores of which Rs.1556.65 crores represented the state's own resources i.e., 55.18%. The annual plan 93-94 was approved at Rs.3,025 crores of which Rs.2139.10 crores i.e., 70.71% represented the state's own resources."

This is statement from the Planning Commission.

"The annual plan 94-95 has been approved at Rs.3,275 crores and Rs.2,945.95 crores i.e., 64% is the state's own resources. The state would be spending Rs.8,215 crores during the first three years of 8th plan out of their approved plan of Rs.12,300 crores. In other words the state would be utilising about 67% of the 8th plan aproved outlay in the first three years itself."

" State resources as worked out by FR Division in consultation with the state officials for the annual plan 95-96 are Rs.3,400 crores. It does not include provision of ARM to be raised in 95-96. State's own resources have been worked out at Rs.2,268 crores of which total asset resources of Rs.3,400 crores for the annual plan 95-96."

ಬಾಕಿ ನಾನು ಈಗಾಗಲೇ ಓದಿ ಹೇಳಿದೇನೆ. ಆದುದರಿಂದ ಪ್ಲಾನಿಂಗ್ ಕಮೀಷನ್‌ನಲ್ಲಿ ಈ ಒಂದು ವಿಚಾರವನ್ನು ಹೇಳಿದಾಗ ತಾವು ಅದನ್ನು ಬದಲಾವಣೆ ಮಾಡಲಿಕ್ಕೆ ಹೊರಟಿದ್ದೀರಿ, ಅದಕ್ಕಿಂತ ಮುಖ್ಯವಾಗಿ 1994-95ರಲ್ಲಿ ತಾವು ಏನು ಹೇಳಿದ್ದೀರಿ ಎಂಬುದನ್ನು ಹೇಳುತ್ತೇನೆ. ನ್ಯಾಶನಲ್ ಪ್ಲಾನಿಂಗ್ ಕಮೀಷನ್‌ನವರು ಇವೊತ್ತು ಯಾವ ಅಭಿಪ್ರಾಯವನ್ನು 1994-95ರ ಪ್ಲಾನ್ ಬಗ್ಗೆ ಹೇಳಿದ್ದಾರೆ.

"" Total approved plan outlay of the state was Rs.3,075 crores consisting of Rs.2,139.10 crores of state's own resources and Rs.885.90 crores out of central support. DCR was the positive figure of Rs.1814.88 crores. How-

ever, the contribution of KPC was negatived at -Rs.90.46 crores. State has not provided early figures for 94-95 due to uncertainties arising out of elections. However, the figures have been provided by the state Government. The aggregate resource for 94-95 is at Rs.3,138.73 crores i.e., more than the approved outlay of Rs.3,075 crores by Rs.130.73 crores.

ಡಿಸೆಂಬರ್‌ನಲ್ಲಿ ಕೇಂದ್ರ ಸರ್ಕಾರಕ್ಕೆ ಕೊಟ್ಟಂಥ ಮಾಹಿತಿ ಪ್ರಕಾರ
"" The State however expects that it would be able to fulfil the approved plan outlay.

This is a very positive categorical statement given by the state government, an assurance given to the National Planning Commission when they went for discussion.

ಇವೊತ್ತು ನಾವು ನಮ್ಮ ಪ್ಲಾನನ್ನು ಮಾಡತಕ್ಕ ಒಂದು ವ್ಯವಸ್ಥೆಯಲ್ಲಿ ಇದ್ದೇವೆ ಎಂಬ ಒಂದು ಕಟ್ಟುನಿಟ್ಟಾದ ವಿಚಾರವನ್ನು ಪ್ಲಾನಿಂಗ್ ಕಮೀಷನ್‌ನವರಿಗೆ ಕೊಟ್ಟು ಬರುವಾಗ ಇವರಿಗೆ ಆಲೋಚನೆ ಇರಲಿಲ್ಲವೇ? 58 ಕೋಟಿ ರೂಪಾಯಿ ಶಾರ್ಟೇಜ್ ಆಗುತ್ತದೆ ನಾವು ಪ್ಲಾನನ್ನು ಫುಲ್‌ಫಿಲ್ ಮಾಡಲು ಆಗುವುದಿಲ್ಲ ಎಂಬ ಆಲೋಚನೆ ಇರಲಿಲ್ಲವೇ? That means something has happened between December and March. Things were going on well up to December 11th. Something drastically had happened in the position of the State. It is so clear as that. ಅಂಗೆ ಹುಣ್ಣಿಗೆ ಕನ್ನಡಿ ಏಕೆ ಬೇಕು?

Everything was O.K. They say that the plan will be performed till they presented this budget. This is what has happened within 3 months' of time' has stopped all plan work and development work. Naturally they may transfer it to the non-plan, non-development.

ಆದುದರಿಂದ ಇವೊತ್ತು ನೀವು ಒಂದು ಸ್ಪಷ್ಟವಾದಂಥ ರಾಜಕೀಯದ ಒಂದು ಚದುರಂಗದಾಟದ ಸಂಪೂರ್ಣವಾದಂಥ ಚಿತ್ರವನ್ನು ರಾಜ್ಯದ ಮುಂದೆ ಮತ್ತು ರಾಷ್ಟ್ರದ ಮುಂದೆ ಇಟ್ಟಿದ್ದೀರಿ. ನಮ್ಮ ಕರ್ನಾಟಕ ರಾಜ್ಯದ ವರ್ಚಸ್ಸಿಗೆ ಇದು ಇಂದು ಬರುತ್ತದೆ ಎಂಬುದನ್ನು ತಾವು ನೋಡಬೇಕಾಗುತ್ತದೆ. ಆದುದರಿಂದ ಇವೊತ್ತು ಬಹಳ

ಉದ್ದೇಶಪೂರಿತವಾದಂಥ ಒಂದು ಯೋಜನೆಯನ್ನು ಸದೆಬಡಿಯುವ ಪ್ರಯತ್ನವನ್ನು ಮಾತ್ರ ಈ ಮೂರು ತಿಂಗಳಲ್ಲಿ ನೀವು ಮಾಡಿದ್ದೀರಿ; ಬೇರೆ ಏನನ್ನೂ ನೀವು ಮಾಡಿಲ್ಲ. ಯಾವ ಬೆಳವಣಿಗೆ ಕೆಲಸ ಮಾಡಲಿಕ್ಕೆ ಹೋಗಲಿಲ್ಲ. ಅಭಿವೃದ್ಧಿ ಕೆಲಸ ಮಾಡಲಿಕ್ಕೆ ಹೋಗಲಿಲ್ಲ; ಬಡವರ ಕೆಲಸ ಮಾಡಲಿಕ್ಕೆ ಹೋಗಲಿಲ್ಲ. ನೀವು ಬರೀ ಜಿಲ್ಲಾ ಪರಿಷತ್ ಮತ್ತು ತಾಲ್ಲೂಕ್‌ಪಂಚಾಯಿತಿ ಚುನಾವಣೆ ಮೇಲೆ ಕಾನ್‌ಸಂಟ್ರೇಟ್ ಮಾಡಿದ್ದೀರಿ. ನಾವು ಅದಕ್ಕೆ ಶಹಬಾಸ್‌ಗಿರಿಯನ್ನು ಕೊಡುತ್ತೇವೆ. ಆದರೆ ಇವೊತ್ತು ಈ ಮೂರು ತಿಂಗಳಲ್ಲಿ ಈ ಪ್ಲಾನ್‌ಅನ್ನು ಸಬೊಟೇಜ್ ಮಾಡುವುದಕ್ಕೆ ಹೊರಟಿದ್ದೀರಿ. ಆದುದರಿಂದ ಇವೊತ್ತು ಪ್ಲಾನ್‌ಅನ್ನು ಪರ್‌ಫಾರ್ಮ್ ಮಾಡುತ್ತೇವೆ ಎಂದು ಅಲ್ಲಿಗೆ ಹೇಳಿ ಈ ಮೂರು ತಿಂಗಳಲ್ಲಿ ಅದನ್ನು ಮಾಡದೇ ತಾವು ತಮ್ಮ ಜವಾಬ್ದಾರಿಯನ್ನು ನಿರ್ವಹಿಸಲಿಲ್ಲ ಎಂದು ಹೇಳಬೇಕಾಗಿದೆ. ಯೋಜನೆಯನ್ನು ಪರ್‌ಫಾರ್ಮ್ ಮಾಡಬೇಕಾಗಿದೆ. ಆ ಜವಾಬ್ದಾರಿಯ ನೊಗವನ್ನು ಸಂಪೂರ್ಣವಾಗಿ ಕಳಚಿಬಿಟ್ಟಿದ್ದೀರಿ. ಮುಂದೆ ಮಾಡುತ್ತೇವೆ ಎಂದು ಆಶ್ವಾಸನೆಯನ್ನು ಕೊಡುತ್ತಿದ್ದೀರಿ. ಅದನ್ನು ನೋಡೋಣ; ಖಂಡಿತ ನಿಮಗೆ ಯೋಜನೆಯ ಬಗ್ಗೆ ಆಸಕ್ತಿಯಿಲ್ಲ, ನಿಮ್ಮ ಜನತಾದಳದ ಮುಖಂಡರೇ ಹೇಳಿದ್ದಾರೆ, ಯೋಜನೆಯಲ್ಲಿ ಅರ್ಥವಿಲ್ಲ ಎಂದು,... Perhaps they gave a holiday. ಆದ್ದರಿಂದ ಇವೊತ್ತು ಯಾವ ಒಂದು ಕಮಿಟೆಡ್ ಲಯಬಿಲಿಟಿ ಎಂದು ಏನಿದೆ ಅದು ಏಳನೇ ಯೋಜನೆಯಲ್ಲಿ ಇರತಕ್ಕಂಥದ್ದು 192.43 ಕೋಟಿ ರೂಪಾಯಿಗಳು. ಇದಲ್ಲದೇ ಇನ್ನು ಏನಾದರೂ ಸರ್ಕಾರ ಕೊಡಬೇಕಾದ್ದು ಇದ್ದರೆ ಅದನ್ನು ತಾವು ಹೇಳಬೇಕಿತ್ತು ಪ್ಲಾನಿಂಗ್ ಕಮೀಷನ್‌ನಲ್ಲಿ ತೋರಿಸಿ, ಹೀಗಿರುವಾಗ ನಾವು ಪ್ಲಾನ್‌ಅನ್ನು ಪರ್‌ಫಾರ್ಮ್ ಮಾಡುವುದಕ್ಕೆ ಆಗುವುದಿಲ್ಲ ಎಂಬುದನ್ನು ಹೇಳಬೇಕಾಗಿತ್ತು. ನೀವು ಆ ರೀತಿ ಮಾಡುವುದಕ್ಕೆ ಹೋಗದೇ ಇರುವುದರಿಂದ ಇದು ನಿಮ್ಮ ರಾಜಕೀಯದ ಚದುರಂಗದಾಟದ ಒಂದು ತಪ್ಪು ಒಪ್ಪಿಗೆ ಎಂದು ಹೇಳಿದರೆ ತಪ್ಪಾಗದು.

ಶ್ರೀ ಸಿದ್ದರಾಮಯ್ಯ (ಹಣಕಾಸು ಮಂತ್ರಿಗಳು):-
ನಿಮ್ಮ 9 ತಿಂಗಳ ಛಾಯೆ ಈ ಮೂರು ತಿಂಗಳ ಮೇಲೆ ಇದೆ.

ಶ್ರೀ ಎಂ. ವೀರಪ್ಪ ಮೊಯಿಲಿ :- ಆ ಛಾಯೆ ಬಗ್ಗೆಯೇ ಹೇಳುತ್ತಿರುವುದು, ನೀವು ಬೇಕಾದರೆ ಆ ಛಾಯೆಯನ್ನು ಪೂರ್ತಿಯಾಗಿ ಅಳಿಸಿಬಿಡಿ. We don't mind. ಹಿಂದಿನ Plan performance, ಯೋಜನೆ, ಬೆಳವಣಿಗೆ ಅದನ್ನೆಲ್ಲಾ ಅಳಿಸಿ ಬಿಟ್ಟು ನೀವು ಬೇರೆ ಮಾಡಿ, ನಮ್ಮದೇನೂ ಅಡ್ಡಿ ಇಲ್ಲ. ಆದರೆ ಇವೊತ್ತು even externally aided projects

ಬಹಳ ವಿಶೇಷವಾದಂಥದ್ದು ಇದೆ. ನೀವೇ ಹೇಳಿದ್ದೀರಿ,
Total ARM commitment was Rs.50.39 crores in 94-95 which would be fulfilled by the State Government.

ನನಗೆ ಗೊತ್ತಿದೆ, ಇದರ ಬಗ್ಗೆ ಹಿಂದಿನ ಸರ್ಕಾರ ಸ್ಟೆಪ್ ತೆಗೆದುಕೊಳ್ಳಲಿಲ್ಲ ಎಂದು ಒಂದು ಹೇಳಿಕೆ ಕೊಟ್ಟಿದ್ದರೆ ನೀವು ಕೊಟ್ಟಂಥ ಬಡ್ಜೆಟ್‌ಗೆ ಈವತ್ತು ಪುಷ್ಟಿ ಬರುತ್ತಿತ್ತು.

Yes, ARM, they promised to the NPC that it would be fulfilled by the State Government. That means, we have taken steps. We have taken all efforts to fulfil the ARM.

ಆದರೆ ಅದನ್ನು ಇವೊತ್ತು ಉಳಿಸಿಕೊಳ್ಳಲಿಕ್ಕೆ ಆಗಲಿಲ್ಲ ಎಂದು ಹೇಳತಕ್ಕಂಥ ಪ್ರಯತ್ನ ತಾವು ಈವತ್ತು ಮಾಡಲಿಕ್ಕೆ ಸಾಧ್ಯವಿದೆ ಎಂದು ನಾನು ಸ್ಪಷ್ಟವಾಗಿ ಹೇಳಲಿಕ್ಕೆ ಬಯಸುತ್ತೇನೆ. ಆದುದರಿಂದ ಇವೊತ್ತು ತಾವು ರಿಸೋರ್ಸ್‌ಸ್ ಮತ್ತು plan expenditure, the progress of the 8th plan. ಇದನ್ನು ಕೂಡ ತಮ್ಮ ಗಮನಕ್ಕೆ ತರುವುದಾದರೆ, ತಾವೇ ಹೇಳಿದ್ದೀರಿ, current prices ನಲ್ಲಿ Rs.2766.87 crores constant prices ನಲ್ಲಿ Rs.2425 crores ಮತ್ತು ಇದನ್ನು Rs.3025 crores ಎಂದೂ ಕೂಡ ಒಪ್ಪಿಕೊಂಡಿದ್ದೇವೆ. in1994-95 also, you have said that you are fully performing the plan expenditure. Revised outlay for 93-94 is Rs.3025 crores. In 94-95 plan expenditure is Rs.3,138.73 crores,
ಆಗುತ್ತದೆ ಎಂಬ ಒಂದು ಸೂಚನೆಯನ್ನು ಸ್ಪಷ್ಟವಾಗಿ ಈವೊತ್ತು ತೋರಿಸಿಕೊಟ್ಟಿದ್ದೇನೆ. ಇದೂ ಕೂಡ ನಮ್ಮ ಒಂದು ಡಾಕ್ಯುಮೆಂಟ್‌ನಲ್ಲಿ ಸ್ಪಷ್ಟವಾಗಿ ತಾವು ನೋಡಲಿಕ್ಕೆ ಸಾಧ್ಯವಾಗುತ್ತದೆ. ಆದ್ದರಿಂದ 93-94ನಲ್ಲಿ ಕೂಡ

Financing of the 8th five-year plan 92-97 and annual plan of 94-95, it is said in Annexure-II of the document of NPC that in 93-94 it is Rs.3,025 crores, revised estimate. In 94-95 approved plan outlay was RS.3025 crores. In revenue receipts, the current balance from the current revenues and in financing the plan in 92-93 balance actuals was Rs.549 crores and in 93-94, actuals was Rs.1026.97 crores. There is no shortfall. Actually what was the annual plan was Rs.1000 crores. The target was Rs.1000 crores. Actuals was Rs.1,026.97 crores. In 94-95 the annual plan was Rs.1,824 crores and actuals was Rs.1746 crores. In Additional Resources Mobilisation, the actuals in 92-93 were Rs.329.05 crores, in 93-94 Rs.315.56 crores and actually what was planned was Rs.187 crores. As against Rs.187 crores, it is Rs.315.56 crores! In 94-95 the target was Rs.50.39 crores. But what we have achieved is Rs.60 crores in Additional Resources Mobilisation.

(MR. SPEAKER IN THE CHAIR)

The performance under Minimum Needs programme in Karnataka during 1992-93, 1993-94 and 1994-95 - an amount of Rs.1099 crore was included in the 8th plan. The annual Expenditure during 1992-93 was Rs.162.57 crores. The likelyexpenditure during 1994-95 is Rs.407.68 crores. The outlay approved for 1993-94 was Rs.488.13 crores. In other words, it has doubled from 1992-93 and 1993-94 and we maintain the same tempo in 1994-95. In nominal terms, during the first three years of the plan , it works out to 89%, which shown that the State has performed very well under various programmes under minimum needs programme.

ಆದುದರಿಂದ ಇವತ್ತು ಇಂಥ ವಿಚಾರವನ್ನು ತಾವು ಸ್ಪಷ್ಟವಾಗಿ ತಿಳಿದುಕೊಳ್ಳಬೇಕಾಗುತ್ತದೆ. ಇಂತಹ ಪ್ಲಾನನ್ನು ಸಬೊಟೇಜ್ ಮಾಡತಕ್ಕಂತಹ ಒಂದು ಪ್ರಯತ್ನ ಸರಿಯಲ್ಲ, ತಾವು ಸ್ಪಷ್ಟವಾಗಿ ಇದನ್ನು ಅರಿತುಕಒಳ್ಳಬೇಕು ಎನ್ನುವ ವಿಚಾರವನ್ನು ಇಲ್ಲಿ ಹೇಳುವುದಕ್ಕೆ ಇಚ್ಛಿಸುತೇವೆ. ಇನ್ನು ಜಿಲ್ಲಾ ಪರಿಷತ್ತಿನ ಪ್ಲಾನ್‌ನಲ್ಲಿ ತಾವು ಹೇಳಿದ್ದೀರಿ, ಗ್ರಾಮಾಂತರ ಪ್ರದೇಶಗಳ ಯೋಜನೆಗಳು ನಾವು ತಿರುಚ್ಚಿಬಿಟ್ಟಿದ್ದೇವೆ, ಸ್ಥಗಿತಗೊಳಿಸಿದ್ದೇವೆ ಎಂಬುದಾಗಿ ಬಹಳ ವಿಸ್ತಾರವಾಗಿ ಪ್ರಸ್ತಾಪನೆ ಮಾಡಿದ್ದೀರಿ. ತಾವು ಅಧಿಕಾರದಲ್ಲಿರುವಾಗ ತಮಗೆ ನಂಬಿಕೆ ಇದೆ, ಗ್ರಾಮಾಂತರ ಪ್ರದೇಶಗಳ ಬಗ್ಗೆ ಆಸಕ್ತಿ ಇದೆ ದಿ ಜಿಲ್ಲಾ ಪರಿಷತ್ 265.07 ಕೋಟಿ ರೂಪಾಯಿಗಳು, 9394ರಲ್ಲಿ ವಿ ಇಂಪ್ಲಿಮೆಂಟೆಡ್ ಪ್ಲಾನ್ ಆಫ್ 471.31 ಕೋಟಿ, 9495ಕ್ಕೆ 538.14 ಕೋಟಿ ರೂಪಾಯಿಗಳು. ಅಂದರೆ 8990ಕ್ಕೆ, what we plan in 1994 is 203% more. This represent a jump of 102% in five years and an annual increase of over 20% over full years. But to-day it is less than 15%. But according to me it is not aeven 5%. I will come back to that position later.

ಲೆಕ್ಕ ಹಾಕಿದರೆ ಆವರೇಜ್ 20 ಪರ್ಸೆಂಟ್ ನಾವು ಜಾಸ್ತಿ ಮಾಡಿದ್ದೇವೆ.

ಆದುದರಿಂದ ಇವತ್ತು ಜಿಲ್ಲಾ ಪರಿಷತ್ತಿನಲ್ಲಿ ಗ್ರಾಮಾಂತರ ಪ್ರದೇಶಕ್ಕೆ ನಾವು ಹೆಚ್ಚಿನ ಹಣ ಕೊಟ್ಟಿದ್ದೇವೆಂದು ಏನು ತಾವು ಹೇಳುತ್ತೀರಿ, ಇದು ಸತ್ಯಕ್ಕೆ ಬಹಳ ದೂರವಾದಂತಹ ವಿಚಾರ ಎಂಬುದನ್ನು ನಾನು ಪ್ರತ್ಯೇಕವಾಗಿ ಹೇಳಬೇಕಾದಂತಹ ಅವಶ್ಯಕತೆಯಿಲ್ಲ. ಆದುದರಿಂದ 9596ನೇ ಸಾಲಿಗೆ ತಾವು ಏನು ಪ್ಲಾನ್ ಮಾಡಿದ್ದೀರಿ ಅದು 3758 ಕೋಟಿ. ರಿಸೋರ್ಸಸ್ ಇನ್ ದಿ ಬಜೆಟ್ 2903.29 ಕೋಟಿ. 854.29 ಕೋಟಿ ಔಟ್ ಸೈಡ್ ದಿ

ಬಜೆಟ್‌ನಲ್ಲಿ ತರುತ್ತೇವೆಂದು ಹೇಳಿದ್ದೀರಿ. That means Rs.1,182.83 crores is the real shortage. In State resources Rs.327.84 crores is the deficit.

ಔಟ್ ಸೈಡ್ ಬಜೆಟ್‌ನಿಂದ ತರುವಂಥಹದ್ದು 854.29 ಕೋಟಿಗಳು. ಅದರ ಅರ್ಥ 1182.83 ಕೋಟಿ ಮತ್ತೆ ಫಂಡ್ ಸಬ್ಸಿಡಿಗೆ 200 ಕೋಟಿ ಪ್ರೊವೈಡ್ ಮಾಡಿದ್ದು ಎಲ್ಲೂ ಕಾಣಲಿಲ್ಲ. They said in the Budget but I did not find any support in the budget.

ಆಮೇಲೆ 100 ಕೋಟಿ ಸಾಲ ಮನ್ನಕ್ಕೆ ಎಂದು ಅವರು ಪ್ರೊಜೆಕ್ಟ್ ಮಾಡಿರುವುದು. ಅದನೆಲ್ಲಾ ಲೆಕ್ಕ ಹಾಕಿದರೆ, 1582.83 ಕೋಟಿ ಡೆಫಿಸಿಟ್ ಆಗುತ್ತದೆ, including what they are going to get from outside. —
ನಾನು ಬಜೆಟ್ ಡಾಕ್ಯೂಮೆಂಟನ್ನು ಚೆನ್ನಾಗಿ ನೋಡಿದೆ. ಇದನ್ನು ಪ್ರೊವೈಡ್ ಮಾಡಿಲ್ಲ. 510 ಕೋಟಿ ಪ್ರೊವೈಡ್ ಮಾಡಿದ್ದಾರೋ ಏನೋ ಅದು ನನಗೆ ಸಂಶಯ. ಆದರೆ ಇವತ್ತು 100 ಕೋಟಿ ಸಾಲ ಮನ್ನಕ್ಕೆ 200 ಕೋಟಿ ಫುಡ್ ಸಬ್ಸಿಡಿಗೆ ಬಜೆಟನ್ನು ಪ್ರೊವೈಡ್ ಮಾಡಿಲ್ಲ. Out of Rs.3758 crores, Rs.1582.83 crores is the deficit.
ಬಹುಶ: ದೊಡ್ಡ ಪವಾಡ ಮಾಡಲಿಕ್ಕೆ ತಾವು ಹೊರಟ್ಟಿದ್ದೀರಿ. ಮಾಡುತ್ತೀರೆಂದು ಬಹಳ ಧೈರ್ಯದಿಂದ ಇದ್ದೀರಿ. ಏಕೆಂದರೆ ತಾವು ಚುನಾವಣೆಯಲ್ಲಿ ಗೆದ್ದಿದ್ದೀರಿ. ಜಿಲ್ಲಾಪರಿಷತ್‌ನಲ್ಲಿ ಗೆದ್ದ ಕಾರಣದಿಂದ ತೆರಿಗೆ ಜಾಸ್ತಿ ಕೊಡಬೇಕೆಂದು ಜನ ತಿಳಿದುಕೊಳ್ಳುತ್ತಾರೆ. ಹಾಗೆ ಜಜನ ತಿಳಿದುಕೊಂಡರೂ ಪರವಾಗಿಲ್ಲ ತಾವು ಗೆದ್ದಿದ್ದೀರಿ. ಜಿಲ್ಲಾ ಪರಷತ್ ಚುನಾವಣೆ ಮೋದಲೇ ಇಷ್ಟು ತೆರಿಗೆ ಹಾಕುತ್ತೇವೆಂದು ತಾವು ಹೇಳಬೇಕಾಗಿತ್ತು. ಏತಕ್ಕೆಂದರೆ ಅಸೆಂಬ್ಲಿ ಚುನಾವಣೆಯಲ್ಲಿಯೂ ಕೂಡ ಇದನ್ನು ತಾವು ಹೇಳಿದ್ದರೆ, ನಿಮಗೆ ಒಳ್ಳೆಯ ರಿವಾರ್ಡ್ ಕೊಡುತ್ತಿದ್ದರು. ಆದುದರಿಂದ ಜಿಲ್ಲಾ ಪರಷತ್ ಚುನಾವಣೆಯನ್ನು ತಪ್ಪಿಸಿಕೊಂಡಿರಿ, ಇನ್ನು ಐದುವರ್ಷಗಳವರೆಗೆ ತಾವು ನಿರಾತಂಕವಾಗಿ ರಾಜ್ಯಭಾರ ಮಾಡಬಹುದು, ಯಾರ ಮೇಲೆ ಚಪ್ಪಡಿ ಹಾಕಿರೂ ಕೂಡ ಪರವಾಗಿಲ್ಲ ಅದರ ಮೇಲೆ ನಿಂತುಕೊಂಡು ನಾವು ನೃತ್ಯ ಮಾಡಬಹುದೆಂದು ತಮ್ಮ ಅಭಿಪ್ರಾಯವಾಗಿದೆ.

ಅಧ್ಯಕ್ಷರು:- ಈಗ ಸುಮಾರು 75 ನಿಮಿಷಗಳಾಗಿವೆ.

SRI M.VEERAPPA MOILY :- I will try to be cocise.
MR.SPEAKER: I am given to understand that Mr.Ghorpade is also wiling to participate in the budget discussion. I have got necessarily to make arrangements within the time available.

ಶ್ರೀ. ಎಂ. ವಿರಪ್ಪಮೊಯಿಲಿ:- ನಾನು ಬೇಗ ಮುಗಿಸುತ್ತೇನೆ. ಈಗ ಕೃಷಿ ಬಗ್ಗೆ ತಾವು ನಾವೆಲ್ಲಾ ಮಣ್ಣಿನ ಮಕ್ಕಳೆಂದು ಹೇಳಿದ್ದೀರಿ. ಘೋರ್ಪಡೆಯವಾರೇ, ನೀವು ಎಲ್ಲಿಂದ ಬಂದಿದ್ದೀರಿ? ನೀವು ಕಲ್ಲಿನ ಮಕ್ಕಳೇ?...

ಶ್ರೀ. ವಾಟಾಳ್‌ನಾಗರಾಜ್:- ಮಾನ್ಯ ಅಧ್ಯಕ್ಷರೇ, ಈಗ ಮಣ್ಣಿನ ಮಗ, ಕಲ್ಲಿನ ಮಗ, ಖನಿಜದ ಮಗ ಎಂದು ಹೆಸರು ಕೊಡಬೇಕಾದರೆ ಜಗದ್ಗುರುಗಳು ಯಾರಾದರೂ ಬಿರುದುಕೊಡಬೇಕು. ಇವರಿಗೆ ಯಾರು ಕೊಟ್ಟರು, ಬಿರುದು? ದೇಶದಲ್ಲಿ ಜಿನ ಬಿರುದನ್ನು ಕೊಟ್ಟುಬಿಟ್ಟರು.

ಶ್ರೀ. ಸಿದ್ಧರಾಮಯ್ಯ:- ಗೊಬ್ಬರದ ಮೇಲಿನ ಸಬ್ಸಿಡಿ ತೆಗೆದರಲ್ಲಾ ಆದಕ್ಕೆ ಅವರು ಮಣ್ಣಿನ ಮಕ್ಕಳಲ್ಲ.

ಶ್ರೀ. ಎಂ.ವೀರಪ್ಪಮೊಯಿಲಿ:- ಯಾವ ಸಬ್ಸಿಡಿ ತೆಗೆದು ಹಾಕಿದ್ದುದು? I take Aerious objection for it.

ಶ್ರೀ. ಹೆಚ್.ಶಿವಪ್ಪ:- ವಾಟಾಳ್‌ನಾಗರಾಜ್‌ರವರಿಗೆ ಕನ್ನಡ ಚಳುವಳಿಗಾರರು ಎಂದು ಯಾರು ಬಿರುದು ಕೊಟ್ಟರು?

ಶ್ರೀ. ವಾಟಾಳ್‌ನಾಗರಾಜ್:- ಮೊನ್ನೆ ತಾನೇ ಸಹ ಸದಸ್ಯರಾಗಿ ಎಷ್ಟು ಭದ್ರವಾಗಿ ಅವರ ಪರವಾಗಿ ಹೇಳುತ್ತಿದ್ದಾರೆ ನೋಡಿ.

ಶ್ರೀ. ಡಿ. ಟಿ. ಜಯಕುಮಾರ್:- ಎಲ್ಲದಕ್ಕಿಂತ ಜನತೆ ದೊಡ್ಡವರು. ವಾಟಾಳ್‌ನಾಗರಾಜ್ ರವರಿಗೆ ಕನ್ನಡದ ಚಳುವಳಿಗಾರರು ಎಂದು ಹೇಗೆ ಜನತೆ ಬಿರುದು ಕೊಟ್ಟಿದ್ದಾರೋ, ಹಾಗೆಯೇ ಮಣ್ಣಿನ ಮಗ ಎಂದು ನಮಗೆ ಕೊಟ್ಟಿದ್ದಾರೆ.

ಶ್ರೀ. ವಾಟಾಳ್‌ನಾಗರಾಜ್:- ಹಾಗಾದರೆ ತಾವೆಲ್ಲಾ ಮಣ್ಣಿನ ಮಕ್ಕಳು.

ಶ್ರೀ. ಎಂ.ವೀರಪ್ಪ ಮೊಯಿಲಿ:- ವಾಟಾಳ್‌ನಾಗರಾಜ್‌ರವರೇ ಇವರು ಮಣ್ಣಿನ ಮಕ್ಕಳಾಗಿ ಬೇರೆಯವರಿಗೆ ಮಣ್ಣು ಮಾಡುವುದು ಬೇಡ. ಮಾನ್ಯ ಅಧ್ಯಕ್ಷರೇ, ತಾವಂತೂ ಮಣ್ಣಿನ ಮಕ್ಕಳು.

ಅಧ್ಯಕ್ಷರು:- ಇಲ್ಲ ಇಲ್ಲ ನಾವು ಚಿನ್ನದ ಮಕ್ಕಳು. ನೀವು ಸಮುದ್ರ, ಆದರು ಮಣ್ಣು, ನಾವು ಬಂಗಾರ.

ಶ್ರೀ. ಎಂ.ವೀರಪ್ಪ ಮೊಯಿಲಿ:- ಈಗ, ಕೃಷಿಗೆ ನಾವು 6.94 ಪರ್ಸೆಂಟ್ ಕೊಟ್ಟರೆ, 95-96 ನೇ ಸಾಲಿನಲ್ಲಿ ತಾವು 6.47 ಪರ್ಸೆಂಟ್ ಕೊಟ್ಟಿದ್ದೀರಿ. ಗ್ರಾಮೀಣಾಭಿವೃದ್ಧಿಗೆ ತಾವು 6.70 ಪರ್ಸೆಂಟ್ ಕೊಟ್ಟಿದ್ದರೆ ನೀವು 5.62 ಪರ್ಸೆಂಟ್ ಕೊಟ್ಟಿದ್ದೀರಿ. ಸೈಜ್ ಇನ್‌ಕ್ರೀಸ್ ಮಾಡಿರಬಹುದು ಆದರೆ percentage to the Budget is impertout.

ಆಮೇಲೆ ವಿಶೇಷ ಪ್ರದೇಶ ಯೋಜನೆ ಎಂದರೆ ಈ ರಾಜ್ಯದ ತಾರತಮ್ಯವನ್ನು, ಈ ಪ್ರಾದೇಶಿಕ ಅಸಮತೋಲನವನ್ನು ಹೋಗಲಾಡಿಸಬೇಕೆಂದು ನೀವು ಮಾಡಿಲ್ಲ, ನಾನೇ ಮಾಡಿದ್ದೇನೆ, ಹೈದ್ರಾಬಾದ್ ಕರ್ನಾಟಕ ದೇವಲಪ್‌ಮೆಂಟ್ ಬೋರ್ಡ್ ಅದಕ್ಕೆ ಹಣವನ್ನೂ ಕೂಡ ನಾವೇ ಕಾಂಗ್ರೆಸ್‌ನವರು ಕೊಟ್ಟಿದ್ದೇವೆ. ಮಲೆನಾಡು ಅಭಿವೃದ್ಧಿ ಮಂಡಳಿ, ಅದು ಕಾಂಗ್ರೆಸ್‌ನವರೇ ಮಾಡಿದ್ದುದು. ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬೋರ್ಡ್ ಎಂದು ಹೇಳಿ ನಾವೇ ಕೊಟ್ಟಿರುವುದು. ಆಮೇಲೆ ಬಯಲು ಸೀಮೆ ಎಂದು ಹೇಳಿ ಪ್ರಾಧಿಕಾರ ಮಾಡಿದ್ದೇವೆ, ಶಾಸನ ಮಾಡಿದ್ದೇವೆ, ನಿಮಗೆ ಕೊಟ್ಟಿದ್ದೇವೆ, ಅದಕ್ಕೆ ಒಂದು ಪೈಸೆ ಕೂಡ ಕೊಟ್ಟ ಹಾಗೆ ನನಗೆ ಕಾಣಿಸುತ್ತಿಲ್ಲ. There is no support at all from the government. ನಾವು ಶಾಸನ ಮಾಡಿದ್ದೇವೆ, ನಿಮ್ಮ ಕೃಷಿ ಸಚಿವರೇ ಬಹಳ ಹೇಳುತ್ತಿದ್ದರು, ಇದು ಮಾಡಿ, ಇದು ಮಾಡಿ ನಿಮಗೆ ನೂರು ನಮಸ್ಕಾರ ಹಾಕುತ್ತೇವೆ ಎಂದು ಹೇಳುತ್ತಿದ್ದರು. ಈಗ ಏನು ಮಾಡಬೇಕು. ಒಂದು ಪೈಸೆ ಕೂಡ ಕೊಟ್ಟಿಲ್ಲ. ಅದಕ್ಕೆ ಯಾರಿಗೆ ನಮಸ್ಕಾರ ಹೇಳಬೇಕು ಪ್ರಾದೇಶಿಕ ಅಭಿವೃದ್ಧಿನೂ ಕೂಡ ನಾವು 3.43 ಪರ್ಸೆಂಟ್ ನಾವು ಕೊಟ್ಟಿದ್ದೇವು. 2.66 ಪರ್ಸೆಂಟ್ ಇವರು ಕೊಟ್ಟಿದ್ದಾರೆ. ಪ್ರಾದೇಶಿಕ ಅಸಮತೋಲನವನ್ನು ಸರಿಪಡಿಸುವ ವಿಚಾರದಲ್ಲಿ ನಿಮಗೆ ಎಷ್ಟು ಆಸಕ್ತಿ ಇದೆ ಎಂಬುದು ಗೊತ್ತಾಗುತ್ತದೆ. ಮಲೆನಾಡಿನ ಅಭಿವೃದ್ಧಿಗೂ ಕಡಿಮೆಯಾಗಿದೆ, ಹೈದ್ರಾಬಾದ್-ಕರ್ನಾಟಕಕ್ಕೂ ಕಡಿಮೆಯಾಗಿದೆ, ಬಾರ್ಡರ್ ಏರಿಯಾಗೂ ಕೂಡ ಕಡಿಮೆಯಾಗಿದೆ. ಬಯಲು ಸೀಮೆಗೆ ಶಾಸನ ಮಾಡಿ ನಾವು ಇಟ್ಟಿದ್ದೇವೆ. ಬಹುಶ: ಅದನ್ನು ಕೋಲ್ಡ್ ಸ್ಟೋರೇಜ್‌ನಲ್ಲಿ ಹಾಕತಕ್ಕಂಥ ಆಲೋಚನೆ ಇರಬಹುದು. ಅಂದರೆ ನಿಮಗೆ ಎಷ್ಟು ಆಸಕ್ತಿ ಬರಗಾಲದ ಪ್ರದೇಶದ ಬಗ್ಗೆ ಇದೆ ಎಂಬುದು ಗೊತ್ತಾಗುತ್ತದೆ. ಇವೊತ್ತು ಅನೇಕ ಡ್ರೈಲ್ಯಾಂಡ್ ಬಗೆಗೆ ಎಷ್ಟು ಆಸಕ್ತಿ ನಿಮಗೆ ಇದೆ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಅತ್ಯಂತ ಕಡು ಬಡವರು ಎಲ್ಲಿ ಇರುತ್ತಾರೆ ಯಾರು ಈ drought affected ಪ್ರದೇಶದಲ್ಲಿ ಬಡವರು ಇರುತ್ತಾರೆ. ಆ ಬಡವರ ಬಗ್ಗೆ, ರೈತರ ಬಗ್ಗೆ, ಕಾರ್ಮಿಕರ ಬಗ್ಗೆ ತಮಗೆ ಎಷ್ಟು ಆಸಕ್ತಿ ಇದೆ ಎಂಬುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬಹುಶ ನಾನು ಇನ್ನೊಂದು ಉಲ್ಲೇಖಿಸಿ ಹೇಳಬೇಕಾದ ಅವಶ್ಯಕತೆ ಇದೆ. ಇವೊತ್ತು ನೀರಾವರಿಗೆ ನೀವು ಒಂದೆರಡು ಪರ್ಸೆಂಟ್ ಜಾಸ್ತಿ ಕೊಟ್ಟಿದ್ದೀರಿ. ನಾವು 21.53 ಪರ್ಸೆಂಟ್ ಕೊಟ್ಟಿದ್ದೆವು. ಆದರೆ ನೀವು 23.49 ಪರ್ಸೆಂಟ್ ಕೊಟ್ಟಿದ್ದೀರಿ, ಶಿಕ್ಷಣಕ್ಕೆ we have provided 9.59%. ನೀವು 8.83 ಪರ್ಸೆಂಟ್ ಕೊಟ್ಟಿದ್ದೀರಿ, ನೀವು ಕಡಿಮೆ ಕೊಟ್ಟಿದ್ದೀರಿ. ಒಂದು ಪ್ರಮುಖವಾದ ಕ್ಷೇತ್ರದಲ್ಲಿ ತಮಗೆ ಎಷ್ಟು ಆದ್ಯತೆ ಇದೆ ಎಂಬುದನ್ನು ಸ್ಪಷ್ಟವಾಗಿ ಹೇಳಬೇಕೆಂಬ ಆಸಕ್ತಿಯಿಂದ ನಾನು ಹೇಳುತ್ತಿದ್ದೇನೆ. ನೀರಾವರಿಗೆ ಹಿಂದೆ ಏನು ಮಾಡಿದ್ದೀರಿ, ಹಿಂದಿನದ್ದು ಹೇಳಬಾರದು ಎಂದು ಮನಸ್ಸಿದ್ದರೂ ಕೂಡ ತಾವು ರಾಜಕೀಯ ಹೇಳಿಕೆ ಕೊಡುವುದರಿಂದ ಇದನ್ನು ಹೇಳಬೇಕಾಗುತ್ತದೆ. ಇವೊತ್ತು 1984 ನಿಂದ 89 ರವರೆಗೆ, ಇವರು ನೀರಾವರಿಗೆ ಒಟ್ಟು ಕಾವೇರಿ, ಕೃಷ್ಣ ಎಲ್ಲಾ ಸೇರಿ ಸರಾಸರಿ ಎಷ್ಟು ಕೊಡುತ್ತಾ ಇದ್ದರು ಎಂದರೆ 177.74 ಪರ್ ಇಯರ್. ಇದು ಆರು ವರ್ಷದಲ್ಲಿ ಅವರು ಕೊಡುತ್ತಾ ಇದ್ದುದ್ದು. 198889 ಮತ್ತು 199192ರಲ್ಲಿ 358.304 ಪ್ರತಿ ವರ್ಷದ ಸರಾಸರಿ. 199394ರಲ್ಲಿ 718.83, ಕೋಟಿ ರೂ.ಗಳನ್ನು we spent, double that of the previous averagae.

ಇದು ಪರ್ಸೆಂಟೇಜ್ ಜಾಸ್ತಿ ಕೊಡಬಹುದು. ಆದರೆ ಒಂದು ವರ್ಷದಲ್ಲಿ 718.83 ಕೋಟಿ ರೂಪಾಯಿಗಳನ್ನು ನೀರಾವರಿಗೆ ಒದಗಿಸಿದ್ದು ಮಾತ್ರವಲ್ಲ ಅದನ್ನು ಖರ್ಚು ಮಾಡತಕ್ಕಂಥ ಒಂದು ನಮ್ಮ ಸರ್ಕಾರ ಅದು ಮಣ್ಣಿನ ಮಕ್ಕಳ ಸರ್ಕಾರ ಆಗುವುದಿಲ್ಲ.

ನಾವೆಲ್ಲಾ ತಿರುಚಿ ಬಿಟ್ಟಿದೇವೆ, ಕುಂಠಿತಗೊಳಿಸಿದ್ದೇವೆ, ಯಾರು ಕುಂಠಿತಗೊಳಿಸಿದ್ದುದು? ನಾಗರಾಜ್ ರವರೇ, ತೀರ್ಪು ಕೊಡಬೇಕು. ನಾವು 718.83 ಕೋಟಿ ರೂ.ಗಳು ಕೊಟ್ಟಿದ್ದುದು ಅವರು 177.72 ಕೋಟಿ ರೂಪಾಯಿ ಸರಾಸರಿ ವರ್ಷಕ್ಕೆ ಜನತಾದಳ ಸರ್ಕಾರ ಇದ್ದಾಗ ಕೊಡುತ್ತಿದ್ದರು. ಯು.ಕೆ.ಪಿ.ಯನ್ನು 2000 ವರ್ಷಗಳಲ್ಲಿ ಮುಗಿಸಬೇಕು ಎಂದು ಹೇಳಿ, ನಿಮ್ಮ ಆಸಕ್ತಿ ಏನು? ಏಕೆಂದರೆ ಇತಹಾಸ ಮನುಷ್ಯನ ಭವಿಷ್ಯವನ್ನು ಹೇಳುತ್ತದೆ, ಹೌದು, ಅಲ್ಲವೋ? ಇತಿಹಾಸ ಕೂಡ ಬೇಕಾಗುತ್ತದೆ. ಯು.ಕೆ.ಪಿ.ಗೆ ನೀವು ಇರುವಾಗ ಆರು ವರ್ಷದಲ್ಲಿ ವರ್ಷಕ್ಕೆ ಸರಾಸರಿ 46.58 ಕೋಟಿ ಖರ್ಚು ಮಾಡುತ್ತಿದ್ದೀರಿ. 1989 ರಿಂದ 30392 ರವರೆಗೆ ಸರಾಸರಿ 88.92 ಕೋಟಿ ರೂ.ಗಳು ಮಾತ್ರ. ಇದನ್ನು ನಾವು ಡಬ್ಬಲ್ ಮಾಡಿದ್ದೇವೆ. ನಮ್ಮ ಕಾಂಗ್ರೆಸ್ ಸರ್ಕಾರ 93 94ಕ್ಕೆ 240.48 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದೇವೆ. ಅಲ್ಲೇ ತೆಪ್ಪಗೆ ಮಲಗಿತ್ತು. ಈಗ ದಯಮಾಡಿ ಇನ್‌ಸ್ಪೆಕ್ಟ್ ಮಾಡಿ ಬನ್ನಿ ಏನು ಪ್ರೊಗ್ರೆಸ್ ಮಾಡಿ ಇದೆ ಎಂದು.

ಶ್ರೀ ಸಿದ್ಧರಾಮಯ್ಯ:- ನಾನು ನೋಡಿಕೊಂಡು ಬಂದಿದ್ದೇನೆ.

ಶ್ರೀ ಎಂ. ವೀರಪ್ಪಮೊಯಿಲಿ:- 240.48 ಕೋಟಿ ರೂಪಾಯಿಗಳನ್ನು ಯು.ಕೆ.ಪಿ.ಗೆ ಕೊಟ್ಟಿದ್ದೇವೆ. 94-95ರಲ್ಲಿ 346 ಕೋಟಿ ರೂಪಾಯಿಗಳನ್ನು ನಾವು ಕೊಟ್ಟಿದ್ದೇವೆ. ಕಾವೇರಿ ಯೋಜನೆಗೆ ಬಹಳ ಆಸಕ್ತಿ ಇದೆ, ಆಸಕ್ತಿಗೆ ನೀವು ಲಕ್ಷ್ಮಣ ರೇಖೆ ಹಾಕಬಾರದು ಎಂದು ಹೇಳುವುದು ನಾನು ಕಾವೇರಿ ಬೇಸಿಸ್‌ಗೆ.

ಕಾವೇರಿ ಯೋಜನೆ ಅಂದರೆ ಎಲ್ಲಾ ಸೇರುತ್ತದೆ, ತುಮಕೂರು ಜಿಲ್ಲೆ, ಮಂಡ್ಯ ಜಿಲ್ಲೆ, ಹಾಸನ ಜಿಲ್ಲೆ ಸೇರಬೇಕು, ಎಲ್ಲಾ ಸೇರಬೇಕು. ಹಾಗಾದರೆ ಅದನ್ನು ಲಕ್ಷ್ಮಣ ರೇಖೆ ಹಾಕಿಬಿಟ್ಟದೆ. 67 ಕೋಟಿ ರೂಪಾಯಿ ಸರಾಸರಿ ವರ್ಷಕ್ಕೆ ಕೊಡುತ್ತಿದ್ದೀರಿ. ಕಾವೇರಿ ಯೋಜನೆಗೆ 6 ವರ್ಷದಲ್ಲಿ, 89-90 ರಿಂದ 92-93 ರವರೆಗೆ 130 ಕೋಟಿ ರೂಪಾಯಿಗಳು ಕೊಟ್ಟು ಡಬ್ಬಲ್ ಮಾಡಿದ್ದೇವೆ. ನಮ್ಮ ಸರ್ಕಾರ ಬಂದ ಮೇಲೆ 93-94ರಲ್ಲಿ we have spent Rs.224.93 crores.

ಅದಕ್ಕಾಗಿ ಚಟ್ಟನಗರೆ ಟನಲ್ ಏನಿತ್ತು ಅಲ್ಲೇ ನಿಂತಿತು. released Rs.4.5 crores. We got it apened. 1,10,000 ಎಕರೆಗೆ ಅಲ್ಲಿ ನೀರು ಬರತಕ್ಕಂಥ ಅವಕಾಶ ಮಾಡಿಕೊಟ್ಟಿದ್ದೇವೆ. ಬಾಗೂರು ನವಿಲೆ ಟನಲ್ ಕೂಡ ಅಲ್ಲೇ ನಿಂತಿತ್ತು. ಅದನ್ನು ಓಪನ್ ಮಾಡಿ ತೆಗೆದು ಕೊಟ್ಟಿದ್ದೇವೆ. ಈವತ್ತು ವೈಅಲೈನ್‌ಮೆಂಟನ್ನು ಬದಲಾವಣೆ ಮಾಡಿದ್ದೇವೆ. ಈ ಮಾರ್ಚ್ ಕೊನೆಗೆ 85 ಸಾವಿರ ಎಕರೆ ಜಮೀನಿಗೆ ನೀರು ಬರಬೇಕಿತ್ತು, ಮತ್ತೆ ಅದು ನಾಗಮಂಡಲಕ್ಕೆ ನೀರು ಬರಬೇಕಾಗಿತ್ತು. ಇವೊತ್ತು ಒಂದನೇ

ತಾರೀಖು ಜನವರಿ 95 ರಿಂದ ನೀರು ಬಿಡುವುದನ್ನು ನಿಲ್ಲಿಸಿಬಿಟ್ಟಿದ್ದೀರಿ. 80 ಪರ್ಸೆಂಟ್ ಕೆಲಸ ಹೇಮಾವತಿ ಚಾನಲ್ ಕೆಲಸ, ಇದನ್ನು ನಿಲ್ಲಿಸಿಬಿಟ್ಟಿದ್ದೀರಿ. 94-95 ಕ್ಕೆ we have provided Rs.337.49 crores. Irrigation , are awise we have increased from 27% to 31% in all there five years.

ಇವೊತ್ತು ಪವರ್ ಬಗ್ಗೆ ಕೂಡ ಬಹಳ ಸೂಕ್ಷ್ಮವಾಗಿ ಹೇಳಬೇಕಾಗುತ್ತದೆ. ವಿವರವಾಗಿ ಡಿಮಾಂಡ್ ಬಂದಾಗ ಮಾತನಾಡಬೇಕಾಗುತ್ತದೆ. 1883-84ರಲ್ಲಿ 21.7 ಪರ್ಸೆಂಟ್ ಟಿ ಅಂಡ್ ಡಿ ಇದ್ದರೆ ನೀವು ಅಧಿಕಾರ ಬಿಟ್ಟುಕೊಡುವಾಗ 22.82 ಪರ್ಸೆಂಟ್ was the T&D. In 1993-94 we have reduced it to 18.6%.

ಇದು ಪವಾಡದಿಂದ ನಿಲ್ಲಿಸುವುದಕ್ಕೆ ಆಗುವುದಿಲ್ಲ. ಅದಕ್ಕೆ ಇನ್‌ವೆಸ್ಟ್‌ಮೆಂಟ್ ಮಾಡಿದ್ದೇವೆ. Transmission & Distribution losses- ಇದರಲ್ಲಿ ಯಾರದ್ದು ಶಿಥಿಲತೆ ಇದೆ, ಯಾರದ್ದು ಕುಂಠಿತವಾಗಿದೆ, ಸ್ಥಗಿತವಾಗಿದೆ ಎಂಬುದು ಗೊತ್ತಾಗುತ್ತದೆ. ಶ್ರೀ ಸಿದ್ದರಾಮಯ್ಯನವರೇ, ಇವೊತ್ತು ಈ ಫಿಗರ್‌ಗಳನ್ನು ಬದಲಾವಣೆ ಮಾಡಲಿಕ್ಕೆ ಸಾಧ್ಯವಾಗುವುದಾದರೆ ನೋಡಿ. ಒಂದು ಸಂಶೋಧನಾ ಸೆಲ್ ಮಾಡಿ ಈ ಫಿಗರ್ಸ್‌ಗಳನ್ನೆಲ್ಲಾ ಸ್ವಲ್ಪ ಹೆಚ್ಚು ಕಡಿಮೆ ಮಾಡಲಿಕ್ಕೆ ಇದರಲ್ಲಿ ಸಾಧ್ಯವಾಗುತ್ತದೆಯೇ ನೋಡಿ ನಿಮ್ಮ 6 ವರ್ಷದ ರೂಲ್‌ನಲ್ಲಿ your real investment in power per annum is Rs.64.00 crores. From 1989-90, to 1992-93 it was Rs.176.76 crores p.a. It is more than treble. In 1993-94 we have spent Rs.316.56 crores on power alone.

ಅದೂ ಕೂಡ ಯಾವುದಕ್ಕೆ ಬರೀ T&D ಇನ್‌ವೆಸ್ಟ್‌ಮೆಂಟ್, ಇನ್ನೊಂದು installed capacity ಬಗ್ಗೆ ಸನ್ಮಾನ್ಯ ಉಪ ಮುಖ್ಯಮಂತ್ರಿಗಳು ಒಂದು ಯೂನಿಟ್ ಕೂಡ ಜಾಸ್ತಿ ಮಾಡಲಿಲ್ಲ ಎಂದು ಹೇಳಿ ಸಾಕಷ್ಟು ಮಾತನಾಡಿದ್ದಾರೆ. ಇದು ನಿಜವಾಗಿಯೂ ಒಂದು ವಾಸ್ತವವಾದ ವಿಚಾರವಲ್ಲ. 83-84ರಲ್ಲಿ ಪವರ್ ಜನರೇಟೆಡ್ ಇನ್ ಮಿಲಿಯನ್ ಯೂನಿಟ್ 7821 ಮಿಲಿಯನ್ ಯೂನಿಟ್ಸ್ ನೀವು ಅಧಿಕಾರ ಬಿಟ್ಟುಕೊಟ್ಟಾಗ 9261 ಮಿಲಿಯನ್ ಯೂನಿಟ್ಸ್, Annual increase in 94 is 1157. ಈ ತರಹ ನಾವು ಹೆಚ್ಚು ಮಾಡುತ್ತಾ ಹೋಗಿದ್ದೇವೆ. ಆದ್ದರಿಂದ ಇನ್‌ಸ್ಟಾಲ್ ಕೆಪಾಸಿಟಿ ಸುಮಾರು 83ಯಿಂದ 89 ವರೆಗೆ 1541 ಮಿಲಿಯನ್ ಯೂನಿಟ್ಸ್ ತಾವು ಉತ್ಪಾದನೆ ಮಾಡಿದ್ದು ಇದ್ದರೆ 89-90 ರಿಂದ 31-3-1993 ರವರೆಗೆ 3496 ಮಿಲಿಯನ್ ಯೂನಿಟ್ಸ್ ನಾವು ಉತ್ಪಾದನೆ ಮಾಡಿದ್ದೇವೆ. 93-94 ಒಂದೇ ವರ್ಷದಲ್ಲಿ 1157 ಮಿಲಿಯನ್ ಯೂನಿಟ್ಸ್ ಹೆಚ್ಚುವರಿಯಾಗಿ ಉತ್ಪಾದನೆ ಮಾಡಿದ್ದೇವೆ. ಮುಖ್ಯವಾಗಿ ಈ ವರ್ಷ ತಮಗೆ ಗೊತ್ತಿದೆ. ಅನೇಕ ಪ್ರಾಜೆಕ್ಟ್ಸ್ ಇದ್ದಾವೆ, ರಾಯಚೂರು ನಾಲ್ಕನೇ ಹಂತ ಸಿದ್ಧವಾಗಿದೆ. It is our own contribution. ಅನೇಕ ಪ್ರಾಜೆಕ್ಟ್‌ಗಳು, ಕೊಜೆಂಟ್ರಿಕ್ಸ್ ಏನಿದೆ, ಅದನ್ನೆಲ್ಲಾ ಲೆಕ್ಕ ಹಾಕಿದರೆ ವಿಶೇಷವಾದಂಥ ಒಂದು ಅಭಿವೃದ್ಧಿಯನ್ನು ನಾವು ಇದರಲ್ಲಿ ಮಾಡಿದ್ದೇವೆ ಎಂಬುದನ್ನು ತಾವು ದಯವಿಟ್ಟು

ತಿಳಿದುಕೊಳ್ಳಬೇಕಾಗುತ್ತದೆ. ಅದೇ ಪ್ರಕಾರ ಹೌಸಿಂಗ್ ಬಗ್ಗೆ ನನ್ನ ಹತ್ತಿರ ಫಿಗರ್ಸ್ ಇದೆ. ಡಿಸ್ಟ್ರಿಬ್ಯೂಷನ್ ಆಫ್ ಹೌಸಸ್, ಸೈಟ್ಸ್ ನೀವು ಎಷ್ಟು ಮಾಡಿದ್ದೀರಿ ನಾವು ಎಷ್ಟು ಮಾಡಿದ್ದೇವೆ ಎಂಬದೆಲ್ಲಾ ಇದೆ. ಡಿಸ್ಟ್ರಿಬ್ಯೂಷನ್ ಆಫ್ ಸೈಟ್ಸ್ 6 ವರ್ಷಗಳಲ್ಲಿ ಅನ್ಯೂಲ್ ಆ್ಯವರೇಜ್ 57 ಸಾವಿರ ಆದರೆ ನಾವು 94-95ರಲ್ಲಿ 2 ಲಕ್ಷ ಸೈಟುಗಸನ್ನು ಕೊಟ್ಟಿದ್ದೇವೆ. ಮನೆಗಳನ್ನು ಕೂಡ ಆಶ್ರಯ ಮನೆಗಳು ಇರಬಹುದು ಮತ್ತು ಡಾ: ಅಂಬೇಡ್ಕರ್ ಮನೆ ಇರಬಹುದು ಅದನ್ನು ಕೂಡ ನಾವು ವಿಶೇಷವಾದಂತಹ ರೀತಿಯಲ್ಲಿ ನಾವು 93-94ರಲ್ಲಿ ಆಶ್ರಯ 66 ಸಾವಿರ ಮನೆಗಳನ್ನು ಕಟ್ಟಿದ್ದೇವೆ. 5 ವರ್ಷದಲ್ಲಿ ಸುಮಾರು 3 ಲಕ್ಷ 48 ಸಾವಿರ ಮನೆಗಳನ್ನು ಇಟ್ಟಿಕೊಟ್ಟಿದ್ದೇವೆ. ಸ್ಪೆಷಲ್ ಇಂಪೋನೆಂಟ್ ಪ್ರೋಗ್ರಾಂ ಅದನ್ನೆಲ್ಲಾ ನಾನು ವಿವರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಎಡ್ಯುಕೇಷನ್ ಒಂದೇ ಸೆಕ್ಟಾರ್‌ನಲ್ಲಿ ತಾವು ತೆಗೆದುಕೊಂಡರೆ 83-84 ರಿಂದ 88-89ರ ವರೆಗೆ 425. 12 ಕೋಟಿ ಒಟ್ಟು ಎಡ್ಯುಕೇಷನ್‌ಗೆ ತಾವು ಖರ್ಚುಮಾಡಿದ್ದೀರಿ. 88-89 ರಿಂದ 92-93ರವರೆಗೆ 822.96 ಕೋಟಿ ರೂ. ಗಳನ್ನು ಕರ್ಚುಮಾಡಿದ್ದರೆ, 93-94ರಲ್ಲಿ ನಾವು 1373 ಕೋಟಿ ರೂಪಾಯಿ ಖರ್ಚು ಮಾಡಿದ್ದೇವೆ. Only on education ie., elementary, colklegiate and technical education and we have provided Rs.1,554.15 crores during 1994-95.

ಟೀಚರ್ಸ್ ಅಪಾಯಿಂಟ್‌ಮೆಂಟ್ ಅಂತೂ ತಾವೇ ಸ್ಪಷ್ಟವಾಗಿ ಆ ವಿವರಗಳನ್ನು ಕೊಟ್ಟಿದ್ದೀರಿ; ಅದು ತಮ್ಮ ಎಕಾನಮಿಕ್ ಸರ್ವೆಯಲ್ಲಿ ಇದೆ. ಟೀಚರ್ಸ್ ಅಪಾಯಿಂಟ್‌ಮೆಂಟ್‌ನಲ್ಲಿಯೂ ಕೂಡ ನಾವು ವಿಶೇಷವಾಗಿ 42 ಸಾವಿರ ಪ್ರೈಮರಿ ಸ್ಕೂಲ್ ಟೀಚರ್ಸ್‌ಗಳನ್ನು ಅಪಾಯಿಂಟ್ ಮಾಡಿದ್ದೇವೆ. ಎಲ್ಲಾ ಕಾಲೇಜುಗಳು, ಹೈಸ್ಕೂಲು ಟೀಚರುಗಳ ವೇಕೆನ್ಸಿಗಳನ್ನು ಭರ್ತಿ ಮಾಡಿದ್ದೇವೆ. 13 ಸಾವಿರ ಪ್ರಾಥಮಿಕ ಶಾಲೆಗಳ ಶಿಕ್ಷಕರುಗಳ ಹುದ್ದೆಗಳನ್ನು ಭರ್ತಿ ಮಾಡಿದರೆ ಎಲ್ಲಾ ಹುದ್ದೆ ಗಳೂ ಭರ್ತಿಯಾಗುತ್ತವೆ. ಎಲ್ಲಾ ವಿಶ್ವವಿದ್ಯಾಲಯಗಳಲ್ಲಿ 10, 15 ವರ್ಷಗಳಿಂದ ಹುದ್ದೆಗಳು ಭರ್ತಿಯಾಗಿರಲಿಲ್ಲ. ಆ ಎಲ್ಲಾ ಕಾಲೇಜು ಶಿಕ್ಷಕರುಗಳ ಹುದ್ದೆಗಳನ್ನು ನಾವು ತುಂಬಿದ್ದೇವೆ. ಮತ್ತೊಂದು ನಾನು ತಮಗೆ ಹೇಳಬಯಸುತ್ತೇನೆ. ನೀರಾವರಿ ಯೋಜನೆಗಳ ಬಗ್ಗೆ ಮುಖ್ಯವಾಗಿ ಪ್ರಮುಖವಾದ ಯೋಜನೆಗಳ ಬಗ್ಗೆ ಎಷ್ಟು ಆಸಕ್ತಿ ಇದೆ ಎಂದು, 93-94ಕ್ಕೆ ಕಾರಂಜಾ ಯೋಜನೆಗೆ 16.05 ಕೋಟಿ ರೂ.ಗಳನ್ನು ಖರ್ಚು ಮಾಡಲಾಗಿದೆ. ಬೀದರ್ ಜಿಲ್ಲೆಯಲ್ಲಿ- ರಾಜ್ಯದ ತುತ್ತ ತುದಿಯಲ್ಲಿ ಕುಡಿಯುವ ನೀರಿಗೆ ಹಾಹಾಕಾರಿ ನಡೆಯುತ್ತಿದೆ. ನಾವು 94-95ರಲ್ಲಿ 30 ಕೋಟಿ ರೂಪಾಯಿಗಳನ್ನು ಒದಗಿಸಿದ್ದರೆ ಇವರು 14 ಕೋಟಿಗೆ ಇಳಿಸಿದ್ದಾರೆ A! After we spent they have not spent any money.

ಈ ವರ್ಷ 17 ಕೋಟಿ ರೂಪಾಯಿ ಮಾತ್ರ ಕೊಟ್ಟು ನಿಲ್ಲಿಸಿದ್ದಾರೆ. ಆದ್ದರಿಂದ ನಿಮಗೆ ಪ್ರಾದೇಶಿಕ ಅಸಮತೋಲನವನ್ನು ತೆಗೆದು ಹಾಕುವುದಕ್ಕೆ ಯಾವ ಆಸಕ್ತಿ ಕೂಡ ಇಲ್ಲ ಎಂಬುದನ್ನು ತೋರಿಸುತ್ತದೆ. They have provided Rs.17 crores as against Rs.30 crores of our budgetary provision. ಯುಕೆಪಿಯಲ್ಲಿ ಏನು ನಿಮ್ಮ ತರ್ಕವೋ ಗೊತ್ತಿಲ್ಲ. I have been trying to

cull out the figures. What you have provided in the budget is Rs.85.09 crores.

ಬಹುಶ: ಬ್ರಾಂಡ್ ಬರುತ್ತದೆ ಮತ್ತೊಂದು ಬರುತ್ತದೆ. ಕೃಷ್ಣ ಜಲನಿಗಮವನ್ನು ಸ್ಥಾಪನೆ ಮಾಡತಕ್ಕಂತಹ ಸಂದರ್ಭದಲ್ಲಿ ನಾವು ಏನು ಹೇಳಿದ್ದೇವೆ [illegible] addionality to plan.

ಪ್ಲಾನಿಂದ ಹಣ ತೆಗೆದು ಹೊರಗಿನಿಂದ ಯಾಚಿಸತಕ್ಕ ಒಂದು ಪರಿಸ್ಥಿತಿ; they have provided only Rs.85.09 crores.

ಆದರೆ ಇವತ್ತು ಆಲಮಟ್ಟಿಗೆ 20 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೀರಿ. ಆಲಮಟ್ಟಿಗೆ 83.20 ಕೋಟಿಯಿಂದ 50 ಕೋಟಿಗೆ ಅಂದರೆ 20 ಕೋಟಿ ಕಡಿಮೆ ಮಾಡಿದ್ದೀರಿ. ಭೀಮರಾಯನ ಗುಡಿಗೆ ಕೂಡ ಅದೇ ರೀತಿ 71.80 ಕೋಟಿ ಇದ್ದುದು 53 ಕೋಟಿಗೆ ಮಾಡಿದ್ದೀರಿ. ಇವತ್ತು ಕೆಂಭಾವಿ 100 ಕೋಟಿ ಇದ್ದುದು 74 ಕೋಟಿ ಮಾಡಿದ್ದೀರಿ. ಪವರ್ ಪ್ರಾಜೆಕ್ಟ್ ಲೋನನ್ನು ರಿವೋಕ್ ಮಾಡಿದಹಾಗೆ ವಿಶ್ವಬ್ಯಾಂಕಿನ ಇನ್ನಿತರ ಲೋನುಗಳನ್ನೂ ಕೂಡ ಇವತ್ತು ರದ್ದು ಮಾಡಬೇಕೆಂದು ಅವರಲ್ಲಿ ಆಸಕ್ತಿ ಇತ್ತು. ನಾವು ವಿಶ್ವಬ್ಯಾಂಕಿನ ಮ್ಯಾನೇಜಿಂಗ್ ಡೈರೆಕ್ಟರನ್ನು ಭೇಟಿ ಆದೆ ಅದನ್ನು ನಿಲ್ಲಿಸಿ ಇವತ್ತು ವಿಶ್ವಬ್ಯಾಂಕು ನೀರಾವರಿಗೆ ಏನು ಕೊಡುತ್ತಿತ್ತು ಅದನ್ನು ಮುಂದುವರಿಸಿಕೊಂಡು ಬಂದಿದೆ. ನೀವು ರೀ ಸ್ಟೆಟ್ಟ್‌ಮೆಂಟ್‌ಗೆ ಸರಿ ಮಾಡದೇ ಇದ್ದರೆ ಮತ್ತೆ ತೊಂದರೆ ಬರಬಹುದು. Again have you reduced the amount. ಆದ್ದರಿಂದ ಕಾವೇರಿ ಬೇಸಿನ್‌ಗೆ ಈ ಗೊರೂರುಗೆ 93-94ರಲ್ಲಿ 66.7 ಕೋಟಿ, 94-95ರಲ್ಲಿ 50 ಕೋಟಿ ಕೊಟ್ಟಿದ್ದನ್ನು 49 ಕೋಟಿಗೆ ಇಳಿಸಿದ್ದೀರಿ. ಕಾವೇರಿ ಬೇಸಿನ್ ಕಮಿಟ್‌ಮೆಂಟ್ ಕೂಡ ಉಳಿಸಿಕೊಳ್ಳುವುದಕ್ಕೆ ಆಗಲಿಲ್ಲ. 94-95ನಲ್ಲಿ ಏನು ಕೊಟ್ಟಿದ್ದೇವೆ ಅದೇ ಮೊತ್ತವನ್ನು ಅಂದರೆ 50 ಕೋಟಿ ರೂಪಾಯಿಗಳನ್ನು ಉಳಿಸಿಕೋಡಿದ್ದೀರಿ. ನೀವು ಹೆಚ್ಚು ಮಾಡಲಿಲ್ಲ. ಹೇಮಾವತಿಗೆ ಇವತ್ತು 93-94ಕ್ಕೆ 45.5 ಕೋಟಿ ಕೊಟ್ಟಿದ್ದರೆ 100 ಕೋಟಿಯನ್ನೇ 94-95ಕ್ಕೆ ಕೊಟ್ಟಿದ್ದೇವೆ. ನೀವು 86.50 ಕೋಟಿಗೆ ರಿವೈಸ್ ಮಾಡಿದ್ದೀರಿ 94-95ಕ್ಕೆ, ಕಾವೇರಿ ಬೇಸಿನ್‌ಗೆ ಎಷ್ಟು ಆಸಕ್ತಿ ಇದೆ ಇವರಿಗೆ ಎಂಬುದನ್ನು ನೋಡಿ. ಇವತ್ತು ಆಇಮಿಟ್‌ಮೆಂಟ್ ಉಳಿಸಿಕೊಳ್ಳುತ್ತಿಲ್ಲ. ಡಿಸೆಂಬರ್ 93 ರಿಂದ ಮಾರ್ಚ್ 94ರ ವರೆಗೆ ತುಮಕೂರು ಕೆನಾಲ್‌ಗೆ 34 ಕೋಟಿ ರೂ. ಕೊಟ್ಟಿದ್ದರೆ ಇವತ್ತು ಡಿಸೆಂಬರ್ 94 ರಿಂದ ಮಾರ್ಚ್ 95ರ ವರೆಗೆ ಇವರು ಬಿಡುಗಡೆ ಮಾಡಿದ ಹಣ 15 ಕೋಟಿ ರೂ. ಮೊನ್ನೆ ಕೊಟ್ಟರಂತೆ. ಮೊನ್ನೆ 8 ಕೋಟಿ ಮತ್ತು 5 ಕೋಟಿ ಒಟ್ಟು 13 ಕೋಟಿ ಕೊಟ್ಟಿದ್ದೀರಿ. ಇದು ನಿಜವಾಗಿ ಕೆಲಸಮಾಡತಕ್ಕಂತಹ ಸಮಯ. ಡಿಸೆಂಬರ್, ಜನವರಿ, ಫೆಬ್ರವರಿ, ಮಾರ್ಚ್ ಇದು ನಿಜವಾಗಿ ಕೆಲಸಮಾಡತಕ್ಕ ತಿಂಗಳು. ಇದು ಮಾಡದಿದ್ದರೆ ನೀವು ಒಂದು ವರ್ಷ ಕಳೆದುಕೊಂಡ ಹಾಗೆ ಆಗುತ್ತದೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ಕೃಷ್ಣ ಭಾಗ್ಯ ಜಲನಿಗಮದಲ್ಲಿ ಒಂದು ನಿಧಿಯನ್ನು ಸ್ಥಾಪನೆ ಮಾಡಿ ಕೆಲಸ ತೆಗೆದುಕೊಳ್ಳುತ್ತೇವೆಂದು ಹೇಳಿದ್ದಾರೆ. ಈಗ 84 ಕೋಟಿ ತೋರಿಸಿದ್ದು ಬರೀ ಬಡ್ಡಿ ಕೊಡುವುದಕ್ಕೆ ತೋರಿಸಿದ್ದಾರೆ. ಕೆಲಸಕ್ಕೋಸ್ಕರ ಏನೂ

ತೋರಿಸಿಲ್ಲ. ಹಣ ಕಲೆಕ್ಟ್ ಆಗಬೇಕು ಕೆಲಸ ಆಗಬೇಕು ಎಂದರೆ ಈ ವರ್ಷ ಪೂರ್ತಿ ಇಲ್ಲ.

ಶ್ರೀ ಎಂ. ವೀರಪ್ಪಮೊಯಿಲಿ:- ಹಾರಂಗಿಗೆ 93-94ಕ್ಕೆ 17.35 ಕೋಟಿ ರೂಪಾಯಿ ನಾವು ಕೊಟ್ಟಿದ್ದೇವೆ. 94-95ಕ್ಕೆ 24.9 ಕೋಟಿ ನಾವು ಒದಗಿಸಿದ್ದರೆ ಅದನ್ನೂ ಕೂಡ ಇವರು ಕಡಿಮೆ ಮಾಡಿದ್ದಾರೆ. 19.90 ಕೋಟಿಗೆ ಇಳಿಸಿದ್ದಾರೆ. ಬರುವ ವರ್ಷ ಕೊಡುವಂಥದ್ದು 19.90 ಕೋಟಿ. ಹಾರಂಗಿ ಬಗ್ಗೆ ಕೂಡ ಇವರಿಗೆ ಆಸಕ್ತಿ ಇಲ್ಲ. ನಾವು 2425 ಕೋಟಿ ರೂ. ಕೊಟ್ಟಿದ್ದರೆ ಇವರು 19.9 ಕೋಟಿಗೆ ಇಳಿಸಿದ್ದಾರೆ. ಕಬಿನಿಗೆ ಅದೇ ರೀತಿಯಲ್ಲಿ 25 ಕೋಟಿ ರೂಪಾಯಿ ನಾವು ಕೊಟ್ಟಿದ್ದರೆ ಇವರು ಇದನ್ನು 20 ಕೋಟಿಗೆ ಇಳಿಸಿದ್ದಾರೆ. 93-94ರಲ್ಲಿ ಎಷ್ಟು ಕೊಟ್ಟಿದ್ದೇನೆ ಅಷ್ಟೆ ಹಣ. ಯಗಚಿಗೆ 25 ಕೋಟಿ, ಅದು 25 ಕೋಟಿ ಇದೆ. ಆದರೆ ಈ ವರ್ಷ 5 ಕೋಟಿ ಕಡಿಮೆ ಮಾಡಿದ್ದಾರೆ. ಒಂದು ಸಂತೋಷ ಎಂದರೆ ವರುಣಾ ಕೆನಾಲ್, ದೇವರಾಜ ಅರಸ್ ಕೆನಾಲ್‌ಗೆ 25 ಕೋಟಿ ನಾವು ಕೊಟ್ಟಿದ್ದರೆ, ಈ ಬಾರಿ ಆ ಕಮಿಟ್‌ಮೆಂಟನ್ನು ಉಳಿಸಿಕೊಳ್ಳಬಹುದಾಗಿತ್ತು. Atleast it is project. ಅದನ್ನೂ ಕೂಡ 5 ಕೋಟಿ ಕಡಿಮೆ ಮಾಡಿದ್ದೀರಿ. ಬರುವ ವರ್ಷಕ್ಕೆ ಇಲ್ಲಿ 32 ಕೋಟಿ ಇಟ್ಟಿದ್ದೀರಿ. ಇಲ್ಲಿ ಮಾತ್ರ 7 ಕೋಟಿ ರೂಪಾಯಿ ಹೋದ ವರ್ಷಕ್ಕಿಂತ ಈ 95-96 ಕ್ಕೆ ಒಂದು ವರುಣ ಕೆನಾಲ್‌ಗೆ ಜಾಸ್ತಿ ಮಾಡಿದ್ದೀರಿ.

ಇದೊಂದು, ದಿಸ್ ಈಸ್ ದಿ ಓನ್ಲಿ ಸಿಲ್ವರ್ ಲೈನ್. ಇರಿಗೇಷನ್ ಬಗ್ಗೆ ಹೇಳುವುದಾದರೆ ವರಾಹಿ ಒಂದೇ ಒಂದು ಪ್ರಾಜೆಕ್ಟ್ ನಮ್ಮ ದಕ್ಷಿಣ ಕನ್ನಡ ಜಿಲ್ಲೆಯಲ್ಲಿದೆ. ಈ ವರ್ಷ ನಾನು 11 ಕೋಟಿ ರೂಪಾಯಿ ಕೊಟ್ಟಿದ್ದೆ. ನೀವು ಅದನ್ನು 3 ಕೋಟಿ 95 ಲಕ್ಷ ರೂಪಾಯಿಗಳಿಗೆ ಇಳಿಸಿಬಿಟ್ಟಿದ್ದೀರಿ. ಬರುವ ವರ್ಷಕ್ಕೆ 5 ಕೋಟಿ ರೂಪಾಯಿ ಕೊಟ್ಟಿದ್ದಾರೆ. ಉಳಿದ ಜಿಲ್ಲೆಗಳ ಬಗ್ಗೆ, ಪ್ರದೇಶಗಳ ಬಗ್ಗೆ ಇವರಿಗೆ ಎಷ್ಟು ಆಸಕ್ತಿ ಇದೆ ಎನ್ನುವುದಕ್ಕೆ ಇದಕ್ಕಿಂತ ದೊಡ್ಡ ಸಾಕ್ಷಿ ಬೇಕೇ ಸಿದ್ಧರಾಮಯ್ಯನವರೇ? ಆದ್ದರಿಂದ you could have atleast maintained the status-quo.

ಶ್ರೀ ಸಿದ್ಧರಾಮಯ್ಯ:- ಹಿಂದೆ ಹಳ್ಳಿಗಳಲ್ಲಿ ನಾವು ಹುಡುಗರಾಗಿದ್ದಾಗ ಬಾಂಬೆ ನೋಡಿ, ಮದ್ರಾಸ್ ನೋಡಿ, ಡೆಲ್ಲಿ ನೋಡಿ ಎಂದು ತೋರಿಸುತ್ತಿದ್ದರು. ಹಾಗೆಯೇ ನಿಮಗೆ ಪ್ಲಾನ್‌ನಲ್ಲಿ ಆ ರೀತಿ ಮಾಡಬಾರದು ಎಂದು ಹಾಗೆ ಮಾಡಿದ್ದೇವೆ.

ಶ್ರೀ ಎಂ. ವೀರಪ್ಪಮೊಯಿಲಿ:- ಹೌದು, I am very sorry. ಬಾಂಬೆ ನೋಡಿ, ಮದ್ರಾಸ್ ನೋಡಿ ಎಂದು ಹೇಳಿ ಕರ್ನಾಟಕ ರಾಜ್ಯದ ಗಟಾರ ತೋರಿಸಬೇಡಿ. ಬಾಂಬೆ ಆದರೂ ತೋರಿಸಿ, ಆದರೆ ಗಟಾರ ಮಾತ್ರ ತೋರಿಸಬೇಡಿ. ಕರ್ನಾಟಕದ ಜನರನ್ನು ಇಳಿಸುತ್ತೀರಿ. ತಾವು ಬಹಳ ಸಲುಗೆಯಿಂದ ಮಾತನಾಡುತ್ತೀರಿ. I don't think it is befitting.

ನಾನು ಇವತ್ತು ಇಲ್ಲಿ ಸರ್ಕಸ್ ಮಾಡಲಿಕ್ಕೆ ಬಂದಿದ್ದೇನೆ ಎಂದು ತಿಳಿದುಕೊಂಡಿದ್ದೀರೇನು?

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ಮಾನ್ಯ ಮೊಯಿಲಿಯವರು ಈ ರೀತಿ ಕೋಪಿಸಿಕೊಳ್ಳಬೇಕಾದಂಥ ಅಗತ್ಯ ಇಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ:- ಏನು ಬಾಂಬೆ ನೋಡಿ, ಇದು ನೋಡಿ ಎಂದರೆ ನಾವು ಸರ್ಕಸ್ಸಿನ ಜನ ಎಂದು ತಿಳಿದುಕೊಂಡಿದ್ದಾರೇನು? There should be some limit for all this.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಾನು ಇಲ್ಲಿ ಮಾತನಾಡಿದ್ದುದು ಅವರಿಗೆ ಅಗೌರವ ತೋರಿಸಬೇಕು ಎನ್ನತಕ್ಕಂಥ ಉದ್ದೇಶದಿಂದ ಅಲ್ಲ.

ಶ್ರೀಎಂ.ವೀರಪ್ಪಮೊಯಿಲಿ:- ನೀರು ತೋರಿಸಬಹುದು, ಡೆಲ್ಲಿ ತೋರಿಸಬಹುದು. ಆದರೆ ಕರ್ನಾಟಕ ತೋರಿಸಬೇಕು. ನೀವು ಕರ್ನಾಟಕ ದರ್ಶನ ಏನು ಮಾಡಿದ್ದೀರಿ ಎಂಬುದು ಗೊತ್ತಾಗಬೇಕಾಗುತ್ತದೆ.

ಶ್ರೀ ಸಿದ್ಧರಾಮಯ್ಯ:- ನಾನು ನಾಳೆ ಹೇಳುತ್ತೇನೆ. ನೀವು ಎಷ್ಟು ಖರ್ಚು ಮಾಡಿದ್ದೀರಿ ಎಂಬುದನ್ನು ನಾನು ನಾಳೆ ಹೇಳುತ್ತೇನೆ.

SRI M.VEERAPPAMOILY:- How can you do it? ಈ ತರಹ ಪ್ರೊವೈಡ್ ಮಾಡಿ ನೀವು ಯುಕೆಪಿಯನ್ನು ಸಮಾಧಿಮಾಡಿ ಬಾಂಬೆ ತೋರಿಸುತ್ತೇನೆ, ಡೆಲ್ಲಿ ತೋರಿಸುತ್ತೇನೆಂದು ಹೇಳಿದರೆ....

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ನಾನು ಇವರಿಗೆ ಅಗೌರವ ಮಾಡಬೇಕು ಎಂದು ಹುಡುಗರಿಗೆ ಹಳ್ಳಿಗಳಲ್ಲಿ ಆ ತರಹ ತೋರಿಸುತ್ತಿದ್ದರು.

ಶ್ರೀ ಎಂ.ವೀರಪ್ಪಮೊಯಿಲಿ:- ಹುಡುಗರಿಗೆ ಅಲ್ಲ. ಹುಡುಗಾಟಿಕೆಗಾಗಿ ನೀವು ಈ ರೀತಿ ಮಾಡುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ:- ಹಳ್ಳಿಗಳಲ್ಲಿ ಏನು ಹೇಳುತ್ತಿದ್ದರು ಅದರೊಂದಿಗೆ ಕಂಪೇರ್ ಮಾಡಿದನೇ ಹೊರತು ದುರುದ್ದೇಶದಿಂದ ಅಲ್ಲ. ನಿಮಗೆ ಅವಮಾನ ಮಾಡಬೇಕು ಎಂದು ಅಲ್ಲ.

ಶ್ರೀ ಎಂ.ವೀರಪ್ಪಮೊಯಿಲಿ:- ಎಲ್ಲದ್ದಕ್ಕೂ ಒಂದು ಲಿಮಿಟ್ ಇರಬೇಕು. You must know your limits.

ಶ್ರೀ ಹೆಚ್.ಎನ್.ನಂಜೇಗೌಡ:- ಸನ್ಮಾನ್ಯ ಸದಸ್ಯರಾದಂಥ ವೀರಪ್ಪಮೊಯಿಲಿ ಅವರು........

ಶ್ರೀ ಸಿದ್ಧರಾಮಯ್ಯ:- ನನಗೆ ಎಷ್ಟು ಲಿಮಿಟ್ ಇದೆ ಅದರ ಪ್ರಕಾರ ಹೇಳಿದ್ದೇನೆ.

ಶ್ರೀ ಹೆಚ್.ಎನ್.ನಂಜೇಗೌಡ:- ಸನ್ಮಾನ್ಯ ಸದಸ್ಯರಾದಂಥ ಶ್ರೀಮಾನ್ ವೀರಪ್ಪಮೊಯಿಲಿ ಯವರು ಮುಖ್ಯ ಮಂತ್ರಿಗಳಾಗಿದ್ದವರು. ರಾಜ್ಯದ ನೀರಾವರಿ ಬಗ್ಗೆ ವಿಚಾರಗಳನ್ನು ಅಂಕಿ ಅಂಶಗಳ ಸಮೇತ ಹಿಂದಿನ ಸರ್ಕಾರ ಎಷ್ಟು ಕೊಟ್ಟಿತ್ತು, ಈಗ ನೀವು ಏನೇನು ಮಾಡಿದ್ದೀರಿ ಎಂಬುದನ್ನು ತಿಳಿಸಿದ್ದಾರೆ. ಇದರಿಂದ ನಮ್ಮ ಹಕ್ಕುಬಾಧ್ಯತೆ ಬಗ್ಗೆ ಎನ್ನತಕ್ಕದ್ದನ್ನು ವಿವರಿಸುತ್ತಿದ್ದಾರೆ. ಅದನ್ನು ಭಾರೀ ಲಘುವಾಗಿ ಹಣಕಾಸಿನ ಮಂತ್ರಿಗಳು ತೆಗೆದುಕೊಳ್ಳುತ್ತಿದ್ದಾರೆ, ಇದು ತರವಲ್ಲ. It is not at all Parliamentary practice.

ಬಾಂಬೆ ನೋಡಿ, ಇದು ನೋಡಿ ಎಂದು ಅಷ್ಟೊಂದು ಲಘುವಾಗಿ ಮಾತನಾಡುತ್ತಿದ್ದಾರೆ. ನಾನು ಹೇಳತಕ್ಕಂಥಾದ್ದು ಏನೆಂದರೆ, ಏನಾದರೂ ವಿಚಾರಗಳು ಇದ್ದರೆ, ಶ್ರೀಮಾನ್ ವೀರಪ್ಪ ಮೊಯಿಲಿಯವರು ಏನು ಹೇಳುತ್ತಾ ಇದ್ದಾರೆ, ಅವರ ಅನಿಸಿಕೆಗಳು ಏನು ಇವೆ ಅವುಗಳಲ್ಲಿ ತಪ್ಪುಗಳು ಇದ್ದರೆ ಅಂಕಿ ಅಂಶಗಳ ಸಮೇತ ಹೇಳತಕ್ಕಂಥ ಹಕ್ಕು ಅವರಿಗೆ ಇದೆ. ಅದು ಇಲ್ಲ ಎಂದು ನಾನು ಹೇಳುತ್ತಿಲ್ಲ. ಚರ್ಚೆಯನ್ನು ಆ ಎತ್ತರದಲ್ಲಿ ನಡೆಸುತ್ತಾ ಇರತಕ್ಕಂಥ ಕಾಲದಲ್ಲಿ ಅವರು ಆ ಮಟ್ಟದಲ್ಲಿ ಮಾತನಾಡತಕ್ಕಂಥಾದ್ದು ಸರಿಯಲ್ಲ. ಆದ್ದರಿಂದ, ದಯವಿಟ್ಟು it should not be repeated. It is not to the good taste of the Hon'ble Minister.

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೇ, ನೀರಾವರಿ ಬಗ್ಗೆ ಮಾನ್ಯ ವೀರಪ್ಪಮೊಯಿಲಿಯವರು ಮತ್ತು ಮಾನ್ಯ ನಂಜೇಗೌಡರಿಗೆ ಎಷ್ಟು ಕಳಕಳಿ ಇದೆಯೋ, ನನಗೂ ಕೂಡ ಅಷ್ಟೇ ಕಳಕಳಿ ಇದೆ. ನಾನೂ ಕೂಡ ಹಳ್ಳಿಯಿಂದ ಬಂದಂಥವನು. ನಾನು ರೈತರ ಮಗ. ಕಾವೇರಿ ಜಲಾನಯನ ಪ್ರದೇಶದ ಭಾಗದಿಂದಲೇ ಬಂದಿರತಕ್ಕಂತಥವನು. ನಾನು ತಮಾಷೆ ಮಾಡಬೇಕು ಎನ್ನತಕ್ಕಂಥ ಉದ್ದೇಶದಿಂದಾಗಲೀ ಅಥವಾ ಅವರು ಹೇಳತಕ್ಕಂಥ ವಿಚಾರವನ್ನು ಬಹಳ ಲಘುವಾಗಿ ಮಾತನಾಡಬೇಕು ಎನ್ನತಕ್ಕಂಥ ಉದ್ದೇಶದಿಂದಾಗಲೀ ಹೇಳಲಿಲ್ಲ. ಹಳ್ಳಿಯಲ್ಲಿ ನಡೆಯುತ್ತಿದ್ದ ಆ ಒಂದು ಮಾತು ಜ್ಞಾಪಕಕ್ಕೆ ಬಂತು. ನಾನು ಏನು ಹೇಳಿದೆ ಎಂದರೆ ಅವರು ಯೋಜನೆಯಲ್ಲಿ ತೋರಿಸಿದಂಥ ಹಣ ಮತ್ತು ಖರ್ಚು ಮಾಡತಕ್ಕಂಥ ಹಣಕ್ಕೂ ಬಹಳ ವ್ಯತ್ಯಾಸ ಇದೆ. ಆ ದೃಷ್ಟಿಯಿಂದ ಅದನ್ನು ಹೇಳಿದೆನೇ ಹೊರತು ಬಹಳ ಲಘುವಾಗಿ ಮಾತನಾಡಬೇಕು, ನೀರಾವರಿಯಂಥ ವಿಚಾರವನ್ನು ಬಹಳ ಲಘುವಾಗಿ ತೆಗೆದುಕೊಳ್ಳಬೇಕು ಎನ್ನತಕ್ಕ ದೃಷ್ಟಿಯಿಂದ ಹೇಳಿದ್ದಲ್ಲ, ಬೇಜವಾಬ್ದಾರಿಯಿಂದ ತೆಗೆದುಕೊಳ್ಳಬೇಕು ಎಂದು ಅಲ್ಲ. ಅವರು ಆ ಅರ್ಥದಲ್ಲಿ ತೆಗೆದುಕೊಳ್ಳಬೇಕಾಂಥ ಅಗತ್ಯ ಇಲ್ಲ. ಅದನ್ನು ಆ ದೃಷ್ಟಿಯಲ್ಲಿ ನೋಡಬೇಕಾಗುತ್ತದೆ.

SRI H.N.NANJE GOWDA:- If the Finance Minister feels that the targetted progress was not achieved, then we, as Members and the public atlarge, we many lose faith in the budget making. That's all. Let it go on record.

ಶ್ರೀ ವೀರಪ್ಪಮೊಯಿಲಿ:- ಅಧ್ಯಕ್ಷರೇ, ಯಾರು ಏನು ಮಾಡಿದ್ದಾರೆ ಎಂದು ಹೇಳುವುದಕ್ಕೆ ಈ ಹೆಚ್.ಕೆ.ಡಿ.ಬಿ. ಇದರ ಅಸಮತೋಲನ ನೋಡಿ. 1993-94ಕ್ಕೆ ನಾವು 53.79 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದು, 1994-95ಕ್ಕೆ 66 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೆವು. ಆದರೆ ಇವರು ಮಾಡಿದ್ದು 36 ಕೋಟಿ ರೂಪಾಯಿ ಮಾತ್ರ. ಇದಕ್ಕೆ 34 ತಿಂಗಳಿನಿಂದ ಏನೂ ಖರ್ಚು ಮಾಡಿಲ್ಲ. That is the point. We spent. ಇವತ್ತು ನೀವು 36 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿ ನಿಲ್ಲಿಸಿ ಬಿಟ್ಟಿದ್ದೀರಿ. 1993-94ಕ್ಕೆ ನಾವು 56.50 ಕೋಟಿ ರೂಪಾಯಿಗಳನ್ನು ಖರ್ಚು ಮಾಡಿದ್ದರೆ, ನೀವು 36 ಕೋಟಿ ರೂಪಾಯಿಗೆ ನಿಲ್ಲಿಸಿಬಿಟ್ಟಿದ್ದೀರಿ. ಖರ್ಚು ಮಾಡುವುದನ್ನು ಅಲ್ಲಿಗೇ ನಿಲ್ಲಿಸಿಬಿಟ್ಟಿದ್ದೀರಿ. ಈಗ 1995-96ಕ್ಕೆ ನೀವು ಕೊಟ್ಟಿರುವುದು 60 ಕೋಟಿ ಆದರೆ ಇದಕ್ಕೆ ನಾವು 66 ಕೋಟಿ ರೂಪಾಯಿ ಕೊಟ್ಟಿದ್ದೆವು. ನಿಮಗೆ ಆಸಕ್ತಿ ಇದೆಯೇ? ಗುಲ್ಬರ್ಗಾ, ಬೀದರ್, ಬಳ್ಳಾರಿ ಈ ಜಿಲ್ಲೆಗಳ ಅಭಿವೃದ್ಧಿಗೆ ಇಷ್ಟು ಕಡಿಮೆ ಹಣ ಕೊಟ್ಟು ನಮಗೆ ಆಸಕ್ತಿ ಇದೆ ಎಂದು ಹೇಳಿದರೆ ನಿಮ್ಮ ಪ್ರಾಮಾಣಿಕತೆಯನ್ನು ನಾವು ಪ್ರಶ್ನೆ ಮಾಡಬೇಕಾಗುತ್ತದೆ ಅಥವಾ ನೀವು ಹೇಳಿದ್ದುದು ಸರಿ ಎಂದು ಒಪ್ಪಿಕೊಳ್ಳಬೇಕಾಗುತ್ತದೆ. ಇನ್ನು ಮಲೆನಾಡು ಅಭಿವೃದ್ಧಿ ಪ್ರದೇಶಕ್ಕೆ ನಾವು 1993-94ರಲ್ಲಿ 33.05 ಕೋಟಿ ರೂಪಾಯಿಗಳನ್ನು ಹೆಚ್ಚು ಕೊಟ್ಟಿದ್ದರೆ ನೀವು ಖರ್ಚು ಮಾಡಿದ್ದುದ ಬರೀ 20 ಕೋಟಿ ರೂಪಾಯಿ. Are you going to prove that. ನಂತರ ನಿಲ್ಲಿಸಿ ಬಿಟ್ಟಿದ್ದೀರಿ. 4 ತಿಂಗಳಿಂದ ಯಾವುದೇ ಖರ್ಚು ಮಾಡಲಿಲ್ಲ. ಮುಂದಿನ ವರ್ಷಕ್ಕೆ 5 ಕೋಟಿ ರೂಪಾಯಿ ಖರ್ಚು ಮಾಡುತ್ತೀರಿ. ಈಗ ಈ ಕಾರ್ಯಕ್ರಮ ನೀವು ಮಾಡಲಿಲ್ಲ. ನಿಮಗೆ ಕಮಿಟ್‌ಮೆಂಟ್ ಇಲ್ಲ, ನಿಮಗೆ ಬದ್ಧತೆ ಇಲ್ಲ. ನಾವು ಮಾಡಿದ್ದೇವೆ, ನಮಗೆ ಕಮಿಟ್‌ಮೆಂಟ್ ಇದೆ. ನಾವು ಇಂಪ್ಲಿಮೆಂಟ್ ಮಾಡಿದ್ದೇವೆ. ವರ್ಷದಿಂದ ವರ್ಷಕ್ಕೆ ಹೆಚ್ಚು ಹಣವನ್ನು ನಾವು ಕೊಟ್ಟಿದ್ದೇವೆ. ಆಮೇಲೆ ಬಯಲು ಸೀಮೆಗೆ ಇಲ್ಲವೇ ಇಲ್ಲ. ಬಾರ್ಡರ್ ಏರಿಯಾ ಡೆವಲಪ್‌ಮೆಂಟ್ ಬಗ್ಗೆ ಹೇಳಬೇಕಾದರೆ ಅದು ಮಹಾರಾಷ್ಟ್ರ ಬಾರ್ಡರ್ ಇರಬಹುದು, ತಮಿಳುನಾಡು ಬಾರ್ಡರ್ ಇರಬಹುದು, ಅಥವಾ ಕೇರಳ ಬಾರ್ಡರ್ ಇರಬಹುದು, ಆ ಪ್ರದೇಶದ ಜನಗಳಿಗೆ ಒಂದು ರೀತಿಯ ವಿಶ್ವಾಸ ಹುಟ್ಟಿಸಬೇಕು ಎಂದು ಹೇಳಿ ಆ ಸೈದ್ಧಾಂತಿಕ ಹಿನ್ನಲೆಯಲ್ಲಿ ನಾವು ಕಾರ್ಯಕ್ರಮಗಳನ್ನು ಮಾಡಿದ್ದೇವೆ ಮತ್ತು 1993-94 ರಲ್ಲಿ ಸುಮಾರು 20 ಕೋಟಿ ರೂಪಾಯಿಗಳನ್ನು ನಾವು ಖರ್ಚು ಮಾಡಿದ್ದೇವೆ. 1994-95ಕ್ಕೆ 15 ಕೋಟಿ ರೂಪಾಯಿಗಳನ್ನು ಕೊಟ್ಟಿದ್ದೇವೆ. ಆದರೆ ಅದು ಎಷ್ಟು ಖರ್ಚಾಗಿದೆ ಎಂದು ಲೆಕ್ಕ ಕೊಟ್ಟಿಲ್ಲ. 1995-96ಕ್ಕೆ5 ಕೋಟಿ ರೂಪಾಯಿ ಕಡಿಮೆ ಮಾಡಿದ್ದೀರಿ. ಪ್ರತಿವರ್ಷ 5.50 ಕೋಟಿ ರೂಪಾಯಿ ಜಾಸ್ತಿ ಮಾಡಬೇಕು ಎನ್ನುವುದು ನಮ್ಮ ಉದ್ದೇಶ ಆದರೆ ನೀವು ಬರೀ 10 ಕೋಟಿ ರೂಪಾಯಿಗೆ ಇಳಿಸಿದ್ದೀರಿ. ಈ ಪ್ರದೇಶದ ಅಭಿವೃದ್ಧಿ ಬಗ್ಗೆ ತಮಗೆ ಎಷ್ಟು ಆಸಕ್ತಿ ಇದೆ ಎನ್ನುವುದಕ್ಕೆ ಬಹುಶ: ಇದಕ್ಕಿಂತ ಒಂದು ದೊಡ್ಡ ಸಾಕ್ಷಿಯನ್ನು ಅಥವಾ ಒಂದು ದೊಡ್ಡ ಉದಾಹರಣೆಯನ್ನು ನಾವು ಕೊಡ ಬೇಕಾದಂಥ ಅವಶ್ಯಕತೆ ಇಲ್ಲ ಎಂದು ನಾನು ಹೇಳುತ್ತೇನೆ. ಇನ್ನು ಅಭಿವೃದ್ಧಿ ಮತ್ತು ಅಭಿವೃದ್ಧಿಯೇತರ ಯೋಜನೆ ಬಗ್ಗೆ ನಾನು ಹೇಳುತ್ತೇನೆ.

ಅಧ್ಯಕ್ಷರು:- ಇನ್ನೂ ಎಷ್ಟು ಹೊತ್ತು ತಾವು ಮಾತನಾಡುತ್ತೀರಿ?

ಶ್ರೀ ಎಂ.ವೀರಪ್ಪಮೊಯಿಲಿ:- 20 ನಿಮಿಷದಲ್ಲಿ ಮುಗಿಸುತ್ತೇನೆ. ಅಭಿವೃದ್ಧಿಯ ಬಗ್ಗೆ ಹೇಳಬೇಕೆಂದರೆ ಸಾಕಷ್ಟು ಇಲ್ಲಿ ಪ್ರಸ್ತಾಪವಾಗಿದೆ. ನಾವು ಅಭಿವೃದ್ಧಿಯನ್ನು ಶಿಥಿಲಗೊಳಿಸಿದ್ದೇವೆ, ಅಭಿವೃದ್ಧಿ ಕೆಲಸವನ್ನು ಮಾಡಲಿಲ್ಲ ಎಂಬುದಾಗಿ ತಾವು ಸಾಕಷ್ಟು ಇಲ್ಲಿ ಮಾತನಾಡುತ್ತಿದ್ದೀರಿ. ಇವತ್ತು ಈ ಅಭಿವೃದ್ಧಿಯ ಬಗ್ಗೆ, ಡೆವಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಬಗ್ಗೆ ಅಷ್ಟನ್ನೇ ಈ ಸದನದ ಮುಂದೆ ಇಡುತ್ತೇನೆ. ಏಕೆಂದರೆ ಇದು ಬಹಳ ಡೀಟೇಲ್ ಇದೆ. ಡೆವಲಪ್‌ಮೆಂಟ್ ಅಂಡ್ ನಾನ್ ಡೆವೆಲಪ್‌ಮೆಂಟ್ ಎಕ್ಸ್‌ಪೆಂಡಿಚರ್ ಇನ್ ಕರ್ನಾಟಕ, ಇದು ಎಕನಾಮಿಕ್ ಸರ್ವೆಯ ಅಪೆಂಡಿಕ್ಸ್ 6(2)ರಲ್ಲಿದೆ. ಇದನ್ನು ತಾವು ನೋಡಿ. ಅಭಿವೃದ್ಧಿ ಬಗ್ಗೆ ಯಾರು ಆಸಕಿ ತೆಗೆದುಕೊಳ್ಳುತ್ತಾ ಇದ್ದರು, ಅಭಿವೃದ್ಧಿ ಬಗ್ಗೆ ಹೆಚ್ಚು ಹಣ, ಸಂಪನ್ಮೂಲ ಯಾರು ಕೊಡುತ್ತಿದ್ದರು, ನಾವು ಕೊಡುತ್ತಿದ್ದೆವೋ, ಹಿಂದೆ ನೀವು ಕೊಡುತ್ತಿದ್ದೀರೋ ಅಥವಾ ನಾವು ಅದನ್ನು ಮುಂದುವರಿಸಿಕೊಂಡು ಬಂದಿದ್ದೇವೋ ಎನ್ನುವುದನ್ನು ತಾವು ಈ ಡಾಕ್ಯುಮೆಂಟ್ ನೋಡಿಕೊಂಡರೆ ತಿಳಿಯುತ್ತದೆ. ಈಗ 1988-89 ಅನ್ನು ತೆಗೆದುಕೊಂಡರೂ ಕೂಡ, 1988-89 ರಲ್ಲಿ ಟೋಟಲ್ ಡೆವೆಲಪ್‌ಮೆಂಟ್ ಎಕ್ಸ್‌ಪೆಂಡಿಚರ್ 69 ಪರ್ಸೆಂಟ್. ನಾನ್ ಡೆವೆಲಪ್‌ಮೆಂಟ್ 21 ಪರ್ಸೆಂಟ್. ಆಮೇಲೆ ಹಿಂದೆ ನೋಡಿದರೆ ಶೇ.70, 72, 71. ತಾವು ಡೆವಲಪ್‌ಮೆಂಟ್‌ಗೆ ಖರ್ಚು ಮಾಡುತ್ತಾ ಇದ್ದದ್ದು ಮತ್ತು ನಾನ್ ಡೆವಲಪ್‌ಮೆಂಟ್‌ಗೆ ಮಾಡುತ್ತಾ ಇದ್ದುದ್ದನ್ನು ನೋಡಿದರೆ ನಾನ್ ಡೆವೆಲಪ್‌ಮೆಂಟ್‌ಗೆ ಶೇ.33 ರಷ್ಟು ಖರ್ಚು ಮಾಡುವುದಕ್ಕೆ ತಾವು ಶೇ.36 ರವರೆಗೂ ಖರ್ಚು ಮಾಡಿದ್ದೀರಿ. ಇವತ್ತು ನಾವು ಅದನ್ನು ಕಂಟ್ರೋಲ್ ಮಾಡಲಿಕ್ಕೆ ನೋಡಿದ್ದೇವೆ. ಏಕೆಂದರೆ 1989-90 ರಲ್ಲಿಶೇ.29ಕ್ಕೆ ಇಳಿಯಿತು. 1991-92ರಲ್ಲಿ ಶೇ.27.72 ಮತ್ತು 1994-95 ರಲ್ಲಿ ಶೇ.27.15ಕ್ಕೆ ಇಳಿಯಿತು. That means, during our period, the non-developmental expenditure was the least.

ಇದು ಸದನಕ್ಕೆ, ಸದಸ್ಯರಿಗೆ ಗೊತ್ತಿರತಕ್ಕಂಥಾದ್ದು. ಅಧಕ್ಷರೇ, ಅದು ಯಾವ ರೀತಿಯಲ್ಲಿ ಅಭಿವೃದ್ಧಿ ಕಾರ್ಯ ಶಿಥಿಲವಾಗಿದೆ, ಅಭಿವೃದ್ಧಿಗೆ ನಾವು ಎಲ್ಲಿ ವಿಮುಖರಾಗಿದ್ದೇವೆ. ನಾವು ಹೆಚ್ಚು ಹಣವನ್ನು ಯೋಜನೆಯಲ್ಲಿ ತೊಡಗಿಸಿ, ಯೋಜನೇತರ ವೆಚ್ಚವನ್ನು ಸಾಕಷ್ಟು ಕಡಿಮೆ ಮಾಡತಕ್ಕಂಥ ಒಂದು ಕೆಲಸವನ್ನು ನಾವು ಮಾಡಿಕೊಂಡೇ ಬಂದಿದ್ದೇವೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ ಪಿಯರ್‌ಲೆಸ್‌ನಿಂದ ಲೋನ್ ತೆಗೆದುಕೊಂಡು ಅವರು ಓಡಿಹೋದರೆಂದು ಒಂದು ಅಭಿಪ್ರಾಯವನ್ನು ಜನರಲ್ಲಿ ನೀವು ಮೂಡಿಸುತ್ತಿದ್ದೀರಿ. ಅದು ವೈಟ್ ಪೇಪರ್ ಅಲ್ಲ. ಅದು ಎಲ್ಲೋ ಪೇಪರ್. ಅದನ್ನು ನೀವು ತಿರುಚಿಹಾಕಿದ್ದೀರಿ. ನಿಮ್ಮ ಅನುಕೂಲಕ್ಕೆ ತಕ್ಕಂತೆ ನೀವು ಮಾಡಿದ್ದೀರಿ. 200 ಕೋಟಿ ರೂ. ಏನು ಮಂಜೂರಾಯಿತು ಅವತ್ತೇ 60 ಕೋಟಿ ರೂಪಾಯಿಗಳನ್ನು ನಾವು ಕೆ.ಇ.ಬಿ.ಯವರಿಗೆ ಕೊಟ್ಟೆವು. ಅಕ್ಟೋಬರ್‌ನಲ್ಲಿ 40 ಕೋಟಿ ರೂ. ಕೊಟ್ಟಿದ್ದಾರೆ. ಅನಂತರ 30 ಕೋಟಿ ರೂ. ಕೊಡಲಾಗಿದೆ. ಹೀಗೆ ಒಟ್ಟು 130 ಕೋಟಿ ರೂ.ಗಳನ್ನು ನಾವು ಅಧಿಕಾರದಲ್ಲಿದ್ದಾಗಲೇ ಕೆ.ಇ.ಬಿ.ಗೆ ಕೊಟ್ಟಿದ್ದೆವು. ಈಗ ನೀವು ಸುಮಾರು 12 ಕೋಟಿ ರೂ.ಗಳನ್ನು ಕೊಟ್ಟಿರಬಹುದು. ಅಂದರೆ ಕೆ.ಇ.ಬಿ.ಗೆ ನಮ್ಮ ಸರ್ಕಾರದ

ಖಜಾನೆಯಿಂದ ಸುಮಾರು 142 ಕೋಟಿ ರೂ. ಗಳನ್ನು ಕೊಟ್ಟಂತಾಗಿದೆ. ಈ ಹಣವನ್ನು ನೀವು ಏತಕ್ಕೆ ತೆಗೆದುಕೊಂಡಿರಿ ಎಂದು ಯಾರಾದರೂ ಕೇಳಬಹುದು. ತಮಗೆ ಗೊತ್ತಿರುವಂತೆ ಆ ಸಂದರ್ಭದಲ್ಲಿ ಕೆ.ಇ.ಬಿ.ಯ ಅನೇಕ ಯೋಜನೆಗಳು ಪೆಂಡಿಂಗ್ ಇದ್ದುವು. ಅವುಗಳನ್ನೆಲ್ಲಾ ವಿಶ್ವಬ್ಯಾಂಕ್ ಗೆ ಟ್ಯಾಗ್ ಆನ್ ಮಾಡಿದ್ದರು. ವಿಶ್ವಬ್ಯಾಂಕ್‌ನವರು ಸಡನ್ ಆಗಿ ನಿಲ್ಲಿಸಿಬಿಟ್ಟರು. ತಮಗೆ ನಾನು ಕೆಲವು ಪ್ರಾಜೆಕ್ಟ್‌ಗಳ ಹೆಸರುಗಳನ್ನು ಉದಾಹರಣೆಗಾಗಿ ಹೇಳುತ್ತೇನೆ. ಹೂಡಿ, 400 ಕೆ.ವಿ.ಎ., ಬಾಕಿ ಇತ್ತು. ಅದರ ಅಂದಾಜು 55 ಕೋಟಿಗಿಂತ ಜಾಸ್ತಿ. ಹುಮ್ನಾಬಾಗ್: 220 ಕೆ.ವಿ.ಎ. ಅದರ ಅಂದಾಜು ಸುಮಾರು 2025 ಕೋಟಿ ರೂ.; ದಾವಣಗೆರೆಯದ್ದು 25 ಕೋಟಿ ರೂ. ಸೇಡಂ: 200 ಕೆ.ವಿ.ಎ. 25 ಕೋಟಿ ರೂ.; ಬಸವನ ಬಾಗೇವಾಡಿ 220 ಕೆ.ವಿ.ಎ. ಸುಮಾರು 20 ಕೋಟಿ ರೂ.; ತುಮಕೂರು: 12 ಎಂ.ಎ.ಎ; ಇನ್ನೊಂದು 220 ಕೆ.ವಿ.ಎ.; ಸುಮಾರು 30 ಕೋಟಿ ರೂ.; ಕಿಬ್ಬನಹಳ್ಳಿಕ್ರಾಸ್: 220 ಕೆ.ವಿ.ಎ., 20 ಕೋಟಿ ರೂ.; ಹೀಗೆ ಸುಮಾರು 175 ಕೋಟಿ ರೂ.ಗಳ ಯೋಜನೆ ಇತ್ತು. ಇವತ್ತು ದಾವಣಗೆರೆಯದು ಮುಗಿಯುತ್ತಾ ಬಂದಿವೆ. ಇದನ್ನು ಬಿಟ್ಟರೆ ಉಳಿದ ಎಲ್ಲಾ ಯೋಜನೆಗಳೂ ಮುಗಿದು ಹೋಗಿದೆ. ಆ ಪ್ರಾಜೆಕ್ಟ್‌ಗಳು ಆಗದೇ ಹೋಗಿದ್ದಿದ್ದರೆ ಏನು ಆಗುತ್ತಿತ್ತು ಎಂಬುದನ್ನು ತಾವೇ ಯೋಜನೆ ಮಾಡಿ. ಪರಿಸ್ಥಿತಿ ಸಂಪೂರ್ಣವಾಗಿ ಬಿಗಡಾಯಿಸುತ್ತಿತ್ತು. ನಮ್ಮ ಕಾಲದಲ್ಲಿ ಪವರ್ ಕಟ್ ನ್ನೂ ಕೂಡ ತೆಗೆದುಹಾಕಿದೆವು. ಆಂಧ್ರ ಪ್ರದೇಶದವರು ಹೆಚ್ಚು ವಿದ್ಯುಚ್ಛಕ್ತಿಯನ್ನು ಉಪಯೋಗಿಸಿಕೊಳ್ಳುತ್ತಿರುವುದರಿಂದ ನಮ್ಮ ರಾಜ್ಯದಲ್ಲಿ ಇವತ್ತು ಈ ಪರಿಸ್ಥಿತಿ ಬಂದಿದೆ. ನಾವು ಬೇರೆಯವರಿಂದ ಸಾಲವನ್ನು ತೆಗೆದುಕೊಳ್ಳುವುದು ಬೇಡವೆಂದು ಸುಮ್ಮನಿದ್ದಿದ್ದರೆ ಈ ಪ್ರಾಜೆಕ್ಟ್‌ಗಳು ಬರುತ್ತಲೂ ಇರಲಿಲ್ಲ, ಪೂರ್ತಿಯೂ ಆಗುತ್ತಾ ಇರಲಿಲ್ಲ. This loan is the lowest when compared to the Bank loan.

ಬ್ಯಾಂಕ್ ಲೋನ್ ಅಂದರೆ ಕೆನರಾ ಬ್ಯಾಂಕ್‌ನಿಂದ ಲೋನ್ ತೆಗೆದುಕೊಳ್ಳುವುದಕ್ಕೆ ನಾವು 8 ತಿಂಗಳ ಕಾಲ ಕಾದಿದ್ದೆವು. The Reserve Bank has not given the clearance immediately. Therefore, we have to avail some loan from some other source.

ಇಲ್ಲದಿದ್ದಿದ್ದರೆ ಈ ಪ್ರಾಜೆಕ್ಟ್‌ಗಳು ಹಾಗೇ ಉಳಿಯುತ್ತಿದ್ದುವು. ಹೊರಗಿನಿಂದ ನಾವು ಸಾಲವನ್ನು ತೆಗೆದುಕೊಳ್ಳಬೇಕು, ಅದೇ ರೀತಿ ನಾವೂ ಕೂಡ ಹೊರಗಡೆಗೆ ಹಣವನ್ನು ಕೊಡಬೇಕಾಗುತ್ತದೆ. ಇದನ್ನು ನೀವು ಲೆಕ್ಕಕ್ಕೆ ತೆಗೆದುಕೊಳ್ಳಬೇಕು. ಅದಿಲ್ಲದೆ ನೀವು ನಿಮಗೆ ಅನುಕೂಲವಾಗುವಂಥ ರೀತಿಯಲ್ಲಿ ಅಂಕಿ ಅಂಶಗಳನ್ನು ಕೊಟ್ಟು ಅಷ್ಟಕ್ಕೇ ನಿಲ್ಲಿಸಿದರೆ ನಾವು ಏನು ಹೇಳುಬೇಕು? ಇಂಥ ಅಂಕಿಸಂಖ್ಯೆಗಳನ್ನು ಕೊಟ್ಟು ಜನರನ್ನು ವಂಚಿಸುವುದಕ್ಕೆ ಹೋಗಬೇಡಿ. ಸಾಕಷ್ಟು ಯೋಜನೆಗಳು ಪೂರ್ಣವಾಗಿರುವುದನ್ನು ಜನರು ನೋಡುತ್ತಿದ್ದಾರೆ. ಕಾವೇರಿ ಬೇಸಿನ್‌ನಲ್ಲಿ ಪೀಸ್‌ವರ್ಕ್ ಕೊಟ್ಟಿದ್ದೀರಿ, ಅದನ್ನು ನಿಲ್ಲಿಸಿದ್ದೀರಿ, ಅದನ್ನು ನಾವು ಸರಪಡಿಸುವುದಕ್ಕೆ ಹೊರಟಿದ್ದೇವೆಂದು ನೀವು ಹೇಳುತ್ತಿದ್ದೀರಿ. ನಾನೇ ಪಬ್ಲಿಕ್ ಅಕೌಂಟ್ ಕಮಿಟಿಯ ಅಧ್ಯಕ್ಷನಾಗಿದ್ದೆ. ಪೀಸ್ ವರ್ಕ್ಸ್ ಹಗರಣಗಳೇನೆಂಬುದು ನನಗೆ ಚೆನ್ನಾಗಿ ಗೊತ್ತಿದೆ. ಆದರೆ ಅದನ್ನೆಲ್ಲಾ ಇಲ್ಲಿ ವಿಸ್ತಾರವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಪೀಸ್ ವರ್ಕ್ಸ್‌ನ ಜನರು ನಾವಲ್ಲ, ನೀವೇ. ಲ್ಯಾಂಡ್

ಆಕ್ವಿಸಿಷನ್ ಮಾಡಿಕೊಳ್ಳುವುದಕ್ಕೆ ಸಮಸ್ಯೆ ಬರಬಾರದು, ಕೆಲಸ ಬೇಗ ಆಗಬೇಕು, ಟ್ರಿಬ್ಯುನಲ್‌ನಲ್ಲಿ ನಮ್ಮ ಭಾಗ ಇದೆ. ತಮಗೆ ಗೊತ್ತಿದೆ. ಪಿರಿಯಾ ಪಟ್ಟಣದ ಒಂದು ಪ್ರಾಜೆಕ್ಟ್‌ಗೆ ಟೆಂಡರ್ ಕಾಲ್‌ಫಾರ್ ಮಾಡಿದ್ದಕ್ಕೆ ಟ್ರಿಬ್ಯುನಲ್‌ನಲ್ಲಿ ಮತ್ತು ಸುಪ್ರೀಂ ಕೋರ್ಟಿನಲ್ಲಿ ಸಾಕಷ್ಟು ವಾದವನ್ನು ನಾವು ಮಾಡಬೇಕಾಗಿ ಬಂತು. 86-87ರಲ್ಲಿ ಇಂಡಿ ಬ್ರ್ಯಾಂಚ್ ಕೆನಾಲ್‌ನ್ನೇ ತಾವು ಕೊಟ್ಟಿದ್ದೀರಿ. ಇವತ್ತು ಕಾಂಗ್ರೆಸ್ ಕಂಟ್ರ್ಯಾಕ್ಟರ್, ಜನತಾ ದಳದ ಕಾಂಟ್ರ್ಯಾಕ್ಟರ್ಸ್ ಎಂದು ಹೇಳಬಹುದು. ಅವರು ಸರ್ಕಾರೀ ಕಾಂಟ್ರ್ಯಾಕ್ಟರ್ಸ್. ಯಾವ ಸರ್ಕಾರ ಅಧಿಕಾರಕ್ಕೆ ಬರುತ್ತದೆ ಆ ಸರ್ಕಾರದ ಕಂಟ್ರ್ಯಾಕ್ಟರ್‌ಗಳು ಅವರು. ಬಿ.ಜೆ.ಪಿ. ಕಂಟ್ರ್ಯಾಕ್ಟರ್‌ಗಳು, ಜನತಾದಳ ಕಂಟ್ರ್ಯಾಕ್ಟರ್‌ಗಳು ಎಂದು ಎಲ್ಲೂ ಇಲ್ಲ. ಹಾಗಿದ್ದರೆ ನಾವು ಆ ಕಂಟ್ರಾಕ್ಟರ್‌ಗಳಿಗೆ ಕೊಡುವುದಿಲ್ಲ ಇನ್ನೊಂದು ಕಾಂಟ್ರ್ಯಾಕ್ಟರ್ಸ್‌ಗೆ ಕೊಡಬೇಕೆಂದಿದ್ದರೆ ಅದನ್ನು ಸ್ಪಷ್ಟವಾಗಿ ಹೇಳಿಬಿಡಿ. ಬಿಚ್ಚುಮನಸ್ಸಿನಿಂದ ತಾವು ಮಾತನಾಡಿ. ಕೆಲಸವನ್ನು ತಾವು ನಿಲ್ಲಿಸಿಬಿಟ್ಟಿದ್ದೀರಿ. ಶ್ರೀ ವೆ .ಕೆ.ರಾಮಯ್ಯನವರು ಸತ್ಯಾಗ್ರಹ ಮಾಡುವುದಕ್ಕೆ ಹೊರಟಿದ್ದಾರೆ. ನೀರಾವರಿಯ ಬಗ್ಗೆ ತಾವು ಈ ರೀತಿ ಮಾಡಿದರೆ ನಾವು ಇಲ್ಲಿ ಮಾತನಾಡುವುದರಿಂದ ಏನೂಪ್ರಯೋಜನವಿಲ್ಲ. ನಾವು ಉಗ್ರವಾದ ಹೋರಾಟ ಮಾಡಬೇಕಾಗುತ್ತದೆ. ಕಾವೇರಿ ಮತ್ತು ಕೃಷ್ಣಾನದಿ ಬೇಸಿನ್‌ಗಳು ನಮ್ಮ ನಾಡಿನ ಜೀವನಾಡಿ. ಅದಕ್ಕೆ ಏಟು ಬೀಳುವುದಾದರೆ ಬೇರೆ ವಿಷಯಗಳು ಪ್ರಮುಖವಾಗುವುದಿಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರೇ, ನಾವೂ ಕೂಡ ಬೇರೆ ದಾರಿಯನ್ನು ಹುಡುಕಬೇಕಾಗುತ್ತದೆ. ಇವರ ರಾಜಕೀಯದಲ್ಲಿ ಒಂದು ವರ್ಷವನ್ನು ಹಾಳುಮಾಡಿದ್ದಾರೆ. ಯು.ಕೆ.ಪಿ; ಮಲಪ್ರಭ, ಘಟಪ್ರಭಾ ಯೋಜನೆಗಳ.....

ಶ್ರೀ ಜಿ.ಎಸ್.ಶಿವಾನಂಜಪ್ಪ:- ತುಮಕೂರು ಜಿಲ್ಲೆಯಲ್ಲಿ ಈಗಾಗಲೆ ಗಲಾಟೆ ಪ್ರಾರಂಭವಾಗಿದೆ.

ಶ್ರೀ ಎಂ.ವೀರಪ್ಪಮೊಯಿಲಿ:- ದಯವಿಟ್ಟು ಈ ಕೆಲಸವನ್ನು ಮಾಡುವುದಕ್ಕೆ ಹೋಗಬೇಡಿ. ನೀರಾವರಿ ಯೋಜನಗಳ ವಿಚಾರದಲ್ಲಿ ರಾಜಕೀಯವನ್ನು ಬಳಸಿದರೆ ನಾವು ಸುಮ್ಮನೆ ಕೂಳಿತುಕೊಳ್ಳುವುದಕ್ಕಾಗುವುದಿಲ್ಲವೆಂಬುದನ್ನು ಪ್ರತ್ಯೇಕವಾಗಿ ನಾವು ಹೇಳಬೇಕಾದ ಅವಶ್ಯಕತೆ ಇಲ್ಲ. ವಾಣಿ ವಿಲಾಸ ಸಕ್ಕರೆ ಕಾರ್ಖಾನೆ ಬಗ್ಗೆ ಹೇಳುವುದಾದರೆ. ನಮ್ಮ ಕಾಲದಲ್ಲಿ ಹಣವನ್ನು ಕೊಟ್ಟು ಪ್ರಾರಂಭ ಮಾಡಿದೆವು; ಆದರೆ ನಿಮ್ಮ ಕಾಲದಲ್ಲಿ ಅದನ್ನು ನಿಲ್ಲಿಸಿಬಿಟ್ಟಿದ್ದೀರಿ. ತಾವು ಬಾಂಬೆ, ಡೆಲ್ಲಿಗೆ ಹೋಗಿ ನೋಡುವುದಕ್ಕಾಗುವುದಿಲ್ಲ. ಹಿರಿಯೂರಿಗೆ ಹೋಗಿ ನೋಡಬೇಕು. ಬ್ರಹ್ಮಾವರ ಸಕ್ಕರೆ ಕಾರ್ಖಾನೆ ಪ್ರಾರಂಭವಾಗಿದೆ. ಆದರೆ ನಿಮ್ಮ ಕಾಲದಲ್ಲಿ ಇದನ್ನು ಮುಚ್ಚಿ ಬೇರೆ ಯಾರೋ ಖಾಸಗಿಯವರಿಗೆ ಕೊಡತಕ್ಕಹುನ್ನಾರ ನಡೆದಿತ್ತು. ಅದನ್ನು ನಾವು ನಿಲ್ಲಿಸಿ ಮತ್ತೆ ಚಾಲೂ ಮಾಡುವ ಪ್ರಯತ್ನವನ್ನು ನಾವು ಮಾಡಿದ್ದೇವೆ.

ಇನ್ನೊಂದು ವಿಚಾರವನ್ನು ಹೇಳುವುದಾದರೆ, ಮೈಸೂರು ಯೂನಿವರ್ಸಿಟಿಗೆ ತಾವೇ ಯಾರಾದರೂ ಹೋಗಿ ವಿಚಾರಿಸಿ ನೋಡಬಹುದು. ಹಾಸನದಲ್ಲಿ, ಮಂಡ್ಯದಲ್ಲಿ ಪಿ.ಜಿ. ಸೆಂಟರ್ ಮಾಡಿದ್ದೇವೆ. ಅದರಲ್ಲೂ ಬಹಳ ಉಪಯುಕ್ತವಾದ ಕೋರ್ಸುಗಳನ್ನು ಪ್ರಾರಂಭಿಸಿದ್ದೇವೆ. 10 ಕೋಟಿ ರೂ. ಗ್ರ್ಯಾಂಟ್ ಇದ್ದುದ್ದನ್ನು 15 ಕೋಟಿ ರೂ.ಗೆ

ಏರಿಸಿದ್ದೇವೆ. ಇದನ್ನು ಕೇವಲ ಫಿಗರ್ಸ್ ಎಂದು ಯಾರೂ ತಿಳಿದುಕೊಳ್ಳಬೇಡಿ. ಹೊಸ ಕೋರ್ಸ್‌ಗಳನ್ನು ನಾವು ಪ್ರಾರಂಭ ಮಾಡಿದ್ದೇವೆ. ಸುಮಾರು 130 ಪೋಸ್ಟ್‌ಗಳನ್ನು ಭರ್ತಿ ಮಾಡುವುದಕ್ಕೆ ಕ್ರಮ ತೆಗೆದುಕೊಂಡಿದ್ದೇವೆ. ಪ್ಲಾಟಿನಂ ಜ್ಯೂಬಿಲಿಯನ್ನು ಆಚರಣೆ ಮಾಡುವುದಕ್ಕೋಸ್ಕರವಾಗಿಯೇ 2 ಕೋಟಿ ರೂ.ಗಳನ್ನು ನಾವು ಕೊಟ್ಟಿದ್ದೇವೆ. ಧಾರವಾಡದಲ್ಲಿ ಕರ್ನಾಟಕ ಯೂನಿವರ್ಸಿಟಿ ಮತ್ತು ಅದರ ಕ್ಯಾಂಪಸ್‌ನ್ನು ಬಿಟ್ಟರೆ ಯಾವುದೇ ವಿಸ್ತರಣಾ ಕಾರ್ಯವೂ ನಡೆಯುತ್ತಲ್ಲವೆಂದು ಮಾನ್ಯ ಬಣಕಾರ್‌ರವರು ಹೇಳುತ್ತಿದ್ದರು. ಬಿಜಾಪುರದಲ್ಲಿ ನಾವು ಕೋರ್ಸ್‌ಗಳನ್ನು ಪ್ರಾರಂಭಿಸಿದ್ದೇವೆ. ಇಡೀ ದೇಶದಲ್ಲೇ ಅತ್ಯಂತ ಉತ್ತಮವಾದ ಪಿ.ಜೆ.ಸೆಂಟರ್‌ನ್ನು ಬೆಳಗಾಂನಲ್ಲಿ ಪ್ರಾರಂಭವಮಾಡಿದ್ದೇವೆ. ಸುಮಾರು 3.5 ಕೋಟಿ ರೂ.ಗಳನ್ನು ನಾವು ಖರ್ಚುವಮಾಡಿದ್ದೇವೆ. ಆರ್ಟಿಸ್ಟರಿ ಮತ್ತು ಟೂರಿಸಂ ಎಂದು ನವೀನವಾದ ಕೋರ್ಸ್‌ಗಳನ್ನು ಪ್ರಾರಂಭ ಮಾಡಿದ್ದೇವೆ. ಕಾರವಾರದ್ದು ನಿಮ್ಮ ಕಾಲದಲ್ಲಿ ಹಂಪಿ ರೀತಿಯಲ್ಲಿ ಎಲ್ಲಾ ಹಾಳಾಗಿತ್ತು. ಅದನ್ನು ನಾವು ರಿವೈವ್ ಮಾಡಿ ಮರೈನ್ ಬಯಾಲಜಿ, ಸ್ಕೂಲ್ ಆಫ್ ಓಷನೋಗ್ರಫಿ, ಈ ರೀತಿ ಅನೇಕ ಯೋಜನೆಗಳನ್ನು ಮಾಡಿದ್ದೇವೆ. ಇವತ್ತು ಇನ್ನಡ ವಿಶ್ವವಿದ್ಯಾಲಯದ ಬಗ್ಗೆ ನೀವು ಕೇವಲ ಭಾಷಣವನ್ನು ಮಾತ್ರ ಮಾಡಿದ್ದೀರಿ. ಆದರೆ ಕಾಂಗ್ರೆಸ್‌ನವರು ಕನ್ನಡ ವಿಶ್ವವಿದ್ಯಾಲಯವನ್ನು ಸ್ಥಾಪನೆ ಮಾಡಿ 3 ವರ್ಷದಲ್ಲಿ 5 ಕೋಟಿ ರೂ.ಗಳನ್ನು ಖರ್ಚುಮಾಡಿ ಉತ್ತಮ ರೀತಿಯಲ್ಲಿ ಬರುವಂತೆ ಮಾಡಿದ್ದೇವೆ. ಅದೇರೀತಿ ಗುಲ್ಬರ್ಗಾ ಯೂನಿವರ್ಸಿಟಿ ಬಹಳ ದೂರದಲ್ಲಿದೆ. ಇವತ್ತು ಆಪ್ರದೇಶವನ್ನು ನೆಗ್ಲೆಕ್ಟ್ ಮಾಡುತ್ತಾರೆ ಎಂದು 5 ಕೋಟಿ ರೂ.ಗಳ ವಿಶೇಷ ಅನುದಾನವನ್ನು ಹೈದರಾಬಾದ್ ಕರ್ನಾಟಕ ಬೋರ್ಡ್‌ನಿಂದ ಕೊಟ್ಟಿದ್ದೇವೆ. ಹೀಗೆ ಬೇರೆ ಬೇರೆ ಯೂನಿವರ್ಸಿಟಿಗಳ ಯು.ಜಿ.ಸಿ. ಸ್ಕೀಂಗಳು ಬಂದರೆ ಮ್ಯಾಚಿಂಗ್ ಗ್ರ್ಯಾಂಟ್ ಕೊಡದೆ ಅದೆಲ್ಲಾ ಲ್ಯಾಪ್ಸ್ ಆಗುತ್ತಿತ್ತು. ಆದರೆ ನಾವು ಅಧಿಕಾರಕ್ಕೆ ಬಂದಮೇಲೆ ಯಾವುದೇ ಯು.ಜಿ.ಸಿ.ಸ್ಕೀಂ ಬಂದರೂ ಆಟೋಮ್ಯಾಟಿಕ್ ಗ್ರ್ಯಾಂಟ್ ಕೊಡಬೇಕೆಂದು ಕ್ರಮ ತೆಗೆದುಕೊಂಡು ಅವರಲ್ಲಿ ಇದ್ದಂಥ ಎಲ್ಲಾ ಪೋಸ್ಟ್‌ಗಳನ್ನೂ ತುಂಬಿದ್ದೇವೆ. ಗುಲ್ಬರ್ಗಾ ಯೂನಿವರ್ಸಿಟಿಯಲ್ಲಿರುವಷ್ಟು ಉತ್ತಮವಾದ ಕೋರ್ಸ್‌ಗಳು ಬಹುಶ: ಇಡೀ ದೇಶದಲ್ಲೇ ಎಲ್ಲೂ ಇಲ್ಲ. ಬಯೋ ಟೆಕ್ನಾಲಜಿ ಇದ್ದ ಕಂಪ್ಯೂಟರ್ ಸೈನ್ಸ್ ಇದೆ, ಫಾರ್ಮಾಕ್ಯೂಟಿಕಲ್ ಕೆಮಿಸ್ಟ್ರಿ ಇದೆ; ಎಂ.ಬಿ.ಎ. ಇದೆ, ಮೆಡಿಕಲ್ ಪ್ಲಾಂಟ್ಸ್, ಮ್ಯಾಥಮ್ಯಾಟಿಕಲ್ ಮಾಡಲಿಂಗ್, ಸೈನ್ಸ್ ಇನ್‌ಫರ್ಮೇಷನ ಲೆ ಬ್ರರಿ ನೆಟ್‌ವರ್ಕ್ ಇಂಥಾದ್ದೆಲ್ಲಾ ಇದೆ. 11 ಯೂನಿವರ್ಸಿಟಿಗಳ ಪೈಕಿ ಗುಲ್ಬರ್ಗಾ ಯೂನಿವರ್ಸಿಟಿ ಅತ್ಯಂತ ಉತ್ತಮವಾದ ಯೂನಿವರ್ಸಿಟಿಯಾಗಿದೆ. ಅನೇಕ ಅಭಿವೃದ್ಧಿ ಕಾರ್ಯಕ್ರಮಗಳನ್ನು ಹಾಕಿಕೊಂಡು ಈ ವಿಶ್ವವಿದ್ಯಾಲಯಗಳ ಅಭಿವೃದ್ಧಿ ಸಾಧನೆ ಮಾಡಿದ್ದೇವೆ. ಅದು ಎಜ್ಯುಕೇಷನ್ ಇರಬಹುದು, ಕನ್ನಡ ಮತ್ತು ಸಂಸ್ಕೃತಿ ಇರಬಹುದು, ಅಥವಾ ಸೋಷಿಯಲ್ ಇನ್‌ಫ್ರಾಸ್ಟ್ರಕ್ಚರ್ ಇರಬಹುದು. ಕೈಗಾರಿಕೆಗಳಲ್ಲೂ ಕೂಡ ನಾವು ಅನೇಕ ರೀತಿಯ ಇನ್‌ವೆಸ್ಟ್‌ಮೆಂಟ್ಸ್‌ನ್ನು ಮಾಡಿದ್ದೇವೆ. ಇಡೀ ದೇಶದಲ್ಲಿ ಕೈಗಾರಿಕಾ ವಲಯದಲ್ಲಿ ಇನ್ವೆಸ್ಟ್‌ಮೆಂಟ್ ಮಾಡುವುದರಲ್ಲಿ 3ನೇ ಸ್ಥಾನದಲ್ಲಿದೆ. ಈ ಪ್ರಯತ್ನವನ್ನು ನಾವು ಮಾಡಿದ್ದೇವೆ. 94-95ರ ಸಾಲಿನ ಡಾಕ್ಯುಮೆಂಟ್ಸ್‌ನ್ನು ನಾನು ತಮಗೆ ಕಳುಹಿಸಿಕೊಡುತ್ತಿದ್ದೇನೆ. 1494ರಿಂದ 200 ದಿನಗಳ ಪ್ರೋಗ್ರಾಂನ್ನು ಮಾಡಬೇಕೆಂದು ಮಾಡಿದ್ದೇವೆ. ರಿಸೋರ್ಸಸನ್ನು ನಾವು ಮೊಬಿಲೈಸ್ ಮಾಡದೇ ಇದ್ದಿದ್ದರೆ ಏನೂ

ಮಾಡಲು ಆಗುತ್ತಿರಲಿಲ್ಲ. ಇವತ್ತು ಇನ್‌ಕ್ಲೂಡಿಂಗ್ ಪವರ ಸೆಕ್ಟಾರನಲ್ಲಿ 100 ಪರ್ಸೆಂಟ್, 101 ಪರ್ಸೆಂಟ್ ನಾವು ನಮ್ಮ ಸಾಧನೆಯನ್ನು ಮಾಡಿದ್ದರೆ ಇನ್ನುಳಿದ ತಿಂಗಳುಗಳಲ್ಲಿ 4 ತಿಂಗಳಲ್ಲಿ ತಾವು ಸಾಧನೆ ಮಾಡುವುದಕ್ಕೆ ಸಾಧ್ಯವಾಗಲಿಲ್ಲ. ಈ 200 ದಿನಗಳ ಸಾಧನೆ ಕಾರ್ಯಕ್ರಮದ ವಿವರಗಳನ್ನು ನಾನು ತಮಗೆ ಕಳುಹಿಸುತ್ತಿದ್ದೇನೆ.

ಶ್ರೀ ಎಂ.ವೀರಪ್ಪಮೊಯಿಲಿ (ಮುಂದು):- Regarding 200 days programme, when we could achieve 100% or 101% result, ಇದರಲ್ಲಿ ನಮಗೆ ಮಾಡಲಿಕ್ಕೆ ಸಾಧ್ಯವಾಗುವುದು ಇದ್ದರೆ ತಮಗೆ ಏತಕ್ಕೆ ಸಾಧ್ಯವಾಗಿಲ್ಲ ಎಂಬುದನ್ನು ತಾವು ಗಮದಲ್ಲಿಟ್ಟುಕೊಳ್ಳಬೇಕಾಗುತ್ತದೆ. ಇನ್ನು ತೆರಿಗೆ ಬಗ್ಗೆ ಒಂದೆರಡುಮಾತುಗಳನ್ನು ಮಾತ್ರ ಹೇಳುತ್ತೇನೆ. ಬೆಳಗಾಂ ಭಾಗದಲ್ಲಿ ರೈತರು ಬೆಲ್ಲ ತಯಾರಿಸುತ್ತಾರೆ. ಬೆಲ್ಲಕ್ಕೆ ಷುಗರ್‌ಕೇಸ್ ಏನು ಸರಬರಾಜು ಮಾಡುತ್ತಾರೆ. ಅವರು ಅತಿ ಕಡು ಬಡವರು. ತಮಗೆ ಗೊತ್ತಿದೆ ನಾವು ಈ ತೆರಿಗೆಯನ್ನು ಕಡಿಮೆ ಮಾಡಿದ್ದೇವೆ. 94 95ರಲ್ಲಿ 2.5 ಪರ್ಸಂಟ್ ಇದ್ದದ್ದು 1.5 ಪರ್ಸಂಟ್ ಮಾಡಲಾಗಿದೆ. ಏಕೆಂದರೆ ವ್ಯಾಪಾರ ವಹಿವಾಟು ಮಹಾರಾಷ್ಟ್ರಕ್ಕೆ ಹೋಗುತ್ತದೆ ಮತ್ತು ಅವರಿಗೆ ಒಂದು ಪರಿಹಾರ ಕೊಡಬೇಕೆಂದು ಮಾಡಿರುವುದು ತಮಗೆ ಗೊತ್ತಿರಬಹುದು. ಕೇಂದ್ರ ಸರ್ಕಾರ ಬರಲೆ ಸೇಷನ್ ಪಾಲಿಸಿ ಮಾಡಿ ಬೆಲ್ಲ ತಯಾರಿಸುವ ರೆಸ್ಟ್ರಿಕ್ಸನ್ ತೆಗೆದಿದ್ದಾರೆ. ಇದು ರೈತರಿಗೆ ಪ್ರಯೋಜನ ಆಗಲಿ ಎಂದು. ಖಂಡಸಾರಿ ಮೇಲೆ ಹಾಕಿದ್ದ ರೆಸ್ಟ್ರಿಕ್ಸನ್ ಸಂದರ್ಭದಲ್ಲಿ ತಾವು ತಿರುರಿ ತೆರಿಗೆ ಹಾಕಿದ್ದೀರಿ. ಇದರಲ್ಲಿ ತೆರಿಗೆ 1.5ರಿಂದ 2 ಪರ್ಸಂಟ್‌ಗೆ ಪುನ: ಏರಿಸಿದ್ದೀರಿ. ನಾವು ಖಂಡಸಾರಿಗೆ ಇದ್ದ ತೆರಿಗೆಯನ್ನು ನೀವು 1 ಪರ್ಸಂಟ್ ಇದ್ದುದನ್ನು 2 ಪರ್ಸಂಟ್‌ಗೆ ಏರಿಸಿದ್ದೀರಿ. ಗೋಡಂಬಿ ಆಮದು ತಮಗೆ ಗೊತ್ತಿಲ್ಲ. ಗೋಡಂಬಿಯಲ್ಲಿ ಎಷ್ಟು ಕಷ್ಟ ಇದೆ ಎಂಬುದನ್ನು ತಾವು ನೋಡಬೇಕು. ಇದರಿಂದ ಲಕ್ಷಾಂತರ ಜನರಿಗೆ ಇವತ್ತಿನ ದಿವಸ ಕೆಲಸ ಸಿಗುತ್ತಿದೆ. ಗೋಡಂಬಿ ತಂದು ಫ್ಯಾಕ್ಟರಿಯಲ್ಲಿ ಪ್ರೋಸಸ್ ಮಾಡಿ ಪುನ: ಎಕ್ಸ್‌ಪೋರ್ಟ್ ಮಾಡುವುದು ಅದರ ಕಷ್ಟ ತಮಗೆ ಗೊತ್ತಿಲ್ಲ. ಇದನ್ನು 3 ರಿಂದ 4 ಪರ್ಸಂಟ್‌ಗೆ ಹೆಚ್ಚು ಮಾಡಿದ್ದೀರಿ. ತಾವು ರೈತರ ಪರವಾಗಿ ಇರುತ್ತೀರೆಂದು ಭಾವಿಸಿದ್ದರೆ ಟ್ರ್ಯಾಕ್ಟರ್‌ಗೆ 3 ಪರ್ಸಂಟ್ ಇದ್ದುದ್ದನ್ನು 4.5 ಪರ್ಸಂಟ್ ಮಾಡಿದ್ದೀರಿ. ಕೈಯಲ್ಲಿ ತಯಾರಿಸಿದ ಬಟ್ಟೆ, ಸೋಪುಗಳಿಗೆ ಡಿಟರ್‌ಜೆಂಟ್‌ಗೆ 3 ಪರ್ಸಂಟ್ ಇದ್ದುದ್ದನ್ನು 4 ಪರ್ಸೆಂಟ್ ಮಾಡಿದ್ದೀರಿ. ಆ ಮೇಲೆ ಪಂಪ್‌ಗಳಿಗೆ 5 ಕ್ಕಿಂತ ಹೆಚ್ಚು 10 ಕ್ಕಿಂತ ಕಡಿಮೆ ಇರತಕ್ಕದ್ದಕ್ಕೆ 5 ರಿಂದ 6 ಪರ್ಸೆಂಟ್ ಮಾಡಿದ್ದೀರಿ. ಪೆಟ್ರೋಲ್ ಬಗ್ಗೆ ನಾನು ಈಗಾಗಲೇ ಹೇಳಿದ್ದೇನೆ. ವೃತ್ತಿ ತೆರಿಗೆಯನ್ನು ಇವತ್ತು ವಿಪರೀತ ಜಾಸ್ತಿ ಮಾಡಿದ್ದೀರಿ. ಕೃಷಿ ವರಮಾನ ತೆರಿಗೆ, ನಾನು ಹಣಕಾಸಿನ ಸಚಿವನಾಗಿದ್ದಾಗ ಈ ಪ್ಲಾಂಟೇಷನ್ ಕ್ರಾಪ್ ಬಿಟ್ಟರೆ ಬಾಕಿ ಎಲ್ಲಾ ಕೃಷಿ ವರಮಾನ ತೆರಿಗೆಯನ್ನು ತೆಗೆದುಹಾಕಿದ್ದೆ. ಏಕೆಂದರೆ ಕೃಷಿಕರಿಗೆ ಆದಷ್ಟು ತೆರಿಗೆ ಕಡಿಮೆ ಮಾಡಬೇಕೆಂದು. ತಾವು ಗೊಬ್ಬರದ ಬಗ್ಗೆ ಬಹಳ ಮಾತನಾಡುತ್ತೀರಿ. ಆದರೆ ಗೊಬ್ಬರದ ಮೇಲೆ ಹಾಕಿದ ಹೊರ ಭಾಗವನ್ನು ಎಲ್ಲಾ ಕೃಷಿಕರಿಗೆ ಹಾಕತಕ್ಕ ಕಾರ್ಯಕ್ರಮ ಯಾವ ಸರ್ಕಾರ ಕೂಡ ಮಾಡಲಿಲ್ಲ. ವರ್ಷ ವರ್ಷ ಹೋದ ಹಾಗೆ ಎಲ್ಲ ಬಜೆಟ್‌ಗಳಲ್ಲಿ ಗ್ರಾಮಾಂತರ ಪ್ರದೇಶ ಕೃಷಿಕರಿಗೆ ಬರತಕ್ಕ ತೆರಿಗೆಯನ್ನು ಆದಷ್ಟು ಕಡಿಮೆ ಮಾಡುತ್ತಾರೆಯೇ ಹೊರತು ಹೆಚ್ಚು ಮಾಡುವುದಿಲ್ಲ. ತಾವು ಹೆಚ್ಚು ಹೆಚ್ಚು ಮಾಡತಕ್ಕ ಪ್ರಯತ್ನ ಮಾಡಿದ್ದೀರಿ. ಎಲ್ಲೆಲ್ಲಿ ಉತ್ತಮವಾದ ಐಟಂಗಳು ಸಿಗುತ್ತವೆ ಅದಕ್ಕೆಲ್ಲಾ ತೆರಿಗೆ

ಹಾಕತಕ್ಕ ಪ್ರಯತ್ನವನ್ನು ತಾವು ಮಾಡಿದ್ದೀರಿ. ಅದುಕೂಡ ಕಾಫಿ ಪ್ಲಾಂಟೇಷನ್‌ಗೆ ತಾವು ಇನ್ ಡಿಸ್ಕ್ರಿಮಿನೇಟ್ ಆಗಿ ಜಾಸ್ತಿ ಮಾಡಿದ್ದೀರಿ. ನಾನು ಏನು ಮಾಡಿದ್ದೆ ಎಂದರೆ 15 ಎಕರೆ ಜಮೀನು ಇದ್ದವರಿಗೆ ರಿಯಾಯಿತಿ ಕೊಟ್ಟಿದ್ದೆ. ನಮ್ಮ ಕಾಲದಲ್ಲಿ ಇದನ್ನು ಮಾಡಿದ್ದೇವೆ, ಆದರೆ ನಿಮ್ಮ ಕಾಲದಲ್ಲಿ ಮಾಡಲಿಲ್ಲ. ನೀವು ಇವತ್ತು ಏನು ಮಾಡಿದ್ದೀರಿ ಎಂದರೆ, ಸುಮಾರು 16 ರಿಂದ 20 ಎಕರೆಗೆ ನಾವು 250 ರೂ. ತೆರಿಗೆಹಾಕಿದ್ದರೆ ನೀವು ಒಂದೂವರೆ ಸಾವಿರ ಹಾಕಿದ್ದೀರಿ. ಅವರು ಏನೂ ಬಹಳ ದೊಡ್ಡ ರೈತರು ಅಲ್ಲ. 20 ರಿಂದ 25 ಎಕರೆಗೆ 300 ರೂ. ಇದ್ದುದು 2250 ರೂ. ಮಾಡಿದ್ದೀರಿ. ಈ ತರಹ ಪ್ರತಿಯೊಂದು ಹೆಜ್ಜೆಯಲ್ಲೂ ತಾವು ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ನಿರ್ದಾಕ್ಷಿಣ್ಯವಾಗಿ ವಿವೇಚನಾರಹಿತವಾದ ತೆರಿಗೆ ಪದ್ಧತಿಯನ್ನು ತಾವು ಹಾಕುತ್ತಾ ಹೋಗಿದ್ದೀರಿ. ವ್ಯಾಲ್ಯೂ ಆಡೆಡ್ ಟ್ಯಾಕ್ಸನ್ನು ಇಲ್ಲಿ ಇಂಟ್ರೊಡ್ಯೂಸ್ ಮಾಡಬೇಕೆಂದು ಹಣಕಾಸಿನ ಸಚಿವರು ಸಮ್ಮೇಳನದಲ್ಲಿ ವಿಚಾರ ಮಾಡಿದ್ದೇವು. ಅದನ್ನು ತಾವು ಮರೆತ್ತಿದ್ದೀರಿ. ಯಾವುದೇ ಒಂದು ತೆರಿಗೆಯನ್ನು ತೆಗೆದುಕೊಂಡರೂ ಅದು ವಿಪರೀತ ಭಾರವಾಗಿದೆ. ತಾವು ಎಲ್ಲಾ ಮಟ್ಟದಲ್ಲೂ ಕೂಡ ತೆರಿಗೆಯನ್ನು ಜಾಸ್ತಿ ಮಾಡಿದ್ದೀರಿ. ಒಂದು ಮಾತು, ತಾವು ಕಾಂಗ್ರೆಸ್‌ವನರು ಅಬಾಲಿಷ್ ಮಾಡಿದ್ದೇವೆ. ಈವತ್ತು ನಿಮ್ಮ ಕಾಲದಲ್ಲಿನ ವಿಶೇಷವಾಗಿ ಅರೇಕ್ ಸಪ್ಲೈ ಮತ್ತು ಸೇಲ್ ಆಫ್ ಅರೇಕ್ ಫಿಗರ್ ತಾವು ನೋಡಬೇಕು. ನೀವು 200 300 ಲಕ್ಷ ಲೀಟರ್ ಗಿಂತ ಹೆಚ್ಚು ಹೋಗಿರಲಿಲ್ಲ. ಎಲ್ಲಾ ಎವೇಷನ್ ಆಗುತ್ತಿತ್ತು. ಬಾಟ್ಲಿಂಗ್ ಕಾಂಟ್ರಾಕ್ಟ್ ಇತ್ತು. ಆ ಹಗರಣವನ್ನು ನಾವು ನಿಲ್ಲಿಸಿದ್ದೇವೆ. ಬಾಟ್ಲಿಂಗ್ ಕಾಂಟ್ರಾಕ್ಟ್ ಮಾಡಿದವರಿಗೆ ಮನಸ್ಸು ಶಿಥಿಲವೋ ಅಥವಾ ಅದನ್ನು ಅಬಾಲಿಷ್ ಮಾಡಿದವರಿಗೆ ಮನಸ್ಸು ಶಿಥಿಲವೋ ಎಂಬುದನ್ನು ಜನತೆ ಉತ್ತರ ಕೊಡಬೇಕು. ಬಾಟ್ಲಿಂಗ್ ಕಾಂಟ್ರಾಕ್ಟ್‌ನ್ನು ನಾವು ರದ್ದು ಮಾಡಿದ್ದೇವೆ. ತಾವು ಪ್ರಾರಂಭ ಮಾಡಿದ್ದೀರಿ. ಆದ್ದರಿಂದ ನಮ್ಮ ಸಂಕಲ್ಪ ಶಿಥಿಲ, ನಿಮ್ಮದು ಸ್ಟ್ರಾಂಗ್. ಏಕೆಂದರೆ ಅರೇಕ್‌ನಿಂದ ನಿಮ್ಮದು ಸ್ಟ್ರಾಂಗ್ ಆಗುತ್ತದೆ. ನಮ್ಮದು ಶಿಥಿಲವಾಗುತ್ತದೆ. 89-90 ರಲ್ಲಿ 570 ಲಕ್ಷ ಲೀಟರ್ ಕನ್‌ಸನ್ ಇದ್ದರೆ 90-91 740 ಲಕ್ಷ ಲೀಟರ್ಸ್ ಆಗಿದೆ. ಈ ಸಂದರ್ಭದಲ್ಲಿ ಮಾನ್ಯ ಯಡಿಯೂರಪ್ಪನವರು ಇದ್ದರೆ ಒಳ್ಳೆಯದು ಇತ್ತು. 91-92ರಲ್ಲಿ 674 ಲಕ್ಷ ಲೀಟರ್ 93-94 ರಲ್ಲಿ 797 ಲಕ್ಷ ಲೀಟರ್ ಕನ್‌ಸ ಷನ್ ಆಗಿದೆ. ನಾವು ಎಷ್ಟರಮಟ್ಟಿಗೆ ಎವೇಷನ್ ತೆಗಿಸಿದ್ದೇವೆಂಬುದನ್ನು ಎಲ್ಲರೂ ಕೂಡ ತಿಳಿದುಕೊಳ್ಳಬೇಕಾಗುತ್ತದೆ. ಆದ್ದರಿಂದ 92-93 ರಲ್ಲಿ 376 ಕೋಟಿ ರೂಪಾಯಿ ಅರೇಕ್‌ನಿಂದ ಇದ್ದರೆ 93-94ಕ್ಕೆ 474 ಕೋಟಿ ಅಂದರೆ 26 ಪರ್ಸೆಂಟ್ ಹೆಚ್ಚು ಐಎಂಎಲ್‌ನಲ್ಲಿ ಉತ್ಪತ್ತಿ ಮಾಡಲಾಗಿದೆ. ನೀವು ಇರುವಾಗ 2025 ಕೋಟಿ ಐಎಂಎಲ್ ಲಿಕ್ಕರ್‌ನಿಂದ ಬರುತ್ತಿರಲಿಲ್ಲ. ಬಹಳ ಶಕ್ತಿ ಇತ್ತಲ್ಲಾ. ಈ ಶಕ್ತಿ ಯಾರಿಗೇ? ಶಕ್ತಿ ಬೇರೆಯವರಿಗೆ; ಐಎಂಎಲ್ ನಮಗೆ. ಇವರಿಗೆ ಶಕ್ತಿ ಅಲ್ಲ. ಇವರ ಶಕ್ತಿ ಡೌನ್ ಆಗಿದೆ. ಅವರ ಶಕ್ತಿ ಹೆಚ್ಚಾಗಿತ್ತು. ಅದಕ್ಕೆ ನೀವು ವಸೂಲು ಮಾಡುವುದಕ್ಕೆ ಆಗುತ್ತಿರಲಿಲ್ಲ. ಇದರಲ್ಲಿ ಪ್ರತಿಯೊಂದುಕ್ಕೂ ರಿಯಾಕ್ಷನ್ ಮಾಡುವುದಕ್ಕೆ ಹೋದರೆ it may not reflect well on him. 89-90ಗೆ 86 ಕೋಟಿ ಐಎಂಎಲ್‌ನಲ್ಲಿ ಇದ್ದರೆ 90-91ಕ್ಕೆ 54 ಕೋಟಿ, 91-92ಕ್ಕೆ 42ಕೋಟಿ, 92-93ಕ್ಕೆ 55 ಕೋಟಿ, 93-94ಕ್ಕೆ 78 ಕೋಟಿ. ಐಎಂಎಲ್‌ನಲ್ಲಿ ಹೆಚ್ಚು ಉತ್ಪನ್ನ ತೆಗೆದವರ ಹೃದಯ ಶಿಥಿಲವಾಗಿದೆ. ನೀವು 2025 ಕೋಟಿ ವಸೂಲಿ ಮಾಡಿದ ನಿಮ್ಮ ಹೃದಯ ಬಹಳ ಸ್ಟ್ರಾಂಗ್ ಆಗಿದೆ. ಆದರೆ ನಿಮಗೆ ಯಡಿಯೂರಪ್ಪನವರಿಂದ ಸರ್ಟಿಫಿಕೇಟ್ ಇಲ್ಲ. ಆದರೆ ಉಳಿದವರಿಗೆ

ಯಡಿಯೂರಪ್ಪನವರು ದಾರಾಳವಾಗಿ ಸರ್ಟಿಫಿಕೇಟ್ ಕೊಡುತ್ತಾರೆ. That is why I am telling you that your leader at be more sevirces about it & he has to verify the facts. ಇವತ್ತು ಸರ್ಟಿಫಿಕೇಟ್ ಇಲ್ಲದಿದ್ದರೆ ಸರ್ಟಿಫಿಕೇಟ್ ಯಾರಿಗೂ ಕೊಡುವುದಕ್ಕೆ ಹೋಗಬಾರದು.

ಶ್ರೀ ಬಿ.ಬಿ.ಶಿವಪ್ಪ:- ತಪ್ಪು ಕಲ್ಪನೆ ಮಾಡಿಕೊಂಡಿರಿ ಎಂದು ಕಾಣುತ್ತದೆ. ತಾವು ಅಧಿಕಾರ ಮಾಡಿದ್ದು ಇತ್ತೀಚೆಗೆ. ಅದು ಇನ್ನು ಜನರ ಮಾನಸ್ಸಿನಿಂದ ಮಾಸಿಹೋಗಿಲ್ಲ. ಹಿಂದೆ ಮಾಡಿದ್ದುದು ಮಾಸಿಹೋಗಿದೆ ಎಂದು ನಾಯಕಾರು ಹೇಳಿದರು. ತಾವು ಮಾಡಿದ್ದುದು ಇನ್ನೂ ಮಾಸಿ ಹೋಗಿಲ್ಲ. ಮುಂದೆ ಮಾಸಿ ಹೋಗುತ್ತದೆ. ಆದ್ದರಿಂದ ಅಷ್ಟು ಬೇಸರದಿಂದ ಮಾತನಾಡಬಾರದೆಂದು ತಮ್ಮ ಮೂಲಕ ವಿನಂತಿಸುತ್ತೇನೆ.

ಒಬ್ಬ ಮಾನ್ಯ ಸದಸ್ಯರು:- ಮಾಜಿ ಮುಖ್ಯಮಂತ್ರಿಗಳ ಪಕ್ಷಕ್ಕೆ ಚೆನ್ನಾಗಿ ತೀರ್ಪು ಕೊಟ್ಟರು.

ಶ್ರೀ ಎಂ.ವೀರಪ್ಪಮೊಯಿಲಿ:- ಆ ತೀರ್ಪಿನ ಹಣೆ ಪಟ್ಟಿ ಇಟ್ಟುಕೊಂಡು ಹೋಗಿ ಐದು ವರ್ಷ ತಾವು ಒಳ್ಳೆಯ ರಾಜಕೀಯ ಸಂಕಲ್ಪ ಇದ್ದವರು, ತಾವು ಎಷ್ಟು ಡಿಸ್ಟಿಲರಿ, ವೈನರೀಸ್ ತಮ್ಮ ಕಾಲದಲ್ಲಿ ಕೊಟ್ಟಿದ್ದೀರಿ ಎಂಬ ಪಟ್ಟಿಬೇಕೇ ನಿಮಗೆ? ಬೀದಿ ಬೀದಿಗೆ ವೈನ್ ಷಾಪ್ ಕೊಟ್ಟರು. ನಾನು ಒಂದು ವೈನ್ ಷಾಪ್‌ನ್ನೂ ಸ್ಯಾಂಕ್ಷನ್ ಮಾಡಲಿಲ್ಲ. 1985-86ರಿಂದ 1988-89ರವರೆಗೆ ಅನೇಕ ಡಿಸ್ಟಿಲರಿ ಮತ್ತು ವೈನರಿಗಳನ್ನು ಕೊಟ್ಟಿದ್ದರು. ಆದರೆ ನನ್ನ ಕಾಲದಲ್ಲಿ ಒಂದು ಕೂಡ ಡಿಸ್ಟಿಲರಿ ಅಥವಾ ವೈನರಿಗಳನ್ನು ಕೊಡಲಿಲ್ಲ. ಆದ್ದರಿಂದ ರಾಜಕೀಯ ಸಂಕಲ್ಪ ಏನು ಎಂದು ಗೊತ್ತಾಯಿತು. ಯಾವ ಲಾಬಿ ಹಿಡಿದುಕೊಂಡಗೆ ರಾಜಕೀಯ ಸಂಕಲ್ಪ ಬರುತ್ತದೆ ಎಂದು ಎಲೆಕ್ಷನ್‌ನಲ್ಲಿ ರುಚಿ ಹಿಡಿದಿರಬೇಕು. ಆದ್ದರಿಂದ ಐ.ಎಂ.ಎಲ್. ರಫ್ತು ರೆಡ್ಯೂಸ್ ಆಯಿತು. ಯಾರಿಗೆ ರಾಜಕೀಯ ಸಂಕಲ್ಪ ಇದೆ ಯಾರಿಗೆ ರಾಜಕೀಯ ಸಂಕಲ್ಪ ಇಲ್ಲ ಎಂಬುದು ಇದರಿಂದ ಗೊತ್ತಾಗುತ್ತದೆ. ಕ್ಯಾಪಿಟೇಷನ್ ಫೀಸ್ ವಿಷಯದಲ್ಲೂ ಕೂಡ ನೀವು ಮಾಡಿದಂಥ ಪದ್ಧತಿಯನ್ನು ತಪ್ಪಿಸಿ ಕರ್ನಾಟಕ ರಾಜ್ಯದ ಜನರಿಗೆ ಅನುಕೂಲ ಮಾಡಿದ್ದೇವೆ. ಮೊದಲು ಕರ್ನಾಟಕ ರಾಜ್ಯದವರಿಗೆ 30 ಪರ್ಸೆಂಟ್ ಪ್ರೊಫೆಷನಲ್ ಕಾಲೇಜಿನಲ್ಲಿ ಸೀಟು ಬರುತ್ತಿತ್ತು. ಆದರೆ ನನ್ನ ಕಾಲದಲ್ಲಿ 7580 ಪರ್ಸೆಂಟ್ ಕನ್ನಡಿಗರಿಗೆ ಕರ್ನಾಟಕದರಿಗೆ ಸೀಟು ಸಿಕ್ಕಿತು. ನಾವು ಶಿಥಿಲ, ನೀವು ಭದ್ರ! ಕೆಲವು ಲಾಬಿಗಳು ನಿಮಗೆ ಸಹಾಯ ಮಾಡಿವೆ ಎಂದು ತಲೆಯಲ್ಲಿ ಇದೆ. ಆದ್ದರಿಂದ ನೀವು ಗೆದ್ದಿದ್ದೀರಿ. But you will have to return to that lobby. I don't find fault with you.

MR.SPEAKER:- So, their victory is the victory of the lobbies.

SRI.M.VEERAPPAMOILY:- Yes, it is the victory of the lobbies. ಇವರು ತಿಳಿದುಕೊಂಡಿದ್ದಾರೆ ನಾವು ಗೆದ್ದಿದ್ದೇವೆ ಎಂದು. ದಕ್ಷಿಣ ಕನ್ನಡ

ಜಿಲ್ಲೆಯಲ್ಲಿ ಯಾವ ಕಾಲದಲ್ಲೂ ಕೂಡ ಹಣ, ಹೆಂಡ, ಅರಾಕ್ ಇರಲಿಲ್ಲ. ಆದರೆ ಕಳೆದ ಚುನಾವಣೆಯಲ್ಲಿ ಅದು ಬಂತು. ಜಿಲ್ಲಾ ಪರಿಷತ್ ಚುನಾವಣೆಯಲ್ಲಿ ಬಂತು. ನಮ್ಮ ಜಿಲ್ಲೆ ಪ್ರವೇಶ ಆಗಿರಲಿಲ್ಲ. ಆದರೆ ನಿಮ್ಮ ದಯೆಯಿಂದ ಅದು ಪ್ರವೇಶ ಆಯಿತು.

ಶ್ರೀ ಸಿದ್ಧರಾಮಯ್ಯ:- 1983ರಿಂದ ಈಚೆಗೆ ಹೆಂಡ ಸಾರಾಯಿ ಬಂದಿದ್ದು. ಈ ದೇಶದಲ್ಲಿ ಇದು ಯಾರಿಂದ ಹುಟ್ಟಿತು, ಯಾರು ಹಂಚುತ್ತಿದ್ದರು ಎಂಬುದು ಇಡೀ ದೇಶಕ್ಕೆ ಗೊತ್ತಿದೆ. ನಮಗೆ ಲಾಬಿಗಳು ಅದೆಲ್ಲಾ ಗೊತ್ತಿಲ್ಲ.

ಶ್ರೀ ಎಸ್.ಸುರೇಶ್ ಕುಮಾರ್:- ಪ್ರತಿ ಹಳ್ಳಿಗೆ ಎರಡು ಬೋರು ಒಂದು ಬಾರು ಜನತಾ ಸರ್ಕಾರ ಕೊಟ್ಟಿದ್ದುದು.

ಶ್ರೀ ಎಂ.ನಾರಾಯಣಸ್ವಾಮಿ:- ತಮ್ಮದು ಬರೀ ರಾಮ ನಾಮ. ನಮ್ಮದು ಬೋರು.

ಶ್ರೀ ಎಸ್.ಸುರೇಶ್ ಕುಮಾರ್:- ಬಾರ್‌ನಿಂದ ಹಾನಿ ಇದೆ. ರಾಮನಾಮದಿಂದ ಹಾನಿ ಇಲ್ಲ.

ಶ್ರೀ ಎಂ.ವೀರಪ್ಪ ಮೊಯಿಲಿ:- ಇದು ಬರೀ ರಾಜಕೀಯ ಆಯವ್ಯಯ ಆಗಿದೆ. ಚುನಾವಣೆಯಲ್ಲಿ ಹೊಸದಾಗಿ ಬಂದು ಚುನಾವಣೆಯ ಮಬ್ಬಿನಲ್ಲಿ, ವಿಜಯದ ಮಬ್ಬಿನಲ್ಲಿ ಅಂಥದ್ದು. ಕರ್ನಾಟಕ ರಾಜ್ಯದ ಅಭಿವೃದ್ಧಿಗೆ ಒಂದು ಯೋಗ್ಯವಾದ ಮತ್ತು ಜನರ ಹಿತದೃಷ್ಟಿಯನ್ನು ಇಟ್ಟುಕೊಂಡು ಈ ಆಯವ್ಯಯವನ್ನು ಮಾಡಿದಂಥದ್ದಲ್ಲ. ಬಹಳ ಪ್ರಾದೇಶಿಕ ಅಸಮತೋಲನ ಮುಂದುವರೆಸಿಕೊಂಡು ಹೋಗತಕ್ಕ ಪ್ರವೃತ್ತಿ ಜಾಸ್ತಿ ಕಾಣಿಸುತ್ತಿದೆ. ವಿಪರೀತ ಭಾರ ಇದೆ. ಏನು ಯೋಜನೆಗಳನ್ನು ಕೊಟ್ಟಿದ್ದೀರಿ ಅದನ್ನು ಬೆಂಬಲಿಸತಕ್ಕ ಸೂಕ್ತವಾದ ಸಂಪನ್ಮೂಲದ ಕೊರತೆ ಇದೆ. ಸಂಕಲ್ಪದ ಕೊರತೆ ಇದೆ. ನಾನು ವೈಟ್‌ಪೇಪರ್ ಅನಲೈಸ್ ಮಾಡುವುದಕ್ಕೆ ಹೋಗುವುದಿಲ್ಲ. It is only an Yellow paper. It is fit to be thrown to the dust bin. ಎಂದು ಹೇಳಿ ನನಗೆ ಅವಕಾಶ ಕೊಟ್ಟಿದ್ದಕ್ಕಾಗಿ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಕೆ.ಎಸ್.ಈಶ್ವರಪ್ಪ:- ಮಾನ್ಯ ಅಧ್ಯಕ್ಷರೆ, ಖಾಸಗಿ ಬಸ್ ಮಾಲೀಕರ ಮುಷ್ಕರದಿಂದ ಜನಸಾಮಾನ್ಯರು ಒದ್ದಾಡುತ್ತಿದ್ದಾರೆ. ಮಕ್ಕಳು ಶಾಲಾಕಾಲೇಜಿಗೆ ಹೋಗುವುದಕ್ಕಾಗುತ್ತಿಲ್ಲ. ಬಸ್ ಮಾಲೀಕರನ್ನು ಕರೆಯಿಸಿ ಸರ್ಕಾರ ಮಾತನಾಡುತ್ತಿಲ್ಲ. ಸರ್ಕಾರ ಇದೆಯೋ ಇಲ್ಲವೋ ಎಂಬ ಅನುಮಾನ ರಾಜ್ಯದ ಜನತೆಗೆ ಬಂದಿದೆ. ರಾಜ್ಯ ಸರ್ಕಾರ ನನಗೇನೂ ಸಂಬಂಧವಿಲ್ಲ ಎನ್ನುವಂತೆ ಇದೆ. ಜನ ಬಿದ್ದು ಒದ್ದಾಡುತ್ತಿದ್ದರೂ ಕೂಡ ನಮಗೇನೂ ಸಂಬಂಧವಿಲ್ಲ ಎನ್ನುವಂತಿದ್ದಾರೆ. ಬಸ್ ಮಾಲೀಕರು ನಮ್ಮ ಹತ್ತಿರ ಬಂದು ಮಾತನಾಡುತ್ತಿಲ್ಲ ಎಂಬ ಒಣಪ್ರತಿಷ್ಠೆಯನ್ನು ಇಟ್ಟುಕೊಂಡು ಸರ್ಕಾರದವರು ಕುಳಿತಿದ್ದಾರೆ. ಇಂಥ ಸಂದರ್ಭದಲ್ಲಿ ಸರ್ಕಾರದ ನಿಲುವು ಏನು ಎಂಬುದನ್ನು ರಾಜ್ಯದ ಜನತೆಗೆ ಹೇಳಬೇಕು ಎಂದು ನಾನು ಅಪೇಕ್ಷಪಡುತ್ತೇನೆ. ಜನ ಹೀಗೇ ಸಾಯುತ್ತಾ ಇರಲಿ ಎಂಬುದು ನಿಮ್ಮ ಉದ್ದೇಶವೆ?

ಶ್ರೀ ವಾಟಾಳ್ ನಾಗರಾಜ್:- ಅಧ್ಯಕ್ಷರೆ, ಶಾಸನಸಭೆ ನಡೆಯುತ್ತಾ ಇರುವಾಗ ಈ ಪ್ರಕರಣ ನಡೆದಿದೆ. ಇವತ್ತು ಖಾಸಗಿ ಬಸ್ಸುಗಳನ್ನೆಲ್ಲಾ ಸಂಪೂರ್ಣವಾಗಿ ರದ್ದು ಮಾಡಿದ್ದಾರೆ. ಶಾಸನಸಭೆ ನಡೆಯದಿದ್ದರೆ ಅದು ಬೇರೆ. ಶಾಸನಸಭೆ ನಡೆಯುವಾಗ ಸರ್ಕಾರದ ಗಮನಕ್ಕೆ ತರಬೇಕಾದುದು ನಮ್ಮ ಕರ್ತವ್ಯ. ನಾವು ಸರ್ಕಾರದ ಗಮನಕ್ಕೆ ತರದೇ ಸುಮ್ಮನೆ ಕುಳಿತುಕೊಳ್ಳುವುದು ಸರಿಯಾದುದಲ್ಲ. ಸರ್ಕಾರದವರು 1000 ಬಸ್ಸುಗಳನ್ನು ನೇಮಕ ಮಾಡಿದ್ದೇವೆ ಎಂದು ಹೇಳಿದ್ದಾರೆ. ಸಾರಿಗೆ ಸಂಸ್ಥೆಯಲ್ಲಿ ಬಸ್ಸುಗಳೇ ಇಲ್ಲ. 1000 ಬಸ್ಸುಗಳನ್ನು ಎಲ್ಲಿಂದ ತಂದಿದ್ದೀರಿ? ಎಲ್ಲಿ ನೇಮಕ ಮಾಡಿದ್ದೀರಿ?

ಶ್ರೀ ಕೆ.ಎಸ್.ಈಶ್ವರಪ್ಪ:- ಜನ ಕಾಯಬೇಕೆ?

ಅಧ್ಯಕ್ಷರು:- ಈಗ ಸನ್ಮಾನ ಬಂಗಾರಪ್ಪನವರು ಮಾತನಾಡುವುದು ಬೇಡವೇ?

ಶ್ರೀ ಕೆ.ಎಸ್.ಈಶ್ವರಪ್ಪ:- ಮಾತನಾಡಲಿ.
ಅಧ್ಯಕ್ಷರು:- ಹೀಗಾದರೆ ಹೇಗಾಗುತ್ತದೆ ಹೇಳಿ.

ಶ್ರೀ ಕೆ.ಎಸ್.ಈಶ್ವರಪ್ಪ:- ಸರ್ಕಾರದ ನಿಲುವು ಹೇಳಿ.

(ಹಲವಾರು ಸದಸ್ಯರು ಒಟ್ಟಿಗೆ ಎದ್ದುನಿಂತು ಮಾತನಾಡುತ್ತಿದ್ದರು. ಗೊಂದಲದ ವಾತಾರಣ ಇತ್ತು.)

ಶ್ರೀ ಸಿದ್ಧರಾಮಯ್ಯ:- ಮಾನ್ಯ ಅಧ್ಯಕ್ಷರೆ, ಸನ್ಮಾನ್ಯ ವೀರಪ್ಪ ಮೊಯಿಲಿಯವರು ಮಾತನಾಡುವಾಗ ಈ ವಿಚಾರವನ್ನು ಪ್ರಸ್ತಾಪ ಮಾಡಿದರು. ನಾನು ಸದನಕ್ಕೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದೇನೆ. ಮಾಹಿತಿಗಳನ್ನು ತರಿಸುತ್ತಿದ್ದೇನೆ. ನಿನ್ನೆಯೂ ಕೂಡ ಈ ಬಗ್ಗೆ ಒಂದು ಹೇಳಿಕೆ ಕೊಟ್ಟಿದ್ದೆ. ಏಕಾಏಕಿ ಬಸ್ ಮಾಲೀಕರು ಮುಷ್ಕರದ ಹಾದಿಯನ್ನು ಹಿಡಿದಿದ್ದಾರೆ. ಖಾಸಗೀ ಬಸ್‌ನವರಿಗೆ ಒಂದು ಸೀಟಿಗೆ 50 ರೂಪಾಯಿಗಳನ್ನು ಹೆಚ್ಚು ಮಾಡತಕ್ಕ ಪ್ರಸ್ತಾಪವನ್ನು ಈ ಬಜೆಟ್‌ನಲ್ಲಿ ನಾವು ಮಾಡಿದ್ದೇವೆ. 1991ರಿಂದ ಇವತ್ತಿನವರೆಗೆ ಇದನ್ನು ಹೆಚ್ಚು ಮಾಡಿರಲಿಲ್ಲ. ಕಾಂಗ್ರೆಸ್ ಸರ್ಕಾರ ಇದ್ದಾಗಲೇ ಒಂದು ಸೀಟಿಗೆ 350ರಿಂದ 400 ರೂಪಾಯಿಗಳವರೆಗೆ ಹೆಚ್ಚು ಮಾಡಿದ್ದರು. ನಾಲ್ಕು ವರ್ಷಗಳಿಂದ ಹೆಚ್ಚುಮಾಡಿರಲಿಲ್ಲ. ಈಗ 50 ರೂಪಾಯಿ ಹೆಚ್ಚು ಮಾಡತಕ್ಕ ಪ್ರಸ್ತಾಪವನ್ನು ಇಲ್ಲಿ ಮಾಡಿದ ಮೇಲೆ ಬಸ್ ಮಾಲೀಕರು ಚಳುವಳಿ ಮಾಡುತ್ತೇವೆ ಎಂದಾಗಲೀ ಮೆಮೊರ್‍ಯಾಂಡಂ ಕೊಡತಕ್ಕದ್ದಾಗಲೀ ಮಾಡಲಿಲ್ಲ. ಇದರಲ್ಲಿ ಪ್ರತಿಷ್ಠೆ ಎಂಬ ಮಾತಿಲ್ಲ. ಆದರ ಅರ್ಥ ಯಾವ ವಿಚಾರವನ್ನು ಹೇಳದೆ ತಿಳಿವಳಿಕೆ ಕೊಡದೆ ಏಕಾಏಕಿ ಚಳುವಳಿ ಮಾಡುತ್ತಿದ್ದಾರೆ. ನಿನ್ನೆಯೂ ಕೂಡ ಹೇಳಿದೆ ಅವರು ಬಂದು ಮಾತನಾಡಬಹುದು ಎಂದು. ಮೂರು ವಿಚಾರಗಳನ್ನು ಅವರು ಹೇಳುತ್ತಾರೆ. ತೆರಿಗೆ ಜಾಸ್ತಿಯಾಯಿತು ಎಂಬುದು ಒಂದು. ಪಕ್ಕದ ರಾಜ್ಯಗಳಾದ ಆಂಧ್ರ, ಕೇರಳ, ತಮಿಳುನಾಡುಗಳಲ್ಲಿ ನಾವು ಏನು ಏರಿಸಿದ್ದೇವೆ 400ರಿಂದ 450 ರೂಪಾಯಿ ಅಷ್ಟೇ ಇದೆ. ಬಿಡಿ ಭಾಗಗಳ ಮಾರಾಟ ತೆರಿಗೆ ಬಗ್ಗೆ ಹೇಳಿದ್ದಾರೆ. ಅದನ್ನು ಹೆಚ್ಚು ಮಾಡಿಲ್ಲ. ಇಲ್ಲಿಯವರೆಗೆ ಇದ್ದ ಪದ್ಧತಿ ಎಂದರೆ ಮೊದಲನೇ ಹಂತದಲ್ಲಿ ತೆರಿಗೆ

10 ಪರ್ಸೆಂಟ್, ಕೊನೇ ಹಂತದಲ್ಲಿ ತೆರಿಗೆ 3 ಪರ್ಸೆಂಟ್. ನಾವು ಈಗ ಬೀರ್ ಮತ್ತು ಲಿಕ್ಕರ್ ಮೇಲಿನ ಎರಡು ಬಿಟ್ಟು ಬಾಕಿ ಎಲ್ಲಾದಕ್ಕೂ ಕೊನೆಯ ಹಂತದ ತೆರಿಗೆಯನ್ನು ತೆಗೆದುಹಾಕಿದ್ದೇವೆ.

SRI.S.BANGARAPPA:- I would like to know whether the HOn'ble MInister is making a statement here? The Hon'ble Opposition Party Members have now raised the matter.....

ಮಧ್ಯದಲ್ಲಿ ಏತಕ್ಕೆ ಹೇಳುತ್ತಿದ್ದೀರಿ?

ಶ್ರೀ ಸಿದ್ಧರಾಮಯ್ಯ:- ವಿವರಗಳನ್ನು ತರಿಸಿಕೊಂಡು ಸ್ಟೇಟ್‌ಮೆಂಟ್ ಕೊಡುತ್ತೇನೆ. ಪದೇಪದೇ ಮಾತನಾಡುತ್ತಾ ಇರುವುದರಿಂದ ಹೇಳುತ್ತಿದ್ದೇನೆ.

SRI. S.BANGARAPPA:- You can not make a statement in instalments. Make a full-fledged statement afterwards.

ಶ್ರೀ ಸಿದ್ಧರಾಮಯ್ಯ:- 3 ಗಂಟೆಗೆ ಪೂರ್ಣ ಮಾಹಿತಿಯೊಡನೆ ಹೇಳಿಕೆ ಕೊಡುತ್ತೇನೆ.

ಶ್ರೀ ಎಚ್.ಎನ್.ನಂಜೇಗೌಡ:- ಬಂಗಾರಪ್ಪನವರ ಗಮನಕ್ಕೆ ತರುತ್ತಿದ್ದೇನೆ, ಬಸ್ ಸೀಟಿಗೆ ರೇಟ್ ಏರಿಸಿದ್ದಾರಲ್ಲಾ ಅದರ ಬಗ್ಗೆ ಕೇಳಿದಾಗ ಬೀರ್ ವಿಸ್ಕಿ ಬಗ್ಗೆ ಹೇಳಿದರು. ಅದನ್ನೇ ಹಾಕಿ ಓಡಿಸಿ ಎಂದು ಹೇಳುತ್ತಾರೇನೋ ಎಂದು ಅನುಮಾನ ಬಂತು.

ಶ್ರೀ ಸಿದ್ಧರಾಮಯ್ಯ:- ಮಾನ್ಯ ನಂಜೇಗೌಡರೇ, ನಾನು ಏಕೆ ಹೇಳುತ್ತಿದ್ದೆ ಅಂದರೆ, ಈ 2 ಪದಾರ್ಥಗಳನ್ನು ಬಿಟ್ಟು ಉಳಿದ ಎಲ್ಲಾ ಸರಕುಗಳ ಮೇಲೆ ಕೊನೆಯ ಹಂತದ ತೆರಿಗೆಯನ್ನು ತೆಗೆಯತಕ್ಕಂತಹ ಪ್ರಸ್ತಾವನೆಯನ್ನು ಇಲ್ಲಿ ಮಾಡಿದ್ದೇವೆ. ಅದನ್ನು ಹೇಳಿಕೊಳ್ಳುವುದಕ್ಕೋಸ್ಕರ, ಬಿಡಿ ಭಾಗಗಳು ಏನು ಇವೆ ಅವುಗಳಿಗೆ ಕೊನೆ ಹಂತದಲ್ಲಿ 3 ಪರ್ಸೆಂಟ್ ತೆರಿಗೆಯನ್ನು ಮೊದಲನೆ ಹಂತಕ್ಕೆ ಸೇರಿಸಿದ್ದೇವೆ. 13 ಪರ್ಸೆಂಟ್ ಇದ್ದುದನ್ನು ನಾವು 12 ಪರ್ಸೆಂಟ್‌ಗೆ ಇಳಿಸಿದ್ದೇವೆ. ವಿಸ್ಕಿನೂ ಅಲ್ಲ. ಬೀರೂ ಅಲ್ಲ.

ಶ್ರೀ ಎಸ್.ಬಂಗಾರಪ್ಪ:- ಅಷ್ಟು ಮಾಡಿ. ಇಷ್ಟು ಇಷ್ಟು ಪೀಸ್‌ಮಿಲ್ಲಾಗಿ ಹೇಳುವುದಕ್ಕೆ ಹೋಗಬೇಡಿ. ಪೂರ್ಣವಾಗಿರತಕ್ಕ ಹೇಳಿಕೆಯನ್ನು ಯಾವಾಗ ಕೊಡುತ್ತೀರಿ?

ಶ್ರೀ ಸಿದ್ಧರಾಮಯ್ಯ:- ಇವತ್ತು ಮಧ್ಯಾಹ್ನ 3.00 ಘಂಟೆಗೆ ಎಲ್ಲಾ ಮಾಹಿತಿಗಳನ್ನು ಒಳಗೊಂಡ ಲಿಖಿತ ಹೇಳಿಕೆಯನ್ನು ನಾನು ಕೊಡುತ್ತೇನೆ.

ಶ್ರೀ ಎಸ್.ಬಂಗಾರಪ್ಪ (ಸೊರಬ):- ನೀವು ಅಷ್ಟು ಮಾಡಿ. ಸುಮ್ಮನೆ ಹಾಫ್ ಮೈಂಡ್‌ಡ್ ಸ್ಟೇಟ್‌ಮೆಂಟ್ ಮಾಡುವುದಕ್ಕೆ ಹೋಗಬೇಡಿ. ಏಕೆಂದರೆ ಪಾಯಿಂಟ್‌ಗೆ ಸರಿಯಾದ ಉತ್ತರ ಮಾನ್ಯ ಸದಸ್ಯರುಗಳಿಗೆ ಸಿಕ್ಕುವುದಿಲ್ಲ. ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಹಣಕಾಸಿನ ಸಚಿವರು 1995-96ನೇ ಸಾಲಿನ ಈ ಒಂದು ಬಜೆಟನ್ನು ಏನು ಇಟ್ಟಿದ್ದಾರೆ, ಇದನ್ನು ವಿರೋಧ ಮಾಡಿ ಮಾತನಾಡುವುದಕ್ಕೆ ನಿಂತಿದ್ದೇನೆ. ಕಾರಣಗಳು ಸಹಜವಾಗಿ ರಾಜ್ಯದ ಅಭಿವೃದ್ಧಿಯನ್ನು ಗಮನದಲ್ಲಿಟ್ಟು ಓವರ್ ಆಲ್ ಡೆವಲಪ್‌ಮೆಂಟ್ ದೃಷ್ಟಿಯಲ್ಲಿ, ಇರಿಗೇಷನ್ ಪವರ್ ಯೋಜನಾ ಮತ್ತು ಯೋಜನೇತರ ಬಾಬುಗಳಲ್ಲೂ ಕೂಡ ಅದನ್ನು ಗಮನದಲ್ಲಿಟ್ಟು, ಗ್ರಾಮೀಣ ಅಭಿವೃದ್ಧಿಯನ್ನು ಗಮನಲ್ಲಿಟ್ಟು ಪರ್ ಕ್ಯಾಪಿಟ ಇನ್‌ಕಮ್ ಅದು ಜಾಸ್ತಿಯಾಗುವುದಕ್ಕೆ ಯಾವ ರೀತಿಯಾಗಿರತಕ್ಕ ಸಂಪನ್ಮೂಲಗಳ ಸಂಗ್ರಹಣೆಯ ಶಕ್ತಿಯ ಹಿನ್ನಲೆಯಲ್ಲಿ ಒಂದು ಬಜೆಟ್ ಪತ್ರವನ್ನು ಯಾವ ರೀತಿ ಮಂಡನೆ ಮಾಡಬೇಕಾಗಿತ್ತು, ಇವರು ಮಂಡನೆ ಮಾಡುವುದಕ್ಕೆ ಇವರಿಂದ ಆಗಲಿಲ್ಲ ಎನ್ನುವ ಅಭಿಪ್ರಾಯದ ಆಧಾರದ ಮೇಲೆ ಈ ಬಜೆಟ್ಟನ್ನು ವಿರೋಧ ಮಾಡಿ ಮಾತನಾಡುತ್ತಿದ್ದೇನೆ. ನಾನು ಈ ವಿಚಾರವನ್ನು ಪ್ರಸ್ತಾಪ ಮಾಡಬೇಕಾದರೆ ಸಹಜವಾಗಿ ನಮ್ಮ ನಿಮ್ಮೆಲ್ಲರ ಮನಸ್ಸಿನಲ್ಲಿರುವ ಹಾಗೆ ಮಾತನಾಡಬೇಕಾಗಿದೆ. ನಾವು ಪಂಚವಾರ್ಷಿಕ ಯೋಜನೆಗಳನ್ನು ಗಮನಲ್ಲಿಟ್ಟುಕೊಂಡೇ 8ನೇ ಪಂಚವಾರ್ಷಿಕ ಯೋಜನೆ ಮುಗಿಯುವುದಕ್ಕೆ ಇನ್ನೇನು ಒಂದು ವರ್ಷ ಹೆಚ್ಚು ಕಡಿಮೆ ಉಳಿದುಕೊಂಡಿದೆ. ನಾವು ಹಿಂದೆ ಪಂಚವಾರ್ಷಿಕ ಯೋಜನೆಯಲ್ಲಿ ಎಷ್ಟು ಗುರಿಯನ್ನು ಇಟ್ಟಿದ್ದೇವೆ. ಸಾಧನೆ ಎಷ್ಟು ಮಾಡಿದ್ದೇವೆ. 8ನೇ ಪಂಚವಾರ್ಷಿಕ ಯೋಜನೆ ಪ್ರಸ್ತುತ ಯೋಜನೆಯಲ್ಲಿ ಎಷ್ಟು ಗುರಿಯನ್ನು ಇಟ್ಟಿದ್ದೇವೆ ಎಂಬುದನ್ನು ನೋಡಬೇಕು. ಮತ್ತು ನನ್ನ ಕಾಲದಲ್ಲಿ ಬಿಗಿನಿಂಗ್ ಆಗಿ ನಾವು ಮಾಡಿದ್ದೆವು. 12300 ಕೋಟಿ ರೂಪಾಯಿಗಳನ್ನು 8ನೇ ಪಂಚವಾರ್ಷಿಕ ಯೋಜನೆ ಗುರಿಯಾಗಿ ಇಟ್ಟಿದ್ದೇವೆ. ನಾವು ಇದನ್ನು ಗುರಿಯನ್ನಾಗಿ ಇಟ್ಟು ಅದಕ್ಕೆ ಪೂರಕವಾಗಿ ನಾವು ಪ್ರತಿವರ್ಷದ ಯೋಜನಾ ಗಾತ್ರವನ್ನು ನಿಷ್ಕರ್ಷೆ ಮಾಡುವಾಗ, ಅದಕ್ಕೆ ಬೇಕಾಗಿರತಕ್ಕಂತಹ ಸಂಪನ್ಮೂಲಗಳ ಸಂಗ್ರಹಣೆಯ ವಿಚಾರದಲ್ಲಿ ನಾವು ಹೆಚ್ಚಾಗಿ ಗಮನ ಹರಿಸುತ್ತಾ ಹೋಗಬೇಕು. ಸರ್ಕಾರ ಯಾವುದೇ ಇರಬಹುದು. ಪಕ್ಷಗಳು ಸಹಜವಾಗಿ ಪ್ರಜಾಪ್ರಭುತ್ವದಲ್ಲಿರತಕ್ಕ ಪಕ್ಷಗಳು ಜನರ ತೀರ್ಪಿಗನುಗುಣವಾಗಿ, ಸರ್ಕಾರಗಳು ಇದ್ದಂತಹವು ಕೆಳಗಡೆ ಇಳಿಯತಕ್ಕಂಥದ್ದು, ಮತ್ತೊಂದು ವಿರೋಧ ಪಕ್ಷ ಮೇಲಕ್ಕೆ ಅಧಿಕಾರಕ್ಕೆ ಏರತಕ್ಕಂತಹದ್ದು, ಇದು ಸಹಜವಾಗಿರತಕ್ಕದ್ದು. ಪ್ರಜಾಪ್ರಭುತ್ವದ ಮೂಲ ಭೂತ ಲಕ್ಷಣಕ್ಕೆ ಅನುಗುಣವಾಗಿ ಇರತಕ್ಕ ಒಂದು ಪದ್ಧತಿ. ನಾವು ಅದನ್ನು ಮಾನ್ಯತೆ ಮಾಡುತ್ತೇವೆ, ಗೌರವಿಸುತ್ತೇವೆ. ಜನರು ತೀರ್ಪನ್ನು ಕೊಡಬೇಕಾದ ಸಂದರ್ಭದಲ್ಲಿ ಕೆಲವೊಂದು ನಾವು ಮತವನ್ನು ಹಾಕತಕ್ಕಂಥ, ಆ ಒಂದು ರೀತಿ ನೀತಿಗಳ ಬಗ್ಗೆ ನಾವು ಭಿನ್ನಾಭಿಪ್ರಾಯವನ್ನು ಕೆಲವರು ಹೊಂದಿದ್ದರೂ ಕೂಡ ಅಂತಿಮವಾಗಿ ಪ್ರಜಾಪ್ರಭುತ್ವದಲ್ಲಿ ಅದಕ್ಕೆ ತಲೆಬಾಗಿಯೇ ನಾವು ಹೋಗುತ್ತೇವೆ. ಹಾಗೆ ಮಾಡದಿದ್ದರೆ ಪ್ರಜಾಪ್ರಭುತ್ವ ಅದು ಶಕ್ತಿಯನ್ನು ಪಡೆಯಲಾರದು. ಪಕ್ಷದ ಹಿತದೃಷ್ಟಿಯಿಂದ ಎನ್ನತಕ್ಕ ವಿಚಾರವನ್ನು ಇಟ್ಟು ಒಂದು ಪಕ್ಷ ಅಧಿಕಾರಕ್ಕೆ ಬಂದಾಗ ಅಥವಾ ಪಕ್ಷಗಳು ಅಧಿಕಾರಕ್ಕೆ ಬಂದಾಗ ಬಡ್ಜೆಟ್ಟನ್ನು ತಯಾರು ಮಾಡಲಾಗುತದೆ. ನಿಜ ಹೇಳಬೇಕಾದರೆ ನಮ್ಮ ರಾಜ್ಯಾಂಗ, ಅಥವಾ ನಮಗೆ ಇರತಕ್ಕ ಕಾನೂನಿನಲ್ಲೆ ಪಕ್ಷಗಳೇ ಸರ್ಕಾರ ಮಾಡಬೇಕು ಎಂದು ಅಲ್ಲೇನೂ ಇಲ್ಲ. ಪಕ್ಷಗಳನ್ನು ನಾವು ಮಾಡಿದ್ದೇವೆ. Actually this august House does not recognise the existence of a politi-

cal party at all under law.

ಅದಲ್ಲ. ನಾವು ಅದನ್ನು ಮನಗಾಣಬೇಕು. ಪಕ್ಷಗಳ ಹೆಸರನ್ನು ನಾವು ಇಟ್ಟುಕೊಳ್ಳುತ್ತೇವೆ. ಏತಕ್ಕಾಗಿ ಅಂದರೆ ಅದು ಒಂದು ನೀತಿಯನ್ನು ರೂಪಿಸುತ್ತದೆ, ಪ್ರತಿಬಿಂಭಿಸುತ್ತದೆ. ಆ ನೀತಿಗನುಗುಣವಾಗಿ ತನ್ನ ಕಾರ್ಯಕ್ರಮಗಳನ್ನು ರೂಪಿಸಿ ಜನರ ಮನಸ್ಸಿಗೆ ಮುಟ್ಟತಕ್ಕ ವಿಚಾರವನ್ನು ಜನರ ಮುಂದೆ ಚುನಾವಣೆ ಕಾಲದಲ್ಲಿ ಹೋಗುವುದಕ್ಕಾಗಿ ನಾವು ಪಕ್ಷ ಸಂಘ ಸಂಸ್ಥೆಗಳು ಇತ್ಯಾದಿ ಹೆಸರಿನಲ್ಲಿ ನಾವು ಹೋಗುತ್ತೇವೆ. ಇದನ್ನು ನಾವು ಪ್ರಜಾಪ್ರಭುತ್ವದಲ್ಲಿ ಒಪ್ಪಿಕೊಂಡಿರತಕ್ಕ ಪ್ರತಿಭೆ. ಇವತ್ತು ಪಕ್ಷಗಳು ಯಾವುದಕ್ಕೂ ಬಹುಮತ ಬರಲಿಲ್ಲ. ಆಗ್ ಏನಾಗುತ್ತದೆ? ಬಜೆಟ್‌ನ್ನು ಪ್ರಿಪೇರ್ ಮಾಡಿದ್ದಾರೆ. ಮೊದಲಿನ ಪ್ಯಾರಾ, 2ನೇ ಪ್ಯಾರಕ್ಕಿಂತ ಸ್ಪಷ್ಟವಾಗಿರತಕ್ಕಂತಹ ಮಾತು. ಯಾರೇ ಆಗಲಿ ಮಾನ್ಯ ಸದಸ್ಯರು. ಈ ಕಡೆಯವರು, ಆ ಕಡೆಯವರು ಯಾರೇ ಇರಬಹುದು. ಯಾರೇ ಓದಿದರೂ ಸ್ಪಷ್ಟವಾಗಿ ಗೊತ್ತಾಗುತ್ತದೆ. ಒಂದು ಪಕ್ಷಕ್ಕೆ ಬಹುಮತ ಅಥವಾ ನಿಮ್ಮ ಪಕ್ಷಕ್ಕೆ ಬಹುಮತ ಬಂದಿದೆ ಎನ್ನತಕ್ಕ ಏಕೈಕ ಕಾರಣದ ಆಧಾರದ ಮೇಲೆ ನೀವು ನಿಮ್ಮ ವಿಚಾರ ಧಾರೆಯನ್ನು ಹೊರಡಿಸಿದ್ದೀರಿ. ಮತ್ತೊಂದ್ದನ್ನು ಗಮನಿಸಬೇಕು. ಉದಾಹರಣೆಗೆ ನಿಮಗೆ ಬಹುಮತ ಬರದೇ ಇದ್ದಿದ್ದರೆ ಮೊನ್ನೆ ಚುನಾವಣೆಯಲ್ಲಿ, ಯಾವ ರೀತಿ ಬಜೆಟ್ ಇಡುತ್ತಿದ್ದೀರಿ? ಯಾವ ರೀತಿ ಮಾಡುತ್ತಿದ್ದೀರಿ? ಉದಾಹರಣೆಗೆ ಒಂದು ಸಮ್ಮಿಶ್ರ ಸರ್ಕಾರವನ್ನು ರಜನೆ ಮಾಡಬೇಕಾದ ಸಂದರ್ಭ ಬಂದಿತ್ತು ನಿಮಗೆ ಎಂದು ಇಟ್ಟುಕೊಳ್ಳೋಣ. ಆಗ ನೀವು ಬಜೆಟ್ಟನ್ನು ಇಡಬೇಕಾದಾಗ ಯಾವ ಮಾತನ್ನು ಆಡುತ್ತಿದ್ದೀರಿ? ಸಂಯುಕ್ತ ಸರ್ಕಾರವನ್ನು ರಚನೆ ಮಾಡತಕ್ಕ ಕಾಲದಲ್ಲಿ ಇದೇ ಕಾಂಗ್ರೆಸ್ ಜೊತೆ ಓಡಗೂಡಿ ಸರ್ಕಾರವನ್ನು ರಚನೆ ಮಾಡಿದ್ದರೆ ಅವಾಗ ಯಾವ ರೀತಿ ಬಜೆಟ್ಟನ್ನು ಇಡುತ್ತಿದ್ದೀರಿ ಎನ್ನತಕ್ಕ ವಿಚಾರವನ್ನು ನಾವು ತಿಳಿಯಬೇಕಾಗಿದೆ. ಪಕ್ಷಗಳ ಆಧಾರವನ್ನು ಬಿಟ್ಟು ರಾಜ್ಯದ ಸರ್ವತೋಮುಖ ಬೆಳವಣಿಗೆಯನ್ನು ಗಮದಲ್ಲಿಟ್ಟು ಬಜೆಟ್ಟನ್ನು ಇಟ್ಟಿದ್ದರೆ ನಿಜವಾಗಿಯೂ ಮೂಲಭೂತವಾಗಿ ನಾನು ಮೆಚ್ಚತಕ್ಕ ಮಾತು ಆಗುತ್ತಿತ್ತು. ತಲೆಭಾಗತಕ್ಕ ಒಂದು ವಿಚಾರ. ನಾನು ಅದನ್ನು ಒಪ್ಪುತ್ತೇನೆ. ಆದರೆ ಅದು ಕಾಣುತ್ತಿಲ್ಲ. ಇದರಲ್ಲಿ ಏನು ಬರೆದಿದ್ದಾರೆ ಎಂದರೆ, “” The people of Karnataka have blessed us with an unprecedented opportunity to form the Government by removing the previous Congress regime.”

ಪ್ರೀವಿಯಸ್ ಕಾಂಗ್ರೆಸ್ ರಿಜೀಮ್ ಅನ್ನುವ ಮಾತನ್ನು ಹೇಳಿದಾಗ am not holding any brief for this Congress Party here. Let me make myself very very clear because I was also the Chief Minister of this State for 2 years.

ತಮಗೆಲ್ಲಾ ಗೊತ್ತಿದೆ being the Chief Minister I was the Finance Minister also. I have presented the budget for 2 years also.

ನೀವೂ ಅದರ ಬಗ್ಗೆ ಕಣ್ಣು ಹಾಯಿಸಿದ್ದೀರಿ. ನಿಮಗೆ ಗೊತ್ತಿದೆ. ಆ ರೀತಿ ಇರತಕ್ಕ

ಕಾಲದಲ್ಲಿ ನಾವು ಯಾವಾಗಲೂ ಒಂದು ವಿಚಾರವನ್ನು ಗಮದಲ್ಲಿಡಬೇಕು. ನಾನೂ ಕೂಡ ಕಾಂಗ್ರೆಸ್ ಸರ್ಕಾರದ ಮುಖ್ಯಮಂತ್ರಿಯಾಗಿದ್ದೆ ಎನ್ನುವ ಮಾತನ್ನು ಹೇಳುತ್ತೇನೆ. ರಾಜಕೀಯದ ಬದಲಾವಣೆಗಳಿಂದ ಈಗ ನಾನು ಕಾಂಗ್ರೆಸ್ ಪಕ್ಷದಲ್ಲಿ ಇಲ್ಲ. ಮತ್ತೊಂದು ಪಕ್ಷದಲ್ಲಿದ್ದೇನೆ. ಎಷ್ಟೋ ಸಾರಿ, ನಮ್ಮ ಪಕ್ಷಕ್ಕೆ ಆಗಿದೆ. ನಿಮ್ಮ ಪಕ್ಷಕ್ಕೆ ಆಗಿದೆ, ಕೇಂದ್ರದಲ್ಲಿ ಆಗಿದೆ, ಇದು ಎಲ್ಲಾ ಕಡೆ ಆಗಿದೆ. ರಾಜ್ಯದ ವಿಚಾರವನ್ನು ಬಜೆಟ್ ಮೇಲೆ ಮಾತನಾಡಬೇಕಾದರೆ ನಾನು ರಾಜಕೀಯದ ಬಣ್ಣವನ್ನು ನೀವು ಬಳಿದ ಹಾಗೆ ನಾನು ಬಳಿಯುವುದಕ್ಕೆ ತಯಾರಾಗಿಲ್ಲ. ಈ ಮೂಲ ಪೀಠಿಕೆಯನ್ನು ಇಟ್ಟೆ, ನನ್ನ ಅನಿಸಿಕೆಯನ್ನು ಮಾನ್ಯ ಸದಸ್ಯರ ಗಮನಕ್ಕೆ ತಮ್ಮ ಮೂಲಕ ಏತಕ್ಕಾಗಿ ನಾನು ಈ ಮಾತನ್ನು ಹೇಳುತ್ತಿದ್ದೇನೆ ಎಂದರೆ ನನ್ನ ಬಜೆಟ್ ಸ್ಪೀಚನ್ನು ದಯವಿಟ್ಟು ಓದಿ ನೋಡಿ. 2 ವರ್ಷಗಳಲ್ಲೂ ನಾನೇ ಬಜೆಟ್ ಸ್ಪೀಚನ್ನು ಮಾಡಿದ್ದೇನೆ. ಆ ರೀತಿ ಇರತಕ್ಕ ಕಾಲದಲ್ಲಿ ನಾನು ಜನತಾ ದಳದ ಸರ್ಕಾರ ಹಾಳು ಮಾಡಿದ್ದರು ಎಂದು ಹೇಳಿಲ್ಲ. ತಾವು 1983ರಲ್ಲಿ ಬಂದಿರಿ. 1989ರವರೆಗೂ ಚುನಾವಣೆಯಾಗುವವರೆಗೂ ನೀವೇ ಇದ್ದಿರಿ. ನೀವು ಆಡಿದ ಹಾಗೆ ನಾವು ಆಡಿದ್ದೇವೆಯೇ? ತಾವು ತೆಗೆದು ನೋಡಬೇಕು. ಒಂದು ಮಾತನ್ನು ಆಡಿದ್ದೇನೆಯೇ? ನಿಜವಾಗಿಯೂ ಪ್ರಜಾಪ್ರಭುತ್ವದ ಪ್ರಮುಖವಾಗಿರತಕ್ಕ ಮೂಲ ಭೂತ ನೀತಿಯನ್ನೇ ಕೆಣಕತಕ್ಕ ವಿಚಾರ ಅದರಲ್ಲಿ ಅಡಕವಾಗಿರುವುದರಿಂದ ನಾನು ಆ ಮಾತನ್ನು ಆಡುವುದಿಲ್ಲ. ನಾನು ಆಡಲೇ ಇಲ್ಲ. ನಾನು ಅಲ್ಲಿ ಕುಳಿತಾಗಲೂ ಕೂಡ ನಮ್ಮ ವಿರೋಧ ಪಕ್ಷದ ನಾಯಕರಾಗಿ ಶ್ರೀಮಾನ್ ಡಿ.ಬಿ. ಚಂದ್ರೇಗೌಡರು ಇದ್ದರು. ಆಮೇಲೆ ಶ್ರೀ ದೇಶಪಾಂಡೆಯವರು ವಿರೋಧ ಪಕ್ಷದ ನಾಯಕರಾಗಿದ್ದರು. ನಮ್ಮ ಸಿಂಧ್ಯಾಜಿಯವರು ಉಪ ನಾಯಕರಾಗಿದ್ದರು. ಒಂದು ಮಾತನ್ನೂ ಕೂಡ ನಾನು ಆಡಲಿಲ್ಲ. ನಾನು ಆಡುವುದಕ್ಕೆ ಹೋಗಲಿಲ್ಲ. ನಾನೂ ಕೂಡ ಆಡಬಹುದಾಗಿತ್ತು. ಅಂಕಿ ಅಂಶಗಳನ್ನು ಇಡತಕ್ಕ ಕಾಲದಲ್ಲಿ ಸಂಪನ್ಮೂಲವನ್ನು ಸಂಗ್ರಹಣೆ ಮಾಡತಕ್ಕ ವಿಚಾರ ಇರಬಹುದು ವಾರ್ಷಿಕ ಯೋಜನಾ ಗಾತ್ರದ ಬಗ್ಗೆ ಇರಬಹುದು. ನಾನು ನಮ್ಮ ಹತ್ತಿರ ಇದ್ದ ಅಂಕಿ ಅಂಶಗಳನ್ನು ಕೋಟ್ ಮಾಡುವುದನ್ನು ಬಿಟ್ಟರೆ ಮತ್ತೊಂದು ಮಾತನ್ನು ಪಕ್ಷವನ್ನು ಆಧಾರವಾಗಿಟ್ಟು ಮಾತನಾಡುವುದಕ್ಕೆ ಹೋಗಲೇ ಇಲ್ಲ. ನೀವೇನು ಮಾಡಿದ್ದೀರಿ ಅಂದರೆ ಜನ ಕಾಂಗ್ರೆಸ್ ಸರ್ಕಾರವನ್ನು ತೆಗೆದುಬಿಟ್ಟರು ಎನ್ನತಕ್ಕ ಮಾತನ್ನು ಆಡುತ್ತಾ ಪ್ಯಾರಾ 3ರಲ್ಲಿ "" A number of pro-people programmes which had been stopped after 1989 will be restarted now"

ಇದು ನಮ್ಮನ್ನು ಕೆಣಕುತ್ತಿರುವ ಮಾತು.

ನಾನು ಒಂದು ಮಾತನ್ನು ಕೇಳುತ್ತೇನೆ, 1989ರವರೆಗೆ ಇದ್ದಂತಹ ಪ್ರೊಪೀಲ್ ಪ್ರೋಗ್ರಾಮ್ ಅಂದರೆ ಜನರ ಹಿತ ರಾಜ್ಯದ ಹಿತದ ಬಗ್ಗೆ ನೀವು ಕಾರ್ಯಕ್ರಮ ಇಟ್ಟಿದ್ದೀರಿ. ಈ ವಿವರಗಳಿಗೆ ನಾನು ಹೋಗದಿದ್ದರೆ ನಿಜವಾಗಲೂ ನೀವು ಇಟ್ಟೆಬಿಟ್ಟಿದ್ದಾರೆನ್ನುವ ಅಭಿಪ್ರಾಯ ಮಾನ್ಯ ಜನತೆಯಲ್ಲಿ ಬರುತ್ತದೆ. ಸದನದ ಹೊರಗೆ ಕೋಟ್ಯಾಂತರ ಜನ ಇದ್ದಾರೆ. ನಾವು ಯಾವರೀತಿಯ ಉತ್ತರವನ್ನು ಕೊಡಬೇಕಾಗುತ್ತದೆ? ಏಕೆಂದರೆ ನಿಮ್ಮ ಬಜೆಟ್ ಇಟ್ಟು ಬಿಟ್ಟಿದ್ದೀರಿ, ಅದು ಸರ್ಕ್ಯುಲೇಟ್ ಆಗಿದೆ.

ಅಧ್ಯಕ್ಷರು:- ಅವರು ಏನು ಮಾಡಿದ್ದಾರೆ ಎಂದರೆ Unwittingly they have brought you nearer to Congress again.

ಶ್ರೀ ಎಸ್.ಬಂಗಾರಪ್ಪ:- ಅದೇನೋ ಕೇಳಿಸಲಿಲ್ಲ.

MR.SPEAKER:- The ruling side, unwittingly they have brought you near to the Congress again. You have started holding defence, because you were in Congress then.

ಶ್ರೀ ಎಸ್.ಬಂಗಾರಪ್ಪ:- ನಾನು ಅದಕ್ಕೆ ಹೇಳಿದ್ದೇನೆ. ನಾನು ಏಕೆ ಈ ವಿಚಾರವನ್ನು ಹೇಳುತ್ತಿದ್ದೇನೆಂದರೆ ಪಕ್ಷ ಇರುವುದು ಇದ್ದದ್ದು, ಒಡೆದುಹೋಗುವುದು, ಮತ್ತೆ ಮರ್ಜಿ ಆಗುವುದು ಈ ದೇಶದ ರಾಜಕಾರಣಕ್ಕೆ ಹೊಸದಲ್ಲವೆನ್ನುವ ಕಾರಣಕ್ಕೆ ನಾನು ಹೇಳಿದ್ದೇನೆ. ಅದಕ್ಕೆ ಬಜೆಟ್ ಇಡಬೇಕಾದರೆ ಪಕ್ಷವನ್ನು ಬದಿಗೊತ್ತಿ ನೀವು ವಾಸ್ತವಾಂಶದ ಆಧಾರದ ಮೇಲೆ ರಾಜ್ಯದ ಸರ್ವತೋಮುಖ ಅಭಿವೃದ್ಧಿಯನ್ನು ಗಮದಲ್ಲಿಟ್ಟು ಆವೊಂದು ವಿಚಾರಧಾರೆಯಿಂದ ನೀವು ಬಜೆಟ್ ಇಟ್ಟುಬಿಟ್ಟರೆ ಮೊದಲಿನ ಹೆಜ್ಜೆ ಎಡವುತ್ತಿರಲಿಲ್ಲ ಎನ್ನತಕ್ಕ ಮಾತೆನ್ನು ಹೇಳುವುದಕ್ಕೆ ನಾನು ಹೇಳಿದ್ದೇನೆ. ನೀವು ಅವರು ಒಟ್ಟಿಗೆ ಹೋಗುವುದು ಹೋಗತಕ್ಕ ವಿಚಾರ ಅಥವಾ ನೀವು ನಾವು ಒಟ್ಟಿಗೆ ಬರತಕ್ಕದ್ದು ದೂರ ಹೋಗತಕ್ಕದ್ದು ಆ ಪ್ರಶ್ನೆ ಪ್ರತ್ಯೇಕ. ಅದು ಭವಿಷ್ಯ ಕಾಲ ನಿರ್ಧಾರ ಮಾಡತಕ್ಕ ವಿಚಾರ. ನಾನು ನಿಮ್ಮ ಜೊತೆಗೆ ಬರಬಹುದು ಇವೆಲ್ಲಾ ವಿಚಾರಗಳು ಭವಿಷ್ಯ ನಿರ್ಧಾರ ಮಾಡುತ್ತದೆ. ಆ ವಿಚಾರಕ್ಕೆ ನಾನು ಹೋಗುವುದಿಲ್ಲ. ಬಜೆಟ್‌ನಿಂದ ದೂರ ಹೋಗಲಾರೆ ಅವರು ಇಡತಕ್ಕದ್ದು 1989ರಲ್ಲಿ ಕೊಟ್ಟಿರತಕ್ಕ ತಮ್ಮ ಕಾರ್ಯಕ್ರಮಗಳ ಬಗ್ಗೆ ನಾನು ವಿವರವಾಗಿ ಹೋದರೆ ಅನೇಕ ಗಂಟೆಗಳು ಬೇಕಾಗುತ್ತವೆ. ಇತರ ಮಾನ್ಯಸದಸ್ಯರು ಮಾತನಾಡತಕ್ಕ ಹಕ್ಕನ್ನು ಕಸಿದುಕೊಳ್ಳಲಾರೆ. ತಾವು ಒಂದು ಗಂಟೆಗೆ ಉಪಹಾರಕ್ಕೆ ಬರಬೇಕೆಂದು ಸರ್ಕ್ಯುಲೇಟ್ ಮಾಡಿದ್ದೀರಿ. ಅದು ಊಟ ಅಥವಾ ಉಪಹಾರವೆಂದು ಗೊತ್ತಿಲ್ಲ.

ಅಧ್ಯಕ್ಷರು:- ಊಟದಷ್ಟು ಉಪಹಾರ.

ಶ್ರೀ ಎಸ್.ಬಂಗಾರಪ್ಪ:- 1ಗಂಟೆಗೆ ನನ್ನ ಭಾಷಣ ಮುಗಿಸಬೇಕೆನ್ನುವ ಭಾವನೆಯನ್ನು ಇಟ್ಟುಕೊಂಡಿದ್ದೇನೆ. ಮಾನ್ಯ ನಾಗೇಗೌಡರು ಈಗಲೇ ಹೋಗಿ ಊಟ ಮಾಡಿದರೆ ಒಳ್ಳೆಯದೆಂದು ಹೇಳುತ್ತಾರೆ. ನಿಮ್ಮನ್ನು ಇಲ್ಲಿಂದ ಕಳುಹಿಸಿದರೆ ಮತ್ತೆ ಸೇರಿಸುವುದು ಕಷ್ಟವಾಗುತದೆ, ನೋಡೋಣ. 1989ರಲ್ಲಿದ್ದ ಕಾರ್ಯಕ್ರಮಗಳನ್ನು ನೀವು ರೀಸ್ಟಾರ್ಟ್ ಮಾಡುತ್ತೇವೆಂದು ಹೇಳಿದ್ದೀರಿ. ಆದರೆ ಅವುಗಳನ್ನೂ ಕೂಡ ಮಾಡಲಿಲ್ಲ. ನಾನ್‌ಪ್ಲಾನ್‌ನಲ್ಲಿ ಯಾವ್ಯಾವ ಕಾರ್ಯಕ್ರಮಗಳನ್ನು ಹೇಳಿದ್ದರೋ ಅವುಗಳನ್ನು ಮಾಡದಿದ್ದರೂ ಕಾಡ ಆ ಕಾಲದಲ್ಲಿ ಅವುಗಳನ್ನು ಈ ಬಜೆಟ್‌ನಲ್ಲಿ ಹೇಳುವುದಕ್ಕೆ

ಆಗಲಿಲ್ಲ. ರೀಸ್ಟಾರ್ಟ್ ಮಾಡುತ್ತೇವೆಂದು ಹೇಳಿ ನಿಮ್ಮ ಬಜೆಟ್‌ನಲ್ಲಿ ಕೂಡ ಹೇಳುವುದಕ್ಕೆ ಆಗಲಿಲ್ಲ. ನಾನು ನಮ್ಮ ಕಾಲದಲ್ಲಿ ಜನಸಾಮಾನ್ಯರಿಗೆ ಬಡವರು ಅವರ ಬಗ್ಗೆ ಹಲವಾರು ಕಾರ್ಯಕ್ರಮಗಳನ್ನು ರೂಪಿಸತಕ್ಕ ಒಂದು ಪ್ರಮುಖವಾಗಿರತಕ್ಕ ಪ್ರಯತ್ನವನ್ನು ನಾನು ಮುಖ್ಯಮಂತ್ರಿಯಾಗಿದ್ದಾಗ ಮಾಡಿದ್ದೇನೆ. ಇವತ್ತು ನಿಮ್ಮ ಬಜೆಟ್‌ನಿಂದ ಏನಾಗಿದೆ ಅಂದರೆ ನಾವು ಮಾತನಾಡಿದ್ದನ್ನು ಜಸ್ಟಿಫೈ ಮಾಡಲೇಬೇಕಾಗಿದೆ. ಬರೀ ಬಜೆಟ್‌ನ್ನು ವಿರೋಧ ಮಾಡಿ ಎರಡು ಮಾತುಗಳನ್ನು ಆಡಿ ಟ್ಯಾಕ್ಸನ್ನು ಅಷ್ಟು ಹಾಕಿದ್ದೀರಿ ಇಷ್ಟು ಹಾಕಿದ್ದೀರಿ ಎಂದು ಹೇಳಿ ಕ್ಲೋಸ್ ಮಾಡುವುದಕ್ಕೆ ನಾನು ತಯಾರಾಗಿಲ್ಲ, ಹಾಗೆ ಬರುವುದಿಲ್ಲ ಅದು. ಏಕೆಂದರೆ ಯೋಜನಾಗಾತ್ರದ ಬಗ್ಗೆ ಹೇಳದಿದ್ದರೆ, ಹಣವನ್ನು ನೀವು ಎಲ್ಲಿಂದ ತರುತ್ತೀರಿ? ಸಂಪನ್ಮೂಲದ ಸಂಗ್ರಹದ ಬಗ್ಗೆ ಹಣವನ್ನು ಕ್ರೋಢೀಕರಣ ಮಾಡದಿದ್ದರೆ ನೀವು ಎಲ್ಲಿಂದ ಹಣವನ್ನು ತಂದು ಖರ್ಚು ಮಾಡುವುದಕ್ಕೆ ಆಗುತ್ತದೆ? ಪ್ಲಾನೂ ಅಂಡ್ ನಾನ್‌ಪ್ಲಾನ್ ವಿಚಾರದಲ್ಲಿ ತಮ್ಮ ಗಮನಹರಿಸುತ್ತೇನೆ. ನಾನು ಮೊದಲೇ ಹೇಳಿದಹಾಗೆ 8ನೇ ಪಂಚವಾರ್ಷಿಕ ವರ್ಷದಲ್ಲಿ ನಾವು ಕೆಲಸ ಮಾಡುತ್ತಿದ್ದೇವೆ. 12300 ಕೋಟಿ ರೂಪಾಯಿಗಳನ್ನು ನನ್ನ ಕಾಲದಲ್ಲಿ ಯೋಜನಾ ಆಯೋಗದ ಹತ್ತಿರ ನಿಗದಿ ಮಾಡಿಸಿಕೊಂಡು ಬರಲಾಗಿದೆ. 12300 ಕೋಟಿ ರೂಪಾಯಿ ಅವರು ಒಪ್ಪಿಕೊಳ್ಳುವುದಕ್ಕೆ ರೆಡಿಯಿರಲಿಲ್ಲ. ನಾನು ಹೇಗೆ ಅಪ್ರೂವಲ್ ಮಾಡಿಸಿಕೊಂಡೆ ಅಂದರೆ ಸಂಪನ್ಮೂಲ ಸಂಗ್ರಹ ಮಾಡತಕ್ಕ ವಿಚಾರದಲ್ಲಿ ಸಂಪನ್ಮೂಲವನ್ನು ಹೇಗೆ ಕ್ರೋಢೀಕರಿಸಲಾಗುವುದು ಎಂದು ನಾವು ಹೇಳತಕ್ಕ ಆರ್ಗ್ಯೂಮೆಂಟ್ ವಿಚಾರದಲ್ಲಿ ಯೋಜನಾ ಆಯೋಗದ ಮುಂದೆ ಬೇರೆ ರೀತಿ ನಾನು ಇಟ್ಟಿದ್ದೆ. ಹಲವಾರು ವಿಚಾರಗಳನ್ನು ಇಟ್ಟಿದ್ದೆ, ಅವರು ಒಪ್ಪಿದ್ದರು. ಕೊನೆಗೆ ನನಗ್ಗೆ ನೆನಪು ಇರುವ ಹಾಗೆ ಅವರು 11ಸಾವಿರ ಕೋಟಿ ಚಿಲ್ಲರೆಗೆ ಬಂದು ನಿಂತರು. 12ಸಾವಿರ ಕೋಟಿ ಮೇಲೆ ಏಕೆ ಹೋಗಬೇಕಾಗುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟಮೇಲೆ then, they readily came down and agreed to my suggestion. 12300 ಕೋಟಿ ರೂಪಾಯಿಯಲ್ಲಿ ಒಂದು ವರ್ಷದಲ್ಲಿ ಉಳಿದಿರತಕ್ಕದ್ದು ಎಷ್ಟು? ಎಷ್ಟು ಖರ್ಚಾಗಿದೆ? ನೀವು ಎಷ್ಟು ಸಂಗ್ರಹ ಮಾಡಿದ್ದೀರಿ? ವಾರ್ಷಿಕ ಯೋಜನೆಯ ಗಾತ್ರವನ್ನು ನಾವು ಎಷ್ಟೆಷ್ಟು ಮಾಡುತ್ತಾ ಹೋಗುತ್ತೇವೆ ಎನ್ನತಕ್ಕ ಪ್ರಾಮುಖ್ಯವಾದ ಅಂಶವನ್ನು ನಾನು ಮುಂದೆ ತರುತ್ತೇನೆಂದು ಮೊದಲು ಹೇಳಿಕೊಂಡಿದ್ದೀರಿ. 1989ಕ್ಕಿಂತ ಮುಂಚೆ ಅಭಿವೃದ್ಧಿ ಬಗ್ಗೆ ಏನೂ ಆಗಲಿಲ್ಲ, ಜನ ಪರವಾದ ಕಾರ್ಯಕ್ರಮಗಳನ್ನು ರೂಪಿಸಿದ್ದೇವೆನ್ನುವ ಮಾತನ್ನು ಅವರು ಹೇಳಿದ್ದಾರೆ. 7ನೇ ಪಂಚವಾರ್ಷಿಕ ಯೋಜನೆಯ ಬಗ್ಗೆ ನಾನು ಒಂದನ್ನು ಹೇಳುತ್ತೇನೆ. ಇಷ್ಟು ವರ್ಷಗಳವರೆಗೆ ಆರೇಳು ವರ್ಷಗಳಲ್ಲಿ ಎಲ್ಲಾ ಹೊರಟುಹೋಗಿದೆ. 1983 ರಿಂದ 1989ರವರೆಗೆ ಆರೇಳು ವರ್ಷಗಳ ಕಾಲ ನೀವು ಅಧಿಕಾರದಲ್ಲಿ ಇದ್ದಿರಿ. ಆ ಕಾಲದಲ್ಲಿ ಪ್ಲಾನ್‌ಸೈಸ್ ನೀವೇನು ಮಾಡಿದ್ದೀರಿ ಎನ್ನುವ ಮಾತನ್ನು ಹೇಳಿಬಿಡುವುದು ಬಹಳ ಒಳ್ಳೆಯದು. ಹೇಳಿದರೆ ನೀವು ಎಷ್ಟು ಸೀರಿಯಸ್ಸಾಗಿದ್ದೀರಿ ಎಂದು ನಮಗೆ ತಿಳಿಯುತ್ತದೆ. ಯೋಜನೆಯ ಗಾತ್ರವನ್ನು ಯೋಜನಾ ಆಯೋಗದ ಮುಂದೆ ನೀವು ಇಟ್ಟು ಒಪ್ಪಿಗೆ ಪಡೆಯತಕ್ಕ ವಿಚಾರದಲ್ಲಿ ತಮ್ಮ ಗಮನವನ್ನು ಸಭಾಧ್ಯಕ್ಷರ ಮುಖಾಂತರ ಸೆಳೆಯುತ್ತೇನೆ. 1988-89ರಲ್ಲಿ ನಾನು ಅದನ್ನೆ ಹೇಳುತ್ತಿದ್ದೇನೆ, ನಿಮಗೆ ಪರ್ಸೆಂಟೇಜ್ ಆಫ್ ಗ್ರೋತ್‌ರೇಟ್ ಪ್ರೀವಿಯಸ್ ಇಯರ್ 0.03ಇದೆ. ಅದಕ್ಕಿಂತ ಮೊದಲು 1983ರಲ್ಲಿ ನಿಮ್ಮ ಸರ್ಕಾರ ಅಧಿಕಾರಕ್ಕೆ ಬಂತು. 1984-85ರಲ್ಲಿ 0.001 ಗ್ರೋತ್‌ರೇಟ್ ಇದೆ.

ವಾರ್ಷಿಕ ಯೋಜನಾಗಾತ್ರ 1984-85ರಲ್ಲಿ 0.01. 34 ಲಕ್ಷ ಅಥವಾ 66 ಲಕ್ಷ ಇದೆ. ಪ್ಲಾನ್‌ಸೈಸ್ ಮತ್ತು ಗ್ರೋತರೇಟ್ ನೋಡಿದರೆ ನಾವು ತಲೆತಗ್ಗಿಸ ಬೇಕಾಗುತದೆ. ನಾನು ಮುಖ್ಯಮಂತ್ರಿಯಾಗಿದ್ದಾಗ ಒಂದು ಮಾತನ್ನು ಹೇಳಿದ್ದೆ. ಹಿಂದೆ ಉದಾಹರಣೆಗೆ 12300 ಕೋಟಿ ಯೋಜನಾಗಾತ್ರ ಇತ್ತೆಂದು ಇಟ್ಟುಕೊಳ್ಳೋಣ. ನೀವೇನು ಮಾಡಬೇಕು 100, 200, 300, 400 ಕೋಟಿ ಜಾಸ್ತಿಮಾಡಿಕೊಂಡು ಹೋಗಬೇಕು. ಕಾವೇರಿ ಕೃಷ್ಣಾ, ಪವರ್ ಜನರೇಷನ್ ಉದಾಹರಣೆಗೆ ಮೈನರ್ ಇರಿಗೇಷನ್ ಇರಬಹುದು, ಮೇಜರ್, ಮಿಡಿಯಂ ಪವರ್ ಜನರೇಷನ್ ಇವೆಲ್ಲ ಕೋರ್‌ಸೆಕ್ಟಾರ್‌ನಲ್ಲಿ ಬರತಕ್ಕ ಸ್ಕೀಮ್‌ಗಳು. ಆಧ್ಯಾತಾ ಆಧಾರದ ವಲಯಗಳು ಇವೆಲ್ಲಾ. You can't see any growth rate at all on these counts, which accounts for economic growth rate ultimately in Karnataka State. ಎಂದೂ ಕೂಡ ಮಾಡುವುದಕ್ಕೆ ಸಾಧ್ಯವಿಲ್ಲ. 1ಕೋಟಿ ಕೂಡ ಜಾಸ್ತಿ ಮಾಡಿಕೊಳ್ಳುವುದಕ್ಕೆ ಸಾಧ್ಯವಾಗಿಲ್ಲ. ಆನ್ಯುಯಲ್ ಪ್ಲಾನ್‌ಸೈಜ್ ಗ್ರೋತ್‌ರೇಟ್ ಬಗ್ಗೆ ನಾನು ಒಂದು ಮಾತನ್ನು ಮುಖ್ಯಮಂತ್ರಿಯಾಗಿದ್ದಾಗ ಹೇಳಿದಾಗ, ವಿರೋಧಪಕ್ಷದಲ್ಲಿ ಕುಳಿತು ನೀವು ಈಗ ನಮಗೆ ಬರಗಾಲ ಇತ್ತು ಅಂದಿರಿ. ಈಗ ನಾನು ಏಕೆ ಆ ಮಾತನ್ನು ಹೇಳುತ್ತಿದ್ದೇನೆಂದರೆ, ಮತ್ತೊಂದು ಸಾರಿ ನೆನಪು ಮಾಡುತ್ತಿದ್ದೇನೆ. ಏಕೆಂದರೆ ನೀವು ಬಜೆಟ್‌ನಲ್ಲಿ ಆ ಮಾತು ಆಡದಿದ್ದರೆ ನಾನು ಹೇಳುವುದಕ್ಕೆ ಹೋಗುತ್ತಿರಲಿಲ್ಲ. ನೀವೇನು ಮಾಡಿದ್ದೀರಿ ಸಾರಾ ಸಗಟು ಬುಲ್ಡೋಜರ್ ಹಾಕಿ ಒಡೆಸುವುದಕ್ಕೆ ಹೋಗಿದ್ದೀರಿ. ಹಾಗೆ ಮಾಡಲು ಬರುವುದಿಲ್ಲ. ನೀವು ಬುಲ್ಡೋಜರ್ ಹಾಕಿದರೆ ಹೊಸ ಮಿಷಿನ್ ಹಾಕಿ ಅದನ್ನು ತೆಗೆದುಕೊಂಡು ನಾವು ಹೊಡೆದು ಉರುಳಿಸುತ್ತೇವೆ. ಇದು ರಾಜಕೀಯವಾಗಿ ನೀವು ತಡೆದುಕೊಳ್ಳಬೇಕು. 1988-89ರಲ್ಲಿ ಮತ್ತು 1989-90ರಲ್ಲಿ ಗ್ರೋತ್‌ರೇಟ್ ಎಷ್ಟಿತ್ತು ಎಂಬುದನ್ನು ನಾನು ಈಗಾಗಲೇ ಹೇಳಿದ್ದೇನೆ. 1990ರ ಅಕ್ಟೋಬರ್‌ನಲ್ಲಿ ನಾನು ಮುಖ್ಯಮಂತ್ರಿಯಾದೆ. 1990-91ರಲ್ಲಿ ಅನ್ಯುಯಲ್ ಪ್ಲಾನ್‌ಸೈಸ್ 10.09ಇದೆ. 1991 92ರಲ್ಲಿ ಅಂದರೆ ಅದು ನನ್ನ ಕಾಲ, ನೀವೇನು ಹೇಳುತ್ತೀರಿ ಕಾಂಗ್ರೆಸ್ ಸರ್ಕಾರ ಎನ್ನತಕ್ಕ ಮಾತನ್ನು ಆಡಿದರೆ ಕಾಂಗ್ರೆಸ್ ಸರ್ಕಾರ ಏನೂ ಮಾಡಲಿಲ್ಲವೆಂದರೆ, ನಾನು ಕಾಂಗ್ರೆಸ್ ಮುಖ್ಯಮಂತ್ರಿಯಾಗಿದ್ದ ಕಾಲದಲ್ಲಿ 10.09ಕ್ಕೆ ಏರಿದೆ. ಹಿಂದಿನ ವರ್ಷಕ್ಕೆ ಹೋಲಿಸಿದರೆ ಒಂದೇ ಸಾರಿ ಜಂಪ್ ಆಗಿರುವುದನ್ನು ನೋಡಿದ್ದೀರಿ. These are accepted figures, approved figures of the Planning Commission. ಅದನ್ನು ಡಿಸ್‌ಪ್ಯೂಟ್ ಮಾಡತಕ್ಕ ಹಕ್ಕು ನನಗೂ ಇಲ್ಲ ನಿಮಗೂ ಇಲ್ಲ ಯಾವ ಪಕ್ಷದ ಸರ್ಕಾರಕ್ಕೂ ಇಲ್ಲ ಯಾವ ದೇಶದಲ್ಲಿಯೂ ಇಲ್ಲ ರಾಜ್ಯಕ್ಕೆ ಅಷ್ಟೇ ಅಲ್ಲ 10.79 ಪರ್ಸೆಂಟ್‌ನಿಂದ 36.06 ಪರ್ಸೆಂಟ್‌ಗೆ ಏರಿಸಿದ್ದೇವೆ. ಆಮೇಲೆ 1992-93 ನನ್ನದೇ, 38.06ಕ್ಕೆ ಏರಿಸಿದ್ದೇವೆ. ದಯವಿಟ್ಟು ತಾವು ವಿಚಾರ ಮಾಡಿ. ಇದನ್ನು ಏಕೆ ಹೇಳುತ್ತಿದ್ದೇನೆ ಎಂದರೆ, ನನ್ನ ಕಾಲದ ಬಗ್ಗೆ ನಾನು ಹೇಳಿಕೊಳ್ಳಬೇಕಾಗುತ್ತದೆ. ಉಳಿದಿರತಕ್ಕಂಥಾದ್ದು ಮಾನ್ಯ ವೀರಪ್ಪ ಮೊಯಿಲಿಯವರು ಅವರ ಕಾಲದಲ್ಲಿ ವಾರ್ಷಿಕ ಯೋಜನಾಗಾತ್ರ ಎಷ್ಟು, ಎಷ್ಟು ಏರಿಸಿದ್ದೇವೆ ಇತ್ಯಾದಿಗಳ ಬಗ್ಗೆ ಅವರು ಹೇಳಿದ್ದಾರೆ ನಾನು ಹೆಚ್ಚು ಹೇಳುವುದಕ್ಕೆ ಹೋಗುವುದಿಲ್ಲ. ನೀವು ಈ ಮಾತನ್ನು ಆಡಿದ್ದರಿಂದ ನಾನು ನನ್ನ ಪೀರಿಯಡ್ ಬಗ್ಗೆ ಹೇಳುತ್ತಿದ್ದೇನೆ. I would like to compare my figures with that of your previous regimes starting from 1983 to 1989, till

1989, when the Congress Government took over the entire administration to its hand. That is all my point now.

ಮಾನ್ಯ ಸಭಾಧ್ಯಕ್ಷರೇ, ನಾನು ಒಂದೇ ಒಂದು ಹೇಳತಕ್ಕದ್ದು ಏನೆಂದರೆ ಇದು 10 ಪರ್ಸೆಂಟ್‌ನಿಂದ 36 ಪರ್ಸೆಂಟ್‌ಗೆ ಒಂದೇ ಸಾರಿಗೆ ಜಂಪ್ ಕೊಡಬೇಕು ಎಂದರೆ ಅದು ಹೇಗೆ ಸಾಧ್ಯವಾಯಿತು? ನಿಮಗೆ ಸಲಹೆ ಕೊಡತಕ್ಕಂಥ ಶಕ್ತಿ ನನಗೆ ಇದೆಯೋ ಇಲ್ಲವೋ ಗೊತ್ತಿಲ್ಲ. ನಾನು ಹಣಕಾಸಿನ ಸಚಿವನಾಗಿ ಮತ್ತು ಇಷ್ಟು ವರ್ಷ ನನ್ನ ಅನುಭವದ ಒಂದು ವ್ಯಾಪ್ತಿಯಲ್ಲಿ ಬರತಕ್ಕಂಥ ಅನಿಸಿಕೆಯಲ್ಲಿ ಒಂಧೇ ಒಂದು ಮಾತನ್ನು ಹೇಳುತ್ತಿದ್ದೇನೆ. ತಾವು ಅದನ್ನು ಒಪ್ಪುವುದಾದರೆ ಒಪ್ಪಿ, ಬಿಟ್ಟರೆ ಬಿಡಿ. ಅದು ನಿಮಗೆ ಬಿಟ್ಟಿರತಕ್ಕಂಥ ವಿಚಾರ. ಅದು ಯಾರೇ ಇರಲಿ, ಏನೇ ಹೇಳಲಿ. ದಯವಿಟ್ಟು ನೀವು ರಿಸೋರ್ಸಸ್ ಮೊಬಿಲೈಸ್ ಮಾಡುವುದಕ್ಕೆ ಪೂರ್ಣ ಗಮನ ಕೊಡಿ. Commercial Taxes, Excise, Stamp & Registration and Motor Vehicle Taxes, these are the four major areas. ಇದು ನಮ್ಮ ರೆವಿನ್ಯೂ ಸ್ಪಿಯರ್‌ನಲ್ಲಿ ಬರತಕ್ಕಂಥಾದ್ದು. ಇದಕ್ಕೆ ಗಮನಹರಿಸದೇ ಇದ್ದರೆ ನಿಮ್ಮ ರಿಸೋರ್ಸಸ್ ಮೊಬಿಲೈಸೇಶನ್ ಕೆಪ್ಯಾಸಿಟಿಯನ್ನು ಜಾಸ್ತಿ ಮಾಡಲು ಆಗುವುದಿಲ್ಲ. ಇದನ್ನು ತಿಳಿದುಕೊಂಡು ಬಿಡಿ. ನಾನು ಉದಾಹರಣೆಗೆ ಹೇಳುತ್ತೇನೆ. 1800 ಚಿಲ್ಲರೆ ಕೋಟಿ ರೂಪಾಯಿ ಕಮರ್ಷಿಯಲ್ ಟ್ಯಾಕ್ಸ್‌ನಲ್ಲಿ ನನ್ನದು ಇದ್ದರೆ 2200 ಕೋಟಿ ರೂಪಾಯಿಗಳಿಗೆ ಏರಿಸಿದ್ದೇನೆ. The Projected figure If the Plan Year, ಆ ಪ್ಲಾನ್ ಇಯರ್‌ನಲ್ಲಿ 1800 ಕೋಟಿ ಎಸ್ಟಿಮೇಟಡ್ ರೆವಿನ್ಯೂ ಕಮರ್ಷಿಯಲ್ ಟ್ಯಾಕ್ಸ್‌ನಿಂದ ಇದ್ದದ್ದು, ನಾನು ಗಳಿಕೆಯನ್ನು ಮಾಡಿದ್ದು 2015 ಕೋಟಿ. ಆ ವರ್ಷದಲ್ಲಿಯೇ 200 ಕೋಟಿ ಚಿಲ್ಲರೆ ನಾವು ಜಾಸ್ತಿ ಮಾಡಿದ್ದೇವೆ, more then the expected revenue under that Head. ಅದನ್ನು ಹೇಗೆ ಮಾಡಿದೆ ಎಂದು ನಾನು ನಿಮಗೆ ಹೇಳುವುದಕ್ಕೆ ಹೋಗುವುದಿಲ್ಲ. ಏಕೆಂದರೆ ನಿಮ್ಮ ನಿಮ್ಮ ಕಾಲದಲ್ಲಿ ಆಡಳಿತ, ಅಧಿಕಾರಿಗಳು ಮತ್ತೊಂದು ಅವರ ಮೇಲೆ ಅದು ಹೋಗುತ್ತದೆ. ಅದು ನಿಮ್ಮ ಟೀಮ್‌ವರ್ಕ್, ನೀವು ಹೇಗೆ ಮಾಡಿಕೊಳ್ಳಬೇಕು ಎಂಬುದು ನಿಮಗೆ ಬಿಟ್ಟಿರತಕ್ಕಂಥ ವಿಚಾರ. ಎರಡು ನೂರು ಕೋಟಿ ರೂಪಾಯಿ ಹೆಚ್ಚಾಯಿತು. ಈಗ ನೀವು 250 ರಿಂದ 260 ಕೋಟಿ ರೂಪಾಯಿ ಟ್ಯಾಕ್ಸ್ ಹಾಕಿದ್ದೀರಿ. Everybody known that Karnataka State is one of the heavily taxed states in the entire country. ಇದು ನಾನು ಹೇಳತಕ್ಕದ್ದು ಅಲ್ಲ. ನಿಮ್ಮ ಪಕ್ಷದಲ್ಲಿ ಇಲ್ಲಿ ಕುಳಿತುಕೊಂಡು ಭಾಷಣ ಮಾಡಿ ನಿಮ್ಮ ನಿಮ್ಮ ಮಾತುಗಳನ್ನು ನಿಮ್ಮ ಎದುರಿಗೆ ಹಿಡಿದರೆ ನಿಮಗೆ ಏನು ಅನ್ನಿಸುತ್ತದೆ? ನೀವು ಇಲ್ಲೇ ಕುಳಿತುಕೊಂಡು ಹೇಳಿದ್ದೀರಿ. ಇಲ್ಲ, ಕರ್ನಾಟಕ ರಾಜ್ಯ ಅತಿಹೆಚ್ಚಳವಾಗಿರತಕ್ಕಂಥ ತೆರಿಗೆ ಇರುವ ರಾಜ್ಯಗಳಲ್ಲಿ ಒಂದಾಗಿದೆ ಎನ್ನತಕ್ಕಂಥ ಮಾತನ್ನು ತಮ್ಮ ಪಕ್ಷದವರೇ ಭಾಷಣ ಮಾಡುತ್ತಾ ಹೇಳಿರಬೇಕಾದರೆ, I am returning that in the same coin

to you. How are you going to swallow that? I can't understand this. ನನ್ನ ಬಜೆಟ್‌ನಲ್ಲಿ ಟ್ಯಾಕ್ಸೇಷನ್ ಸಿಸ್ಟಮ್‌ನ್ನು ದಯವಿಟ್ಟು ಓದಿ ನೋಡಿ. ಬರೀ ಏಳುಕೋಟಿ, ಎಂಟು ಕೋಟಿ ಅಷ್ಟೆ. ದಯವಿಟ್ಟು ತೆಗೆದುನೋಡಿ. ನನಗೆ ಹೆಚ್ಚು ವಿವರಗಳನ್ನು ಹೇಳಿ ಮಾನ್ಯ ಸದಸ್ಯರುಗಳ ಕಾಲವನ್ನು ಹಾಳುಮಾಡುವುದಕ್ಕೆ ಇಚ್ಛೆ ಇಲ್ಲ. ಏಳು ಕೋಟಿ, ಎಂಟು ಕೋಟಿ ಮೇಲೆ ಹೋಗಿಲ್ಲ. ಕನ್ಸೆಷನ್ ಕೊಟ್ಟುಬಿಟ್ಟರೆ ಬರೀ ಎಂಟು ಕೋಟಿಗೆ ಬದು ನಿಂತಿತ್ತು. ನೀವು ಏನು ಮಾಡಿದ್ದೀರಿ ಎಂದರೆ, ನಿಮ್ಮ ರಿಯಾಯಿತಿ ಎಲ್ಲಾ ತೆಗೆದಮೇಲೆ 200 ಚಿಲ್ಲರೆ ಕೋಟಿ ಏನಿದೆ, ಮುಂದೆ ಬಿಲ್ ಬರುವಹೊತ್ತಿಗೆ, ಟ್ಯಾಕ್ಸೇಷನ್ ಮೆಷರ್ಸ್ ಬರುವ ಹೊತ್ತಿಗೆ ಏನಾಗುತ್ತದೆ? ನಿಜ ಹೇಳಬೇಕೆಂದರೆ ಈ ಟ್ಯಾಕ್ಸೇಷನ್ ವಿಚಾರದಲ್ಲಿ ಅನೇಕ ವಿಷಯಸಮಿತಿಗಳನ್ನು ತಾವು ರಚನೆ ಮಾಡಿದ್ದೀರಿ. ತಮ್ಮ ಅಪ್ಪಣೆಯನ್ನು ಪಡೆದು ನಾನು ಹೇಳುತ್ತಿದ್ದೇನೆ. I am giving one suggestion to the Government. ನೀವು ಟ್ಯಾಕ್ಸೇಷನ್ ವಿಚಾರದಲ್ಲಿ ಹೇಳಿದ್ದೀರಿ. There are Subject Commitees, created by our own Legislature to which we all agreed as Government. ನಾನು ಹೇಳುತ್ತಿದ್ದೇನೆ, ಅಷ್ಟನ್ನೂ ಪೂರ್ತಿಯಾಗಿ ವಿಷಯಸಮಿತಿಗಳ ಮುಂದೆ ದಯವಿಟ್ಟು ಇಡಿ. ಎಲ್ಲಾ ಪಕ್ಷದವರೂ ಸೇರಿಕೊಂಡು ತಮ್ಮ ಮಾರ್ಗದರ್ಶನದಲ್ಲಿ ಸಂಪೂರ್ಣವಾಗಿ ನೋಡೋಣ. ನಾನು ಸಲಹೆಯನ್ನು ಕೊಟ್ಟಿದ್ದೇನೆ. ನೀವು ಇದರ ಬಗ್ಗೆ, ಇಲ್ಲ.ಸಬ್ಜೆಕ್ಟ್ ಕಮಿಟಿಗೆ ಹೋಗುವುದು ಬೇಡ, ನಾವು ಈ ಸದನದಲ್ಲೇ ಇನ್ನೂರು ಚಿಲ್ಲರೆ ಕೋಟಿ ರೂಪಾಯಿ ವಸೂಲು ಮಾಡಬೇಕಾಗಿದೆ. ನಮ್ಮ ವಾರ್ಷಿಕ ಯೋಜನೆಗಾತ್ರ ಏನಿದೆ, ಆ ಡಿಮ್ಯಾಂಡ್ ಮೀಟ್ ಮಾಡುವುದಕ್ಕೆ ನಮಗೆ ಕಷ್ಟವಾಗುತ್ತದೆ ಎನ್ನತಕ್ಕಂಥ ಅಭಿಪ್ರಾಯ ನಿಮಗೆ ಇದ್ದರೆ - I am sorry, I cannot come in your way because you have got to run the administration. But be prepared to pay heavy dividends for that in future. I am forewarning you, right now. Because, ಈಗಾಗಲೇ ಹೆವಿಟ್ಯಾಕ್ಸೇಷನ್ ಇರತಕ್ಕಂಥ ವಿಚಾರದಲ್ಲಿ ಐಟಮ್‌ವೆಸ್ ಪಟ್ಟಿಯನ್ನು ತಾವು ರಿಯಾಯಿತಿ ಕೊಟ್ಟು ಹಾಕಿದ್ದೀರಿ. ನೀವು ಏಕೆ ಇದನ್ನು ಮಾಡುವುದಕ್ಕೆ ಹೋಗುತ್ತೀರಿ? ಅದರ ಬಚಲು ಏನು ಮಾಡಬೇಕೆಂದರೆ, ನಾನು ಏನನ್ನು ಮಾಡಿದ್ದೆ, ಅದನ್ನು ಮಾಡಿ. ನೀವು ನನಗಿಂತಲೂ ಹೆಚ್ಚು ಕೆಲಸ ಮಾಡಿದರೆ ಹೆಚ್ಚು ಟ್ಯಾಕ್ಸೇಷನ್‌ನ್ನು ನೀವು ಕಲೆಕ್ಟ್ ಮಾಡುವುದಕ್ಕೆ ಸಾಧ್ಯವಾಗುತ್ತದೆ. 1800 ಚಿಲ್ಲರೆ ಕೋಟಿ ರೂಪಾಯಿ ಕಮರ್ಷಿಯಲ್ ಟ್ಯಾಕ್ಸ್ ಇದ್ದರೆ 92ರಲ್ಲಿ ನಾವು 2015 ಕೋಟಿ ಮಾಡಿದ್ದೇವೆ. ಇದನ್ನು ದಯವಿಟ್ಟು ತೆಗೆದುನೋಡಿ. ಇನ್ನೂರು ಕೋಟಿ ರೂಪಾಯಿಗಳು ನೀವು ಕಲೆಕ್ಷನ್ ಮಾಡುವುದರಲ್ಲಿ ಇರುತ್ತದೆ. ಇಲ್ಲಿ ನೀವು ಏನು ಟ್ಯಾಕ್ಸ್ ಹಾಕಿದ್ದೀರಿ, ಈ ಟ್ಯಾಕ್ಸ್‌ನ್ನು ಹಾಕುವ ಬದಲು ನೀವು ಕಲೆಕ್ಷನ್ ಚೆನ್ನಾಗಿ ಮಾಡಿಕೊಳ್ಳಿ. ಇದನ್ನು ಕೈಬಿಟ್ಟುಬಿಡಿ.

ಈಗಾಗಲೇ ಅದು ಹೆವಿಯಾಗಿದೆ. ಏನೋ ಅಲ್ಪಸ್ವಲ್ಪ ಯಾವುದಾದರೂ ಭಾರಿ ದೊಡ್ಡ ಐಟಮ್ ಇದ್ದರೆ ಮತ್ತೆ ಕನ್ಸೆಷನ್ ಕೊಟ್ಟು ಮ್ಯಾನೇಜ್ ಮಾಡಿಕೊಂಡು ಹೋಗಬಹುದು. ನಿಮ್ಮಲ್ಲಿ ಈ ಪ್ರಯತ್ನ ಕಾಣುತ್ತಿಲ್ಲ. ಟ್ಯಾಕ್ಸೇಷನ್ ಮುಖಾಂತರ Plan size demand ಅನ್ನು ನೀವು ಮೀಟ್ ಮಾಡತಕ್ಕಂಥ ವಿಧಿವಿಧಾನ ಇದೆಯಲ್ಲಾ ಅದರಿಂದ ರಾಜ್ಯದ ಜನತೆಗೆ ಮಾತ್ರ ಏನೂ ಸಹಾಯವಾಗುವುದಿಲ್ಲ. ಇದರಿಂದ ಬಹಳ ಪೆಟ್ಟು ಜನತೆಗೆ ಬೀಳುತ್ತದೆ ಮತ್ತು ಅಂತಿಮವಾಗಿ ಅದು ನಿಮಗೇ ಬೀಳುತ್ತದೆ. ಈ ಸಂದರ್ಭದಲ್ಲಿ ನಾನು ನಿಮಗೆ ಒಂದು ಸಲಹೆಯನ್ನು ಕೊಡಬಲ್ಲೆ. Resource mobilisation capacity ವಿಚಾರದಲ್ಲಿ ನೀವು ಅನ್ನಬಹುದು ಎಕ್ಸೈಸ್ ಏನು ಆಗಿತ್ತು ಎನ್ನತಕ್ಕಂಥ ಮಾತನ್ನು. ಅದನ್ನು ಮುಂದೆ ನಾನು ಹೇಳುತ್ತೇನೆ. ಎಕ್ಸೈಸ್‌ನಲ್ಲಿಯೂ ಕೂಡ ನನ್ನ ಕಾಲದಲ್ಲಿ 90ರಿಂದ 93ರ ಈ ಕಾಲದಲ್ಲಿ ಏಕೆಂದರೆ 89-90ರ ಹೊತ್ತಿಗೆ ಮಾನ್ಯ ವೀರೇಂದ್ರಪಾಟೀಲ್ ಅವರ ಸರ್ಕಾರ ಇಲ್ಲಿ ಇತ್ತು. ಅವರ ಕಾಲದಲ್ಲಿಯೂ ಕೂಡ ಪ್ರಾಮಾಣಿಕವಾಗಿರತಕ್ಕಂಥ ಪ್ರಯತ್ನವನ್ನು ಅವರು ಮಾಡಿದ್ದಾರೆ ಎನ್ನತಕ್ಕಂಥಾದ್ದು ಅಂಕಿಅಂಶಗಳಿಂದ ನನಗೆ ಗೊತ್ತಾಗುತ್ತದೆ ಎನ್ನುವ ಮಾತನ್ನು ನಾನು ಮುಖ್ಯಮಂತ್ರಿಯಾಗಿದ್ದಾಗ ಹೇಳಿದ್ದೇನೆ. ನಾನು ಇಲ್ಲಿ ರಾಜಕೀಯವನ್ನು ಬೆರೆಸುವುದಕ್ಕೆ ಹೋಗಲಿಲ್ಲ. ಆ ಕಾಲದಲ್ಲಿ ಬೇಕಾದಷ್ಟು ರಾಜಕೀಯ ಬೆಳವಣಿಗೆಗಳು ನಮ್ಮ ಕಾಂಗ್ರೆಸ್ ಪಾರ್ಟಿಯಲ್ಲಿ ನಡೆಯಿತು. ಆದರೆ ಮಾನ್ಯ ಅಧ್ಯಕ್ಷರೇ, ಪ್ರಾಮಾಣಿಕ ಪ್ರಯತ್ನ ಇದರಲ್ಲಿ ಇದೆ, ಮತ್ತು ಮುಂದೆ ನನ್ನ ಪ್ರಾಮಾಣಿಕ ಪ್ರಯತ್ನ ಈ ರೀತಿ ಇರುತ್ತದೆ ಎನ್ನತಕ್ಕಂಥ ಮಾತನ್ನು ನಾನು ಆಗಿದ್ದೆ. ಇವತ್ತು ಏನಾಗಿದೆ ಎಂದರೆ ಈ tremendous increase in investment,ನಲ್ಲಿ ಅದು ಜಾಸ್ತಿಯಾಗಿರುವುದನ್ನು ನಾವು ಕಾಣುತ್ತಿದ್ದೇವೆ because we are at the fag end of the 8th plan period now. ನಾನು ಒಂದು ಸಲಹೆಯನ್ನು ಕೊಡುತ್ತೇನೆ, ಅದು ಏನೆಂದರೆ Please try to maintain that first; ನೀವು ಇದನ್ನು ಇಳಿದುಕೊಂಡುಬಿಟ್ಟಿರಿ. You are missing the bus. ಇದನ್ನು ನೀವು ಬಿಟ್ಟುಬಿಟ್ಟರೆ ಮುಂದೆ ಒಂಭತ್ತನೇ ಪ್ಲಾನ್ ಪೀರಿಯಡ್‌ಗೆ ಬಹಳ ಪೆಟ್ಟಾಗುತ್ತದೆ. ಅದಕೋಸ್ಕರ ನಾನು ಹೇಳುವುದು ಏನೆಂದರೆ ಈಗ 7 ನೇ ಪ್ಲಾನ್ ಔಟ್‌ಲೇ 3,575 ಕೋಟಿ ಇತ್ತು. 12,300 ಕೋಟಿಗೆ ಒಂದೇ ಸಾರಿ ನಾವು ಜಂಪ್ ತರಬೇಕು ಎಂದರೆ ರಿಸೋರ್ಸ್‌ಸ್ ಮೊಬಲೆ ಸೇಷನ್ ಕೆಪ್ಯಾಸಿಟಿ ಎಷ್ಟಕ್ಕೆ ನಾವು ಹೊರಟುಹೋಗಿರಬಹುದು ಎನ್ನತಕ್ಕಂಥಾದ್ದನ್ನು ನೀವು ವಿಚಾರ ಮಾಡಬೇಕು. ಅಂದರೆ ಇಲ್ಲಿ ವಾರ್ಷಿಕ ಯೋಜನೆಗಾತ್ರ 89-90ರಲ್ಲಿ 1030 ಕೋಟಿ ಇದ್ದರೆ 92-93ರ ಹೊತ್ತಿಗೆ Investment has gone up to Rs.2,159 crores. You must appreciate us. ಏಕೆಂದರೆ ಈ ರೀತಿ ನೀವು ಜನರಲ್ ಆಗಿ ಹೇಳುತ್ತ ನೀವು ಬಜೆಟ್ ಭಾಷಣ ಪ್ರಿಂಟ್ ಮಾಡಿ ಹೀಗೆ ಕೊಡುತ್ತಾ ಹೋಗಿಬಿಟ್ಟರೆ ನೀವು ಅಂಕಿಅಂಶಗಳನ್ನು approved by planning commission ನೀವು

ಒಪ್ಪುವುದಕ್ಕೆ ತಯಾರಿದ್ದೀರೊ? Can you be the authority over and above the Planning Commission created under the Costitution? I am posing this question to you through the Hon'ble Speaker. ಅದಕೋಸ್ಕರ ನಿಮಗೆ ಆ ಹಕ್ಕು ಉಳಿಯುವುದಿಲ್ಲ, ನಮಗೂ ಕೂಡ ಉಳಿಯುವುದಿಲ್ಲ. ಈ ಇನ್‌ಕ್ರೀಸ್ ಇರುವುದು ಎಷ್ಟು ಇದೆಯೆಂದರೆ 110 ಪರ್ಸೆಂಟ್. This is just for your kind information. ಇಲ್ಲಿ ನಾವು ಎಂಟನೇಯ ಪ್ಲಾನ್ ಪೀರಿಯಡ್‌ನಲ್ಲಿ the expected growth rate to achieve was 5.6%. ಅದನ್ನು ಸರಿಯಾಗಿ ನೆನಪು ಇಡಬೇಕಾಗುತ್ತದೆ. ನೀವು ಅದನ್ನು ಅಚೀವ್ ಮಾಡಬೇಕು ಎಂದರೆ ಏನು ಮಾಡಬೇಕೆಂಬುದನ್ನು ಹೇಳುತ್ತೇನೆ. 1989ರ ಚುನಾವಣೆಯ ನಂತರ 89-90ರ ಬಜೆಟ್‌ನಿಂದ there has been a steady growth rate, till this day, till you took over ನಿಮಗೆ ಅನುಮಾನ ಬೇಡ. ಅದು ಇದೆ. ಸ್ವಲ್ಪ ಕಡಿಮೆಯಾಗುವುದು, ಜಾಸ್ತಿಯಾಗುವುದು ಮತ್ತೊಂದು ಇದೆ. ನಾನು ಹೇಳುವುದು ಏನೆಂದರೆ ನೀವು ಇದನ್ನು ಮೈನ್‌ಟೇನ್ ಮಾಡಿ. ಏಕೆಂದರೆ ಇನ್ನೊಂದು ವರ್ಷ ಮಾತ್ರ ಉಳಿದುಕೊಂಡಿರುವುದು. ನೀವು ಬರೀ ರಾಜಕೀಯ ಭಾಷಣ ಮಾಡಿಕೊಂಡು ಹೋಗಿ ಎಲ್ಲಿಯಾದರೂ ಹೆಚ್ಚುಕಡಿಮೆಯಾಗಿ ನಿಮ್ಮ ರೆವಿನ್ಯೂ ಕಲೆಕ್ಷನ್ ಕಡಿಮೆಯಾಗಿಬಿಟ್ಟರೆ ರಿಸೋರ್ಸಸ್ ಮೊಬಲೆ ಸೇಷನ್ ಬಿದ್ದುಹೋಗಿಬಿಟ್ಟರೆ ನಾನು ಹೇಳುತ್ತಿದ್ದೇನೆ, you are going to do great injustice to the overrall development of Karnataka State.

ನಾನು, ನಿಮಗೆ ಇದೊಂದು ಪೀಸ್ ಆಫ್ ಸಜೆಷನ್ ಕೊಡತಕ್ಕಂಥಾದ್ದು. ಇದನ್ನು ಒಪ್ಪುವುದು, ಬಿಡುವುದು ನಿಮಗೆ ಬಿಟ್ಟಿರತಕ್ಕಂಥಾದ್ದು, because power is in your hand. ಇದರ ಮೇಲೆ ನಿಮ್ಮ ಇಷ್ಟ ಎನ್ನತಕ್ಕಂಥಾ ಅಭಿಪ್ರಾಯಕ್ಕೆ ಈ ಸಂದರ್ಭದಲ್ಲಿ ಬರುತ್ತಿದ್ದೇನೆ. ಆಮೇಲೆ plan size under Five year Plan period ಇರಬಹುದು ಅಥವಾ to meet the demand of the five year plan also. ಇದನ್ನು ನಾವು ಏಕೆ ಮಾಡುತ್ತೇವೆ? It is to reduce the proverty line. ಇವತ್ತು ನಿಮಗೆಲ್ಲರಿಗೂ ಗೊತ್ತಿದೆ. 32 ಪರ್ಸೆಂಟ್‌ನಿಂದ 25 ಪರ್ಸೆಂಟ್‌ವರೆಗೆ ಇಳಿಸತಕ್ಕಂಥಾದ್ದು 8ನೇ ಯೋಜನೆಯ ಗುರಿಯಾಗಿದೆ, ಇದನ್ನು ನೀವು ಮರೆಯಬಾರದು. ಇದು ಎಂಟನೆಯ ಪಂಚವಾರ್ಷಿಕ ಯೋಜನೆಯ ಗುರಿಯಾಗಿದೆ. ನಿಮಗೇನಾದರೂ ರಿಸೋರ್ಸ್ ಮೊಬಲೈಸೇಷನ್ ಕೆಪಾಸಿಟಿ ಬಿದ್ದುಹೋದರೆ, ನಾನು ಹೇಳುತ್ತೇನೆ. ಈಗೇನು 32 ಪರ್ಸೆಂಟ್‌ಗೇ ನಿಲ್ಲಬಹುದು ಅಥವಾ 38-40 ಪರ್ಸೆಂಟ್‌ಗೆ ಹೋಗಬಹುದು. ಏಕೆಂದರೆ, proportionate to population growth rate ಅಲ್ಲಿ ಜಾಸ್ತಿ ಇದೆ. ಜನಸಂಖ್ಯೆ ಜಾಸ್ತಿ ಇದೆ, ಪಾವರ್ಟಿ ಲೆನ್ ಕೂಡ ಅದರ ಮೇಲೆ,

ಜಾಸ್ತಿಯಾಗಿ ಹೋಗುತ್ತದೆ. ಆದ್ದರಿಂದ, ನೀವು ಬಹಳ ಸೀರಿಯಸ್ಸಾಗಿರತಕ್ಕಂಥ ಸಂದರ್ಭ ಅಥವಾ ಪರಿಸ್ಥಿತಿಯಲ್ಲಿದ್ದೀರಿ ಎನ್ನತಕ್ಕಂಥ ಅಭಿಪ್ರಾಯವನ್ನು ಕೂಡ ಹೇಳುತ್ತಿದ್ದೇನೆ. To increase employment opportunities by giving productive employment a scheme called "Vishwa' "" ವಿಶ್ವ'' ಅದು ಪ್ರೊಡಕ್ಟೀವ್ ಎಂಪ್ಲಾಯ್‌ಮೆಂಟ್ ಕೊಡತಕ್ಕ ಕಾರ್ಯಕ್ರಮ. I was the only person, when I was the Chief MInister, started this kind of programme in the whole of country...ನಿಜ ಹೇಳಬೇಕೆಂದರೆ, ನನ್ನ ಗುರಿ ಇತ್ತು. ಆ ವರ್ಷದಲ್ಲಿ ನಾನು ಸುಮಾರು 400-500-600 ಕೋಟಿಯವರೆಗೆ ಹೋಗೋಣವೆಂದು ಇದ್ದೆ. ಹಲವಾರು ಕಾರಣಗಳಿಂದ ನಾನು ಅಧಿಕಾರ ಬಿಟ್ಟೆ, ಆ ಪ್ರಶ್ನೆಪ್ರತ್ಯೇಕ. ಇವತ್ತು ಹಳ್ಳಿಗಳಿಗೆ, ನಾವೂ, ನೀವೂ ಹೋಗುತ್ತೇವೆ. ಅಲ್ಲಿಯ ಜನಗಳದ್ದು ತಪ್ಪು ಎಂದು ನಾನು ಆ ಜನರನ್ನು ಸುಮ್ಮಸುಮ್ಮನೆ ದೂಷಣೆ ಮಾಡಿದರೆ ಉಪಯೋಗವಾಗುವುದಿಲ್ಲ. ಹಳ್ಳಿಗಳಲ್ಲಿ ಜನರು ಹಳ್ಳಿ ಕಟ್ಟೆ ಮೇಲೆ ಕುಳಿತುಕೊಳ್ಳುತ್ತಾರೆ, ಮನೆಗಳ ಜಗಲಿ ಮೇಲೆ ಕುಳಿತುಕೊಳ್ಳುತ್ತಾರೆ. ಇದನ್ನು ನೋಡಿದರೆ, ನಾನು ಹೇಳುತ್ತೇನೆ. ಇವತ್ತು ನಮ್ಮ ದೇಶ ಪ್ರಗತಿ ಪಥದಲ್ಲಿ ಇಲ್ಲವೆನ್ನತಕ್ಕ ಮಾತನ್ನು ನಾವು ಆಡಲೇಬೇಕಾಗುತ್ತದೆ. ಅದು ಪಟ್ಟಣ ಇರಬಹುದು ಅಥವಾ ಗ್ರಾಮೀಣ ಪ್ರದೇಶ ಇರಬಹುದು. ಹೇಗಿರಬೇಕೆಂದರೆ, ಜನರು ಕಟ್ಟೆಯ ಮೇಲೆ ಕುಳಿತುಕೊಳ್ಳಬೇಕು ಅಥವಾ ಹೊರಗಡೆ ಬಯಲು ಜಾಗದಲ್ಲಿ ಕುಳಿತುಕೊಳ್ಳಬೇಕು. ಆದರೆ, ನಾವು ಯಾವ ಜನರನ್ನು ನೋಡಬೇಕೆಂಬ ಆಸೆ ಎಂದರೆ, hope you will also agree with my suggestion. ಜನರು ಎಂಪ್ಲಾಯ್‌ಮೆಂಟ್‌ನಲ್ಲಿದ್ದು, ಕುಳಿತುಕೊಳ್ಳಬೇಕೆಂದು ನನ್ನ ಆಸೆ. ನಮ್ಮ ದೇಶದಲ್ಲಿರತಕ್ಕಂಥ ಜನಸಂಖ್ಯೆ ಆಧಾರದಮೇಲೆ, ನೀವು ಈ ಕರ್ತವ್ಯವನ್ನು ಮಾಡದಿದ್ದರೆ, ಬೆಳೆದಿರತಕ್ಕಂಥ ಜನಸಾಂದ್ರತೆ, ಜನಸಂಖ್ಯೆ ಈ ಪರ್ಸೆಂಟೇಜ್ ಇದೆಯಲ್ಲಾ, ಇದಕ್ಕೆ ಉತ್ತರವನ್ನು ಕೊಡಲು ಯಾರಿಗೂ ಆಗುವುದಿಲ್ಲ. ಆದ್ದರಿಂದ ದಯಮಾಡಿ, ರಾಜಕೀಯ ಮಾಡುವುದನ್ನು ಕೈಬಿಟ್ಟು, ಇದನ್ನು ವಿಚಾರ ಮಾಡಬೇಕಾಗುತ್ತದೆ. You will have to take the co-operation, best help even from the Opposition Party also may be BJP or that Congress, or our Congress, or other Congress, Independents, some other parties or MES as far as this House is concerned...ಯಾರೇ ಜನರಿದ್ದರೂ ಕೂಡ, ದಯಮಾಡಿ ಅವರ ಸಹಾಯ ಮತ್ತು ಸಹಕಾರವನ್ನು ಪಡೆದು ಮುಂದಕ್ಕೆ ಹೋಗತಕ್ಕ ವಿಚಾರದ ಬಗ್ಗೆ ಗಮನಹರಿಸತಕ್ಕ ವಿಚಾರವಿರಲಿ ಎನ್ನುವ ವಿಚಾರವನ್ನು ಈ ಸಂದರ್ಭದಲ್ಲಿ ಹೇಳುತ್ತಿದ್ದೇನೆ. ಇದರಲ್ಲಿ ನೀವೇನು ಮಾಡಬೇಕು? ಇರಿಗೇಷನ್ ಸೆಕ್ಟಾರ್, ಪವರ್ ಸೆಕ್ಟಾರ್‌ನಲ್ಲಿ ಅಡಿಷನಲ್ ಕೆಪಾಸಿಟಿಯನ್ನು ಪೂರ್ಣವಾಗಿ ತುಂಬಬೇಕು. ಹಾಗೆ ತುಂಬಬೇಕೆಂದರೆ,

ಪ್ಲಾನ್ ಸೆಜ್ ಜಾಸ್ತಿ ಮಾಡಬೇಕಾಗುತ್ತದೆ, ಇದು ಅನಿವಾರ್ಯ ಎನ್ನತಕ್ಕಂಥ ಸಂದರ್ಭ. ಆಮೇಲೆ ಮೂಲಭೂತ ಸೌಲಭ್ಯಗಳನ್ನು ಕೊಡತಕ್ಕಂಥಾದ್ದು. ವಿದ್ಯಾಭ್ಯಾಸ, ವಸತಿ, ಆರೋಗ್ಯ, ನೀರು, ಕುಡಿಯುವ ನೀರು ಇವುಗಳನ್ನು ಗ್ರಾಮೀಣ ಮತ್ತು ಪಟ್ಟಣ ಪ್ರದೇಶಗಳಲ್ಲಿ ಕವರ್ ಮಾಡಬೇಕಾಗುತ್ತದೆ. ಇವು ಕಾಮನ್ ಆಗಿರತಕ್ಕಂಥ ವಿಷಯಗಳು. ಇವೆಲ್ಲಾ ಬಹಳ ಮುಖ್ಯವಾದ ವಿಷಯಗಳು. ಇವುಗಳನ್ನು ಗಮನದಲ್ಲಿಟ್ಟುಕೊಂಡು ವಿಚಾರ ಮಾಡಿದರೆ, ಬಡತನವನ್ನು ಕಡಿಮೆ ಮಾಡಬಹುದು. ನಿಮಗೆ ಇದರಲ್ಲಿ, ನಿಮ್ಮ ಆರ್ಥಿಕಾಭಿವೃದ್ಧಿ ಸ್ಪಷ್ಟವಾಗಿ ಸಿಗುತ್ತದೆ. ಇಲ್ಲದಿದ್ದರೆ, ನೀವು ಇದೇ ರೀತಿ ಬಜೆಟ್‌ನಲ್ಲಿ ಬರೆದುಕೊಳ್ಳುತಾ ಹೋದರೆ ದಾರಿತಪ್ಪಿ ಏನಾದರೂ ತಪ್ಪು ಹೆಜ್ಜೆ ಇಟ್ಟರೆ, ಈಗಲೇ ತಮಗೆ ಎಚ್ಚರಿಕೆಯನ್ನು ಕೊಡುತ್ತಿದ್ದೇನೆ. ಹಣಕಾಸಿನ ದೃಷ್ಟಿಯಿಂದ, ಅಭಿವೃದ್ಧಿ ದೃಷ್ಟಿಯಿಂದ ಮುಂದೆ ಬಹಳ ದೊಡ್ಡ ತೊಂದರೆಗೆ ಸಿಕ್ಕಿಕೊಳ್ಳುತ್ತೀರಿ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. Plan investment in 5th plan period 998 ಕೋಟಿ ಇದೆ. 6ನೇ ಯೋಜನೆಯಲ್ಲಿ 2265 ಕೋಟಿ ಇದೆ. 7ನೇ ಯೋಜನೆಯಲ್ಲಿ 3,500 ಕೋಟಿ ಚಿಲ್ಲರೆ ಇದೆ. ಇದು ನಮ್ಮ ಕಾಲದಲ್ಲಿ ಒಂದೇಸಾರಿ ಜಂಪ್ ಆಯಿತು, 12,300 ಕೋಟಿಗೆ ಜಂಪ್ ಮಾಡಿದ್ದೇವೆ. On the other hand you must commend our honest efforts, ನಮ್ಮ ಪ್ರಾಮಾಣಿಕ ಎಫರ್ಟ್ಸ್‌ನ್ನು, ಮೆಚ್ಚತಕ್ಕ ಔದಾರ್ಯ ನಿಮ್ಮ ಹತ್ತಿರ ಇಲ್ಲದಿದ್ದರೆ, ಅದು ತಿರುಗಿ ನಿಮಗೆ ರಿಬೌಂಡ್ ಆಗುತ್ತದೆ ಎಂಬ ಅಭಿಪ್ರಾಯವನ್ನು ಕೂಡ ಈ ಸಂದರ್ಭದಲ್ಲಿ ಕೊಡುತ್ತಿದ್ದೇನೆ. ನಾನು ಹೇಳುವುದು ವಾರ್ಷಿಕ ಯೋಜನೆ ವಿಚಾರ. ನಿಮ್ಮ ಕಾಲದ್ದು 1985-86, 693 ಕೋಟಿ ಇದೆ, 1986-87ರಲ್ಲಿ 796 ಕೋಟಿ ಇತ್ತು. 1987-88ಕ್ಕೆ 814 ಕೋಟಿ ಇತ್ತು. ಹೆಚ್ಚು ಎಂದರೆ, ಒಂದು ನೂರು, ಒಂದು ನೂರು ಕೋಟಿ, ಇಷ್ಟೆ ನಿಮ್ಮದು. 1988-89ರಲ್ಲಿ 883 ಕೋಟಿ ಇದೆ. 1987-88ರಲ್ಲಿ ಇನ್‌ವೆಸ್ಟ್‌ಮೆಂಟ್ 814 ಕೋಟಿ ಇದ್ದರೆ, 1988-89ರಲ್ಲಿ 883 ಕೋಟಿ ಅಂದರೆ, 60 ಚಿಲ್ಲಿರೆ ಅಥವಾ 70 ಕೋಟಿ ಮಾತ್ರ ಜಾಸ್ತಿಯಾಗಿದೆ. ನಿಮ್ಮ ಸಾಧನೆಗೆ ಇವೆಲ್ಲಾ ದಿಕ್ಸೂಚಿಗಳು. ನಾವು ಒಪ್ಪಿಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆಯೇ? ಆಮೇಲೆ 1989-90ಕ್ಕೆ 1029 ಕೋಟಿಗೆ ಹೊರಟು ಹೋಯಿತು. ಇದು ಕಾಂಗ್ರೆಸ್ ಸರ್ಕಾರ, ಇಲ್ಲಿ ಬಂದಿರತಕ್ಕ ಕಾಲ. 1990-91ಕ್ಕೆ 1029ರಿಂದ ಎಲ್ಲಿಗೆ ಹೋಗಿದೆ ಎಂಬುದನ್ನು ಸ್ವಲ್ಪ ದಯಮಾಡಿ ಗಮನಿಸಿ. 1989-90 ರಿಂದ 1990-91ಕ್ಕೆ 1361 ಕೋಟಿಗೆ ಜಂಪ್ ಆಗಿ ಹೋಗಿದೆ. There has been steep increase by 300 and odd in the increase of plan growth rate.

1991-92ಕ್ಕೆ 1515 ಕೋಟಿಗೆ ಹೊರಟು ಹೋಗಿದೆ. 1992-93ಕ್ಕೆ 2158ಕ್ಕೆ ಎಂದರೆ, ಆರುನೂರು ಕೋಟಿ ಚಿಲ್ಲರೆ- ಏಳುನೂರು ಕೋಟಿಗೆ ಹೋಗಿದೆ. ಅದು ನನ್ನ

ಕಾಲ. ನಿಮಗೆ ಯಾವರೀತಿ ನನ್ನ ಅಡ್ಮಿನಿಸ್ಟ್ರೇಷನ್ ಮೇಲೆ ಕಾಮೆಂಟ್ ಮಾಡುವುದಕ್ಕೆ ಹಕ್ಕು ಬರುತ್ತದೆ. ಇವೆಲ್ಲ ಅಂಕಿಅಂಶಗಳನ್ನು ಏತಕ್ಕೆ ಕೊಡುತ್ತಿದ್ದೇನೆಂದರೆ, ರಿಸೋರ್ಸ್ ಮೊಬಲೈಸೇಷನ್ ಕೆಪಾಸಿಟಿಯನ್ನು ಗಮನದಲ್ಲಿಟ್ಟು, ಯೋಜನಾ ಆಯೋಗದ ಒಪ್ಪಿಗೆಯನ್ನು ಪಡೆಯುತಕ್ಕ ಕಾಲದಲ್ಲಿ ಅವರು ಏನು ಹೇಳಿದರು ಗೊತ್ತೇ, ಅವರು ಒಂದೇಒಂದು ಮಾತನ್ನು ಹೇಳಿದರು. ನಾನು ಹೊಗಳಿಕೆಗೆ ಈ ಮಾತನ್ನು ಹೇಳುತ್ತಾ ಇಲ್ಲ, ನನಗೆ ಯಾರ ಸರ್ಟಿಫಿಕೇಟ್ ಬೇಕಾಗಿಲ್ಲ. ನನ್ನ ಕಾಲದಲ್ಲಿ ಪ್ಲಾನಿಂಗ್ ಕಮೀಷನ್‌ನವರು ಪತ್ರ ಬರೆದರು. ಅವರು ಈ ರೀತಿ ಪತ್ರ ಬರೆಯುತ್ತಾರೆ ಎನ್ನತಕ್ಕ ಪದ್ಧತಿ, ನನಗೂ ಗೊತ್ತಿರಲಿಲ್ಲ. ಅವರು ಏನು ಬರೆದರು ಎಂಬುದು ಇನ್‌ವರ್‌ಟೆಡ್ ಕಾಮಾನ್‌ನಲ್ಲಿ ಇದೆ. ಅವರು ಬರೆದಿರತಕ್ಕ ಪತ್ರವನ್ನು, ಸರ್ಕಾರದವರು ತರಿಸಿ, ಓದಿ ನೋಡಿ. ಅವರು ಏನು ಬರೆದಿದ್ದಾರೆ ಗೊತ್ತೇ ಪ್ಲಾನಿಂಗ್ ಕಮೀಷನ್ ಪ್ರೈಸಸ್ ಇದು ನನ್ನ ಕಾಲದಲ್ಲಿ ಬರೆದಿರತಕ್ಕ ಪತ್ರ. " Planning Commission praises the Resource mobilisation efforts-" ಸಂಗ್ರಹಣೆ ಮಾಡತಕ್ಕ ವಿಚಾರದಲ್ಲಿ, ಪ್ರೈಸಸ್ ರಿಸೋರ್ಸ್ ಮೊಬಲೆ ಸೇಷನ್ ಎಫರ್ಟ್ಸ್. ರಾಜ್ಯಸರ್ಕಾರಕ್ಕೆ ಅವರು ಬರೆಯುವುದಿಲ್ಲ, ಪ್ಲಾನಿಂಗ್ ಕಮೀಷನ್‌ನವರು ಬರೆಯುವುದು ಬಹಳ ಕಷ್ಟ. ಅವರು ಯಾವಾಗಲೂ, ನೀವು ಮಾಡುತ್ತಾ ಇಲ್ಲ, ವಾರ್ಷಿಕ ಪ್ಲಾನ್ ಸೈಜ್ ಒಪ್ಪುವುದಕ್ಕೆ ಜಾಸ್ತಿ ಇದೆ. ನಿಮಗೆ ಫೈವ್ ಇಯರ್ ಪ್ಲಾನ್ ಸೈಜ್ ಅಷ್ಟು ಕೊಡುವುದಕ್ಕಾಗುವುದಿಲ್ಲವೆಂದು ಯಾವಾಗಲೂ ತಕರಾರು ಮಾಡುತ್ತಾರೆ. ನೀವೂ ಕೂಡ ಚರ್ಚೆಗೆ ಹೋದಾಗ, ಅವರು ತಕರಾರು ಇಲ್ಲದೇ ಒಪ್ಪುವುದು ಸಾಧ್ಯವೇ ಇಲ್ಲ. ಅವರು ಯಾವಾಗಲೂ ತಕರಾರು ಮಾಡುತ್ತಾರೆ. "" Planning Commission praises resources mobilisation efforts and fiscal management..."

ಸ್ವಾಮಿ, ನಾನು ಕೇಳುತ್ತಿದ್ದೇನೆ. ನಮ್ಮ ಕಾಲದಲ್ಲಿ ಅಂದರೆ, 1981ಕ್ಕೆ ಮುಂಚೆ ಹಾಳಾಗಿ ಹೋಯಿತು ಎನ್ನುವ ಮಾತನ್ನು ಆಡುತ್ತಿದ್ದಿರಿ. ಹಾಗಾದರೆ, 1989ರ ನಂತರ, ನಾವು ಅಧಿಕಾರಕ್ಕೆ ಬಂದ ಮೇಲೆ ಏನಾಯಿತು? ನಾನು ಒಂದು ಮಾತನ್ನು ಹೇಳುತ್ತೇನೆ. Fiacal management of the Karnataka Government appreciated ಮಾಡುತ್ತೇವೆ ಎನ್ನತಕ್ಕಂಥಮಾತನ್ನು ಅವರು ಬರೆಯುತ್ತಾರೆ. ಜೊತೆಗೆ, State Government schemes for providing house sites. ನಾನು ಮುಂದೆ ಬರುತ್ತಿದ್ದೇನೆ. ನಿಮ್ಮ ಕಾಲದಲ್ಲಿ ಹೌಸ್ ಸೈಟ್ಸ್ ಎಷ್ಟೆಷ್ಟು ಕೊಟ್ಟಿದ್ದೀರಿ, ನಮ್ಮ ಕಾಲದಲ್ಲಿ ಎಷ್ಟು ಕೊಟ್ಟಿದ್ದೇವೆ ಎಂಬ ಬಗ್ಗೆ ಅಂಕಿಅಂಶಗಳ ಸಹಿತ ಅನಂತರ ಬರುತ್ತೇನೆ. The State Government schemes for providing house sites to the weaker sections and I am plemantation of Ittliteracy & Population control schemes are also com-

mendable. ಸ್ವಾಮಿ, ನಿಮ್ಮ ಹೊಗಳಿಕೆ ನಮಗೆ ಬೇಕಾಗಿಲ್ಲ. ಬಜೆಟ್ ಭಾಷಣದಲ್ಲಿ ಏನಾದರೂ ಬರೆದಿದ್ದೀರೆಂದು ಇಟ್ಟುಕೊಳ್ಳೋಣ, ಇಲ್ಲ, ಇಲ್ಲ, ಹಿಂದಿನ ಸರ್ಕಾರದವರು, ನಿಜವಾಗಿಯೂ ಪ್ರಾಮಾಣಿಕ ಪ್ರಯತ್ನ ಮಾಡಿದ್ದಾರೆ ಎಂದು, ನೀವು ಪ್ರಾಮಾಣಿಕತೆ ಬಗ್ಗೆ ಒಂದು ಮಾತನ್ನು ಆಡಿದ್ದರೆ, ನಾನು ಈ ಮಾತನ್ನು ಆಡುವುದಕ್ಕೆ ಬಂದಕೂಡಲೇ, ಒಂದೇಸಾರಿ ಪ್ರಾರಂಭ ಮಾಡಿಯೇ ಬಿಟ್ಟಿದ್ದಾರೆ. ಇವರು ತಡವನ್ನೇ ಮಾಡಲಿಲ್ಲ. ಈ ರೀತಿಯಾದ ಹೆಜ್ಜೆ ಏನಿದೆ, ಇದೆಂದೂ ಕೂಡ ಒಳ್ಳೆಯ ಹೆಸರನ್ನು ತರುವುದಿಲ್ಲ ಎನ್ನುವ ಅಭಿಪ್ರಾಯವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದಲ್ಲದೆ, Poverty alleviation programme welfare of weaker sections ಬಗ್ಗೆ ಇರತಕ್ಕ ಕಾರ್ಯಕ್ರಮಗಳ ಬಗ್ಗೆ ನಾನು ಆನಂತರ ಒಂದೊಂದಾಗಿ ಬರುತ್ತೇನೆ.

ಅಧ್ಯಕ್ಷರು:- ಇವರು ಪೀರಿಯಡ್ಸ್ ಕ್ಲಾಸಿಫೈ ಮಾಡಿಲ್ಲ, ಎಲ್ಲಾ ಒಟ್ಟಿಗೆ ಕ್ಲಬ್ ಮಾಡಿ, ಬುಲ್ಡೋಜ್ ಮಾಡಿದ್ದಾರೆ.

ಶ್ರೀ ಎಸ್.ಬಂಗಾರಪ್ಪ:- ಅದನ್ನೇ ನಾನು ಹೇಳುವುದು. ಎಲ್ಲವನ್ನೂ ಒಟ್ಟಿಗೆ ಸೇರಿಸಿದ್ದಾರೆ. ತಾವು ಹೇಳಿದಹಾಗೆ ಕ್ಲಾಸಿಫೆ ಮಾಡಿದ್ದರೆ....

ಅಧ್ಯಕ್ಷರು:- ನಿಮಗೆ ಈ ಕೆಲಸ ಇರುತ್ತಾ ಇರಲಿಲ್ಲ.

ಶ್ರೀ ಎಸ್.ಬಂಗಾರಪ್ಪ:- ನನ್ನ ಅವತ್ತಿನ ಎರಡು ವರ್ಷಗಳ ಕಾಲ ಏನಿತ್ತು, ಆ ಕಾಲದಲ್ಲಿ there has been tremendous growth rate---- ಇದು ನಾನು ಹೇಳಿರತಕ್ಕ ವಿಚಾರ ಅಲ್ಲ. ಅದಕ್ಕೆ ಪದೇಪದೇ ಹೇಳುತ್ತಿದ್ದೇನೆ, which accounts for ultimate economic growth of the State...

ನೀವು ಬರೆಯಬೇಕಾಗಿತ್ತು ಬಂಗಾರಪ್ಪನವರ ಕಾಲ ಒಂದು ಬಿಟ್ಟು ಎಂದು; ಎನು ನಿಮಗೆ ಹಾಳಾಗುತ್ತಿತ್ತು? ಬೇರೆಯವರ ಬಗ್ಗೆ ಎನು ಬರೆಯಬೇಕು ಎನ್ನುವ ಬಗ್ಗೆ ಅವರನ್ನು ನೀವು ಖಂಡಿಸಬೇಕೋ ಬಿಡಬೇಕೋ ಎನ್ನುವ ಬಗ್ಗೆ ಸಲಹೆ ಕೊಡುತ್ತಿಲ್ಲ. ಅದು ನಿಮಗೆ ಬಿಟ್ಟಿದ್ದು ನೀವು ಯಾವ ರೀತಿ ಅನಲೈಸ್ ಮಾಡುತ್ತೀರೋ ಅದನ್ನು ನೀವು ಮಾಡಿಕೊಳ್ಳಿ, ನೀವು ತೆಗೆದುಕೊಂಡು ಹೋಗಿ ಒಂದೇ ಸಾರಿ ಬುಲ್ಡೋಜರ್ ಹೊಡೆಯುತ್ತೇನೆ ಅಂದರೆ ಹೇಗೆ ಒಪ್ಪುವುದಕ್ಕೆ ಆಗುತ್ತದೆ? ಆ ದೃಷ್ಟಿಯಿಂದ ಮಾನ್ಯ ಸಭಾಧ್ಯಕ್ಷರೇ, ನಾನು ಸರ್ಕಾರದ ಗಮನಕ್ಕೆ ತರತಕ್ಕಂಥಾದ್ದು. ಇಲ್ಲಿ ಸ್ಟೇಜ್ ಇನ್‌ಕಮ್ ಗ್ರೋತ್ ಈ ರೇಟ್ ವಿಚಾರದಲ್ಲೂ ಕೂಡ ನಾನು ಹೇಳಬೇಕೆಂದರೆ 1990-91 ಇದು ನನ್ನ ಕಾಲ. Concept 80-81 prices, ಬಗ್ಗೆ 9566 ಕರೆಂಟ್ ಪ್ರೈಜಸ್ 20,328 ಅದೇ ರೀತಿಯಾಗಿ 91-92

ಜಂಪ್ ನೋಡಿ ಇಲ್ಲಿ, 10,196, 1980-81ರಲ್ಲಿ ಅದು ಇದ್ದದ್ದು ಕರೆಂಟ್ ಇರತಕ್ಕಂಥಾದ್ದು 24,300 ಚಿಲ್ಲರೆ ಇದೆ, 1992-93 10,700 ಚಿಲ್ಲರೆ ಇದ್ದರೆ ಅದೇ 92-93ರಲ್ಲಿ ಅದು 27 ಸಾವಿರ ಚಿಲ್ಲರೆಗೆ ಜಂಪ್ ಆಗಿದೆ. 93-94 ರಲ್ಲಿ 11,394 ಇದ್ದರೆ ಆಮೇಲೆ ಅದು 31 ಸಾವಿರ ಚಿಲ್ಲರೆಗೆ ಹೊರಟು ಹೋಗಿದೆ. ನಾನು ಅದಕ್ಕೆ ಹೇಳುವುದು ಇದಕ್ಕೆಲ್ಲಾ ನಿಮಗೆ ಎಲ್ಲಿ ಜಂಪ್ ಬರುತ್ತದೆ ಅಂದರೆ ಯಾವಾಗಲೂ ನೀವು ವಾರ್ಷಿಕ ಯೋಜನೆಯ ಗಾತ್ರಕ್ಕೆ ಹೊಂದಿಸಿಕೊಳ್ಳಲು ಬೇಕಾಗಿರತಕ್ಕಂಥ ಸಂಪನ್ಮೂಲಗಳ ಕ್ರೋಢೀಕರಣಕ್ಕೆ ನೀವು ಗಮನ ಕೊಟ್ಟಾಗ ಮಾತ್ರ ಬರುತ್ತದೆಯೇ ವಿನ: ಇಲ್ಲದಿದ್ದರೆ ಅದು ಬರುವುದಿಲ್ಲ ಎನ್ನುವ ಒಂದು ಅಭಿಪ್ರಾಯವನ್ನು ನಾನು ಹೋಗತಕ್ಕಂಥ ಕಾಲದಲ್ಲಿ ಅದಕ್ಕಿಂತ ಮುಂಚೆ ಎಫಿಷಿಯನ್ಸಿ ಇನ್ ಟ್ಯಾಕ್ಸ್ ಕಲೆಕ್ಷನ್ ಇದೇ ಮುಖ್ಯ. You, as Hon'ble Finance Minister, ನಾನು ತಮಗೆ ಒಂದು ಸಲಹೆ ಕೊಡತಕ್ಕಂಥಾದ್ದು I am trying to draw your kind attention to all those facts and figures... ಇದರಲ್ಲಿ ನಿಮ್ಮ ಕಾಲದಲ್ಲಿ ಎಷ್ಟು ಇತ್ತು ನಮ್ಮ ಕಾಲದಲ್ಲಿ ಎಷ್ಟಿತ್ತು ಎನ್ನುವುದಕ್ಕೆ ಅನಿವಾರ್ಯವಾಗಿ ನೀವು ಹೇಳಿದ್ದಕ್ಕೆ ನಾನು ಹೇಳಬೇಕಾಗುತ್ತದೆ. ಕಮರ್ಷಿಯಲ್ ಟ್ಯಾಕ್ಸ್‌ನ್ನು ಮಾತ್ರ ನಾವು ತೆಗೆದುಕೊಳ್ಳೋಣ ಇನ್ನತಕ್ಕಂಥ ಮಾತನ್ನು ಹೇಳಿದೆ. 1984-85 ನಿಮ್ಮದೇ ಕಾಲ; ಆಗ 594 ಕೋಟಿ ಇದೆ. 1990-91ರಲ್ಲಿ 1489 ಕೋಟಿ ರೂಪಾಯಿಗಳಿಗೆ ನಾವು ಜಂಪ್ ಮಾಡಿಕೊಂಡು ಹೋಗಿದ್ದೇವೆ. ಆಮೇಲೆ 1991-92ರಲ್ಲಿ ನನ್ನ ಕಾಲ 1800 ಕೋಟಿ ಚಿಲ್ಲರೆಗೆ ಹೋಗಿದ್ದೇವೆ. ನಾವು ಬಡ್ಜೆಟ್ಟನ್ನು ಪ್ರಿಪೇರ್ ಮಾಡಿದಾಗ 2015 ಕೋಟಿ ರಿವೈಸ್ಡ್ ಎಸ್ಟಿಮೇಟ್ 1991-92ರಲ್ಲಿ ಎನ್ನತಕ್ಕ ಮಾತನ್ನು ಹೇಳಿದ್ದೇವೆ. ನಾನು ಅಧಿಕಾರ ಬಿಡತಕ್ಕಂಥ ಕಾಲದಲ್ಲಿ 92-93 ನಾನು ಪ್ರಿಪೇರ್ ಮಾಡಿದ್ದಂತಹ ಕಾಲದಲ್ಲಿ 2500 ಕೋಟಿ ಕಮರ್ಷಿಯಲ್ ಟ್ಯಾಕ್ಸ್‌ದ್ದು ಎಂದು ನಾನು ಇಟ್ಟರೂ ಕೂಡ I had higher ambition of collection under Commercial Taxes. ಇದನ್ನು 92-93ನಲ್ಲಿ ನಾವು ಮಾಡಬೇಕು ಎನ್ನುತಕ್ಕಂಥ ಉದ್ದೇಶ ಕೂಡ ಇತ್ತು. ಅಧಿಕಾರಿಗಳನ್ನೆಲ್ಲಾ ಕರೆದು ಟಾರ್‌ಗೇಟ್ ಫಿಕ್ಸ್ ಮಾಡಿಸಿ ಎಲ್ಲಾ ಮಾಡಿದೆ. In the meanwhile I had to fresign; ನಾನು ಅದನ್ನು ಮಾಡುವುದಕ್ಕೆ ಆಗಲಿಲ್ಲ. ನಾನು ಏತಕ್ಕೆ ಹೇಳುತ್ತೇನೆಂದರೆ it is not only Excise, ಹೆಚ್ಚಿಗೆ ಕಮರ್ಷಿಯಲ್ ಟ್ಯಾಕ್ಸ್, ಸೇಲ್ಸ್ ಟ್ಯಾಕ್ಸ್, ಎಂಟರ್‌ಟೆನ್‌ಮೆಂಟ್ ಟ್ಯಾಕ್ಸ್, ಇತ್ಯಾದಿಗಳಿಂದ ಕೂಡ ರೆವಿನ್ಯೂ ಬರುತ್ತದೆ. ಸ್ಟೇಟ್ ಎಕ್ಸೈಸ್ ಟ್ಯಾಕ್ಸ್‌ನಲ್ಲೂ ಕೂಡ ಹೆಚ್ಚು ಬರುತ್ತದೆ. ಏಕೆಂದರೆ ಭಾಷಣ ಮಾಡುವಾಗ ನಮ್ಮ ಬಿ.ಜೆ.ಪಿ. ಮಿತ್ರರು ಹಾಗೂ ಯಡಿಯೂರಪ್ಪನವರು ಇಲ್ಲಿ ಕುಳಿತಿದ್ದರು ಹೆಂಡದ ದೊರೆಗಳ ಹಿಂದೆ ನೀವೆಲ್ಲಾ ಇದ್ದೀರಿ ಎಂದು ಹೇಳುತ್ತಿದ್ದರು. ಪಾಪ ಅವರಿಗೆ ಅದು ಬಿಟ್ಟುಬಿಟ್ಟರೆ ಬೇರೆ ಏನೂ ಕಾಣಿಸುತ್ತಿಲ್ಲ. ಭಾಷಣ ಮಾಡಬೇಕಾದರೆ ಅವರು ಎಲ್ಲರನ್ನೂ ತೆಗೆದುಕೊಂಡು ಸಾರಾಸಗಟಾಗಿ ಭಾಷಣ ಮಾಡಿಬಿಟ್ಟಿದ್ದಾರೆ. ಅದಕ್ಕೆ ನಾನು

ಅಂಕಿಅಂಶಗಳನ್ನು ನಿಮಗೂ ಕೂಡ ಏಕೆಂದರೆ ನೀವು ಬಜೆಟ್‌ನಲ್ಲಿ ಬರೆದಿದ್ದರಿಂದ. ಇಲ್ಲಿ ನೋಡಿ ಸ್ಟೇಟ್ ಎಕ್ಸೈಸ್, ನಿಮ್ಮ ಕಾಲದಲ್ಲಿ 180 ಕೋಟಿ ಇದೆ 1984-85. ಆಮೇಲೆ 188 ಕೋಟಿ 85-86, ಆಮೇಲೆ 86-87 206 ಕೋಟಿ 87-88ರಲ್ಲಿ 243 ಕೋಟಿ 88-89 ನಿಮ್ಮದು ಕೊನೆಯ ವರ್ಷ 256 ರಿಂದ 326ಕ್ಕೆ ಬಂದು ನಿಂತುಬಿಟ್ಟಿದೆ. ನಮ್ಮದು ಎಲಿಗೆ ಹೋಗಿದೆ ಗೊತ್ತೇನು ಸುಮಾರು 500ರಿಂದ 600 ಕೋಟಿ ರೂಪಾಯಿಗಳವರೆಗೂ ಹೋಗಿದೆ. ಸ್ವಲ್ಪ ದಯವಿಟ್ಟು ವಿಚಾರ ಮಾಡಿ. ನಾನು ಏತಕ್ಕೆ ಹೇಳುತ್ತೇನೆ ಎಂದರೆ, revenue collection under this Head.. ಜಾಸ್ತಿ ಮಾಡಬೇಕೆಂದರೆ ನಾನು ಅವಾಗ ಒಂದು ವಿಚಾರವನ್ನು ತಂದೆ. ತಮ್ಮ ಪಕ್ಷದವರು ಈ ಕಡೆ ಕುಳಿತುಕೊಂಡಿದ್ದೀರಿ. ನಾನು ಮುಂಖ್ಯಮಂತ್ರಿ ಆಗಿದ್ದಾಗ, ಆಗ ನಾನು ಹೇಳಿದೆ ಸುಮಾರು 50-60 ಕೋಟಿ ರೂಪಾಯಿಗಳನ್ನು ಕೋರ್ಟಿನಲ್ಲಿ ಅವರು ಕೇಸ್ ಹಾಕಿಕೊಂಡಿದ್ದರು, ಈ ಎಕ್ಸೈಜ್ ಕಂಟ್ರಾಕ್ಟರ್ಸ್. ಹಳೆಯ ಬಾಕಿ ಹೆಚ್ಚಾಗಿರುವುದು ನಿಮ್ಮ ಕಾಲದಲ್ಲೇ. ಅವರೆಲ್ಲಾ ಹೋಗಿ ಸ್ಟೇ ತೆಗೆದುಕೊಂಡಿದ್ದಾರೆ. ಸ್ವಾಮಿ, ನಮಗೆ ಸರ್ಕಾರ ಸರಿಯಾಗಿ ಅರ್ಸ್ಸಪ್ಲೈ ಮಾಡಿಲ್ಲ. ನಾವು ಮಾರಾಟ ಮಾಡುವುದಕ್ಕೆ ಅಗಿಲ್ಲ ಎಂದು ಹೋಗುವುದು. ಯಾವುದೋ ಒಂದು ಕಾರಣ ತೆಗೆದುಕೊಂಡು ಹೋಗಿ ಸ್ಟೇ ತೆಗೆದುಕೊಂಡು ಕುಳಿತುಕೊಳ್ಳುವುದು. ಅಲ್ಲಿ ಪ್ರಿನ್ಸಿಪಲ್ ಮನಿ ಅಂದರೆ ಕಟ್ಟತಕ್ಕಂಥಾದ್ದು ಬಾಕಿ ಇರುವುದು, ಅದರ ಮೇಲೆ ಬಡ್ಡಿ ಎನು ಬರಬೇಕು ಎನ್ನುವುದಕ್ಕೆ ಎಕ್ಸೈಜ್ ರೂಲ್ಸ್ ಇವೆ. ಆ ಬಾಕಿ ಇರುವುದನ್ನೂ ಕೂಡ ವಸೂಲಿ ಮಾಡುವುದಕ್ಕೆ ಇವರಿಂದ ಆಗಲಿಲ್ಲ. ಅದಕ್ಕೆ ನಾನು ಮುಖ್ಯಮಂತ್ರಿಯಾಗಿದ್ದಾಗ ಕೊನೆಗೆ ತಾವೆಲ್ಲ ಸಲಹೆ ಮಾಡಿದ್ದುದು, ಸ್ವಾಮಿ ಎನಾದರೂ ಮಾಡಿ ನಾವು ಕ್ಯಾಬಿನೆಟ್‌ನಲ್ಲಿ ಅಪ್ರೂವ್ ಮಾಡಿಕೊಂಡು ಒಂದು ವಿಚಾರವನ್ನು ಇಲ್ಲಿ ತಂದೆವು. ಮಾನ್ಯ ಸಿದ್ಧರಾಮಯ್ಯನವರೇ, ಇದನ್ನು ನಿಮ್ಮ ಗಮನ ಸೆಳೆಯುತ್ತಿದ್ದೇನೆ. ಇದು ಬಹಳ ಮುಖ್ಯವಾಗಿರತಕ್ಕಂಥಾದ್ದು ಈಗಲೂ ಕೂಡ I stand by that bill because ಅದನ್ನು ಮಾಡದೇ ಇದ್ದರೆ ಸ್ವಾಮಿ ನಾಳ ಕೋರ್ಟಿನಿಂದ ಜಡ್ಜ್‌ಮೆಂಟ್ಸ್ ಹೇಗೆ ಬರುತ್ತವೆಯೋ ಗೊತ್ತಿಲ್ಲ. ಬರೀ ಬಡ್ಡಿ ಮಾತ್ರ ಹೋಗುವುದಿಲ್ಲ ಪ್ರಿನ್ಸಿಪಲ್ ಮನಿ ಕಿತ್ತುಕೊಂಡು ಹೋಗಬಹುದು. ನಮಗೆ ಆ ಯೋಚನೆ ಇದೆ ಅವರು ತಮ್ಮ ಪಕ್ಷದಲ್ಲಿದ್ದವೇ ಸಲಹೆ ಕೊಟ್ಟಿದ್ದಾರೆ ದಯವಿಟ್ಟು ಓದಿ ನೋಡಿ. ಅವರು ಏನು ಹೇಳಿದರು, ಸ್ವಾಮಿ ಅದುಬರುತ್ತದೆಯೋ ಇಲ್ಲವೋ ನಮಗೆ ಗೊತ್ತಿಲ್ಲ. ಇದು ನಿಮ್ಮ ಪಾರ್ಟಿಯವರೇ ಹೇಳಿದ್ದುದು I am not referring to statement made by hon.Member BJP Member when he was sitting here. ನಾನು ಅದರ ಬಗ್ಗೆ ಹೇಳುತ್ತಿಲ್ಲ. ತಾವೇನು ಹೇಳಿದಿರಿ, ಇಲ್ಲ, ಇಲ್ಲ ಸಿಕ್ಕಿಪಟ್ಟೆ ಅನ್ಯಾಯವಾಗಿದೆ ಎಂದು ಹೇಳುತ್ತಿದ್ದಾರೆ; ಅವರನ್ನು ಕರೆಯಿಸಿ ಮಾತನಾಡಿ ಏನಾದರೂ ತೀರ್ಮಾನ ಮಾಡಿ ಎಂದು ಹೇಳಿದ ಮೇಲೆ ನೋಡಪ್ಪ, ನೀವು ಮತ್ತೇ ಏನಾದರೂ ತಕರಾರು ಮಾಡುವುದಿಲ್ಲ ಅಂದರೆ ನಾನು ಅದನ್ನು ತೆಗೆದುಕೊಳ್ಳುತ್ತೇನೆ. ಇಲ್ಲದಿದ್ದರೆ

ನಾನು ತೆಗೆದುಕೊಳ್ಳಲು ಹೋಗುವುದಿಲ್ಲ. ಕೋರ್ಟಿನವರು ಏನು ಜಡ್ಜ್‌ಮೆಂಟ್ ಕೊಡುತ್ತಾರೋ ಅದರಂತೆ ಹೋಗೋಣ ಎಂದೆ. ಸ್ವಾಮಿ, ನಾವು ಒಂದು ಬಿಲ್ ತಂದು ಆ ಬಿಲ್‌ಲನ್ನು ಈ ಮನೆಯಲ್ಲಿ ಸರ್ಕ್ಯುಲೇಟ್ ಮಾಡಿದೆವು. ಏನು ಮಾಡಿದ್ದೆವು, ನಾವು ಇಂಟ್ರೆಸ್ಟ್ ಬಿಟ್ಟುಬಿಡುವುದು, ಒಂದೇ ಕಂತಿನಲ್ಲಿ ಪ್ರಿನ್ಸಿಪಲ್ ಕಿತ್ತು ಏನು ಬಾಕಿ ಇದೆಯಲ್ಲಾ ಅದು ಅಷ್ಟೂ ಕಟ್ಟಿಬಿಡಬೇಕು. ಒಂದು ಪೈಸೆ ಕೂಡ ಬಾಕಿ ಇಡಬಾರದು ಎಂದು ಹೇಳಿದೆವು. ಅದನ್ನು ಮಾಡಿದ್ದರಿಂದ ಏನಾಗುತ್ತದೆ ಅಂದರೆ ನಿಮ್ಮ ಪ್ಲಾನ್ ಸೈಜ್‌ಗೆ ಪ್ಲಾನಿಂಗ್ ಕಮೀಷನ್ ಮುಂದೆ ಕೊಡಬೇಕಾದರೆ ನಿಮಗೆ ಈ ಹಣ ಏನು ಬರುತ್ತದೆ ಅದು ರಿಸೋರ್ಸ್ ಮೊಬಲೈಜೇಷನ್‌ಗೆ ಆರ್ಗ್ಯುಮೆಂಟ್ ಮಾಡುತ್ತದೆ. ಆಗ ಹಣ ನಿಮಗೆ ಸಿಗುತ್ತದೆ. ದಯವಿಟ್ಟು ಇದನ್ನು ತಾವು ಅರ್ಥ ಮಾಡಿಕೊಳ್ಳಿ. ಇಲ್ಲದಿದ್ದರೆ ನೀವು ಅಷ್ಟು ಹಣವನ್ನು ಕಳೆದುಕೊಂಡು ಕುಳಿತುಕೊಳ್ಳಬೇಕಾಗುತ್ತದೆ. ನಾನು ಇದನ್ನು ಗಮನದಲ್ಲಿ ಇಟ್ಟೇ ಮಾಡಿದೆ. ಅವಾಗ ಏನು ಮಾಡಿದಿರಿ ಇಲ್ಲಿ? ಎಕ್ಸ್ ಕಂಟ್ರಾಕ್ಟರ್ ಜೊತೆಯಲ್ಲಿ ನೀವು ಒಂದಾಗಿಬಿಟ್ಟಿದ್ದೀರಿ ಎಂದು ಹೇಳಿದ ಮೇಲೆ ನಾನು ಒಂದೇ ಒಂದು ಮಾತು ಹೇಳಿದೆ ನಾನು ಮತ್ತು ಎಕ್ಸ್ ಕಂಟ್ರಾಕ್ಟರ್ ಒಂದಗಿ ಏನಾದರೂ ಅಂದರೆ ಹ್ಯಾಂಡ್ ಡೀಲಿಂಗ್ ಮಾಡಿದ್ದರೆ ಆ ಬಿಲ್‌ನ್ನು ವಿತ್ ಡ್ರಾ ಮಾಡುತ್ತೇನೆಂದು ಹೇಳಿದೆ. I withdraw the bill here. I am on record. ನಾನು ಮುಖ್ಯಮಂತ್ರಿಯಾಗಿದ್ದಾಗಲೇ ಈ ಮಾತನ್ನು ಹೇಳಿದೆ. ನಾನು ಬೇಕಾದರೆ ಬಿಲ್ ವಿತ್‌ಡ್ರಾ ಮಾಡುತ್ತೇನೆ. I had an absolute majority of nearly 180 members sitting with me... ಆ ಕಾಲದಲ್ಲಿ ಬೇಕಾದರೆ ನಾನು ಬುಲ್ಡೋಜರ್ ಹಾಕಿ ತೂರಿಸಿಬಿಡಬಹುದಾಗಿತ್ತು. I did not do that..ಆಗ ನಾನು ಏನು ಮಾಡಿದೆ; ನೋಡಪ್ಪ ಅಂಡರ್ ಹ್ಯಾಂಡ್ ಡಿಲಿಂಗ್ಸ್ ಎಂದು ಹೇಳುತ್ತಿದ್ದೀರಿ ತಾನೇ: ನೋಡಪ್ಪ; ನಾನು ಅಬಿಲ್ ಹಿಂದಕ್ಕೆ ತೆಗೆದುಕೊಳ್ಳುತ್ತೇನೆ, ಬೇಕಿದ್ದರೆ ನೀವೇ ಅರ್ಥ ಮಾಡಿಕೊಳ್ಳಿ ಎಂದೆ. ಆಗ ಯಾರೂ ಕೂಡ ಈ ಮನೆಯಲ್ಲಿ ಮಾತನಾಡುವುದಕ್ಕೆ ಆಗಲಿಲ್ಲ. ನಾನು ಏತಕ್ಕೆ ಈ ಮಾತನ್ನು ಹೇಳುತ್ತೇನೆ ಅಂದರೆ ಸರ್ಕಾರ ನಡೆಸತಕ್ಕಂಥಾ ಕಾಲದಲ್ಲಿ ಇವೆಲ್ಲಾ ಬರುತ್ತವೆ. ಆದರೆ ನೀವು ಈಗ ಏನು ಮಾಡಿದ್ದೀರಿ? ಸ್ವಾಮಿ, ನಾನು ಒಂದೇ ಒಂದು ಸಲಹೆ ನಿಮಗೆ ಕೊಡತಕ್ಕಂಥಾದ್ದು. ಈ ಟ್ಯಾಕ್ಸ್ ಕಲೆಕ್ಷನ್ ಮಾಡತಕ್ಕಂಥಾದ್ದರ ಬಗ್ಗೆ ಕಮರ್ಷಿಯಲ್ ಟ್ಯಾಕ್ಸ್ ಇರಬಹುದು, ಇತರೇ ಟ್ಯಾಕ್ಸ್‌ಗಳು ಇರಬಹುದು, ನೀವು ಮಾಡತಕ್ಕಂಥ ಕಾಲದಲ್ಲಿ ನೀವು ಏನು ಒಂದು ಹೇಳಿಕೆಯನ್ನು ಕೊಟ್ಟಿದ್ದೀರಿ ಕ್ಯಾಬಿನೇಟ ತೀರ್ಮಾನ ಮಾಡಿಕೊಂಡಿದ್ದೀರಿ ಅಂದರೆ ನೀವು ತೆಗೆದುಕೊಂಡು ಹೋಗಿ ಬೇರೆ ಒಂದು ಏಜನ್ಸಿ ಮಾಡುತ್ತೀರಿ. ಇದನ್ನು ನಾನು ಪತ್ರಿಕೆಗಳ ಮುಖಾಂತರ ಓದಿದ್ದು ನನಗೆ ಗೊತ್ತಿಲ್ಲ. ನೀವು ಅಸೆಂಬ್ಲಿ ಮುಂದೆ ಯಾವ ರೀತಿಯ ಕಾನೂನು ತರುತ್ತೀರೋ ತೆಗೆದುಕೊಂಡು ಬನ್ನಿ, ಆ ಕ್ಲಾಸ್‌ಗಳನ್ನು ಓದಿ ಆಮೇಲೆ ನಾನು ಭಾಷಣ ಮಾಡುತ್ತೇನೆ. You are going to take out all these cases from the purview of the

jurisdiction of the courts. ಈ ತೀರ್ಮಾನ ನೀವು ಮಾಡಿದ್ದೀರಿ. ನಾನು ಏನು ಮಾಡಿದ್ದೆ? ಈ ತಲೆ ನೋವು ಬೇಡ ಎನ್ನುವ ದೃಷ್ಟಿಯಿಂದ ನಾನು ತೀರ್ಮಾನ ಮಾಡುವುದಕ್ಕೆ ಹೊರಟಿದ್ದೀರಿ. ನೀವು ಹೇಗೆ ತೀರ್ಮಾನ ಮಾಡುತ್ತೀರಿ? ಆಗ ಅಂಡರ್ ಹ್ಯಾಂಡ್ ಡೀಲಿಂಗ್ ನಿಮ್ಮದುಬರುವುದಿಲ್ಲವೇ? ಈ ವಿಚಾರದಲ್ಲಿ ಕರ್ನಾಟಕ ರಾಜ್ಯದ ಜನತೆಗೆ ನೀವು ಯಾವ ರೀತಿ ಉತ್ತರ ಕೊಡುತ್ತೀರಿ ಎಂದು ಕೇಳುತ್ತೇನೆ. ಅದಕ್ಕೆ ನಾನು ಈಗಲೂ ಕೂಡ ಒಂದು ಸಲಹೆ ಕೊಡುತ್ತೇನೆ. ನಾನು ಏನು ಮಾಡಿದೆ ಆ ಪ್ರಯತ್ನವನ್ನು ನೀವು ಕೂಡ ಮಾಡುವುದು ಒಳ್ಳೆಯದು. ನಾನು ಪ್ಲಾನಿಂಗ್ ಕಮಿಷನ್ ಮುಂದೆ ಮಾತನಾಡುವಂತಹ ಕಾಲದಲ್ಲಿ ಈ ಅಂಕಿಅಂಶಗಳನ್ನು ಗಮನದಲ್ಲಿ ಇಟ್ಟೇ ನಾನು ಇಟ್ಟಿದ್ದು, ಅಲ್ಲಿ ಇದೂ ಕೂಡ ಸುಮಾರು 40-50 ಕೋಟಿ ಆಗುತ್ತದೆ. ಆಗಿನ ಕಾಲದ್ದು ಆ ಹಣ ಬರಬಹುದು ಎಂದು. ಏಕೆಂದರೆ ವಾರ್ಷಿಕ ಯೋಜನೆಗೆ ಅದು ಸಹಾಯ ಮಾಡುತ್ತದೆ. ಇದನ್ನು ಕೂಡ ನಾನು ಗಮನದಲ್ಲಿ ಇಟ್ಟುಕೊಂಡೆ. ನಿಮಗೆ ಅದು ಇಷ್ಟ ಇದ್ದರೆ ಮಾಡಿಕೊಳ್ಳಿ, ಇಲ್ಲದಿದ್ದರೆ since you have got majorith you have your own view. I am not coming in your way; but on thing I am giving a forewarning - what you ahve said when you were sitting here that means your party, ಏನು ಹೇಳಿದ್ದೀರಿ, ಅದನ್ನು we are going to return that in tahe same coin to you. Be prepared toswallow....ನಾನು ಅಷ್ಟೇ ಹೇಳಿ ಅದನ್ನು ಅಲ್ಲಿಗೆ ಬಿಡುತ್ತೇನೆ. ಏಕೆಂದರೆ ಮುಂದೆ ಕಾನೂನು ತರುತ್ತೇವೆಂದು ಹೇಳುತ್ತಿದ್ದೀರಿ. ನೀವು ಅದರ ಬದಲು ಒಂದು ಮಾಡಬಹುದು. ರಾಜ್ಯಾಂಗದಲ್ಲಿ ಒಂದು ಕ್ಲಾಸ್ ಇದೆ, 323(ಬಿ). ಅದರಲ್ಲಿ ನೀವು ಟ್ಯಾಕ್ಸೇಷನ್ ಟ್ರಿಬ್ಯುನಲ್ ರಚನೆ ಮಾಡಿ ಸಂಪೂರ್ಣವಾಗಿರತಕ್ಕಂಥ ಒಂದು ವಿಚಾರವನ್ನು ಇಟ್ಟರೆ ಅಲ್ಲಿ ಕಮರ್ಷಿಯಲ್ ಟ್ಯಾಕ್ಸ್ ಕೇಸ್‌ಗಳು, ಎಕ್ಸೈಸ್ ಕೇಸ್‌ಗಳು ಟ್ಯಾಕ್ಸೇಷನ್‌ಗೆ ಸಂಬಂಧಪಟ್ಟಿರತಕ್ಕಂಥ ಇಲ್ಲಾ ಕೇಸ್‌ಗಳನ್ನು ತೆಗೆದುಕೊಂಡು ಬಂದು ಅಲ್ಲಿಗೆ ಕೊಡಿ. ನೀವು ಏಕೆ ತೀರ್ಮಾನ ಮಾಡುವುದಕ್ಕೆ ಹೋಗುತ್ತೀರಿ? ನಿಮಗೆ ಏನು ಹಕ್ಕು ಇದೆ, ಅದನ್ನು ತೀರ್ಮಾನ ಮಾಡುವುದಕ್ಕೆ? ಅದರ ಬದಲು make use of this Article 323(b) of the Constitution and constitute a Taxation Tribunal. You withdraw these cases from the purview of courts wherever they are; ತೆಗೆದುಕೊಂಡು ಅವರಿಗೆ ಕೊಡಿ. ಆವಾಗ ಕಲ್‌ಕ್ಟ್ ಆದ ಜಡ್ಜ್‌ಮೆಂಟ್ ಆಗುವುದರಿಂದ ನಿಮ್ಮ ಮೇಲೆ ಯಾರೂ ಏನೂ ಹೇಳುವುದು ಒಳ್ಳೆಯದೆಂದು ನನ್ನ ಅಭಿಪ್ರಾಯವೆಂದು ಈ ಸಂದರ್ಭದಲ್ಲಿ ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ಎಕ್ಸೈಸ್ ರೆವಿನ್ಯೂವನ್ನು ನಾವು ಇದ್ದಾಗ ಐದು ನೂರರಿಂದ ಆರು ನೂರು ಕೋಟಿಯವರೆಗೆ ತೆಗೆದುಕೊಂಡು ಹೋಗಿದ್ದೇವೆ.

ಶ್ರೀ ಆರ್.ನಾರಾಯಣ:- ಮಾನ್ಯ ಅಧ್ಯಕ್ಷರೇ, ಅವರು ಮುಖ್ಯಮಂತ್ರಿಗಳಾಗಿದ್ದಾಗ ಟಾಕ್ಸೇಷನ್ ಟ್ರಿಬ್ಯೂನಲ್ ಏಕೆ ಮಾಡಲಿಲ್ಲವೆಂದು ಕೇಳುತ್ತೇನೆ. ಆಗ ಮಾಡಬಹುದಾಗಿತ್ತು.

ಶ್ರೀ ಎಸ್.ಬಂಗಾರಪ್ಪ:- ಆಗ ಜನತಾದಳದ ಕೆಲವು ಮಾನ್ಯ ಸದಸ್ಯರುಗಳು ಈ ಕಡೆ ಇದ್ದಾಗ ಏನು ಸಲಹೆ ಮಾಡಿದ್ದರೆಂದರೆ, ಇಂಟರೆಸ್ಟ್ ಹೋದರೆ ಹೋಗಲಿ ಕನಿಷ್ಟ ಅಸಲಾದರೂ ಬರಲಿ ಅದಕ್ಕೆ ಏನಾದರೂ ಮಾಡಿ ಎಂದು ಸಲಹೆ ಮಾಡಿದ್ದರು. ಟ್ಯಾಕ್ಸೇಷನ್ ಟ್ರಿಬ್ಯೂನಲ್ ಮಾಡಬೇಕೆಂದು ನಾನು ಹೇಳಿದ್ದು ನೆನಪು ಇದೆ. ಇದನ್ನು ಮುಗಿಸಿಬಿಡುವುದು ಒಳ್ಳೆಯದೆಂದು ಹೇಳಿದ ಮೇಲೆ, ಆ ಬಿಲ್‌ನ್ನು ಆಮೇಲೆ ತಂದೆವು, ಆಮೇಲೆ ಅದಕ್ಕೆ ರಾಜಕೀಯ ಮಾಡಿದ್ದರಿಂದ ನಾನು ವಿತ್‌ಡ್ರಾ ಮಾಡಿದೆ. ನಂತರ ನಾನು ರೀಸೈನ್ ಮಾಡಬೇಕಾಯಿತು. ಮಾನ್ಯ ಸಭಾಧ್ಯಕ್ಷರೆ, ಟ್ಯಾಕ್ಸ್ ಆನ್ ವೆಹಿಕಲ್, ಜನತಾದಳ ಸರ್ಕಾರ ಇದ್ದ 1983ರಲ್ಲಿ 79 ಕೋಟಿ ಇದ್ದದ್ದು 1989ರಲ್ಲಿ ಅದು 157 ಕೋಟಿ ರೂಪಾಯಿ ಮಾತ್ರ ಮುಟ್ಟಿತು. ಆಮೇಲೆ ನಮ್ಮ ಸರ್ಕಾರ ಬಂದಾಗ ಅದನ್ನು 190 ಕೋಟಿಯಿಂದ 246 ಕೋಟಿ ರೂಪಾಯಿವರೆಗೆ ತೆಗೆದುಕೊಂಡು ಹೋಗಿದ್ದೇವೆ. 1984ರಲ್ಲಿ ಸ್ಟ್ಯಾಂಪ್ ಡ್ಯೂಟಿಯಿಂದ 46 ಕೋಟಿ ಇದ್ದದ್ದು 1989ರಲ್ಲಿ ನೀವು 107 ಕೋಟಿ ರೂಪಾಯಿವರಿಗೆ ಮುಟ್ಟಿದ್ದೀರಿ. ನಾನು ಅದನ್ನು 275 ಕೋಟಿ ರೂಪಾಯಿವರೆಗೆ ತೆಗೆದುಕೊಂಡು ಹೋಗಿದ್ದೇವು. ಹೀಗೆ ಪ್ರತಿಯೊಂದು ವರ್ಷದ ಮಾಹಿತಿಯನ್ನೂ ನಾವು ಇಟ್ಟಿದ್ದೇವೆ. ನಾನು ನಿಜ ಹೇಳಬೇಕೆಂದರೆ, ಲ್ಯಾಂಡ್ ಡೀಲಿಂಗ್ಸ್ ಇದೆಯಲ್ಲಾ ಅದು ಆಗುವುದಕ್ಕೆ ಬಿಡಬೇಕು. ಮನೆಯಲ್ಲಿ ಇದ್ದುಕೊಂಡು ಜನರು ಸುಮ್ಮಸುಮ್ಮನೆ ಸ್ಟ್ಯಾಂಪ್ ಪೇಪರ್ ಖರ್ಚು ಮಾಡುತ್ತಾರೋ? ಭೂಮಿ ಮಾರಾಟ ಮಾಡುವುದು, ಕೊಂಡು ಕೊಳ್ಳುವುದು ಜಾಸ್ತಿಯಾದರೆ ಮಾತ್ರ ಸ್ಟ್ಯಾಂಪ್ ಪೇಪರ್ ಖರ್ಚಾಗುತ್ತದೆ. 100 ರೂಪಾಯಿ ಸ್ಟ್ಯಾಂಪ್ ಪೇಪರ್, ಅದು ಸಾಧಾರಣ ಪೇಪರ್ ಆಗಿದ್ದರೂ ಅದಕ್ಕೆ ಸರ್ಕಾರ ಮಾನ್ಯತೆ ಮಾಡಿರುವುದರಿಂದ, ಅದರ ಮೂಲಕ ಜನರು ಭೂಮಿಯನ್ನು ಕೊಂಡು ರಿಜಿಸ್ಟರ್ ಮಾಡಿಕೊಳ್ಳುವುದು, ಇತ್ಯಾದಿ ಎಲ್ಲಾ ಮಾಡುತ್ತಾರೆ. ನಾನು ಅಧಿಕಾರ ಬಿಟ್ಟ ಮೇಲೆ ರಿಜಿಸ್ಟ್ರೇಷನ್‌ಗಳು ನಿಂತು ಹೋಗಿ ಅದರಿಂದ ಅರುವ ರೆವಿನ್ಯೂ ಕೂಡ ಅಲ್ಲಿಗೇ ನಿಂತು ಹೋಗಿರುವುದನ್ನು ನಾವು ನೋಡಬಹುದು. ನೋಡಿ ಈಗ 90-91 ರಲ್ಲಿ 210 ಕೋಟಿ, 91-92 ರಲ್ಲಿ 210 ಕೋಟಿ, ಅಲ್ಲಿಗೇ ನಿಂತಿರುವುದನ್ನು ನಾವು ಕಾಣುತ್ತೇವೆ. ಬೆಂಗಳೂರು ಸಿಟಿ ಸುತ್ತ ಮುತ್ತ ಇರುವ ಪ್ರದೇಶಗಳಲ್ಲಿ ಲ್ಯಾಂಡ್ ವ್ಯಾಲ್ಯೂ ಬಹಳ ಇರುತ್ತದೆ. ಇದರ ಜೊತೆಗೆ ರಾಜ್ಯದ ಬೇರೆ ಸಿಟಿಗಳಲ್ಲೂ ಹೆಚ್ಚು ಬೆಲೆ ಇರುತ್ತದೆ. ಅದಕ್ಕಾಗಿ ಯಾವಾಗಲೂ ಲ್ಯಾಂಡ್ ರಿಜಿಸ್ಟ್ರೇಷನ್‌ಗೆ ಅವಕಾಶ ಕೊಡಬೇಕು. ಕನ್‌ವರ್ಟೆಡ್ ಲ್ಯಾಂಡ್ ಮೇಲೆ ನೀವು ಬಂದ ನಂತರ ಸಿಕ್ಕಾಪಟ್ಟೆ ಜಾಸ್ತಿ ಮಾಡಿಬಿಟ್ಟಿದ್ದೀರಿ. ಒಬ್ಬರೂ ಮಾರಾಟ ಮಾಡುವ ಹಾಗಿಲ್ಲ, ಒಬ್ಬರೂ ಕೊಂಡುಕೊಳ್ಳುವುದಕ್ಕೆ ಬರುವುದಿಲ್ಲ. 100 ಪರ್‌ಸೆಂಟ್‌ನಿಂದ 300 ಪರ್‌ಸೆಂಟ್‌ವರೆಗೆ

ಜಾಸ್ತಿ ಮಾಡಿದ್ದೀರಿ, ಸ್ಟ್ಯಾಂಪ್ ಪೇಪರ್‌ನಲ್ಲಿ ನೀವು ಬಿದ್ದು ಹೋಗುವುದಕ್ಕ ಒಂದೇ ಕಾರಣವಾಗುತ್ತದೆಂದು ನಾನು ಈಗಲೇ ಹೇಳುತ್ತೇನೆ. Converted land will value more than the non-converted land.

ಹೀಗೆ ಸಿಕ್ಕಾಪಟ್ಟೆ ತಾವು ಹಾಕಿಬಿಟ್ಟರೆ ಲ್ಯಾಂಡ್ ಡೀಲಿಂಗ್ಸ್ ನಡೆಯುವುದಿಲ್ಲ. ಎಲ್ಲಾ ಅಲ್ಲೇ ಮಲಗಿಬಿಡುತ್ತವೆ. ಆಗ ಅಡ್ಮಿನಿಸ್ಟ್ರೇಷನ್ನೇ ಮಲಗಿಬಿಟ್ಟಿದೆ ಎಂದು ಜನ ಕಾಮೆಂಟ್ ಮಾಡುತ್ತಾರೆ. ಆ ರೀತಿ ತಾವು ಏಕೆ ಅನ್ನಿಸಿ ಕೊಳ್ಳುತ್ತೀರಿ? ಅದರ ಬದಲು ರೆವಿನ್ಯೂ ಬರುವ ಹಾಗೆ ನೀವು ಪ್ಲಾನ್ ಔಟ್ ಮಾಡುತ್ತಾ ಹೋಗಬೇಕು. ಈಗಾಗಲೇ ನಾನು ಕಮರ್ಷಿಯಲ್ಲಿ ಟ್ಯಾಕ್ಸ್, ಎಕ್ಸೈಸ್ ಟ್ಯಾಕ್ಸ್, ವೆಹಿಕಲ್ ಟ್ಯಾಕ್ಸ್ ಮತ್ತು ಸ್ಟ್ಯಾಂಪ್ ಡ್ಯೂಟಿ ಬಗ್ಗೆ ತಮ್ಮ ಗಮನಕ್ಕೆ ತಂದಿದ್ದೇನೆ. ಪ್ಲಾನ್ ಎಕ್ಸ್‌ಪೆಂಡೇಚರ್ ಬಗ್ಗೆ ಹೇಳುವುದಾದರೆ, ನೀವು ಹಣ ಕಲೆಕ್ಟ್ ಮಾಡುವುದಷ್ಟೇ ಅಲ್ಲ, ಖರ್ಚು ಮಾಡಬೇಕಾಗುತ್ತದೆ. ನಮ್ಮ ಊರಿನ ಪಂಚಾಯಿತಿಯಲ್ಲಿ ಬಹಳ ಹಿಂದೆ ಒಬ್ಬರು ಛೇರ್ಮನ್ ಇದ್ದರು, ಅವರು ಈಗಿಲ್ಲ. ಆದರೆ ಅವರದು ನೆನಪು ಬರುತ್ತದೆ. ಆರುನೂರು ಚಿಲ್ಲರೆ ರೂಪಾಯಿ ಪಂಚಾಯಿತಿಯಲ್ಲಿತ್ತು. ಅವರು ಅಧಿಕಾರವನ್ನು ಮುಗಿಸಿದ ನಂತರ ಹೇಳುತ್ತಿದ್ದರು, ನಾನು ಅಧಿಕಾರ ತೆಗೆದುಕೊಂಡಾಗ ಪಂಚಾಯಿತಿಯಲ್ಲಿ ಆರುನೂರು ಚಿಲ್ಲರೆ ಹಣ ಇತ್ತು, ನಾನು ಒಂದು ಪೈಸೆಯನ್ನು ಹಾಳು ಮಾಡಿಲ್ಲ ಆ ಹಣ ಹಾಗೇಯೇ ಇದೆ ಎಂದು ಹೇಳುತ್ತಿದ್ದರು. ನೀವು ಹಾಗೆ ಮಾಡಬಾರದು. ನೀವು ಗ್ರೋತ್ ರೇಟ್ ಕಾಣಬೇಕು, ಸರ್ಕಾರ ನಡೆಯಬೇಕೆಂದರೆ ಅವರ ತರಹ ಆರುನೂರು ಚಿಲ್ಲರೆ ಹಣವನ್ನು ಹಾಗೇ ಇಟ್ಟುಕೊಂಡು ಕುಳಿತರೆ ಆಗುವುದಿಲ್ಲ. ಇರಿಗೇಷನ್, ಪವರ್ ಪ್ರಾಜೆಕ್ಟ್, ಪ್ಲಾನ್, ನಾನ್ ಪ್ಲಾನ್ ಯೋಜನೆಗಳಿಗೆ ಹಣವನ್ನು ಖರ್ಚು ಮಾಡಬೇಕು. ಹಣವನ್ನು ಖರ್ಚು ಮಾಡದೆ ಟಾರ್ಗೆಟ್‌ನ್ನು ಯಾವಾಗ ರೀಚ್ ಮಾಡುವುದು? ಓವರ್ ಆಲ್ ರಾಜ್ಯದ ಡೆವಲಪ್‌ಮೆಂಟ್‌ನ್ನು ಹೇಗೆ ಮಾಡುವುದಕ್ಕೆ ಸಾಧ್ಯ? ಹಿಂದೆ ನೀವೇ ಆಡಳಿತದಲ್ಲಿ ಇದ್ದಾಗ 84-85 ರಲ್ಲಿ ನೀರಾವರಿಗಾಗಿ 105 ಕೋಟಿ ಖರ್ಚು ಮಾಡಿದ್ದೀರಿ. ನಾನು ಮುಖ್ಯಮಂತ್ರಿಯಾಗಿದ್ದಂಥ ಕಾಲದಲ್ಲಿ ಕೃಷ್ಣಬೇಸಿನ್ ಆಥಾರಿಟಿ ಎನ್ನತಕ್ಕಂಥಾದ್ದನ್ನು ಮಾಡಿದೆವು. ಇದರಲ್ಲಿ ನಾವು ಅಷ್ಟೇ ಅಲ್ಲ, ತಮ್ಮ ಪಕ್ಷ ಕೂಡ ಭಾಗಿ ಎಂದು ಹೇಳುತ್ತೇನೆ. ಆ ಅಥಾರಿಟಿ ಬಗ್ಗೆ ನಾವೆಲ್ಲರೂ ಸರ್ವಾನುಮತದಿಂದ ತೀರ್ಮಾನ ಮಾಡಿದ್ದೇವೆ. ಒಬ್ಬರೂ ಕೂಡ ವಿರೋಧ ಮಾಡಲಿಲ್ಲ. ಇದೇ ತೀರ್ಮಾನವನ್ನು ವಿಧಾನ ಪರಿಷತ್ತಿನಲ್ಲಿ ಕೂಡ ನಾವು ಮಾಡಿದ್ದೇವೆ. ಕೃಷ್ಣ ಬೇಸಿನ್ ಅಥಾರಿಟಿಯನ್ನು ಯಾವ ಉದ್ದೇಶಕ್ಕೆ ಮಾಡಿದ್ದೇವೆಂದು ತಾವು ದಯವಿಟ್ಟು ಅದಕ್ಕೆ ಸಂಬಂದಪಟ್ಟ ಕಾಗದ ಪತ್ರಗಳನ್ನು ತಂದು ಓದಿ ನೋಡಿ. ಇರಿಗೇಷನ್ ಬಾಂಡ್ ಬಗ್ಗೆ ತಾವು ಬಜೆಟ್‌ನಲ್ಲಿ ಹೇಳಿದ್ದೀರಿ, ಬಜೆಟ್‌ನಲ್ಲಿ ಹಣವನ್ನು ಒದಗಿಸದೆ ಇರಿಗೇಷನ್ ಬಾಂಡ್ ಮೇಲೆ ಹಣವನ್ನು ಸಂಗ್ರಹ ಮಾಡುತ್ತೇವೆಂದು ಹೇಳಿರುವ ಬಗ್ಗೆ ನನಗೆ ಏಕೋ ಅನುಮಾನ ಬರುತ್ತಿದೆ. ಬಜೆಟ್‌ನಲ್ಲಿ ಹಣವನ್ನು ತೆಗೆದಿಟ್ಟು ಇರಿಗೇಷನ್ ಕೆಲಸವನ್ನು ತಾವು

ಮಾಡಬೇಕು. ಈಗ ತಾವು ಬಜೆಟ್‌ನಲ್ಲಿ 20 ಕೋಟಿ, 30 ಕೋಟಿ, 70 ಕೋಟಿ ಇಟ್ಟು ಇನ್ನು ಉಳಿದ ಹಣವನ್ನು ಬಾಂಡ್ ಮೂಲಕ ಸಂಗ್ರಹಿಸುತ್ತೇವೆಂದು ಹೇಳಿರುವುದು ಸರಿಯಲ್ಲ. ಇವತ್ತು ಕೃಷ್ಣ ಬೇಸಿನ್ ಇರಬಹುದು, ಕಾವೇರಿ ಬೇಸಿನ್ ಇರಬಹುದು, ಕಾವೇರಿ ಬೇಸಿನ್‌ಗೆ ಸೆಂಟ್ರಲ್ ಅಸಿಸ್ಟೆನ್ಸ್ ಇಲ್ಲವೆಂದು ತಮಗೂ ಗೊತ್ತಿದೆ. ಇವತ್ತು ನಾವು ಮಾನ್ಯ ದೇವರಾಜ ಅರಸ್‌ರವರನ್ನು ನೆನಸಿಕೊಳ್ಳಬೇಕು. ಅವರು ಹೇಗೆ ಎಂದರೆ, ಯಾವುದಾರೂ ಒಂದು ತೀರ್ಮಾನವಾದರೆ ಅದು ಬಂಡೆ ಕಲ್ಲು ಇದ್ದ ಹಾಗೆ. ಇಡೀ ರಾಜ್ಯದ ಪ್ರಗತಿ ಬಗ್ಗೆ ಅವರು ಗಮನ ಕೊಟ್ಟು ಸೆಂಟ್ರಲ್ ಅಸಿಸ್ಟೆನ್ಸ್ ಇಲ್ಲವೇ ಇದ್ದರೂ ಸ್ಟೇಟ್ ಪ್ಲಾನ್ ಅಲೋಕೇಷನ್ ಮಾಡಿಕೊಂಡು ಕೆಲಸವನ್ನು ಎಕ್ಸಿಕ್ಯೂಟ್ ಮಾಡಿದ್ದರು. ಮಾನ್ಯ ಅಧ್ಯಕ್ಷರೇ, ತಾವು ಕೂಡ ಆ ಮಹಾ ನಾಯಕರ ಜೊತೆ ಅನೇಕ ವರ್ಷಗಳನ್ನು ಕಳೆದವರು. ಅವರು ಎಷ್ಟು ಅಜಾನುಭಾಹುವಾಗಿದ್ದರೋ ಅಷ್ಟೇ ರೀತಿಯಲ್ಲಿ ಅವರ ಗುಣವೂ ದೊಡ್ಡದಾಗಿತ್ತು. ಅವರಿಗೂ ನನಗೂ ಒಂದೇ ಒಂದು ಡಿಫರೆನ್ಸ್ ಅಂದರೆ, ನಾನು ಅಷ್ಟು ದಪ್ಪವಾಗಿಲ್ಲ. ಒಂದು ಒಂದನ್ನು ಬಿಟ್ಟರೆ ನಾನೂ ಸಹ ಅವರಿಗಿಂತ ಕಡಿಮೆ ಮಾಡಿಲ್ಲವೆಂದು ಪ್ರಾಮಾಣಿಕವಾಗಿ ಹೇಳುತ್ತೇನೆ. ಅವರ ಕಾಲದಲ್ಲಿ ಕಬಿನಿ, ಹಾರಂಗಿ, ಹೇಮಾವತಿ ಮತ್ತು ವರುಣಾ ಚಾನಲ್ ಪ್ರಾಜೆಕ್ಟ್‌ಗಳನ್ನು ಮಾಡಿದರು. ಮಂಡ್ಯ ಜಿಲ್ಲೆಯಲ್ಲಿ ನೀರಿನ ಕಾಲುವೆಗಳೆಲ್ಲಾ ಹಳೆಯದಾಗಿರುವುದರಿಂದ ಅವುಗಳನ್ನೆಲ್ಲಾ ಹೊಸದಾಗಿ ಮಾಡಿಸುವುದಕ್ಕೆ ಹಣ ಕೊಡುವ ವಿಚಾರ ಹುಟ್ಟಿದ್ದೇ ಅವರ ಕಾಲದಲ್ಲಿ. ಆ ಸಂದರ್ಭದಲ್ಲಿ ಮಂಡ್ಯದವರು ಚಡ್ಡಿ ಪ್ರದರ್ಶನವನ್ನೆಲ್ಲಾ ಮಾಡಿದ್ದರು. ಆಗ ವರುಣಾ ಚಾನಲ್ ಬಗ್ಗೆ ವಿರೋಧ ಬಂದರೂ ನಾವು ನೀರು ಕೊಡಬೇಕಾಗುತ್ತದೆಂದು ಅವರು ನಿಲುವು ತೆಗೆದುಕೊಂಡರು.

ಮಂಡ್ಯ ಜಿಲ್ಲೆಯವರೂ ಕೂಡ ಒಪ್ಪಿಕೊಂಡರು. ಕಾಂಪ್ರಮೈಸ್ ಫಾರ್ಮುಲವನ್ನು ಎವಾಲ್ವ್ ಮಾಡಿದರು. ಅದು ಮಂಡ್ಯ, ಮೈಸೂರು ಜಿಲ್ಲೆಯ ಜನರ ಪ್ರೀತಿ ವಿಶ್ವಾಸವನ್ನು ತೆಗೆದುಕೊಂಡು ಹೋಯಿತು. ಅವರು ಆಡಳಿತ ಮಾಡಿದಂಥ ಕಾಲದಲ್ಲಿ ನಮ್ಮ ಬಜೆಟ್ ಅಲೋಕೇಷನ್ ವಿಚಾರ ನಾನು ಹೇಳುತ್ತಿದ್ದೇನೆ. ಅವರು ಮಾಡಿಟ್ಟಿರತಕ್ಕಂಥ ಅಲೋಕೇಷನ್‌ಗಿಂತ ಜಾಸ್ತಿ ಮಾಡಲು ಯಾರಿಂದಲೂ ಆಗಲಿಲ್ಲ. ಆನಂತರ 1984-85 ರಿಂದ 85-86, 87-88, 88-89 ಹೀಗೆ ಎಲ್ಲಾ ವಿಚಾರಗಳು ನನ್ನ ಹತ್ತಿರ ಇದೆ. ನಿಮ್ಮ ಕಾಲದಲ್ಲಿ ಅಂದರೆ 1987-88-89ರಲ್ಲಿ 150 ಕೋಟಿಗಳಿಗಿಂತ ಮೇಲಕ್ಕೆ ನಿಮಗೆ ಹೋಗಲು ಆಗಲಿಲ್ಲ. ಒಂದು ಕಾಲದಲ್ಲಿ ಮಾನ್ಯ ಮುಖ್ಯಮಂತ್ರಿ ದೇವರಾಜ್ ಅರಸ್‌ರವರು ನಾನು ರಾಜೀನಾಮೆ ಕೊಡುತ್ತೇನೆ ಎಂದರು. ಅದೇ ಮಾನ್ಯ ಹೆಗಡೆಯವರು ಮುಖ್ಯಮುಂತ್ರಿಯವರಿದ್ದಾಗ ಮಾನ್ಯ ದೇವೇಗೌಡರು ಏನು ಹೇಳಿದ್ದಾರೆ ಎಂಬುದು ನಿಮಗೆ ಗೊತ್ತಿದೆ. ಆಗ ನೀರಾವರಿ ಮಂತ್ರಿಯಾಗಿದ್ದ ದೇವೇಗೌಡರು 300 ಕೋಟಿ ರೂಪಾಯಿಗಳನ್ನು ನೀರಾವರಿಗೆ ಕೊಡದಿದ್ದರೆ ನಾನೂ

ಸಚಿವ ಪದವಿಗೆ ರಾಜೀನಾಮೆ ಕೊಡುತ್ತೇನೆ ಎಂದು ಹೇಳಿದರು. ಹೌಸ್ ರೆಸಲ್ಯೂಷನ್ ಮಾಡಿಬಿಟ್ಟರು. ಇದನ್ನು ತಮ್ಮ ಗಮನಕ್ಕೆ ತರುತ್ತಾ ಮುಖ್ಯಮಂತ್ರಿಯಾಗಿರುವ ದೇವೇಗೌಡರು ಈ ವಿಚಾರಕ್ಕೆ ಹೆಚ್ಚು ಹಣವನ್ನು ಇಡುತ್ತಾರೆ ಎಂದು ನಾನು ಅಂದುಕೊಂಡಿದ್ದೆ. ಇವೊತ್ತು ನೀವು ಇರಿಗೇಷನ್ ಬಾಂಡ್‌ನ ಹೆಸರು ಹೇಳಿಕೊಂಡು ಹಣ ಮೇಲುಗಡೆಯಿಂದ ಬರತಕ್ಕಂಥ ಒಂದು ಅಸ್ತ್ರ ಎಂದು ತಿಳಿದುಕೊಂಡಿದ್ದಿರೋ? ಇರಿಗೇಷನ್ ಬಾಂಡ್ ಕ್ಯಸ್ ಮಾಡಿದರೆ ಅದರಿಂದ ಎಷ್ಟು ಬರುತ್ತದೆ, ಎಷ್ಟು ಇಲ್ಲ ಎಂಬುದು ಯಾರಿಗೂ ಹೇಳಲು ಆಗುವುದಿಲ್ಲ. ಅದು ಯಾರಿಗೂ ಗೊತ್ತಾಗುವುದಿಲ್ಲ. ಈ ಬಗ್ಗೆ ಬಹಳ ಎಚ್ಚರಿಕೆಯಿಂದ ನೀವು ವ್ಯವಹಾರ ಮಾಡಬೇಕಾಗುತ್ತದೆ. ಈ ಬಜೆಟ್ ಅಲೋಕೇಷನ್ ಗೆ ಸಪೋರ್ಟ್ ತೆಗೆದುಕೊಳ್ಳಬೇಕಾದರೆ ಅದು ಕೃಷ್ಣಾ ಬೇಸಿನ್, ಕಾವೇರಿ ಬೇಸಿನ್, ಗೋದಾವರಿ ಭೇಸಿನ್, ಯಾವುದೇ ಇರಬಹುದು. ನಮ್ಮ ರಾಜ್ಯದಲ್ಲಿ 5-6 ಬೇಸಿನ್ಸ್ ಇವೆ. ಯಗಚಿ ತೆಗೆದುಕೊಳ್ಳಿ, ಅದು ಎರಡು ಬೇಸಿನ್ಸ್ ಸೇರುವಂಥ ಸ್ಥಳವಾಗಿದೆ. ಇದು ಹಾಸನ ಜಿಲ್ಲೆಗೆ ಸಂಬಂಧಪಟ್ಟದ್ದುದು. ಬೇಲೂರು ಕಡೆಗೆ ಬರತಕ್ಕಂಥಾದ್ದು. ನನ್ನ ಕಾಲದಲ್ಲಿಯೂ ಕೂಡ ಅವರಿಗೆ ಲಿಫ್ಟ್ ಇರಿಗೇಷನ್‌ನನ್ನು ಮಂಜೂರು ಮಾಡಿಕೊಟ್ಟೆ. ಅದು ಈಗ ಏನಾದೆಯೋ ಎಂಬುದು ಗೊತ್ತಿಲ್ಲ. ಅದು ಈಗ ನಿಂತು ಹೋಗಿದೆ ಎಂಬ ವಿಚಾರವು ಗೊತ್ತಾಗುತ್ತದೆ. ನಾನು ಯಾರೇ ಸದಸ್ಯರು ವಿರೋಧಪಕ್ಷದ ಸದಸ್ಯರು ಇಂಥ ಒಂದು ಕೆಲಸಕ್ಕೆ ಹಣ ಬಿಡುಗಡೆ ಮಾಡುವ ಕಾಲದಲ್ಲಿ ಯಾವುದೇ ತಾರತಮ್ಯ ಅಥವಾ ವಿಳಂಬ ನೀತಿಯನ್ನು ತೋರಿಸಿಲ್ಲ. ನಾನು ಮುಖ್ಯಮಂತ್ರಿಯಾಗಿರುವವರೆಗೆ ಆ ಕೆಲಸವನ್ನು ಮಾಡಿದ್ದೇನೆ. ನನಗೆ ಯಾರೂ ಹೊಗಳಿಕೆ ಪತ್ರವನ್ನು ಕೊಡಬೇಕಾಗಿಲ್ಲ. ಇವೊತ್ತು I am forewarning you. We have got Krishna Basin, Cauvery Basin and Godavari Basin. We have got 5-6 basins in Karnataka. ಯಾವುದೇ ಇರಬಹುದು. ಬಾಕಿ ಇದೆ, ನೀವು ಹಣ ಕೊಡುತ್ತಾ ಇಲ್ಲ, ಬಿಡುಗಡೆ ಮಾಡುತ್ತಾ ಇಲ್ಲ ಎಂಬ ಒಂದು ಕೂಗು ನನ್ನ ಆಡಳಿತದಲ್ಲಿ ಎಲ್ಲಿ ಇತ್ತು ಎಂಬ ಪ್ರಶ್ನೆಯನ್ನು ಮಾನ್ಯ ಸಭಾಧ್ಯಕ್ಷರಲ್ಲಿ ತಮ್ಮ ಅನುಮತಿ ಪಡೆದು ಈ ಪ್ರಶ್ನೆಯನ್ನು ಇಡುತ್ತೇನೆ. ಆ ಮೇಲೆ ಬಂದಿರತಕ್ಕಂಥ ಪ್ರಶ್ನೆಯ ವಿಚಾರವನ್ನು ನಾನು ಮಾತನಾಡಲು ಹೋಗುವುದಿಲ್ಲ. ಉದಾಹರಣೆಗೆ ಮಾನ್ಯ ಶಿವರಾಮೇಗೌಡರ ನಾಗಮಂಗಲದಲ್ಲಿ ಕುಡಿಯುವ ನೀರಿನಿಂದ ಹಿಡಿದು ಇರಿಗೇಷನ್‌ವರೆಗೆ ಎಲ್ಲಾ ಕೆಲಸಗಳನ್ನು ಮಾಡಿಸಿದ್ದೇನೆ. ಇವೊತ್ತು ತುಂಗಭದ್ರಾ ಪ್ರಾಜೆಕ್ಟ್ ಬಗ್ಗೆ ಕೇಳಿದಾಗ ಹೊಟ್ಟೆ ಉರಿದು ಹೋಗುತ್ತದೆ. ತಮಗೆ ಗೊತ್ತಿರುವ ಹಾಗೆ ಅಪ್ಪರ್‌ತುಂಗಾ ಪ್ರಾಜೆಕ್ಟ್ ನನ್ನ ಕಾಲದಲ್ಲಿ 200-300 ಕೋಟಿ ಇರಬೇಕೆಂದು ಕಾಣುತ್ತದೆ. ತುಂಗಾ ಅಣೆಕಟ್ಟು ಮತ್ತೆ ಮುಳುಗಡೆ ಮಾಡಬಾರದು, ಅದು ಮುಳುಗಡೆಯಾದರೆ ತೀರ್ಥಹಳ್ಳಿ, ಕೊಪ್ಪ ತಾಲ್ಲೂಕುಗಳಿಗೆ ತೊಂದರೆಯಾಗುತ್ತದೆ ಎಂದು ಹೇಳಿ, ಇರುವ ನೀರು ಹೆಚ್ಚಾಗಿ ಹರಿದು ಹೋಗುತ್ತದೆ, ಈಗ ಇರುವ ಡ್ಯಾಮ್ ಮೇಲೆ ಕ್ರೆಸ್ಟ್ ಗೇಟ್ಸ್

ಹಾಕಿಕೊಂಡು ಬಿಡುವುದು, ಆ ನೀರಿನ್ನು ಡೈವರ್ಟ್ ಮಾಡಿ ತೆಗೆದುಕೊಳ್ಳೋಣವೆಂದು ಹೇಳಿ, ಅದರಲ್ಲಿ ಲಿಫ್ಟ್ಇರಿಗೇಷನ್‌ನ್ನು ಹಾಕಿದ್ದುದು ಅಲ್ಲದೇನೇ ನಮ್ಮ ಕಾಲದಲ್ಲಿ ಅಪ್ಪರ್ ತುಂಗಾ ಪ್ರಾಜೆಕ್ಟ್‌ನ್ನು ಮಂಜೂರು ಮಾಡಿದ್ದೇವೆ. I think, I had allocataed Rs.300 and odd crores. When I went to America in connection with Power projects, I discussed this matter also with the World Bank in Washington with a person by name Mr.Wood, Deputy Chairman of the World Bank.

ನಾನು ಅವರ ಜೊತೆಯಲ್ಲಿ ಸುಮಾರು ಎರಡೂವರೆ ಗಂಟೆಗಳ ಕಾಲ ಬೇರೆ ಬೇರೆ ಪ್ರಾಜೆಕ್ಟ್‌ಗಳ ಬಗ್ಗೆ ಚರ್ಚೆ ಮಾಡಿದ್ದೇನೆ. ಸ್ವಾಮಿ ಇದು ಈ ರೀತಿಯಲ್ಲಿದೆ. ನೀವು ನಮ್ಮ ಇರಿಗೇಷನ್ ಪ್ರಾಜೆಕ್ಟ್‌ಗೆ ಸಹಾಯ ಮಾಡಿ. ನಾವು ಬಜೆಟ್ ಅಲೋಕೇಷನ್ ಇಷ್ಟು ಮಾಡುತ್ತಾ ಇದ್ದೇವೆ. ಕೇಂದ್ರ ಸರಕಾರದವರು ಕೂಡ ಅಡ್ಡ ಬರುತ್ತಾ ಇಲ್ಲ. ನಾನು ಇದನ್ನು ಪ್ರಧಾನಮಂತ್ರಿ, ಇರಿಗೇಷನ್ ಸಚಿವರು ಮತ್ತು ಕೇಂದ್ರ ಸರಕಾರದವರ ಜೊತೆಯಲ್ಲಿ ಮಾತನಾಡಿ ಮಾಡಿದ್ದೆ. ಇವೊತ್ತು ನಾನು ಉದಾಹರಣೆಯಾಗಿ ಕೇಳುತ್ತಾ ಇದ್ದೇನೆ. ಅಪ್ಪರ್‌ತುಂಗಾ ಪ್ರಾಜೆಕ್ಟ್ ಎಲ್ಲಿ ಬರುತ್ತದೆ? ಕೃಷ್ಣಾಬೇಸಿನ್ ಎಲ್ಲಿ ಬರುತ್ತದೆ? This water goes and joins ultimately to Krishna River.

ನಾರಾಯಣಪುರ, ಆಲಮಟ್ಟಿ ಇವೊತ್ತು ಏನಾಗುತ್ತದೆ? ನಾನು ಒಂದು ವಿಚಾರವನ್ನು ಹೇಳುತ್ತೇನೆ. ತಮಗೆ ಗೊತ್ತಿರುವ ಹಾಗೆ ನಾನು ಹಣ ಬಿಡುಗಡೆ ಮಾಡಿ ಚೀಫ್ ಇಂಜಿನೀಯರ್ ಪೋಸ್ಟ್‌ನ್ನು ಕ್ರಿಯೇಟ್ ಮಾಡಿ, ಕ್ರೆಸ್ಟ್‌ಗೇಟ್ ಹಾಕಬೇಕು, ಮತ್ತಿತರ ಕೆಲಸಗಳನ್ನು ಮಾಡಬೇಕೆಂದು ಮಾಡಿ, ಶಿವಮೊಗ್ಗದಲ್ಲಿ, ಚೀಫ್ ಇಂಜಿನೀಯರ್ ಕಛೇರಿಯನ್ನು ಮಾಡಿ, ಸೂಪರಿಂಡೆಂಟ್ ಇಂಜಿನೀಯರ್ ಆಫೀಸ್‌ನ್ನೂ ಕೂಡ ಮಾಡಿದ್ದೆ. ಇಲ್ಲಿ ಜಾಸ್ತಿ ನೀರು ಬರುವುದು ಧಾರವಾಡ ಜಿಲ್ಲೆಯ ರಾಣೆಬೆನ್ನೂರು ತಾಲ್ಲೂಕಿಗೆ. ನನಗೆ ಶಿವಮೊಗ್ಗ ಜಿಲ್ಲೆಯ ಈ ಪ್ರದೇಶಗಳು ನೆನಪಿವೆ. ಸುಮಾರು 24 ಸಾವಿರ ಎಕರೆ ಪ್ರದೇಶ ಇರಬಹುದು. ಹೊನ್ನಾಳಿ ತಾಲ್ಲೂಕು, ಅದಾದಮೇಲೆ 28 ಸಾವಿರ ಎಕರೆ ಧಾರವಾಡ ಜಿಲ್ಲೆಯಲ್ಲಿನ ಹಿರೇಕೆರೂರು ತಾಲ್ಲೂಕು, 78 ಸಾವಿರ ಎಕರೆ ಹಾನಗಲ್ ತಾಲ್ಲೂಕು, 56 ಸಾವಿರ ಎಕರೆ ಬ್ಯಾಡಗಿ ತಾಲ್ಲೂಕು, ಹರಿಹರ ತಾಲ್ಲೂಕಿನ ಒಂದೇ ಒಂದು ಹಳ್ಳಿ ಬರುತ್ತದೆ ಅಲ್ಲಿ 300 ಚಿಲ್ಲರೆ ಎಕರೆ ಬರುತ್ತದೆ. ಶಿಕಾರಿಪುರ ತಾಲ್ಲೂಕ್‌ನಲ್ಲಿ ಒಂದೇ ಒಂದು ಹಳ್ಳಿ ಬರುತ್ತದೆ ಅದೂ ಕೂಡ 300 ಚಿಲ್ಲರೆ ಎಕರೆ ಇದೆ. 80 ಸಾವಿರ ಎಕರೆ ಹಾವೇರಿ ತಾಲ್ಲೂಕು, ಹೀಗೆ ಲೆಕ್ಕ ಕೊಡುತ್ತಾ ಹೋಗಬಹುದು. ಈ ಬಗ್ಗೆ ಕ್ಯಾಬಿನೆಟ್ ಡಿಸಿಷನ್ ಮಾಡಿ 50 ಲಕ್ಷಗಳ ಹಣವನ್ನು ತೆಗೆದಿಟ್ಟ ಮೇಲೆ, ಸುಮಾರು 80 ಸಾವಿರ

ಇದ್ದುದು 90 ಸಾವಿರದ ಮೇಲೆ ಹೋಯಿತು. ನನಗೆ ಗೊತ್ತಿರುವ ಹಾಗೆ ರಾಣಿಬೆನ್ನೂರು ತಾಲ್ಲೂಕ್ ಅತಿ ಹೆಚ್ಚು ಪ್ರದೇಶವನ್ನೊಳಗೊಂಡಿದೆ. ಅದು ಸುಮಾರು ಒಂದು ಲಕ್ಷದ 8 ಸಾವಿರ ಎಕರೆಗಳಷ್ಟು ಆಗಿದೆ. ಅದರ ಏರಿಯಾ ಸರ್ವೆ ಮಾಡಿದ ಮೇಲೆ 1 ಲಕ್ಷದ 22 ಸಾವಿರದವರೆಗೂ ನಾನು ಕ್ಯಾಬಿನೆಟ್ ಡಿಸಿಶನ್ ಮಾಡಿ ಕವರ್ ಮಾಡಿದ್ದೇವೆ. ಆದರೆ ದುರ್ದೈವದ ಸಂಗತಿ ಅಂದರೆ ನಾನು ಮಾಡಿದ ಚೀಫ್ ಇಂಜಿನೀಯರ್ ಕಛೇರಿಯೂ ಹೋಯಿತು, ಎಸ್.ಇ.ಆಫೀಸ್ ಹೋಯಿತು, ಆಮೇಲೆ ತುಂಗಭದ್ರಾದ ಬಗ್ಗೆ ಮಾತನಾಡುವವರು ಗತಿ ಇಲ್ಲ, ಧಾರವಾಡ ಜಿಲ್ಲೆ ನೋಡಿದರೆ ಅಲ್ಲಿ ಬರಗಾಲ ಬೀಳುತ್ತಿದೆ; ಶಿವಮೊಗ್ಗ ಜಿಲ್ಲೆಯಲ್ಲಿ ಕೂಡ ಆ ಕಾಲದಲ್ಲಿ ಬರಗಾಲ ಬೀಳುತ್ತಾ ಇತ್ತು, ಸಂಪೂರ್ಣವಾಗಿ ಇದನ್ನು ಮಾತನಾಡುವವರು ಗತಿ ಇಲ್ಲದಿದ್ದರೆ, ನೀವು ಕೃಷ್ಣಾಬೇಸಿನ್‌ಗೆ ಬರೀ ಬಾಂಡ್ಸ್‌ನ್ನು ನಂಬಿಕೊಂಡು ಹೋದರೆ, ನೀವು ಈ ಹೊಸ ಪ್ರಾಜೆಕ್ಟ್‌ಗಳನ್ನು ತೆಗೆದುಕೊಂಡು ಬಜಾವತ್ ಅವಾರ್ಡ್‌ನ ಪ್ರಕಾರ 730 ಟಿಎಂಸಿ ನೀರನ್ನು ಉಪಯೋಗ ಮಾಡಬೇಕಾಗಿದೆಯಲ್ಲ? ಅದನ್ನು ನೀವು ಮುಟ್ಟಲು ಸಾಧ್ಯವೇ? By 2000 AD you will not be able to utilise your share of water. You will be a failure.

ನಿಮ್ಮ ಬಜೆಟ್‌ನ್ನು ಓದಿ ನಮಗೆ ಮನಸ್ಸಿಗೆ ತುಂಬಾ ನೋವು ಉಂಟಾಗಿದೆ. ಹೊಸ ಯೋಜನೆಗಳು ಕೂಡ ನಿಮ್ಮ ಹತ್ತಿರ ಇಲ್ಲ. ಒಂದು ಪೈಸೆಯನ್ನೂ ಕೂಡ ನೀವು ಅದಕ್ಕಾಗಿ ಇಟ್ಟಿಲ್ಲ. ಇಲ್ಲಿ ರಾಜಕೀಯ, ಪಕ್ಷ, ಪಗಂಡಗಳ ವಿಚಾರ ಬೇಡ. ನೀವು ವಿಷಯ ಸಮಿತಿಗಳ ಮುಂದೆ ಅದನ್ನು ಇಡಿ, ಅದರ ಮುಂದೆ ನಾನು ಹೇಳುತ್ತೇನೆ. ನೀವು ಸಂಬಂಧಪಟ್ಟ ಅಂಕಿಅಂಶಗಳನ್ನು ಓದಿ ನೋಡಿ. ಹೊಸ ಸಬ್ ಜೆಕ್ಟ್‌ಗಳನ್ನು ತೆಗೆದುಕೊಂಡಿದ್ದೀರಾ ಎಂಬ ಬಗ್ಗೆ ವಿಚಾರ ಮಾಡಿನೋಡಿ. ಹಾರಂಗಿ ಕೆನಾಲ್‌ನಿಂದ ಕರಡಿಲಕ್ಕನ ಕೆರೆ ಎಂದು ಇದೆ. ಅಲ್ಲಿ ಲಿಫ್ಟ್ ಇರಿಗೇಷನ್‌ನಲ್ಲಿ ಒಂದು. ಅದು ಏಶ್ಯಾಖಂಡದಲ್ಲಿಯೇ ದೊಡ್ಡ ಲಿಫ್ಟ್ ಇರಿಗೇಷನ್ ಆಗುತ್ತಿತ್ತು. ಅದಕ್ಕೆ 1020 ಕೋಟಿ ರೂಪಾಯಿಗಳಷ್ಟು ಹಣ ಕೊಟ್ಟು ಕೆಲಸವನ್ನು ಸ್ಟಾರ್ಟ್ ಮಾಡಿಸಿದ್ದೇನೆ. ಹಾರಂಗಿ ಕೆನಾಲ್‌ನಿಲಂದ ನೀರು ಲಿಫ್ಟ್ ಮಾಡಿದರೆ ನಿಮ್ಮ ಮೈಸೂರು ಜಿಲ್ಲೆಯ ಪಿರಿಯಾಪಟ್ಟಣ ತಾಲ್ಲೂಕಿಗೆ ಬರಬೇಕು. ಆ ಕಾರ್ಯಕ್ರಮ ಇಂದು ಎಷ್ಟು ಪ್ರಗತಿಯಾಗಿದೆ ಎಂಬುದನ್ನು ನೋಡಿಕೊಂಡು ಹೇಳಿ? ಹೆಗ್ಗಡದೇವನಕೋಟೆಯ ತಾರಕ ಯೋಜನೆ. 12 ಕೋಟಿ ರೂಪಾಯಿಗಳ ಪ್ರಾಜೆಕ್ಟ್ ಅದು. ಅದಕ್ಕೆ ನನ್ನ ಕಾಲದಲ್ಲಿ 5 ಕೋಟಿ ರೂಪಾಯಿಗಳನ್ನು ಬಿಡುಗಡೆ ಮಾಡಿದ್ದೇನೆ. ನನ್ನ ಕಾಲದಲ್ಲಿ ನಾನು ಒಂದು ತೀರ್ಮಾನ ಮಾಡಿದ್ದೇನೆ. ಒಂದು ಫೌಂಡೇಷನ್ ಹಾಕಬೇಕೆಂದರೆ, ಅದಕ್ಕೆ ಅಡ್ಮಿನಿಸ್ಟ್ರೇಟಿವ್ ಅಪ್ರೂವಲ್ ಆಗಿರಬೇಕು, ಹಣ ಬಿಡುಗಡೆಯಾಗಿರಬೇಕು, ಅಂದರೆ ಮಾತ್ರ ಹೋಗುತ್ತಿದ್ದೆ, ಇಲ್ಲವಾದಲ್ಲಿ ಇಲ್ಲ. ಯಾವ ಸಚಿವರೂ ಕೂಡ ಹೋಗಬಾರದು ಎಂದು ತೀರ್ಮಾನ ಮಾಡಿದ್ದೆವು. ಇವೊತ್ತು ತಾರಕ

ಜಲಾಶಯಕ್ಕೆ ಬಿಡುಗಡೆ ಮಾಡಿದ ಹಣದ ಕೆಲಸ ಏನಾಗಿದೆ ಗೊತ್ತಿಲ್ಲ.

ಇವತ್ತು ತಾರಕ ಇರಬಹುದು ಮತ್ತೊಂದು ಇರಬಹುದು, ಧರ್ಮಸಿಂಗರ ಕ್ಷೇತ್ರ ಜೇವರ್ಗಿ 179 ಕೋಟಿ - ನಾನು ಏಕೆ ಹೇಳುತ್ತಿದ್ದೇನೆಂದರೆ ಉದಾಹರಣೆ ಕೊಡುತ್ತೇನೆ, ಇಂಥ ದೊಡ್ಡ ಪಟ್ಟಿ ಇದೆ, ಎಲ್ಲವನ್ನೂ ನಾನು ಹೇಳುವುದಕ್ಕೆ ಆಗುವುದಿಲ್ಲ ಕಾಲದ ಅಭಾವ ಇದೆ, ಕ್ಷಮಿಸಬೇಕು. ನೀರಾವರಿಗೆ ಹೆಚ್ಚಿನ ಆದ್ಯತೆ ಕೊಡಲು ನಾನಂತೂ ಹೆಚ್ಚಿನ ಗಮನಹರಿಸಿದ್ದೆ. ಹೊಸಹೊಸ ಯೋಜನೆ ಮಂಜೂರು ಮಾಡುವುದರಲ್ಲಿ ಹಣ ಬಿಡುಗಡೆ ಮಾಡುವುದರಲ್ಲಿ ಪ್ರಾಮಾಣಿಕವಾದ ಪ್ರಯತ್ನ ಮಾಡಿರುವಾಗ ನಿಮಗೆ ನನ್ನ ಆಡಳಿತದ ಬಗ್ಗೆ ಟೀಕೆ ಮಾಡುವುದಕ್ಕೆ ಯಾವಹಕ್ಕಿದೆ? ನೀವು ಉತ್ತರ ಕೊಡುವ ಕಾಲದಲ್ಲಿ ಇಲ್ಲ, ಇಲ್ಲ ಬಂಗಾರಪ್ಪನವರು ಹೇಳಿದ್ದರ ಬಗ್ಗೆ ನಮಗೆ ಅಭಿಮತ ಇದೆ ಎಂದು ಹೇಳುವುದು ನಿಮಗೆ ಬಿಟ್ಟಿದ್ದು. ಆದರೆ ಒಂದೇ ಒಂದು ಮಾತು, ಇದೇ ಪ್ರವೃತ್ತಿ ನೀವು ಮುಂದುವರೆಸಿಕೊಂಡು ಬಂದರೆ ನಾನು ಹೇಳುತ್ತೇನೆ: ಅಂಕಿ ಅಂಶಗಳ ಸಮೇತ ಮುಂಬರುವ ದಿನಗಳಲ್ಲಿ ಜನರ ಮುಂದೆ ಇಡಬೇಕಾಗುತ್ತದೆ. ಇನ್ನಷ್ಟು ದಿವಸ ಕಳೆಯಲಿ, ಪಾಪ ಹೊಸದಾಗಿ ಬಂದಿದ್ದೀರಿ, ಸಂತೋಷ, ಜನ ಆಶೀರ್ವಾದ ಮಾಡಿ ಕಳುಹಿಸಿದ ಮೇಲೆ ನಾನು ಸಂತೋಷಪಟ್ಟಿದ್ದೇನೆ. ಸರ್ಕಾರಕ್ಕೆ ಸಹಕಾರ ಕೊಡುತ್ತೇವೆ ಎಂದು ಎಲ್ಲಾ ಪಕ್ಷದವರು ಹೇಳಿದ ಹಾಗೆ ನಾವೂ ಹೇಳಿದ್ದೇವೆ based on institutional programmes ನಿಮಗೂ ಕೂಡ ಸಹಕಾರ ಕೊಡುತ್ತೇವೆ but if you are not able to make use of it, in what way I can come to your help, I cannot understand. That is all the point I want to drive at.

ಇರಿಗೇಷನ್‌ನಲ್ಲಿ ಬರುತ್ತಾ ನನ್ನ ಕಾಲದಲ್ಲಿ 600 ಕೋಟಿವರೆಗೂ ತೆಗೊಂಡುಹೋಗಿದ್ದೆ. There has been a very sweeping jump. ಬೇಕಾದರೆ ನೀವು ಅಂಕಿಅಂಶ ತಗೊಂಡು ಓದಿ ನೋಡಿ. ನಾನು ಬಿಡುವ ಕಾಲದಲ್ಲೂ ಕೂಡ ಕಾವೇರಿ ಬೇಸಿನ್ ಕೃಷ್ಣಾ ಬೇಸಿನ್, ಗೋದಾವರಿ ಬೇಸಿನ್- ನಿಜ ಹೇಳಬೇಕಾದರೆ ಮಾಂಜ್ರ-ಮಹಾರಾಷ್ಟ್ರದಲ್ಲಿ ಡ್ಯಾಮ್ ಕಟ್ಟುತ್ತಾರೆ, ನಮ್ಮ ರಾಜ್ಯದ ಔರಾದ್ ತಾಲ್ಲೂಕಿನಲ್ಲಿ ಮುಳುಗಡೆಯಾಗುತ್ತದೆ. ಜನ ಹೇಳಿದರು: ಸ್ವಾಮಿ ನಮಗೇನಾದರೂ ಮಾಡಿ ಲಿಫ್ಟ್ ಇರಿಗೇಷನ್ ಮಾಡಿಕೊಡಿ ಎಂದರು. ಅದಕ್ಕೋಸ್ಕರ ನಾನು ಕಾರ್ಯಕ್ರಮ ಹಾಕಿದ್ದೆ. ಅದೂ ಕೂಡ ಹೋಯಿತು. ನಾರಂಜ ಸಕ್ಕರೆ ಕಾರ್ಖಾನೆ-ಎಚ್‌ಕೆಡಿಬಿ ಯಿಂದ ದುಡ್ಡು ಕೊಟ್ಟಿದ್ದಲ್ಲದೆ, ಆ ಎಚ್‌ಕೆಡಿಬಿಗೆ ಹಿಂದುಳಿದ ಪ್ರದೇವಾದ್ದರಿಂದ ನೀರಾವರಿಗೆ ಯೋಜನೆ ಮಾಡಬೇಕು, ಶುಗರ್ ಕಂಪನಿ ಇರಬೇಕು ಅಲ್ಲದೆ ಅಲ್ಲೊಂದು ಕ್ಯಾನ್ಸರ್ ಆಸ್ಪತ್ರೆಗೆಂದು ಎಚ್‌ಕೆಡಿಬಿಯಿಂದ ನಾವು ಹಣ ಕೊಟ್ಟಿದ್ದೆವು. ಅದಕ್ಕೆ ನೀವು ಬಜೆಟರಿ ಸಪೋರ್ಟ್ ಕೊಡಬೇಕು. ಅದಕ್ಕೆ ನೀವು ಎಷ್ಟು ಹಣ ಇಟ್ಟಿದ್ದೀರಿ ಸ್ವಾಮಿ? ನೀವು ಏನು ಹೇಳಿದಿರಿ?

ಎಚ್‌ಕೆಡಿಬಿಗೆಷ್ಟು ಮಲೆನಾಡು ಅಭಿವೃದ್ಧಿ ಮಂಡಲಿಗೆಷ್ಟು ಎಂದು ನೀವು ತೋರಿಸಿಲ್ಲ. ಒಟ್ಟಾಗಿ ಹಣ ಇಟ್ಟಿದ್ದೀರಿ. ಏಕೆ ಗೊತ್ತೆ? ಮುಂದೆ ನೀವು ರಾಜಕೀಯ ಮಾಡುವುದಕ್ಕಾಗಿ ಹೀಗೆ ಒಟ್ಟಾಗಿ ಹಣ ಇಡುವುದು ಒಳ್ಳೆಯದಲ್ಲ. You set apart separate money for all these items so that we will come to know as to how much money you have allocataed for each district in different items. ನೀವು ಅದರ ಬಗ್ಗೆ ಏನು ಮಾಡಿದ್ದೀರಿ? ನಿಮ್ಮ ಬಜೆಟ್‌ನಲ್ಲಿ ಇಷ್ಟು ಹಣ ಇಟ್ಟುಬಿಟ್ಟಿದ್ದೇವೆ ಎಂದು ಬಿಟ್ಟರೆ ಮಲೆನಾಡು ಅಭಿವೃದ್ಧಿ ಮಂಡಲಿಯವರು ಈ ಕಡೆ ಎಳೆಯುತ್ತಾರೆ ಎಚ್‌ಕೆಡಿಬಿಯವರು ಆ ಕಡೆ ಎಳೆಯುತ್ತಾರೆ ನೀವು ಆಗ ರಾಜಕೀಯ ಮಾಡಿಕೊಳ್ಳುತ್ತಾ ಕುಳಿತು ತೀರ್ಮಾನ ಮಾಡಿ ಅಂತಿಮವಾಗಿ ಒಂದು ಅಂಕಿತ ಹಾಕಿ ಕ್ಲೋಸ್ ಮಾಡಿಬಿಡುತ್ತೀರಿ. ನಾನು ಅದಕ್ಕೆ ಹೇಳುವುಧು ಹಿಂದುಳಿದ ಪ್ರದೇಶದ ಬಗ್ಗೆ ಆ ಮನೆಯಲ್ಲಿ ಈ ಮನೆಯಲ್ಲಿ ಎಲ್ಲರ ಮುಂದೆಯೂ ಬೇಕಾದಷ್ಟು ಸಾರಿ ನಮ್ಮ ಮುಂದೆ ಬಂದಿರುವ ವಿಚಾರಗಳಿವು. ಚರ್ಚೆ ಮಾಡುವ ಕಾಲದಲ್ಲಿ ಹೆಚ್ಚಿನ ಹಣ ತೊಡಗಿಸುತ್ತಾ ಹೋಗಬೇಕು ಎಂಬ ಮಾತು ನಾವು ಇಡುತ್ತಾ ಬಂದಿದ್ದೇವೆ. ಆದರೆ ನೀವು ಇಡುವ ವಿಧಿವಿಧಾನ ನೋಡಿದರೆ you have not taken into account the overall development of the highly backward area i.e., Hyderabad-Karnataka area. ಎನ್ನುವ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗುತ್ತದೆ.

Maidan Areas Development Board ರಚನೆಯಾದ ಮೇಲೆ ನನಗೊತ್ತಿರುವ ಹಾಗೆ ಬಜೆಟ್ ಅಲೋಕೇಷನ್ ನಾನು ಎಲ್ಲೂ ನೋಡಲಿಲ್ಲ. ಪೂರ್ತಿ ಓದಿ ನೋಡಿದೆ. ಅದು ಎಲ್ಲಿಂದ ಸ್ಟಾರ್ಟಾಗುತ್ತದೆ, ಕೋಲಾರದಿಂದ ಹಿಡಿದು ತುಮಕೂರು ಚಿತ್ರದುರ್ಗದಿಂದ ಹಿಡಿದು ನಿಮ್ಮ ಬಾಂಬೆ, ಹೈದರಾಬಾದ್ ಕರ್ನಾಟಕವರೆಗೂ ಹೋಗುತ್ತದೆ. ನೀವು ಬರೀ ಭಾಷಣಮಾಡುತ್ತಾ ಕುಳಿತು ಬಜೆಟ್‌ನಲ್ಲಿ ಫಂಡ್ಸ್ ಅಲೊಕೇಟ್ ಮಾಡದೇ ಇದ್ದರೆ ನೀವೆಷ್ಟು ಸೀರಿಯಸ್ಸಾಗಿದ್ದೀರಿ ಎನ್ನುವ ಮಾತನ್ನು ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಸ್ವಾಮಿ, ಎಚ್‌ಕೆಡಿಬಿ ವಿಚಾರ ಹೇಳಬೇಕಾದರೆ ಇವತ್ತು ಶಿಕ್ಷಣದ ಬಗ್ಗೆ, ಮಣ್ಣಿನ ಮಕ್ಕಳ ಬಗ್ಗೆ ನೀವು ಮಾತನಾಡುತ್ತೀರಿ. ನನ್ನ ಕಾಲದಲ್ಲಿ ನಾನೇನು ಮಾಡಿದೆ ಎಂದು ಒಂದೇ ಒಂದು ಉದಾಹರಣೆ ಕೊಡುತ್ತೇನೆ. ನನ್ನ ಬಜೆಟ್ ಸ್ಪೀಚ್‌ನಲ್ಲಿ ಸರ್ಕಾರಿ ಉದ್ಯೋಗದ ಬಗ್ಗೆ ಹೇಳಿದ್ದೆ ಓದಿ ನೋಡಿ ಪ್ಯಾರಗ್ರಾಫ್ ಬೇಕಾದರೆ ಅದನ್ನೂ ನಿಮ್ಮ ಎದುರಿಗೆ ಈಗ ಇಡುವುದು ಒಳ್ಳೆಯದು. ಏನಾಗಿದೆ, ಸರ್ಕಾರಿ ಉದ್ಯೋಗ ಕೊಡುವಾಗ ಹೆಚ್ಚಿನ ಒತ್ತನ್ನು ಗ್ರಾಮೀಣ ಪ್ರದೇಶದ ಮಕ್ಕಳಿಗೆ ಕೊಡುತ್ತೇವೆಂದು ಪೇಜ್ 18, ಪ್ಯಾರ 37ರಲ್ಲಿದೆ-""The Government is committed to ensure justice to the rural youth in recruitment

for Government employment" ಸ್ವಾಮಿ, ನಾನು ಕೇಳುತ್ತಿದ್ದೇನೆ, ನನ್ನ ಕಾಲದಲ್ಲಿ in the whole of the country, it is only in Karnataka ಈ ನಿರ್ಣಯ ಜಾರಿಗೆ ಕೊಟ್ಟಿದ್ದು ಪಟ್ಟಣದಲ್ಲಿರುವ ಎಲ್ಲರೂ ಕಾನ್ವೆಂಟ್‌ನಲ್ಲೇ ಓದುತ್ತಾರೆ ಎಂದು ನಾನು ಹೇಳುವುದಿಲ್ಲ. ಏಕೆಂದರೆ ಕೊಳಚೆ ಪ್ರದೇಶ ಮತ್ತೊಂದಿದೆ ಅದಕ್ಕೂ ಎಕ್ಸ್‌ಟೆಂಡ್ ಮಾಡಬೇಕೆಂದು ನಾನು ವಿಚಾರ ಮಾಡಿಕೊಂಡಿದ್ದೆ. ಇವತ್ತು ಕಾನ್ವೆಂಟ್ ಸ್ಕೂಲಲ್ಲಿ ಓದುವ ಮಕ್ಕಳು ಹೆಚ್ಚು ಮಾರ್ಕ್ಸ್ ತೆಗೆದಷ್ಟು Scheduled Caste, Scheduled Tribe, Backward Classes- ಲಿಂಗಾಯಿತರು ಇರಬಹುದು ಒಕ್ಕಲಿಗರು ಇರಬಹುದು ಕೂಲಿ ಮಾಡುವವರು ಇಲ್ಲಾ ಜಾತಿ ಮತ ವರ್ಗಗಳಲ್ಲಿ ಇದ್ದಾರೆ. ಇವರುಗಳು ತೆಗೆಯಲು ಸಾಧ್ಯವಿಲ್ಲ. 15 ಪರ್ಸೆಂಟ್, 15 ಅಂಕಗಳಲ್ಲ, ನೂರಕ್ಕೆ ಒಬ್ಬ ಹುಡುಗ 60 ತೆಗೆದರೆ 15 ಪರ್ಸೆಂಟ್ ನಮ್ಮ ಸರ್ಕಾರ ಅವನಿಗೆ ಇಂಟರ್‌ವ್ಯೂ ಬರಲೇಬೇಕು; ರಿಸರ್ವೇಷನ್ ಕ್ಯಾಟಗಿರಿ ಪ್ರಕಾರ, ಹೀಗೆ ಎಷ್ಟೋ ಸಾವಿರಾರು ಮಕ್ಕಳ ನೌಕರಿಗೆ ಸೇರಿದರು ಇದರಿಂದ. ದುರ್ದೈವ ನಿಜಹೇಳಬೇಕಾದರೆ ಆಮೇಲೆ ಇದನ್ನು 15 ಮಾರ್ಕ್ಸ್‌ಗೆ ಇಳಿಸಿದರು. ನನ್ನ ಮನಸಿಗೆ ಬಹಳ ನೋವಾಗಿದೆ. ಆಮೇಲೆ ನಾನು ಒಂದೇ ಒಂದು ಮಾತು ಗಮನಕ್ಕೆ ತರುತ್ತೇನೆ. ಅದು ನಾನು ಮಾಡಿದ ಸ್ಕೀಂ. ಇವತ್ತು ಗ್ರಾಮೀಣ ಯುವಕರಿಗೆ ಉದ್ಯೋಗ ಎಂದು ನೀವು ವೈಟೇಜ್ ಕೊಡುವ ಬಗ್ಗೆ ಒಂದು ಮಾತು ಕೂಡ ಆಡಿಲ್ಲ. ನೀವು ರಾಜ್ಯಪಾಲರ ಭಾಷಣದಲ್ಲಿ ಹೇಳಿಲ್ಲ In Governor's Address, you have to spell out the policies.

ಬಜೆಟ್‌ನಲ್ಲೂ ಇಲ್ಲ. ನೀವು ಪ್ರೊಡಕ್ಟಿವ್ ಎಂಪ್ಲಾಯ್‌ಮೆಂಟನ್ನು ಕ್ರಿಯೇಟ್ ಮಾಡಬೇಕೆಂದು ಮಾತನಾಡುತ್ತೀರಿ. ಗೌರ್ವನಮೆಂಟ್ ಎಂಪ್ಲಾಯ್‌ಮೆಂಟ್ ಬಗ್ಗೆ ವೈಟೇಜ್ ಕೊಡುತ್ತೇವೆಂಬ ಮಾತು ಆಡುತ್ತೀರಿ. ಮಣ್ಣಿನ ಮಗನ ಬಗ್ಗೆ ವ್ಯಾಖ್ಯಾನ ಮಾಡುತ್ತೀರಿ. ಮಣ್ಣಿನ ಮಗ ಎಂದು ಯಾರು ಹೆಸರಿಟ್ಟರು ಯಾರು ಬಿಟ್ಟರು ಆ ವ್ಯಾಖ್ಯಾನ ನನಗೆ ಗೊತ್ತಾಗುವುದಿಲ್ಲ. ನಾನು ಒಂದೇ ಹೇಳುವುದು, ನಮ್ಮ ಪ್ರದೇಶದಲ್ಲಿ 70 ರಿಂದ 77ರವರೆಗೆ ಪರ್ಸೆಂಟ್ ಜನ ಎಲ್ಲ ಮಣ್ಣಿನ ಮಕ್ಕಳೇ ಇರುವುದು ನಮ್ಮ ದೇಶದಲ್ಲಿ. ಎರಡು ಮೂರು ಪರ್ಸೆಂಟ್ ವ್ಯತ್ಯಾಸ ಇರಬಹುದು, ಆ ಮಕ್ಕಳನ್ನು ಮೆಚ್ಚಿಸುವ ಭಾಷಣ ಮಾಡಿ ಅವರ ಓಟ್ ತೆಗೆದುಕೊಂಡು ಆ ಮಾತನ್ನು ನಿಮ್ಮ ಬಗ್ಗೆ ಹೇಳುತ್ತಿಲ್ಲ, ಆ ಮಾತನ್ನು ನನಗೇ ಹೇಳಿಕೊಳ್ಳುತ್ತೇನೆ. ಅದಕ್ಕಾಗಿಯೇ ನಾನು 15 ಪರ್ಸೆಂಟ್ ವೈಟೇಜ್ ಕೊಟ್ಟಿದ್ದೆ ನನ್ನ ಕಾಲದಲ್ಲಿ. ನನ್ನ ಮನಸ್ಸಿಗೆ ಬಹಳ ನೋವಾಯಿತು ಹೇಳುವುದು ಈ ಸದನ ಮುಗಿಯುವುದರೊಳಗೆ ಗ್ರಾಮೀಣ ಪ್ರದೇಶದ ಮಕ್ಕಳಿಗಾಗಿ not total 15 marks, 15 ಪರ್ಸೆಂಟ್ ನಾವು ಕೊಡುತ್ತೇವೆ ಎಂದು ಹೇಳಿ ಅವನಿಗೆ ಆಸೆ ಇದ್ದರೆ ಇನ್ನೂ ಎರಡು ಪರ್ಸೆಂಟ್ ಜಾಸ್ತಿ ಕೊಡುತ್ತೇವೆ ಎಂದು ಹೇಳಿ ನಾನು ಬೇಡ ಅನ್ನುವುದಿಲ್ಲ. ನಾನೂ ಕೂಡ ಸಂತೋಷಪಡುತ್ತೇನೆ. ಎಚ್‌ಕೆಡಿಬಿ ಬಗ್ಗೆ ನಮ್ಮ ಕಾಲದಲ್ಲಿ ಕ್ಯಾಬಿನೆಟ್

ತೀರ್ಮಾನ ಮಾಡಿದ್ದೆವು. ಬಿಇ ಓದಿದ್ದ ಇಂಜಿನೀಯರಿಂಗ್ ವಿದ್ಯಾರ್ಥಿಗಳು ಅಲ್ಲಿ ಸ್ಟ್ರೈಕ್ ಮಾಡಿದ್ದುದು. ಗುಲ್ಬರ್ಗ ರಾಯಚೂರು, ಬಳ್ಳಾರಿ, ಕೃಷ್ಣಾ ಬೇಸಿನ್‌ನಲ್ಲಿ ಬರುವ ಬಿಜಾಪುರ ಜಿಲ್ಲೆಯನ್ನೂ ಒಳಗೊಂಡಂತೆ, ಅವರೇನು ಹೇಳಿದರು? ಸ್ವಾಮಿ, ನಾವೇನೋ ಕಷ್ಟಪಟ್ಟು ಬಂದು ಬಿಟ್ಟಿದ್ದೇವೆ. ನಾನು ಓದಿಕೊಂಡಿರೋರು, ನಮ್ಮ ಗುಲ್ಬರ್ಗ ಬೀದರ್ ಜಿಲ್ಲೆಗಳಲ್ಲಿ ತೊಗರಿ ತೆಗೆದುಕೊಳ್ಳಿ. ಎಲ್ಲಾ ಒಣಗಿ ಹೋಗಿವೆ ಹೋಗುತ್ತಿದೆ. ಮುಂಗಾರು ಬೆಳೆ ಹೆಸರು ಎಲ್ಲಾ ಹಾಳಾಗಿ ಹೋಗಿಬಿಡುತ್ತದೆ. ಅಲ್ಲಿ ಬರಗಾಲ ಸದಾ ಕಾಲ ಇರುವಂತಹ ಪರಿಸ್ಥಿತಿ ಇದೆ. ಆಟಕ್ಕೆ ಅವರೇನು ಹೇಳುತ್ತಾರೆ? ಸ್ವಾಮಿ ಕಷ್ಟಪಟ್ಟು ಓದಿದ್ದೇ ಕಷ್ಟ ನಮಗೇನಾದರೂ ಉದ್ಯೋಗ ಕೊಡಿ ಎಂದಾಗ ನಾನು ಏನು ತೀರ್ಮಾನ ಮಾಡಿದೆವು ಅಂದರೆ ಹೈದರಾಬಾದ್ ಕರ್ನಾಟಕ ಏರಿಯಾ ಬಿಜಾಪುರವನ್ನೂ ಸೇರಿಸಿ ನಾನು ವೈಟೇಜ್ ಕೊಡಬೇಕು ಅಂದಾಗ ಕಾನೂನು ತೊಡಕು ಬರುತ್ತದೆ ಅದಕ್ಕಾಗಿ ಇಡೀ ರಾಜ್ಯದ ಅರ್ಜಿಗಳನ್ನು ಕರೆಯಿರಿ. ಕೃಷ್ಣ

ಬೇಸಿನ್‌ನಲ್ಲಿಯಾವ್ಯಾವ ಮಕ್ಕಳನ್ನು ನೇಮಕ ಮಾಡಿಕೊಳ್ಳೋಣ, ಜೂನಿಯರ್ ಇಂಜೀನಿಯರ್ ಅಸಿಸ್ಟೆಂಟ್ ಇಂಜಿನಿಯರ್ಸ್- ಈ ಹುದ್ದೆಗಳಿಗೆ ಸೆಲೆಕ್ಟ್ ಮಾಡಬೇಕಾದರೆ ಅವರನ್ನೇ ಮಾಡೋಣ ಎಂದಾಗ ಕಾನೂನು ಅಡ್ಡ ಬರುತ್ತದೆಂಬ ಪ್ರಶ್ನೆ ಬಂದಾಗ ಇಡೀ ರಾಜ್ಯದಿಂದ ಅರ್ಜಿಗಳನ್ನು ಕರೆದುಬಿಡಿ ಎಂದು ಹೇಳಿದೆ. ಒಂದು ಅವರಿಗೆ ಉದ್ಯೋಗ ಕೊಟ್ಟಂತಾಗುತ್ತದೆ. ಇನ್ನೊಂದು ಉಪಯೋಗ ಎಂದರೆ ಬರೀ ಹಳೇ ಮೈಸೂರಿನವರಿಗೆ ಕೊಟ್ಟುಬಿಟ್ಟರೆ ಅವರು ಬರೀ ವರ್ಗಕ್ಕೆ ಬರುತ್ತಾರೆ, ವಿಧಾನಸೌಧ ಬಲು ಹತ್ತಿರ ಇಲಿಗೆ. ಅವರ ಮನೆಯ ಹತ್ತಿರವೇ ದೊರೆಯಲಿ ಸಂಬಳ. ಆಗ ಪಾಪ ಅವರಿಗೆ ಕೊಟ್ಟರೆ ಹಗಲು ರಾತ್ರಿ ದುಡಿಯುತ್ತಾರೆ, ಬೀದರ್, ಗುಲ್ಬರ್ಗ, ರಾಯಚೂರು, ಬಳ್ಳಾರಿ ಮತ್ತು ಬಿಜಾಪುರ ಜಿಲ್ಲೆಗಳಲ್ಲಿ. ಅದನ್ನು ವಿಚಾರ ಮಾಡಿ ನಾವು ಇಟ್ಟರೆ ಎಲ್ಲಾ ಹಾಳಾಗಿ ಹೋಯಿತು, ನನ್ನ ಮನಸ್ಸಿಗೆ ಎಷ್ಟು ನೋವಾಯಿತು, ಏನೇ ಮಾಡಿದರೂ ಕೂಡ ಅಫ್ಟರ್ ಆಲ್ ಏನಾಗುತ್ತಿತ್ತು. ವರ್ಗಾವರ್ಗಿಯ ವಿಚಾರವಿಲ್ಲ, ಇನ್ನೇನು ಆಗುತ್ತಿತ್ತು? ನಾನು ಇದನ್ನು ವಿಚಾರ ಮಾಡಿಯೇ ನೀರಾವರಿ ಯೋಜನೆಗಳು ನಡೆಯುತ್ತಾ ಹೋಗಲಿ ಎನ್ನುವ ದೃಷ್ಟಿಯಿಂದ ವಿಚಾರ ಮಾಡಿಯೇ ನಾನು ಮಾಡಿದ್ದುದು. ಅದೂ ಕೂಡ ಹಾಳಾಗಿ ಹೋಯಿತು. ನಿಮ್ಮ ಕಾಲದಲ್ಲಿ ಕಡೆಯ ಪಕ್ಷ ಆ ವಿಚಾರವನ್ನಾದರೂ ತೆಗೆದುಕೊಂಡು ಬನ್ನಿ ಎಂದು ತಮ್ಮ ಗಮನಕ್ಕೆ ತರುತ್ತಿರುವುದು. ಇದೇ ರೀತಿಯಾಗಿ ಆ ಕಡೆಯ ಭಾಗದ ಇರಿಗೇಷನ್ ಇರಬಹುದು, ಮತ್ತೊಂದು ಕಡೆಯ ಭಾಗದ ಇರಿಗೇಷನ್ ಇರಬಹುದು, ಯಾವುದೇ ಇರಬಹುದು. ನೀವು ಇಷ್ಟೇ ಪ್ಲಾನ್ ಸೈಜ್ ನೀವು ಜಾಸ್ತಿ ಮಾಡಿದಿರಿ ಎನ್ನುವ ಮಾತನಾಡಿದರೂ ಕೂಡ ಇವತ್ತು ಇಲ್ಲಿ ಸಿಕ್ಕಿಹಾಕಿಕೊಂಡಿದ್ದೀರಿ. ಇದರಲ್ಲಿ ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ, ಒಂದು ವ್ಯಾಖ್ಯಾನವನ್ನು ಪ್ರಜಾವಾಣಿಯಲ್ಲಿ ಬರೆದಿದ್ದಾರೆ. ಬೇರೆ ಪತ್ರಿಕೆಗಳವರೂ ಕೂಡ ಬರೆದಿದ್ದಾರೆ. ಚೆನ್ನಾಗಿ ವಿಶ್ಲೇಷಣೆ

ಮಾಡಿದ್ದಾರೆ.

ಅನ್ಯುಯಲ್ ಪ್ಲಾನ್ ಸೈಜ್ ಗ್ರೋತ್‌ರೇಟ್ ಬಗ್ಗೆ ನೀವೇನು ಪ್ಲಾನಿಂಗ್ ಕಮೀಷನ್ ಹತ್ತಿರ ಹೋಗಿ ಬಂದಿರಲ್ಲಾ, ಹೋಗಿ ಬಂದ ಮೇಲೆ ಪರಿಸ್ಥಿತಿ ಏನಾಗಿದೆ ಎನ್ನುವುದರ ಬಗ್ಗೆ ಒಂದು ವ್ಯಾಖ್ಯಾನವನ್ನು ಬಹಳ ಚೆನ್ನಾಗಿ ಬರೆದಿದ್ದಾರೆ. ಇದು ಇನ್‌ಫ್ಲೇಷನ್ ರೇಟ್, ರುಪಿ ವ್ಯಾಲ್ಯು ಇದೆಲ್ಲಾ ಗಮನವಿಟ್ಟೇ ಅವರೆಲ್ಲಾ ಬರೆದಿದ್ದಾರೆ.

ಅಧ್ಯಕ್ಷರು:- ಮಾನ್ಯ ಬಂಗಾರಪ್ಪನವರೇ, ಪ್ರಮೀಳಾರವರು ತಮ್ಮನ್ನು ಒಂದು ನಿಮಿಷ ಯೀಲ್ಡ್ ಆಗಿ ಎಂದು ಕೇಳುತ್ತಿದ್ದಾರೆ.

ಶ್ರೀಮತಿ ಪ್ರಮೀಳಾ ಎಸ್. ನೇಸರ್ಗಿ:- ಮಾನ್ಯ ಸಭಾಧ್ಯಕ್ಷರೇ, ಇಲ್ಲಿ ಬಂಗಾರಪ್ಪನವರ ಭಾಷಣ ಕೇಳಿ ನನಗೆ ಬಹಳ ಆಶ್ಚರ್ಯವಾಯಿತು. ಏನೆಂದರೆ ಚೀಫ್ ಇಂಜಿನಿಯರಿಗೆ ಇನ್‌ಸ್ಟ್ರಕ್ಷನ್ ಕೊಟ್ಟು ಅಲ್ಲಿನವರಿಗೆ ಮಾತ್ರ. ಕರೆದು ಎಲ್ಲಾ ಕಡೆ ಇಂಟರ್‌ವ್ಯೂ ಮಾತ್ರ ಕರೆಯಿರಿ ನಾಮಾಕಾವಸ್ಥೆಗೆ. ಆದರೆ ಅಲ್ಲಿರುವವರೆನ್ನೇ ಸೆಲೆಕ್ಟ್ ಮಾಡಿ ಎಂದು ಹೇಳಿದ್ದಾರೆ. ಇದು ನಿಜವಾಗಿಯೂ ಕೂಡ ಕಾನೂನಿಗೆ ವಿರುದ್ಧವಾದುದು. ರಾಜ್ಯಾಂಗಕ್ಕೆ ವಿರುದ್ಧವಾದುದು. ಈ ರೀತಿಯಾಗಿದ್ದರೆ ಆಗಿರುವ ಸೆಲೆಕ್ಷನ್ ಕೂಡ ಎಲ್ಲಾ ಇಲ್ಲೀಗಲ್ ಆಗುತ್ತದೆ. ಅದರ ಬಗ್ಗೆ ಏನಾದರೂ ಈಗ ಬಂದಿರುವ ಸರ್ಕಾರ ಕ್ರಮ ತೆಗೆದುಕೊಳ್ಳುತ್ತದೆಯೇ ಎನ್ನುವುದರ ಬಗ್ಗೆ ನಾನು ತಮ್ಮ ಮುಖಾಂತರ ಕೇಳುತ್ತಿದ್ದೇನೆ.

ಶ್ರೀ ಎಂ.ಪಿ.ಪ್ರಕಾಶ್ (ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಸಚಿವರು):- ಮಾನ್ಯ ಅಧ್ಯಕ್ಷರೇ, ಪ್ರಾದೇಶಿಕ ಅಸಮಾನತೆ ಯನ್ನು ಸರಿಪಡಿಸಬೇಕು ಎಂದು ಹೇಳಿ ಕಡಪಟ್ಟಿಯವರ ನೇತೃತ್ವದಲ್ಲಿ ಸಮಿತಿಯನ್ನು ರಚನೆ ಮಾಡಿದ್ದೇವೆ. ಪ್ರಾದೇಶಿಕ ಅಸಮಾನತೆಗೆ ಅದಕ್ಕೆ ವೈಟೇಜ್ ಕೊಡಬೇಕು ಎನ್ನುವಂಥದ್ದು. ಬರೀ ಕಾನೂನು ಇಲಾಖೆ ಬಗ್ಗೆ ಮಾತನಾಡುವುದಾದರೆ ಅದು ಹೈಕೋರ್ಟಿನಲ್ಲಿ. ಅದು ಇಲ್ಲಿ ಶಾಸಕರಾಗಿ ಅಲ್ಲ.

ಶ್ರೀ ಎಸ್.ಬಂಗಾರಪ್ಪ:- ಮಾನ್ಯ ಸದಸ್ಯರ ಗಮನಕ್ಕೆ ತರುವುದು ನಾವು ಮಾಡುವ ಕಾನೂನನ್ನು ಮಾಡೋಣ.

ಅಧ್ಯಕ್ಷರು:- ನಿಮ್ಮ ಮಾತಿನ ಧಾಟಿ ನೋಡಿದರೆ ಈಗ ನಾವು 92-93ಗೆ ಬಂದಂತೆ ಕಾಣುತ್ತದೆ.

ಶ್ರೀ ಎಸ್.ಬಂಗಾರಪ್ಪ:- ಹೌದು. ಅದು ಬಿಟ್ಟು ಮುಂದಕ್ಕೆ ಬರಲಾರದು ಎಂದು ನನಗನಿಸುತ್ತಿದೆ. ಪ್ರಜಾವಾಣಿ ದಿನಪತ್ರಿಕೆ, ದಿನಾಂಕ: 27- 1- 1995. ಬಹಳ ಚೆನ್ನಾಗಿದೆ.

ದುರ್ಗಮ ಸ್ಥಿತಿ, ಹಿಡಿದ ಪಟ್ಟು ಎಂದು ಹೆಡ್ ಲೆ ನ್ ಕೊಟ್ಟಿದ್ದಾರೆ. ಶೇಕಡ 9.16ರಷ್ಟು ಹೆಚ್ಚಿಗೆ ಆಗುವ 300 ಕೋಟಿ ರೂಪಾಯಿ ಮೊತ್ತ ಅಧಿಕಗೊಂಡ 3575 ಕೋಟಿ ರೂಪಾಯಿನ ಯೋಜನಾ.ಗಾತ್ರಕ್ಕೆ ರಾಜ್ಯವು ಅಂಗೀಕಾರ ಪಡೆದಿದ್ದು ವಾಸ್ತವವಾಗಿ ದೊಡ್ಡ ಸಾಧನೆಯೇನೂ ಅಲ್ಲ ಏರಿಕೆ ಪ್ರಮಾಣದ ಸರಿಸುಮಾರು ವಾರ್ಷಿಕ ಹಣದುಬ್ಬರ ದರದಷ್ಟೇ ಇರುವುದರಿಂದ inflation has touched the double digits figure. ಈಗಾಗಲೇ 11ಕ್ಕೆ ಹೊರಟು ಹೋಗಿದೆ. ತಮ್ಮಗಳಿಗೆಲ್ಲಾ ಗೊತ್ತಿದೆ. ಅದು ಒಂದು ಕಾಲದಲ್ಲಿ ಏಳಕ್ಕೆ ಹೋಗಿದ್ದು, ಎಂಟು, ಒಂಭತ್ತು, ಹತ್ತು , ಹನ್ನೊಂದು, ಹನ್ನೆರಡು, ಹದಿಮೂರು ಮತ್ತು ಹಿಂದಕ್ಕೆ ಹೋಗಿ it has touched the double digits fiture ಬಂದಿದ್ದೇವೆ ಏರಿಕೆ ಪ್ರಮಾಣ ಸರಿಸುಮಾರು ವಾರ್ಷಿಕ ಹಣದುಬ್ಬರದಷ್ಟೇ ಇರುವುದರಿಂದ ಒಂದು ರೀತಿಯಲ್ಲಿ ಮೌಲ್ಯಾನುಸಾರ ಏರಿಕೆ ಅಲ್ಲವೇ ಅಲ್ಲ ಮುಂದೆ ರುಪಿ ವ್ಯಾಲ್ಯು ಬಗ್ಗೆ ಬರುತ್ತದೆ. ಯೋಜನಾ ಗಾತ್ರ ವಾರ್ಷಿಕ ಆಯವ್ಯಯವನ್ನು ಸರಿ ಸುಮಾರು ಹೋಲುವುದರಿಂದ ಈ ಸಾಲಿನ ಯೋಜನೆಯು ಯಥಾಸ್ಥಿತಿ ಸ್ವರೂಪವನ್ನಷ್ಟೇ ಹೊಂದಿದೆಯೇ ಹೊರತು ಅಭಿವೃದ್ಧಿಪೋಷಕವಲ್ಲ ಅಭಿವೃದ್ಧಿ ಪೋಷಕವಾಗಬೇಕಾದರೆ ಏನು ಬೇಕು? ನೀವು ರುಪಿ ವ್ಯಾಲ್ಯುವನ್ನು ಗಮನದಲ್ಲಿಡಬೇಕು. ಹಣದುಬ್ಬರ ಕೂಡ ಗಮನದಲ್ಲಿಡಬೇಕು. ಅದನ್ನು ಗಮನದಲ್ಲಿಟ್ಟು ನೀವು ವಾರ್ಷಿಕ ಯೋಜನಾ ಗಾತ್ರವನ್ನು ಇಲ್ಲಿ ಜಾಸ್ತಿ ಮಾಡಬೇಕು. ಆಗ ಮಾತ್ರ ಹಣ ನಿಮಗೆ ಜಾಸ್ತಿ ಸಿಗುತ್ತದೆ. ಕೃಷ್ಣ ಬೇಸಿನ್, ಕಾವೇರಿ ಬೇಸಿನ್, ಅಥವಾ ಬೇರೆ ಬೇರೆ ಕಾರ್ಯಕ್ರಮದಲ್ಲಿ ನಿಮಗೆ ಸಿಗುತ್ತದೆ. ಆರ್ಥಿಕ ಉದಾರೀಕರಣದ ಲಾಭ ಪಡೆಯಲು ಆಗ ಹಣ ಹೂಡಿಕೆ ಸೃಷ್ಟಿಯಾಗುತ್ತದೆ. ಮಾಡಬೇಕಾದ್ದು ರಾಜ್ಯ ಸರ್ಕಾರ ಹೊಸ ಹೊಸ ಚಿಂತನೆ ಮೂಲಕ ಹಣ ಒದಗಿಸಿಕೊಳ್ಳಬೇಕು. ಆ ಕಾರ್ಯಕ್ಕೆ ಇರುವ ಇತಿಮಿತಿಗಳು ಅನೇಕ. ಹೊಸದಾಗಿ ಸರ್ಕಾರ ರಚಿಸಿರುವ ದಳದ ನಾಯಕರು ಭಾರಿ ಭರವಸೆಯನ್ನಿಟ್ಟುಕೊಂಡಿರುವ ಅಗ್ಗದ ಪಡಿತರ ಅಕ್ಕಿ ಮತ್ತು ಸುಸ್ತಿ ಬಡ್ಡಿ ಮನ್ನಾ ಕಾರ್ಯಕ್ರಮಗಳಿಗಾಗಿ 210 ಕೋಟಿ ರೂಪಾಯಿ ತುಂಬಿ ಕೊಡುವ ಸಂಬಂಧ ಯೋಜನಾ ಆಯೋಗ ಯಾವುದೇ ಭರವಸೆಯನ್ನು ನೀಡಿಲ್ಲ ಎಂಬುದನ್ನು ಮರೆಯಬಾರದು. ಎರಡೂ ಸೇರಿಸಿ ಬರೆಯುತ್ತಿದ್ದಾರೆ. ಪತ್ರಿಕೆ ಬರೆದದ್ದು ನಿಜ ಹೇಳಬೇಕೆಂದರೆ ವಾಸ್ತವಾಂಶವಲ್ಲ. ಏಕೆ ಗೊತ್ತೇನು? ಇದು ಅಗ್ಗದ ಪಡಿತರ ಅಕ್ಕಿ ಮತ್ತು ಸುಸ್ತಿ ಬಡ್ಡಿ ಮನ್ನಾ ಸೇರಿದೆಯಲ್ಲಾ; ಬರೀ ಅಗ್ಗದ ಪಡಿತರ ಅಕ್ಕಿಗೆ 220 ಕೋಟಿ ರೂಪಾಯಿ ಇವರು ಬಜೆಟ್‌ನಲ್ಲಿ ಹೇಳಿರುವುದು. ಬಜೆಟರಿ ಸಪೋರ್ಟ್ ರಿಯಾಯಿತಿ ಕೊಡುವುದಲ್ಲ, 320 ಪೈಸೆ ಒಂದು ಕಿಲೋಗೆ ಎಂದು ಹೇಳಿದ್ದುದು. ನೀವು ಹಸಿರು ಕಾರ್ಡೋ, ತ್ರಿವರ್ಣದ್ದು ನೀವು ಖರ್ಚು ಮಾಡಿ, ಏನೋ ಇದರ ಬಗ್ಗೆ ಆಟ ಆಡುತ್ತೀರಿ ಎಂದು ನನಗೆ ಏಕೋ ಅನುಮಾನ ಇದೆ. ಏಕೆಂದರೆ ಅಂಕಿ ಅಂಶಗಳ ವಿಚಾರ ಮಾಡಿದಾಗ ಗೊತ್ತಾಗುತ್ತದೆ. ಆ ಪ್ರಶ್ನೆ ಪ್ರತ್ಯೇಕವಿರಬಹುದು. ಈಗ ನೀವು 220 ಕೋಟಿ ರೂಪಾಯಿ, ಆಮೇಲೆ ರೈತರ

ಸಾಲ ಬಡ್ಡಿ, ಸುಸ್ತಿ ಬಡ್ಡಿ ಮನ್ನಾ ಅದು ಸೇರಿದರೆ ನೂರು ಕೋಟಿಗೂ ಜಾಸ್ತಿ, ಎರಡೂ ಸೇರಿ 320 ರಿಂದ 340 ಕೋಟಿ ರೂಪಾಯಿಗಳವರೆಗೆ ಹೋಗುತ್ತದೆ. ನನಗೆ 220 ಕೋಟಿ ಅಕ್ಕಿ ಬಗ್ಗೆ I don't know how are you going to manage that. Where do you find that money? I can't understand. ಇದಲ್ಲದೆ ಕೃಷಿ ಭಾಗದ ಜನರಿಗೆ ಪುನರ್ಧನ ನೀಡುವ ಸಂಬಂಧ ನಬಾರ್ಡ್ ಕೂಡ ಔದಾರ್ಯ ತೋರಿಸಿಲ್ಲ. ನಾನು ಅದರ ಬಗ್ಗೆ ಮೊನ್ನೆಯೇ ಮಾತನಾಡಬೇಕಾದರೆ ಹೇಳಿದೆ. ನೀವು ನಬಾರ್ಡ್ ಹತ್ತಿರ ಹೋಗುವ ಅವಶ್ಯಕತೆ ಇಲ್ಲ ಎನ್ನುವ ಮಾತನ್ನು ನಾನು ಹೇಳಿದ್ದೇನೆ. ಇದೇನೇ ಇದ್ದರೂ ಕೂಡ ನೀವು ಗೌರ್ನಮೆಂಟ್ ಆಫ್ ಇಂಡಿಯಾ ಹತ್ತಿರ ಹೋಗಬೇಕು. NABARD was a party to the decision taken during V.P.Singh's time when he was the Prime Minister. ಆ ಕಾಲದಲ್ಲಿ ಇದ್ದಂಥದ್ದು. ಮತ್ತೆ ನೀವು ನಬಾರ್ಡ್ ಹತ್ತಿರ ಹೋಗುತ್ತೀರಲ್ಲಾ. ನೀವು ತೆರೆಯನ್ನು ಹಿಡಿಯುವುದು ಬಿಟ್ಟು ಬಾಲ ಹಿಡಿದುಕೊಂಡು ನೇತಾಡುತ್ತಿದ್ದೀರಿ. ಆ ನಬಾರ್ಡ್‌ನವರು ನಿಮಗೆ 5 ಪೈಸೆ ಉಪಯೋಗ ಮಾಡುವುದಿಲ್ಲ. ಯಾವ ವ್ಯವಸ್ಥೆ ಮಾಡುತ್ತೀರಿ? ನೀವು ಮಾಡಬೇಕು ಎಂದರೆ ಕೇಂದ್ರದ ಹತ್ತಿರ ಹೋಗಬೇಕು. ಮಾತುಕತೆ ಮಾಡಬೇಕು. ಎಲ್ಲಾ ರಾಜ್ಯ ಸರ್ಕಾರ ಮುಖ್ಯ ಮಂತ್ರಿಗಳು ಅದೇ ಪಕ್ಷದ ಅಫಿಲಿಯೇಷನ್ ಇರಬಹುದು ಕಂಟ್ಯಾಕ್ಟ್ ಮಾಡಿ. ನೀವೇನು ಮಾಡುವುದಿಲ್ಲ.

ಅಧ್ಯಕ್ಷರು :- ದೆಹಲಿಗೆ ಬದಲಾಗಿ ಬಾಂಬೆಗೆ ಇವರು ಹೋಗಿದ್ದಾರೆ.

ಶ್ರೀ ಎಸ್.ಬಂಗಾರಪ್ಪ :- ದೆಹಲಿಗೆ ಬದಲಿಗೆ ಬಾಂಬೆಗೆ ಹೋಗಿಬಿಟ್ಟಿರಿ. ಅದು ತಪ್ಪು. ಈಗಾಗಲೇ ರಾಂಗ್ ಸ್ಟೆಪ್ಸ್ ಇವರು ಇಟ್ಟಿದ್ದಾರೆ.

ಒಬ್ಬ ಮಾನ್ಯ ಸದಸ್ಯರು :- ಪ್ರಧಾನ ಮಂತ್ರಿಗಳ ಹತ್ತಿರ ಹೋಗಿ ಮನವಿ ಮಾಡಿದ್ದಾರೆ.

ಶ್ರೀ ಎಸ್.ಬಂಗಾರಪ್ಪ :- ನಾನು ಏತಕ್ಕೆ ಹೇಳುತ್ತೇನೆ ಎಂದರೆ ನಿನ್ನೆ ಅವರು ಅದನ್ನು ಹೇಳಿದರು. ಮುಖ್ಯ ಮಂತ್ರಿಗಳು ಹೋಗಿ ಪ್ರಧಾನ ಮಂತ್ರಿಗಳ ಹತ್ತಿರ ಮಾತನಾಡಿದರು ಎನ್ನುವುದನ್ನು ಆಮೇಲೆ ಹೇಳಿದರು. ನಾನು ಹೇಳುವುದು ಅದೇ ರಾಂಗ್ ಸ್ಟೇಟ್‌ಮೆಂಟ್. ಇದನ್ನು ಮೊದಲೇ ಮಾತನಾಡಬೇಕಾಗಿತ್ತು. ನೀವು ಅಲ್ಲಿ ಏಕೆ ಮಾತನಾಡುವುದಕ್ಕೆ ಹೋದಿರಿ ಎನ್ನುವುದು. ಈ ಹಿನ್ನಲೆಯಲ್ಲಿ ಮುಂಬರುವ ರಾಜ್ಯ ಬಜೆಟ್‌ನ ತೆರಿಗೆದಾರನ ಮೇಲೆ ಅಧಿಕ ತೆರಿಗೆ ಬೀಳುವುದು ಖಚಿತ ಯೋಜನಾ ಆಯೋಗ ಶ್ರೀಯುತ ಪ್ರಣಬ್ ಮುಖರ್ಜಿಯವರಿಗೆ ಮುಖ್ಯ ಮಂತ್ರಿಯವರು ಮನದಟ್ಟು ಮಾಡಿಕೊಟ್ಟಿರುವ ಪ್ರಕಾರ ಈಗಾಗಲೇ ದೇಶದ ಅತಿ ಹೆಚ್ಚು ತೆರಿಗೆ ಹೇರುವ ರಾಜ್ಯಗಳಲ್ಲಿ ಕರ್ನಾಟಕವೂ ಕೂಡ

ಒಂದು. ಇಲ್ಲಿ ರಾಜ್ಯ ಸರ್ಕಾರವು ಆಡಳಿತ ವೆಚ್ಚ ಮತ್ತು ಯೋಜನೇತರ ವೆಚ್ಚವನ್ನು ಕಡಿಮೆ ಮಾಡುವ ವಿಚಾರ ಅದು ನಿಮಗೆ ಬಿಟ್ಟಿರುವ ವಿಚಾರ ಎನ್ನುವ ಮಾತನ್ನು ಬರೆಯುತ್ತಾರೆ. ನೀವು ಪ್ಲಾನ್ ಸೈಜ್ ಹೊಸ ಯೋಜನಾ ಗಾತ್ರ, ವಾರ್ಷಿಕ ಯೋಜನಾ ಗಾತ್ರ ಇದನ್ನು ಹೆಚ್ಚು ಮಾಡುವ ವಿಚಾರದಲ್ಲಿ ನೀವು ದೊಡ್ಡ ಸಾಧನೆಯನ್ನು ಮಾಡಿಲ್ಲ ಎನ್ನುವ ಮಾತನ್ನು ಪತ್ರಿಕೆಯವರು ಬರೆದಿದ್ದಾರೆ. ನಾನು ಅಂಕಿ ಅಂಶ ಕೊಟ್ಟು ಹೇಳಿದ್ದೇನೆ. ಮಾನ್ಯ ಸದಸ್ಯರುಗಳು ಅವರೂ ಕೂಡ ಹೇಳಿದ್ದಾರೆ. ಇದೊಂದು ಕಡೆ ಹೇಳಿದ ಮಾತು. ಈ ನಿಟ್ಟಿನಲ್ಲಿ ನಾನು ಹೇಳುವುದು, ಈ ಸರ್ಕಾರ ಮಂಡಿಸಿರತಕ್ಕಂಥ ಬಜೆಟ್ಟನ್ನು ನಾನು ಏತಕ್ಕೆ ವಿರೋಧ ಮಾಡುತ್ತೇನೆ ಎಂದರೆ ಇದು ರಾಜ್ಯದ ಸರ್ವಾಂಗೀಣ ಅಭಿವೃದ್ಧಿಗೆ ಇದು ಪೆಟ್ಟು ಬೀಳುತ್ತದೆ ಎಂದು ಹೇಳುವುದಕ್ಕೆ ಸಾರ್ವಜನಿಕ ಅಭಿಪ್ರಾಯ, ಪತ್ರಿಕಾ ಅಭಿಪ್ರಾಯ, ನಮ್ಮ ಅಭಿಪ್ರಾಯ, ಇದು ಪಕ್ಷವನ್ನು ಹೊರತುಪಡಿಸಿ ನಾವು ಈ ವಿಚಾರವನ್ನು ಮಾಡುವುದು ಸಂದರ್ಭ ಇದೆ. ಇವತ್ತು ನಾವು ಪಕ್ಷದ ಆಧಾರದ ಮೇಲೆ ಬೇಕಾದಷ್ಟು ರಾಜಕೀಯ ಭಾಷಣ ಮಾಡಬಹುದು. ಬೇಡ. At some point, you have to meet the truth. ವಾಸ್ತವಾಂಶವನ್ನು ಬಿಟ್ಟು ನೀವು ಜೀವನ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಇವತ್ತಲ್ಲ, ನಾಳೆ, ನೀವು ಹೋಗಿ ಅದನ್ನು ಮುಟ್ಟಬೇಕಾಗುತ್ತದೆ. You have to pay heavy price for that unless you go down to the ground realities. ನೀವು ಅದನ್ನು ನೋಡಲೇಬೇಕಾಗುತ್ತದೆ. ಈ ದೃಷ್ಟಿಯಿಂದ ಇವತ್ತು ನಾನು ಹೇಳಿದ್ದೇನೆ. ಪ್ಲಾನ್ ಎಕ್ಸ್‌ಪೆಂಡಿಚರ್ ಕೂಡ ಅದೇ ರೀತಿಯಾಗಿ ನಿಮ್ಮ ಕಾಲದಲ್ಲಿ ಇದ್ದದ್ದು ನಾವು ಏರಿಸುತ್ತಾ ಹೋಗಿದ್ದೇವೆ. ನಾನು ಯೋಜನಾ ವಿವರಗಳಿಗೆ ಈ ಸಂದರ್ಭದಲ್ಲಿ ಹೋಗುವುದಿಲ್ಲ. ಇನ್ನು ರಸೀಟ್ಸ್ ಅಂಡ್ ಎಕ್ಸ್‌ಪೆಂಡಿಚರ್ ವಿವರ ಇದೆ, ಅದಕ್ಕೆ ಬಹಳ ಕಾಲ ಬೇಕಾಗುತ್ತದೆ. ಇದೇ ಸಂದರ್ಭದಲ್ಲಿ ನಾನು ಪ್ಲಾನ್ ಇನ್‌ವೆಸ್ಟ್‌ಮೆಂಟ್ ಬರೀ ನಾನು ಪಂಚವಾರ್ಷಿಕ ಯೋಜನೆ ಮಾತ್ರ ಹೇಳಿದೆ. ಆಮೇಲೆ ಅನ್ಯುಯಲ್ ಪ್ಲಾನ್ ಸೈಜ್ ವಿಚಾರವನ್ನೂ ಕೂಡ ನಾನು ಈಗಾಗಲೇ ಹೇಳಿದ್ದೇನೆ. ಅದನ್ನೂ ಕೂಡ ನಾನು ಹೇಳುವುದಕ್ಕೆ ಹೋಗುವುದಿಲ್ಲ. ವಿವರ ತುಂಬಾ ಇದೆ. ಆಶ್ರಯ ಹೌಸಿಂಗ್ ಸ್ಕೀಮ್ ಬಗ್ಗೆ ಒಂದು ಮಾತು ಕೂಡ ಔದಾರ್ಯಕ್ಕೆ ಆಗಲೀ ಹೇಳತಕ್ಕ ಹೃದಯ ವಿಶಾಲತೆ ನಿಮಗೆ ಬರಲಿಲ್ಲ. ನಾನು ಪ್ಲಾನಿಂಗ್ ಕಮೀಷನ್‌ನಿಂದ ಅಪ್ರೂವ್ ಆದಂತಹ ಅಂಕಿ ಅಂಶಗಳನ್ನು ತಮ್ಮ ಮುಂದೆ ಇಡುತ್ತೇನೆ. ಆಶ್ರಯ ಯೋಜನೆ ನನ್ನ ಕಾಲದಲ್ಲಿ ರೂಪಿಸಿದ್ದೇನೆ. Free site for siteless and houseless people.

ಶ್ರೀ ಸಿದ್ಧರಾಮಯ್ಯ :- ಹಿಂದೆಯೂ ಸಹ ಇತ್ತು. ಹಿಂದೆ ಬೇರೆ ಹೆಸರು ಇತ್ತು. ನೀವು ಆಶ್ರಯ ಯೋಜನೆ ಎಂದು ಮಾಡಿದಿರಿ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- 1972ರಿಂದ ಈ ಯೋಜನೆ ಇದೆ. ಬಡವರಿಗೆ ಸೈಟ್‌ಗಳನ್ನು ಹಂಚುವ ಯೋಜನೆ.

ಶ್ರೀ ಎಸ್.ಬಂಗಾರಪ್ಪ:- ನಾವು ಹಳ್ಳಿಯ ಕಡೆಗೆ ಹೋದಾಗ ಕೆಲವು ಅಂಶಗಳನ್ನು ಹೇಳಲೇಬೇಕಾಗುತ್ತದೆ. ಇದು 1972ರಿಂದ ಸ್ಟಾರ್ಟ್ ಆಗಿದೆ. ಬರೀ 5.3 ಲಕ್ಷ ಸೈಟುಗಳನ್ನು 1972ರಿಂದ 8 ವರ್ಷಗಳ ಕಾಲ ಕೊಟ್ಟಿದ್ದಾರೆ. 1980ರಿಂದ 1983, 2.3 ಲಕ್ಷ ಹೌಸ್ ಸೈಟ್‌ಗಳನ್ನು ಕೊಟ್ಟಿದ್ದೀರಿ. ಅದೂ 20 ಅಡಿ ಅಗಲ, 30 ಅಡಿ ಉದ್ದ. ಮಾನ್ಯ ದೇವರಾಜ ಅವರ ಕಾಲದಲ್ಲಿ ಮಾಡಿದ್ದರು, ಅದನ್ನೇ ತಾವೆಲ್ಲಾ ಕಂಟಿನ್ಯೂ ಮಾಡಿಕೊಂಡು ಬಂದಿರಿ. ಏಳು ವರ್ಷಗಳಲ್ಲಿ 3.5 ಲಕ್ಷ ಕೊಟ್ಟಿದ್ದೀರಿ ಎಂದರೆ ನೀವು ಒಂದು ವರ್ಷಕ್ಕೆ ಎಷ್ಟು ಸೈಟ್ ಕೊಟ್ಟ ಹಾಗೆ ಆಯಿತು? ಏಳು ವರ್ಷದಲ್ಲಿ 3.5 ಲಕ್ಷ ಎಂದರೆ ಒಂದು ವರ್ಷಕ್ಕೆ ಸುಮಾರು 50 ಸಾವಿರ ಹೆಚ್ಚು ಕಡಿಮೆ ನೀವು ನಿಮ್ಮ ಆಡಳಿತ ಅವಧಿಯಲ್ಲಿ ಕೊಟ್ಟ ಹಾಗೆ ಆಯಿತು. ನನ್ನ ಅವಧಿಯಲ್ಲಿ ನಾನು ಏನು ಮಾಡಿದ್ದೇನೆ ಎನ್ನುವ ಮಾತನ್ನು ಹೇಳಿದ್ದೇನೆ. ಅದೂ ಪ್ಲಾನಿಂಗ್ ಕಮೀಷನ್‌ನಿಂದ ಅಪ್ರೂವ್ ಆದದ್ದು. 1991-92ರಲ್ಲಿ ನನ್ನ ಕಾಲದಲ್ಲಿ ಕೊಟ್ಟಿದ್ದು ಹೇಳುತ್ತೇನೆ. ನಾನು ಅಕ್ಟೋಬರ್‌ನಲ್ಲಿ ಅಧಿಕಾರ ತೆಗೆದುಕೊಂಡೆ. ನಾನು ಅಧಿಕಾರ ಬಿಟ್ಟಿದ್ದು ನವೆಂಬರ್ 1992ರಲ್ಲಿ. 1991-92ರಲ್ಲಿ ಆಶ್ರಯ ಕಾರ್ಯಕ್ರಮದಲ್ಲಿ 7.65 ಲಕ್ಷ ಅಂದರೆ ಏಳು ಲಕ್ಷದ 65 ಸಾವಿರ ಒಂದೇ ವರ್ಷದಲ್ಲಿ ಕೊಟ್ಟಿದ್ದೇನೆ. ನಾನು ಒಂದೇ ಒಂದು ಮಾತನ್ನು ಹೇಳುವುದು, ಎಂದರೆ ಹೊಗಳಿಕೆಗೆ ಈ ಮಾತನ್ನು ಆಡಲಿಲ್ಲ. ನನಗೆ ಕನಿಕರ ಇತ್ತು ಬಡವರ ಬಗ್ಗೆ. ನಾನು ನೋವು ಅನುಭವಿಸಿ ಬಂದಿರತಕ್ಕ ವರ್ಗಗಳಲ್ಲಿ ಒಬ್ಬ. ನೀವು ಹೇಗೆ ಬಡವರ ಬಗ್ಗೆ ಕಾಳಜಿ ಇದ್ದೀರೋ ನಾನೂ ಹಾಗೆ ಕೂಡ ಇದ್ದೇನೆ. ನೀವು ಹೇಗೋ ನಾನೂ ಹಾಗೆ ಇದ್ದೇನೆ. ನಾನೂ ಹೇಗೆ ಇದ್ದೆ ಎಂದು ಹೇಳುವುದಿಲ್ಲ. ಆದ್ಯತೆ ನಾನು ನಿಮಗೆ ಬಿಡುತ್ತೇನೆ. ಒಂದೇ ವರ್ಷದಲ್ಲಿ 7.65 ಲಕ್ಷ please note down this point and get it verified with the Planning Commission of this country. 7 ಲಕ್ಷ 65 ಸಾವಿರ ಒಂದು ವರ್ಷದಲ್ಲಿ ಅಂದರೆ ನಾವು ಯಾವ ರೀತಿ ಮಾಡಿರಬಹುದು, ಆ ಕಾಲದಲ್ಲಿ ಅದಕ್ಕಾಗಿ. ಏನೋ ಸರ್ಟಿಫಿಕೇಟ್ ಓದಿದ್ದು ಅಲ್ಲ. ಆಶ್ರಯ ಕಾರ್ಯಕ್ರಮದ ಸಾಧನೆ ಸಣ್ಣದು ಅಲ್ಲ.

ಇನ್ನು ಮನೆಗಳನ್ನು ಕಟ್ಟತಕ್ಕ ವಿಚಾರ ಕೂಡ ಹೇಳುತ್ತೇನೆ. ನಾನು ಒಂದು ವರ್ಷದಲ್ಲಿ ಮೂರು ಲಕ್ಷ ಗುರಿಯನ್ನು ಹೊಂದಿದ್ದೆ. ಇವತ್ತು ನನ್ನ ಮೇಲೆ ಕಾಮೆಂಟ್ ಮಾಡುತ್ತೀರಿ. ಫ್ರೀ ಫ್ಯಾಬ್ರಿಕೇಟೆಡ್ ಮೆಷಿನ್ ಇಟ್ಟುಕೊಂಡು ನಾವು ಮನೆ ಕಟ್ಟಬೇಕು ಎಂದು ಆಸೆ ಇಟ್ಟುಕೊಂಡು ಎರಡು ಲಕ್ಷ ಮನೆಗಳನ್ನು, ಆಮೇಲೆ 2550 ಸಾವಿರ ಡಾ: ಬಿ.ಆರ್.ಅಂಬೇಡ್ಕರ್ ಅವರ ಹೆಸರಿನ ಯೋಜನೆಯಲ್ಲಿ ಎಸ್.ಸಿ:ಎಸ್.ಟಿ

ಯೋಜನೆಯಲ್ಲಿ ಕೊಡಬೇಕು, ಇತ್ಯಾದಿ ಇತ್ಯಾದಿ ಬೇರೆ ಬೇರೆ ಯೋಜನೆಗಳು ಇದ್ದಾವೆ. ಮೂರು ಲಕ್ಷ ಗುರಿಯನ್ನು ಹೊಂದಿ ಒಂದು ವರ್ಷದಲ್ಲಿ for the first time, a State Government in the whole country has done this. ಫ್ರೀ ಫ್ಯಾಬ್ರಿಕೇಟೆಡ್ ಎಂದರೆ ಏನು? ಸಿಮೆಂಟ್, ಕಬ್ಬಿಣ ಮತ್ತೊಂದು ಮಿಷಿನ್ ಪ್ರೆಸ್ ಮಾಡಿಸಿ ಕಟ್ಟುವುದು. ಹಿಂದೆ ಮನೆಗಳನ್ನು ಕಟ್ಟುವಾಗ ಕಟ್ಟಿ ಉದ್ಘಾಟನೆ ಮಾಡಿಕೊಂಡು ಹೋಗುವುದು ಗೋಡೆ ಎಲ್ಲಾ ಒಡೆದು ಬಿದ್ದು ಹೋಗುವುದು, ಈ ರೀತಿ ಆಗುತ್ತಿತ್ತು. ಏಕೆ ಈ ಅನ್ಯಾಯ. ಆರು ತಿಂಗಳು ಲೇಟ್ ಆದರೂ ಚಿಂತೆ ಇಲ್ಲ, ಒಳ್ಳೆಯ ಮನೆಗಳನ್ನು ಕಟ್ಟಿಸಿ ಕೊಡೋಣ ಎಂದು ಹೃದಯಾಂತರಾಳದ ಆಸೆಯಿಂದ ನಾವು ಮಾಡಿರತಕ್ಕ ಕಾರ್ಯಕ್ರಮ. ಅದಕ್ಕಾಗಿ ನಾನು ಹೇಳುತ್ತಿದ್ದೇನೆ. ಇದನ್ನು ಹೊಗಳುವವರೂ ಇದ್ದಾರೆ, ತೆಗಳುವವರೂ ಇದ್ದಾರೆ.

ಶ್ರೀ ಸಿ.ಎಂ.ಉದಾಸಿ :- ಸನ್ಮಾನ್ಯ ಬಂಗಾರಪ್ಪನವರು ಸುಮಾರು ಲಕ್ಷಗಟ್ಟಲೆ ನಿವೇಶನಗಳನ್ನು ಕೊಟ್ಟಿದ್ದೇವೆ ಎನ್ನತಕ್ಕ ಮಾತನ್ನು ಹೇಳುತ್ತಿದ್ದಾರೆ. ನನ್ನ ತಾಲ್ಲೂಕಿನೊಳಗೆ ನಿವೇಶನಗಳನ್ನು ಕೊಟ್ಟಿದ್ದಾರೆ. ಆದರೆ ನಿವೇಶನಗಳ ಪಟ್ಟಾ ಕೊಟ್ಟಿದ್ದಾರೆ ಹೊರತು ನಿಜವಾಗಿ ಅಲ್ಲಿ ಭೂಮಿ ತೆಗೆದು ಕೊಟ್ಟಿಲ್ಲ, ಅಲ್ಲಿ ಚೆಕ್ಕುಬಂದಿ ಇಲ್ಲ. ಇದನ್ನು ವಿಚಾರಣೆ ಮಾಡಬೇಕು. ಪಟ್ಟಾ ಕೊಟ್ಟಿರುವ ಪ್ರಶ್ನೆ ಅಲ್ಲ. ನಿವೇಶನಗಳನ್ನು ಕೊಟ್ಟಿಲ್ಲ. ಇದನ್ನು ಸ್ವಲ್ಪ ಗಮನದಲ್ಲಿಟ್ಟುಕೊಳ್ಳಬೇಕು.

ಶ್ರೀ ವಾಟಾಳ್ ನಾಗರಾಜ್ :- ಆಶ್ರಯ ಮನೆಗಳಿಂದ ಲಾಭ ಆಗಿದೆ. ನಾವೇ ಆರು ಸಾವಿರ ನಿವೇಶನ ಹಂಚಿದ್ದೇವೆ. ನನ್ನದು ಇನ್ನೊಂದು ವಿಚಾರ ಎಂದರೆ ಇವರ ಪೆಟ್ಟಿಗೆ ಮನೆ ಬಗ್ಗೆ ನಂಬಿಕೆ ಇಲ್ಲ.

ಶ್ರೀ ಸಿ.ಎಂ.ಉದಾಸಿ :- ನಮ್ಮ ಕ್ಷೇತ್ರದಲ್ಲಿ ಆಗಿರುವ ವಿಚಾರದ ಬಗ್ಗೆ ನಾನು ಸ್ಪಷ್ಟೀಕರಣ ಕೊಟ್ಟಿದ್ದೇನೆ.

ಶ್ರೀ ಎಸ್.ಬಂಗಾರಪ್ಪ :- ಅದು ಪೆಟ್ಟಿಗೆ ಮನೆ ಅಲ್ಲ. ಅದು ಇಂಗ್ಲೀಷ್ ಪದ. ಒಂದೇ ಒಂದು ಮಾತು ಮಾನ್ಯ ಉದಾಸಿ ಅವರ ಗಮನಕ್ಕೆ ತರುವುದು....

ಶ್ರೀ ಎನ್.ರಾಜಣ್ಣ :- 1972ರಲ್ಲಿ ಆಶ್ರಯ ಸ್ಕೀಮ್‌ನಲ್ಲಿ ಆಗಿರತಕ್ಕ ನಿವೇಶನದ ಬಗ್ಗೆ 1992 ರಲ್ಲಿ ಪೊಸೆಶನ್ ಸರ್ಟಿಫಿಕೇಟ್ ಕೊಟ್ಟಿದ್ದಾರೆ.

ಶ್ರೀ ಎಸ್.ಬಂಗಾರಪ್ಪ :- ಆಕ್ಚುಯಲ್ 60 ರಿಂದ 70 ಸಾವಿರ ಇದೇ ಸ್ಕೀಮ್‌ನಲ್ಲಿ

ಬೆಂಗಳೂರು ನಗರದಲ್ಲಿ ಜನರಿಗೆ ಎಲ್ಲೆಲ್ಲಿ ಕಾರ್ಪೊರೇಶನ್ ಜಾಗದಲ್ಲಿ, ಸರ್ಕಾರಿ ಜಾಗದಲ್ಲಿ ಮನೆಗಳನ್ನು ಕಟ್ಟಿಕೊಂಡಿದ್ದಾರೆ, ಎಸ್.ಸಿ.;ಎಸ್.ಟಿ ಮತ್ತು ಬಡವರು, ಯಾವುದೇ ಜಾತಿಯಲ್ಲಿ ಇರಲಿ ಅವರಿಗೆ ನಾವು ಹಕ್ಕು ಪತ್ರಗಳನ್ನು ಕೊಟ್ಟಿದ್ದೇವೆ. ಅವರೂ ಸಂತೋಷಪಟ್ಟರು. ಅವರು ಈಗಲೂ ಇದ್ದಾರೆ. ಉತ್ತರ ಹಳ್ಳಿಯಲ್ಲಿ ಒಂದು ಕಾರ್ಯಕ್ರಮದಲ್ಲಿ 30- 35 ಸಾವಿರ ಸೈಟ್‌ಗಳ ಹಂಚಿಕೆ ಪತ್ರ ಕೊಡತಕ್ಕ ಕಾರ್ಯಕ್ರಮಕ್ಕೆ ನಾನು ಹೋಗಿದ್ದೆ. ಅದರಲ್ಲಿ ಆಪಾದನೆಗಳೂ ಕೂಡ ಬಂದವು. ನಾನು ಇಲ್ಲವೆಂದು ಹೇಳುವುದಿಲ್ಲ. ಎಲ್ಲೋ ಕಟ್ಟತಕ್ಕ ಯೋಜನೆಗಳಲ್ಲಿ ಯಾವುದಾದರೂ ಅಧಿಕಾರಿಗಳು ತಪ್ಪು ಮಾಡಿದ್ದರೆ ಅಥವಾ ಮತ್ತೊಬ್ಬರು ತಪ್ಪು ಮಾಡಿದ್ದಾರೆ, ಅದು ನಮ್ಮ ಕಾಲದಲ್ಲೂ ಬರುತ್ತದೆ, ನಿಮ್ಮ ಕಾಲದಲ್ಲೂ ಬರುತ್ತದೆ. ನಿಮ್ಮ ಆಡಳಿತಕ್ಕೂ ಅದು ಬರಬಹುದು ನಮ್ಮ ಆಡಳಿತಕ್ಕೂ ಬರುತ್ತದೆ. ಯಾರಾದರೂ ತಪ್ಪು ಮಾಡಿದ್ದಾರೆ ಏನು ಆಗಿದೆ ಎಂದು ವಿಚಾರ ಮಾಡಬೇಕು. ಆದರೆ ಸಾರಾಸಗಟು ಹಾಗೆ ಆಗಿ ಬಿಟ್ಟಿದೆ ಎನ್ನತಕ್ಕ ಮಾತನ್ನು ನೀವು ಹೇಳಿದರೆ ನಾನು ಹೇಳುತ್ತೇನೆ. ಪತ್ರ ತೆಗೆದುಕೊಂಡಿರತಕ್ಕ ಮತ್ತು ಆಕ್ಚುಯಲ್ ಸ್ವಾಧೀನ ಪಡೆದುಕೊಂಡು ಅದರ ಮೇಲೆ ಅವರೇ ಸ್ವಂತವಾಗಿ ಕಟ್ಟಿಕೊಳ್ಳಲಿ ಅಥವಾ ಸರ್ಕಾರದವರೇ ಕಟ್ಟಿಸಿ ಕೊಡಲಿ ಮನೆಯನ್ನು ಅವರಿಗೆ ಸಿಕ್ಕತಕ್ಕ ಸೌಲಭ್ಯದ ವಿರುದ್ಧ ಮಾತನಾಡಿದ ಹಾಗೆ ಆಗುತ್ತದೆ. ದಯವಿಟ್ಟು ಆ ಕೆಲಸವನ್ನು ನಾವ್ಯಾರೂ ಮಾಡುವುದು ಬೇಡ. ಈಗ ಏಳು ಲಕ್ಷ 65 ಸಾವಿರ ಮನೆಗಳು. ನನಗೆ ಗೊತ್ತಿದೆ, ನಾನು ಮಾಡಿರುವುದು. ಎಲ್ಲಾದರೂ ಮೂಲೆ ಮೂಲೆಯಲ್ಲಿ ಅನ್ಯಾಯ ನಡೆದಿರಬಹುದು, ನಾನು ಇಲ್ಲವೆಂದು ಹೇಳುವುದಿಲ್ಲ. ಆದರೆ ಆ ಕಾಲದಲ್ಲಿ ಹೇಳಿದೆ. ನಾನು ಮಾನ್ಯ ಮುಖ್ಯ ಮಂತ್ರಿಗಳಿಗೆ ಕೂಡ ಹೇಳಿದೆ, ಹಾಗೇನಾದರೂ ಆಗಿದ್ದರೆ ಅದನ್ನು ಸರಿಪಡಿಸೋಣ ಎಂದು, ಆದರೆ ಸಾರಾಸಗಟಾಗಿ ನೀವು ಈ ರೀತಿ ಮಾತನಾಡತಕ್ಕದ್ದು ಅದಕ್ಕೆ ಬುಡ ತುದಿ ಇರುವುದಿಲ್ಲ ಎನ್ನತಕ್ಕ ಮಾತನ್ನು ಕೂಡ ನಾನು ಹೇಳಿದೆ. ಈ ಸಂದರ್ಭದಲ್ಲಿ ನಾನು ಒಂದೇ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಮನೆಗಳನ್ನು ಕಟ್ಟತಕ್ಕ ವಿಚಾರದಲ್ಲಿಯೂ ಕೂಡ ಅದೇ ರೀತಿಯಾಗಿ ನಾನು ಬಿಟ್ಟ ಮೇಲೆ ಅನ್ಯಾಯಗಳು ನಡೆದವು. ಫ್ರೀ ಫ್ಯಾಬ್ರಿಕೇಟೆಡ್ ಮೆಟೀರಿಯಲ್ಸ್ ಬಂದಾಗ ಮನಸ್ಸಿಗೆ ಒಂದು ವಿಚಾರ ಬಂತು. ನಾವು ಒಂದು ನೀತಿಯನ್ನು ಅನುಸರಿಸಿದ ಮೇಲೆ ಅದನ್ನು ಮುಂದುವರಿಸಬೇಕಾಗುತ್ತದೆ. ಏಕೆಂದರೆ ಫಾರೀನ್ ಕಂಟ್ರೀಸ್‌ನವರು ಮಾಡುತ್ತಿದ್ದಾರೆ. ಪ್ರೈವೇಟ್ ಕಂಪನಿಯವರು ಬಂದಿದ್ದಾರೆ, ನಾಳೆ ನಾವು ಟೆಂಡರ್ಸ್ ಕರೆದರೆ ಅವರೂ ಕೂಡ ಗವರ್ನಮೆಂಟ್ ಮೆಷಿನರಿ ಜೊತೆಗೆ ಕಾಂಪೀಟ್ ಮಾಡುತ್ತಾರೆ. ಬೇಕಾದಷ್ಟು ಏಜೆನ್ಸಿ ಬಂದಿದ್ದಾವೆ. ತೆಗೆದುಕೊಂಡು ಅವರು ಮನೆ ಕಟ್ಟುವಾಗ ಹೈ ಕ್ಲಾಸ್ ಮನೆ ಕಟ್ಟಿದ್ದಾರೆ ಎಂದು ಸರ್ಟಿಫಿಕೇಟ್ ಕೊಟ್ಟು ಉದ್ಘಾಟನೆ ಮಾಡುವುದು, ಇಲ್ಲಿ ನಾವೇ ಮಾಡುವುದಕ್ಕೆ ಕಲ್ಲು ಎತ್ತಿ ಹಾಕಿ ಹಾಳು ಮಾಡುವುದು. ಇದನ್ನೆಲ್ಲಾ ಏಕೆ ಮಾಡುವುದಕ್ಕೆ ಹೋಗಬೇಕು ಸ್ವಾಮಿ ? I am still in favour of creating houses based on pre-fabricated material includ-

ing the bricks which account for the construction of the walls, doors, windows, etc., ಕಿಟಕಿಗಳು, ಬಾಗಿಲುಗಳು, ರೂಫ್ ಎಲ್ಲವೂ ಕೂಡ ಅಲ್ಲಿ ಅನೇಕ 7080 ವರ್ಷ ಬಾಳಿಕೆ ಬರುತ್ತದೆ ಎಂದು ಸೈಂಟಿಫಿಕ್ ಪ್ರೂವ್ಡ್ ಆಗಿರುವುದು; ನಾವು ನೀವು ಟೆಸ್ಟ್ ಮಾಡಿರತಕ್ಕದ್ದು ಅಲ್ಲ. ತಾಂತ್ರಿಕವಾಗಿ ಅದು ಬಹಳ ಅಪ್ರೂವ್ಡ್ ಆಗಿರತಕ್ಕ ವಿಚಾರ. ಈಗ ನಾನು ಬಿಟ್ಟ ಮೇಲೆ ಏನು ಆಗಿದೆ ಎಂದರೆ ನಿಜವಾಗಿಯೂ ಬಹಳ ಮನಸ್ಸಿಗೆ ನೋವಾಗಿದೆ. ನಾನು ಬಿಜಾಪುರ ಜಿಲ್ಲೆಯಲ್ಲಿ ಬರಬೇಕಾದರೆ ನೋಡಿದೆ. ಕಾರು ನಿಲ್ಲಿಸಿ, ನಾನು ನಮ್ಮ ಪಕ್ಷದ ವಿಚಾರಕ್ಕೆ ಅಲ್ಲಿಗೆ ಹೋದಾಗ ಜನ ನಿಲ್ಲಿಸಿದರು. ಸಾರ್ ನಿಮ್ಮ ಕಾಲದಲ್ಲಿ ಗೋಡೆಗಳು ಆದವು, ನೋಡಿದರೆ ಕನ್‌ಸ್ಟ್ರಕ್ಷನ್ ಆದ ಹಾಗೆ ಕಾಣುವುದಿಲ್ಲ ಮನೆಗಳು. ರೂಫ್‌ಗಳು ಕಿತ್ತು ಹೋಗಿದೆ. ಎಂಥದ್ದೋ ತಂದು ಹಾಕಿದ್ದಾರೆ. ಫ್ರೀ ಫ್ಯಾಬ್ರಿಕೇಟಡ್ ರೂಫ್ ಕೂಡ ಕೊಡಿಸಿದ್ದರೆ ಬಹಳ ಚೆನ್ನಾಗೆ ಬರುತ್ತಿತ್ತು. ಈ ದೃಷ್ಟಿಯಿಂದ ನಾನು ಹೇಳಿದೆ. ಮನೆಗಳ ಬಗ್ಗೆ ನಿಮ್ಮ ವಿಚಾರ ಧಾರೆ I do not know what exactly is in your mind about the construction of the houses to the houseless people. ನನಗೆ ಗೊತ್ತಿಲ್ಲ. ನೀವು ಯಾವ ತಾಂತ್ರಿಕವಾಗಿ ಅಪ್ರೂವ್ಡ್ ಮಾಡಿ. ನಾನು ನನ್ನ ರೀತಿಯಲ್ಲಿ ಮಾಡಿದೆ. ನೀವು ಚೆನ್ನಾಗಿ ಇಲ್ಲ ಎಂದು ಹೇಳಿದರೆ ನಾನು ಮಾಡಿರುವುದಕ್ಕಿಂತ ಚೆನ್ನಾಗಿ ಮಾಡಿರಿ, ನಾನು ಬೇಡ ಎಂದು ಹೇಳುವುದಿಲ್ಲ. ಆದರೆ ಸುಮ್ಮನೆ ಯಾವುದೋ ಮರ ತಂದು ಹಾಕುವುದು, ಯಾವ್ಯಾವುದೋ ಗೋಡೆ ಕಟ್ಟುವುದು ಅದನ್ನು ಹಾಳು ಮಾಡತಕ್ಕದ್ದು....

ಶ್ರೀ ಎಂ.ನಾರಾಯಣಸ್ವಾಮಿ :- ತಾವು ತಮ್ಮ ಕಾಲಾವಧಿಯಲ್ಲಿ ಮೂರು ಲಕ್ಷ ಚಿಲ್ಲರೆ ಮನೆಗಳನ್ನು ಕಟ್ಟಬೇಕು ಎಂಬ ಒಂದು ಯೋಜನೆಯನ್ನು ಹಾಕಿಕೊಂಡಿದ್ದೀರಿ. ಆಮೇಲೆ ಸೈಟ್‌ಗಳನ್ನು ಕೊಡಿಸಿದಿರಿ, ನಾನು ಒಪ್ಪುತ್ತೇನೆ. ಆದರೆ ತಮ್ಮ ಕಾಲದಲ್ಲಿ ಎಷ್ಟು ಮನೆಗಳನ್ನು ಕಟ್ಟಿದರು ಎಂಬ ಬಗ್ಗೆ ಮಾಹಿತಿ ಕೊಡಬೇಕು.

ಶ್ರೀ ಎಸ್.ಬಂಗಾರಪ್ಪ :- ನನಗೆ ನೆನಪು ಇರುವ ಹಾಗೆ, ನೀವು ಕೇಳಿರುವುದು ಒಳ್ಳೆಯ ಪ್ರಶ್ನೆ. ಏಕೆಂದರೆ ನನಗೆ ನೆನಪು ಇರುವ ಹಾಗೆ ಮೂರು ಲಕ್ಷದ ಗುರಿ ಇಟ್ಟು ಸ್ಟಾರ್ಟ್ ಮಾಡಿದೆವು. ಏಕೆಂದರೆ ಟೆಂಡರ್ ಕರೆಯಬೇಕು, ಮಾಡಬೇಕು, ಅಮೇಲೆ ಮಿಷಿನರಿ ಎಸ್ಟಾಬ್ಲಿಷ್ ಮಾಡುವುದಕ್ಕೆ ಟೈಮ್ ಸಿಗುತ್ತದೆ, ಮೊದಲು, ಅದು ಯಾವಾಗ ಎಂದು. ನನಗೆ ಗೊತ್ತಿರುವ ಹಾಗೆ 30 ಸಾವಿರ 40 ಸಾವಿರ ಅಥವಾ ಸುಮಾರು 50 ಸಾವಿರ ಮನೆಗಳು ನನ್ನ ಕಾಲದಲ್ಲಿ ಆಗಿದ್ದಾವೆ. ಅವೆಲ್ಲಾ ಪೂರ್ತಿಯಾಗಿವೆಯೆಂದು ಹೇಳಲಿಲ್ಲ. ಮನೆಗಳನ್ನು ಕಟ್ಟಿ ಮೇಲ್ಛಾವಣಿ ಹಾಕುವುದು ಬಾಕಿ ಇತ್ತು, ಆಗ ನಾನು ನನ್ನ ಸ್ಥಾನಕ್ಕೆ ರಾಜಿನಾಮೆ ಕೊಟ್ಟೆ. ನಾನು ಏನು ಮಾಡಲಿ?

ಶ್ರೀ ಸಿ.ಹೆಚ್.ವಿಜಯಶಂಕರ್ (ಹುಣಸೂರು) :- ಸರ್ಕಾರ ಏನು ಆಶ್ರಯ ಮನೆಗಳ ವಿಚಾರದಲ್ಲಿ ಗಮನ ಕೊಡುತ್ತಿದ್ದೆ, ಸದರಿ ಯೋಜನೆಯಡಿ ಮನೆಗಳನ್ನು ಕಟ್ಟಲು ಕಡ್ಡಾಯವಾಗಿ ಗುತ್ತಿಗೆ ಕೊಡುವುದನ್ನು ರದ್ದು ಮಾಡಬೇಕು. ಗುತ್ತಿಗೆದಾರರ ಮೂಲಕ ಮನೆಗಳನ್ನು ನಿರ್ಮಿಸುವ ವ್ಯವಸ್ಥೆ ನಿಲ್ಲಿಸಬೇಕು. ಬದಲಾಗಿ ಹಣವನ್ನು ನೇರವಾಗಿ ಫಲಾನುಭವಿಗಳಿಗೆ ಕೊಟ್ಟು ಅವರೇ ತಮ್ಮ ಮನೆಗಳನ್ನು ಕಟ್ಟಿಕೊಳ್ಳುವ ವ್ಯವಸ್ಥೆಯಾಗಬೇಕು. ಅವರೇ ಕಟ್ಟಿಕೊಳ್ಳುವ ವ್ಯವಸ್ಥೆ ಎಲ್ಲಿ ಇಲ್ಲವೋ ಅಂತಹ ಕಡೆಗಳಲ್ಲಿ ಅಧಿಕಾರಿಗಳು ನಿಂತು ಆ ಕೆಲಸ ಮಾಡಬೇಕು.

ಅಧ್ಯಕ್ಷರು :- ಮನೆಗಳನ್ನು ನಿರ್ಮಿಸುವ ವಿಚಾರದಲ್ಲಿ ಈಗಾಗಲೇ ಎಲ್ಲಾ ಪ್ರಯೋಗಗಳಾಗಿವೆ. ಹಿಂದೆ ಭೂ ಸೇನಾ ನಿಗಮದವರಿಗೆ ಹಾಗೂ ಇತರೇ ಸಂಸ್ಥೆಯವರಿಗೆ ವಹಿಸಿ ಕೊಟ್ಟಾಗಿದೆ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಸದಸ್ಯರ ಗಮನಕ್ಕೆ ತರುವುದೇನೆಂದರೆ, ನಾವು ಕೈಗೊಂಡ ಕೆಲಸದಲ್ಲಿ ಒಂದು ಸಾರಿ ತಪ್ಪು ಕಂಡಾಗ ಆ ರೀತಿ ಮಾಡಿದಾಗ ಈ ರೀತಿ ಮಾಡಿದ್ದರೆ ಒಳ್ಳೆಯದಿತ್ತು ಎಂದು ತಿಳಿದು ಈ ರೀತಿ ಮಾಡಬೇಕೆಂದು ತಿಳಿಯುತ್ತೇವೆ. ಇದ್ದುದರಲ್ಲಿ ಯಾವುದು ಒಳ್ಳೆಯದೆಂದು ಆರಿಸುವುದು ನಿಮಗೆ ಬಿಟ್ಟ ವಿಚಾರವೆಂದು ಅಷ್ಟು ಮಾತ್ರ ಹೇಳಬಲ್ಲೆ.

ಅಧ್ಯಕ್ಷರು :- ಬಂಗಾರಪ್ಪನವರೇ, ತಾವು ತಮ್ಮ ಚರ್ಚೆಯನ್ನು ಸ್ವಲ್ಪ ಹೊತ್ತು ಮುಂದುವರೆಸಿ ಮುಗಿಸುವುದಾದರೆ ಏನೂ ತೊಂದರೆಯಿಲ್ಲ. ಈಗ ಊಟದ ಸಮಯವಾಗಿರುವುದರಿಂದ, ಊಟ ತಣ್ಣಗಾದರೆ ವಾಟಾಳ್ ನಾಗರಾಜ್‌ರವರು ಊಟ ಮಾಡುವುದಿಲ್ಲ. ತಾವು ಎರಡು ಗಂಟೆಯೊಳಗಾಗಿ ತಮ್ಮ ಭಾಷಣ ಮುಗಿಸಿದರೆ ಊಟದ ವಿರಾಮಕ್ಕೆ ಸದನ ಮುಂದೂಡಬಹುದು. ಅಷ್ಟರೊಳಗೆ ಮುಗಿಸುತ್ತೀರಾ?

ಶ್ರೀ ಎಸ್.ಬಂಗಾರಪ್ಪ :- ತಾವು ನನಗೆ ಮಾತನಾಡಲು ಇನ್ನು ಅರ್ಧ ಗಂಟೆಗಳ ಕಾಲಾವಕಾಶ ಕೊಟ್ಟರೆ ಮುಗಿಸುತ್ತೇನೆ.

ಅಧ್ಯಕ್ಷರು :- ಹಾಗಾದರೆ, ಊಟದ ವಿರಾಮದ ನಂತರ ಮತ್ತೆ ಸೇರಿದಾಗ ಚರ್ಚೆಯನ್ನು ತಾವು ಪ್ರಾರಂಭಿಸಿ. ಈಗ ಸದನವನ್ನು ಒಂದು ಗಂಟೆ ಕಾಲ ಮುಂದೂಡಲಾಗಿದೆ.

(ಸದನವು 1 ಗಂಟೆ 43 ನಿಮಿಷಕ್ಕೆ ಮುಂದೂಡಿ ಮತ್ತೆ ಒಂದು ಗಂಟೆ ಬಳಿಕ

ಸೇರಲು ನಿಶ್ಚಯಿಸಿತು)

(ಸಭೆಯು 2.50 ನಿಮಿಷಕ್ಕೆ ಸಮಾವೇಶಗೊಂಡಿತು. ಅಧ್ಯಕ್ಷರಾದ ಶ್ರೀ ರಮೇಶ್ ಕುಮಾರ್‌ರವರು ಪೀಠವನ್ನು ಅಲಂಕರಿಸಿದರು)

ಶ್ರೀ ಎಸ್.ಬಂಗಾರಪ್ಪ:- ನಾನು ತಮ್ಮ ಅನುಮತಿಯನ್ನು ಪಡೆದು ಪವರ್ ಸೆಕ್ಟಾರ್ ವಿಚಾರದಲ್ಲಿ ಎರಡು ಮಾತನ್ನು ಆಡಲು ಇಚ್ಛಿಪಡುತ್ತೇನೆ. ನಿನ್ನೆ ಅಥವಾ ಮೊನ್ನೆ ಎಂದು ಕಾಣಿಸುತ್ತದೆ. ಈ ವಿಚಾರ ಚರ್ಚೆಗೆ ಬಂದಾಗ ಒಂದು ವಿಷಯ ಗೊತ್ತಾಯಿತು. ಅದೇನೆಂದರೆ ಈ ಶತಮಾನದ ಅಂತ್ಯದ ಒಳಗೆ ನಾವು ಏಳು ಸಾವಿರ ಮೆಗಾವ್ಯಾಟ್ ಉತ್ಪಾದನೆ ಮಾಡಬೇಕು. This is the core sector

ಎನ್ನತಕ್ಕ ವಿಚಾರವನ್ನು ಇಟ್ಟು ಅದನ್ನು ತಾವು ತಮ್ಮ ಮುಂಗಡ ಪತ್ರದಲ್ಲೂ ಸಹ ಹೇಳಿದ್ದೀರಿ. ಅದು ಸಂತೋಷದ ವಿಷಯ. ನಾನು ಮೊನ್ನೆ ಕೂಡ ಹೇಳಿದ್ದೇನೆ ಹಾಗೂ ಇದನ್ನು ಸ್ವಾಗತಿಸಿದ್ದೇನೆ. ನಾವು ಟೋಟಲ್ಲಾಗಿ ಗಾತ್ರವನ್ನು, ಗುರಿಯನ್ನು ಪ್ರೋಜೆಕ್ಟ್ ಮಾಡತಕ್ಕ ಕಾಲದಲ್ಲಿ ಒಂದು ಅಂಶವನ್ನು ಮನಸ್ಸಿನಲ್ಲಿ ಇಟ್ಟುಕೊಳ್ಳಬೇಕು. ನಾವು ಓವರಾಲ್ ಡೆವಲಪ್‌ಮೆಂಟ್ ಆಗಬೇಕೆಂದು ಹೇಳುತ್ತೇವೆ. ಅದು ಆಗಬೇಕಾದರೆ ಪವರ್ ಸೆಕ್ಟಾರ್ ಹೆಚ್ಚು ಮುಖ್ಯ ಪಾತ್ರ ವಹಿಸುತ್ತದೆ. ಪವರ್ ಸೆಕ್ಟಾರ್ ಒಂದು ಕೋರ್ ಸೆಕ್ಟಾರ್. ಅಲ್ಲಿ ನಾವು ಡೆವಲಪ್‌ಮೆಂಟ್ ಮಾಡದಿದ್ದರೆ ನಾವು ಎಂದಿಗೂ ಓವರಾಲ್ ಡೆವಲಪ್‌ಮೆಂಟ್ ಮಾಡಲು ಸಾಧ್ಯವಾಗುವುದಿಲ್ಲ. ಇರ್ರಿಗೇಷನ್ ಬಗ್ಗೆ ನಾವು ಏನು ಮಾಡುತ್ತಿದ್ದೇವೆ ಎಂದರೆ ಫ್ಲೋ ಇರ್ರಿಗೇಶನ್ ಒಂದನ್ನೆ ಗಮನದಲ್ಲಿಟ್ಟುಕೊಂಡು ಮೇಜರ್ ಇರ್ರಿಗೇಶನ್ ಪ್ರಾಜೆಕ್ಟ್‌ಗಳನ್ನು ತೆಗೆದುಕೊಳ್ಳುತ್ತಿದ್ದೇವೆ. ನದಿಗೆ ಅಡ್ಡಲಾಗಿ ಡ್ಯಾಮ್ ಕಟ್ಟುವುದು ಈ ರೀತಿ ಫ್ಲೋ ಇರ್ರಿಗೇಶನ್ ಅಷ್ಟನ್ನೇ ನಾವು ವಿಚಾರ ಮಾಡುತ್ತೇವೆ. ಆದರೆ ಲಿಫ್ಟ್ ಇರ್ರಿಗೇಶನ್ ಮತ್ತು ಮೈನರ್ ಇರ್ರಿಗೇಶನ್ ಹಾಗೂ ಅಂಡರ್ ಗ್ರೌಂಡ್ ವಾಟರ್ ಇದರ ಬಗ್ಗೆ ಹೆಚ್ಚು ಗಮನ ಕೊಡುತ್ತಿಲ್ಲ. ನಿನ್ನೆ ಶ್ರೀ ಜೆ.ಹೆಚ್.ಪಟೇಲ್‌ರವರು ಏನು ಹೇಳಿದ್ದಾರೆ ಎಂದರೆ 42% of the total power generated in the State is being consumed by the Agricultural Sector, particularly pumpsets ತಮಗೆ ಗೊತ್ತಿರುವ ಹಾಗೆ ಕೃಷಿ ಆಧಾರದ ಆರ್ಥಿಕ ಒಂದು ವಿಚಾರಧಾರೆ ನಮ್ಮ ರಾಷ್ಟ್ರದಲ್ಲಿ ಇದೆ. ಅಮೆರಿಕಾ ಹಾಗೂ ಕೆಲವು ಐರೋಪ್ಯ ದೇಶಗಳು ಅಥವಾ ಜಪಾನ್ ರಾಷ್ಟ್ರಗಳ ಬಗ್ಗೆ ಹೇಳಬೇಕಾದರೆ ಅಲ್ಲಿಯ ವಿಚಾರವೇ ಬೇರೆ. ಮಳೆ ಮತ್ತೊಂದರ ಮೇಲೆ ಅಲ್ಲಿ ಅವಲಂಬಿತರಾಗಿರುವುದಿಲ್ಲ. ಅಮೇರಿಕಾ ಮುಂತಾದ ರಾಷ್ಟ್ರಗಳಲ್ಲಿ ಮಳೆ ಬಾರದಿದ್ದರೂ ಸಹ ಅವರು ಶಕ್ತಿಯುತವಾಗಿ ನಿಲ್ಲುತ್ತಾರೆ. They

don't depend upon your growth rate percentage ಅವರು ಬಫರ್ ಸ್ಟಾಕ್ ಬೇಕಾದಷ್ಟು ಇಟ್ಟುಕೊಂಡಿರುತ್ತಾರೆ. ನಾನು ಅಮೇರಿಕಾ ಹಾಗೂ ಮುಂತಾದ ದೇಶಗಳಿಗೆ ಹೋದ ಸಂದರ್ಭದಲ್ಲಿ ಅಲ್ಲಿಯ ಅಧಿಕಾರಿಗಳೊಡನೆ ಚರ್ಚೆ ಮಾಡಿದ್ದೇನೆ. ಆದರೆ ಆ ರೀತಿ ನಮ್ಮ ರಾಷ್ಟ್ರದಲ್ಲಿ ಮಾಡಲು ಬರುವುದಿಲ್ಲ. Industrial sector also depends upon the agriculture sector ನಾವು ಅಗ್ರಿಕಲ್ಚರ್ ಸೆಕ್ಟಾರನ್ನು ಬಿಟ್ಟು ಬರೀ ಇಂಡಸ್ಟ್ರೀಯಲ್ ಸೆಕ್ಟಾರನ್ನು ಬೆಳೆಸಿಕೊಂಡು ಹೋಗುತ್ತೇವೆ ಎಂದರೆ ಅದು ಎಂದಿಗೂ ನಮ್ಮ ಆರ್ಥಿಕ ಬೆಳವಣಿಗೆಗೆ ಸಹಕಾರಿಯಾಗಿ ನಿಲ್ಲುವುದಿಲ್ಲ. ಕೃಷಿ ಆಧಾರಿತ ಆರ್ಥಿಕ ವ್ಯವಸ್ಥೆ ನಮ್ಮ ರಾಷ್ಟ್ರದಲ್ಲಿ ಮೂಲಭೂತವಾಗಿ ಇರತಕ್ಕ ಸಂದರ್ಭದಲ್ಲಿ ನಾವು ನಮ್ಮ ಹೆಚ್ಚಿನ ಒತ್ತನ್ನು ಅದಕ್ಕೆ ಕೊಡಬೇಕಾಗಿದೆ. Krishna basin, Godavari basin, ಸ್ಮಾಲ್ ಬೇಸಿನ್‌ಗಳಲ್ಲಿ ನಾವು ಹಣ ತೊಡಗಿಸಬೇಕು ಎಂಬ ವಾದವನ್ನು ಹೂಡುತ್ತೇವೆ. ನನ್ನ ಕಾಲದಲ್ಲಿ ಕೃಷ್ಣಾ ಬೇಸಿನ್ ಆಥಾರಿಟಿ-- ಎಂದು ಮಾಡಿದ್ದೆವು. ಇರ್ರಿಗೇಶನ್ ಬ್ಯಾಂಡ್‌ಗಳನ್ನು ಫ್ಲೋಟ್ ಮಾಡಬೇಕು ಎಂಬ ವಿಚಾರ ಬಂದಾಗ ನೀವು ಕೃಷ್ಣಾ ಜಲಭಾಗ್ಯ ನಿಗಮ ಎಂದು ಮಾಡಿದ್ದೀರಿ. ಆದರ ರೂಪು ರೇಷೆಗಳು ಏನು ಎಂಬುದು ಇನ್ನೂ ಗೊತ್ತಿಲ್ಲ. The Hon'ble member of this House are not in possession of the details of all those things. ಒಂದೇ ಒಂದು ವಿಚಾರವನ್ನು ನಾನು ನಿಮ್ಮ ಗಮನಕ್ಕೆ ತರುತ್ತಿದ್ದೇನೆ. ದಾಮೋದರ್ ವ್ಯಾಲಿ ಪ್ರಾಜೆಕ್ಟ್ ಆದಮೇಲೆ ಕೃಷ್ಣಾ ಬೇಸಿನ್ ಅಥಾರಿಟಿಯನ್ನು ನಾವು ಮಾಡಿದ್ದೇವೆ. ಆದರಿಂದ ಬರೀ ಗುಲಬರ್ಗಾ, ರಾಯಚೂರು, ಅಥವಾ ಬಳ್ಳಾರಿ ಅಥವಾ ಬಿಜಾಪೂರ ಭಾಗಗಳವರಿಗೆ ಮಾತ್ರ ಪ್ರಯೋಜನ ಆಗುತ್ತದೆ ಎಂದು ತಿಳಿದುಕೊಳ್ಳಬಾರದು. because they are the big tributaries of big river called Krishna ಅದು ಎಲ್ಲಿ ಹೋಗಿ ಸೇರುತ್ತದೆ ಎಂದರೆ ಹಾಸನ ಜಿಲ್ಲೆಯವರೆಗೂ ಹೋಗುತ್ತದೆ. ಅದು ಯಗಚಿ ರಿವರ್‌ಗೂ ಬರುತ್ತದೆ. ಯಾವಾಗಲೂ ಈ ವಿಚಾರದಲ್ಲಿ ನಾವು ಮಾತನಾಡಬೇಕಾದರೆ ಒಂದು ಅಂಶವನ್ನು ಗಮನಿಸಬೇಕು. ಹಣವನ್ನು ಪಡೆಯಲು ಇರ್ರಿಗೇಶನ್ ಬಾಂಡ್ ಫ್ಲೋಟ್ ಮಾಡಬೇಕು ಎಂಬ ವಿಚಾರ ಬಂದಾಗ ನೀವು ಏನು ಮಾಡಿದ್ದೀರಿ? ಕೃಷ್ಣಾ ಬೇಸಿನ್ ಅಥಾರಿಟಿಯನ್ನು ನನ್ನ ಕಾಲದಲ್ಲಿ ಮಾಡಿದ್ದುದು. ಆಗ ಎಲ್ಲಾ ಪಕ್ಷದವರು ಸೇರಿ ಸರ್ವಾನುಮತದಿಂದ ಈ ಮನೆಯಲ್ಲಿ ಹಾಗೂ ಮೇಲ್ಮನೆಯಲ್ಲಿ ಅದನ್ನು ಸರ್ವಾನುಮತದಿಂದ ಅನುಮೋದನೆ ಮಾಡಿ ಅದನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿಕೊಡಲಾಯಿತು. ಈಗ ಕೇಂದ್ರ ಸರ್ಕಾರದವರು ಅದಕ್ಕೆ ಒಪ್ಪಿಗೆ ನೀಡಿ ಕಳುಹಿಸಿಕೊಟ್ಟಿದ್ದಾರೆ. ಪರಿಸ್ಥಿತಿ ಹೀಗಿರುವಾಗ ನೀವು ಈ ಕೃಷ್ಣಾ ಜಲಭಾಗ್ಯ ನಿಗಮವನ್ನು ಸ್ಥಾಪನೆ ಮಾಡುವ ಅವಶ್ಯಕತೆ ಏನು ಇತ್ತು? ಒಂದು ವೇಳೆ ನೀವು ಇರ್ರಿಗೇಶನ್ ಬಾಂಡ್ ಫ್ಲೋಟ್ ಮಾಡಬೇಕಾದರೆ ಈಗಿರತಕ್ಕ ಆ ಕಾನೂನಿಗೆ ಒಂದು ತಿದ್ದುಪಡಿಯನ್ನು ತರಬಹುದಾಗಿತ್ತು. ಅದು ಯಾವುದನ್ನೂ ನೀವು ಮಾಡದೆ ಈಗ ಕೃಷ್ಣಾ

ಜಲ ನಿಗಮ ಎಂದು ಹೊಸದಾಗಿ ಮಾಡಿ ಇರ್ರಿಗೇಶನ್ ಬಾಂಡನ್ನು ಫ್ಲೋಟ್ ಮಾಡುವಂತಹ ವಿಚಾರ ನಮ್ಮ ಮುಂದೆ ಇಟ್ಟರೆ I am sorry for that. Your party is a party here in this House. ಇಲ್ಲಿ ನೀವು ಅದಕ್ಕೆ ಪಾರ್ಟಿ ಆಗಿದ್ದವರು. ಈಗ ಅದನ್ನು ಕೈ ಬಿಟ್ಟು ಮತ್ತೊಂದನ್ನು ಮಾಡಲು ಹೋದರೆ ನೀವು ರಾಜಕೀಯ ಮಾಡುತ್ತಿದ್ದೀರಿ ಹಾಗೂ ಲೀಗಲ್ಲಾಗಿ ಹೋಗುತ್ತಾ ಇಲ್ಲ ಎನ್ನತಕ್ಕಂಥದ್ದನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ಎಲ್ಲಾ ಪಕ್ಷದವರು ಸೇರಿ ಸರ್ವಾನುಮತದಿಂದ ಮಾಡಿರತಕ್ಕಂಥದ್ದನ್ನು ಕೈ ಬಿಡುವ ಅವಶ್ಯಕತೆ ಏನು ಇದೆ ಎಂಬುದನ್ನು ತಿಳಿಸಬೇಕು ಎಂದು ಕೇಳಿಕೊಳ್ಳುತ್ತೇನೆ. ಈ ಬಾಂಡುಗಳಿಗೆ ಯಾವ ರೀತಿ ಹಣ ಬರುತ್ತಿದೆ ಇಲ್ಲವೋ ಎಂಬುದು ಗೊತ್ತಿಲ್ಲ. ಅದನ್ನು ಯಾವ ರೀತಿ ಫ್ಲೋಟ್ ಮಾಡುತ್ತಾರೆ ಎಂಬುದು ಗೊತ್ತಿಲ್ಲ. ಇದರ ಬಗ್ಗೆ ಯಾವ ವಿವರವನ್ನು ಸರಿಯಾಗಿ ನೀಡಿಲ್ಲ. YOu are a party. The Government of India have agreed to that. They have approved.

ಅದಕ್ಕಿಂತ ಹೆಚ್ಚು ನಾನು ಏನೂ ಹೇಳಲು ಹೋಗುವುದಿಲ್ಲ. ಇನ್ನು ಪವರ್ ಸೆಕ್ಟಾರ್ ಬಗ್ಗೆ ಹೇಳಬೇಕಾದರೆ ಈಗ ಏಳು ಸಾವಿರ ಮೆಗಾವ್ಯಾಟ್ ಪವರ್ ಬೇಕು ಎಂದು ಹೇಳಿದ್ದಾರೆ. ಒಂದು ಮೆಗಾವ್ಯಾಟ್ ಪವರ್ ಜನರೇಟ್ ಮಾಡಲು ಈಗ ನಾಲ್ಕು ಕೋಟಿ ರೂಪಾಯಿ ಆಗುತ್ತದೆ. ಮೊದಲು ಒಂದು ಕೋಟಿ ಇತ್ತು. ಅದು ಈಗ ಎರಡು ಕೋಟಿ ಮೂರು ಕೋಟಿ ಹೀಗೆ ಎಸ್ಕಲೇಟ್ ಆಗುತ್ತಾ ಹೋಗಿ ಈಗ ನಾಲ್ಕು ಕೋಟಿಗೆ ಹೋಗಿದೆ. ಕೋಜೆಂಟ್ರಿಕ್ಸ್ ಕಂಪನಿಯವರ ಜೊತೆಯಲ್ಲಿ ನಾನು ಇದ್ದಾಗಲೇ ಎಂ. ಓ. ಯು. ಸೈನ್ ಮಾಡಿದ್ದೇನೆ. ನಾನು ಅಮೆರಿಕಾ, ಇಟಲಿ ಮುಂತಾದ ದೇಶಗಳಿಗೆ ಹೋದಾಗ ಕೆಲವು ಎಂ. ಓ. ಯು. ಗಳಿಗೆ ಸೈನ್ ಮಾಡಿದ್ದೇನೆ. ಅವುಗಳೆಲ್ಲಾ ಏನಾಯಿತು ಗೊತ್ತಿಲ್ಲ. ಇಟಲಿಯ ಕಂಪನಿಯೊಂದಕ್ಕೆ ಸೈನ್ ಮಾಡಿದ್ದು ಏನಾಯಿತು ಗೊತ್ತಿಲ್ಲ. ಆದರೆ ಈಗ ಕೋಜೆಂಟ್ರಿಕ್ಸ್ ಕಂಪನಿಯ ಒಪ್ಪಂದವನ್ನು ಮಾತ್ರ ನೀವು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದೀರಿ. ಅದು ಕೌಂಟರ್ ಗ್ಯಾರಂಟಿ ಕೊಡಲಿಕ್ಕೆ ನೀವು ಏನು ಕಳುಹಿಸಿದ್ದೀರಿ ಅದನ್ನು ಅವರು ಇಟ್ಟುಕೊಂಡು ಕುಳಿತುಕೊಂಡಿದ್ದಾರೆ. You have to exert lot of pressure on the Government of India to get the project cleared.

ಪವರ್ ಜನರೇಟ್ ಮಾಡತಕ್ಕ ವಿಚಾರದಲ್ಲಿ ಒಂದು ವಿಷಯದ ಬಗ್ಗೆ ತಮ್ಮ ಗಮನವನ್ನು ಹರಿಸುತ್ತೇನೆ. 1990-91ರ ವರೆಗೆ 212 ಕೋಟಿ ರೂಪಾಯಿಗಳನ್ನು ನಾವು ಕೆ. ಸಿ. ಪಿ. ಮುಖಾಂತರ ಖರ್ಚು ಮಾಡಿದ್ದೇವೆ. ಈ ಜಲ ವಿದ್ಯುತ್ ಯೋಜನೆಗಳ ಮುಖಾಂತರ ನಾವು ಪವರ್ ಉತ್ಪಾದನೆ ಮಾಡುತ್ತಿದ್ದೇವೆ. ಅದು ಚೀಪಾಗಿ ವರ್ಕೌಟ್

ಆಗುತ್ತದೆ. ಮತ್ತೊಂದು ಪ್ರಮುಖವಾದ ಮಾತನ್ನು ಹೇಳುತ್ತಿದ್ದೇನೆ ಅದರ ಬಗ್ಗೆಯು ತಾವು ಗಮನ ಹರಿಸಬೇಕು. ನಾನು ಅಮೆರಿಕಾ ಇಟಲಿ, ಇಂಗ್ಲೆಂಡ್ ಮುಂತಾದ ದೇಶಗಳಿಗೆ ಹೋಗಿದ್ದ ಸಂದರ್ಭದಲ್ಲಿ ಎಂ.ಓ.ಯು.ಗಳಿಗೆ ಸೈನ್ ಮಾಡಿಕೊಂಡು ಬಂದಿದ್ದೇನೆ. ತಾವೂ ಕೂಡ ಪ್ರಯತ್ನವನ್ನು ಮಾಡುತ್ತಿದ್ದೀರಿ, ಅದನ್ನು ಮುಂದುವರೆಸಿಕೊಂಡು ಹೋಗಿ ಎಂದು ಹೇಳುತ್ತಿದ್ದೇನೆ. ಮೂರು ಸಾವಿರ ಮೆಗಾ-ವ್ಯಾಟ್ ಪವರ್‌ಗೆ ಸಂಬಂಧಪಟ್ಟ ಹಾಗೆ ಒಂದು ಎಂ.ಓ.ಯು. ಗೆ ಸೈನ್ ಮಾಡಿದ್ದೆ. It should be followed by execution of the agreement by both the parties. ಇವೊತ್ತು ನಾವು ಮೈಸೂರು ಜಿಲ್ಲೆಯ ಚಾಲುವಾರು, ಬಳ್ಳಾರಿ ಜಿಲ್ಲೆಯ ತೋರಣಗಲ್, ಗುಲಬರ್ಗಾ ಜಿಲ್ಲೆ ಧಾರವಾಡ ಜಿಲ್ಲೆ ಮತ್ತು ಮಂಗಳೂರಿನಲ್ಲಿ ಒಂದು ಎರಡು ಈ ರೀತಿ 4 ಹಲವಾರು ಯೋಜನೆಗಳನ್ನು ಕೈಗೊಳ್ಳಲು ಕ್ರಮ ಕೈಗೊಳ್ಳಲಾಯಿತು. ಬೆಂಗಳೂರಿಗೂ ಸಹ ಮಾಡಿದೆವು. ಇನ್ನು ಕೋಲ್ ಬೇಸ್ಡ್ ಪವರ್ ಜನರೇಶನ್ ಏನು ಇದೆ ಅದಕ್ಕೆ ನಾವು ಏಳು ಎಂ.ಓ.ಯು.ಗಳನ್ನು ಸೈನ್ ಮಾಡಿದೆವು. It is meant for irrigating the lands. ಹೆಚ್ಚು ಜನರಿಗೆ ಇದು ಗೊತ್ತಿರುವುದಿಲ್ಲ. Almatti dam is capable of producing and generating power

ಲಾಟ್ ಆಫ್ ಎಕ್ಸರವೇಟ್ ಮಾಡಬೇಕು, ಒಂದು ಒಂದೂವರೆ ವರ್ಷದಲ್ಲಿ ನಾವು ಪವರ್ ಜನರೇಶನ್ ಮಾಡಬೇಕು ಎಂದು ಯೋಜನೆ ಇಟ್ಟುಕೊಂಡಿದ್ದೆವು. ಅದಕ್ಕಾಗಿ ಇಟಲಿ ಕಂಪನಿಯವರು ಮುಂದೆ ಬಂದಿದ್ದರು. These are all the things that I am recollecting. For coal based power generation, we have to import lot of equipments from other countries. ಅವರೆಲ್ಲಾ ಹೋಗಿ ಬಂದ ಮೇಲೆ ಅವರು ನಮ್ಮ ಅಕ್ವಿಸಿಷನ್ ಪ್ಲಾನ್, ಮತ್ತೊಂದು ಆ ಮಣ್ಣು ಹಾಕುವ ವಿಧಿ ವಿಧಾನಗಳನ್ನು ಅವರು ನೋಡಿ ಹೆದರಿಕೊಂಡು ಬಿಟ್ಟರು. ನಮ್ಮ ಶಿವನಸಮುದ್ರ ಇದೆಯಲ್ಲಾ ಅಲ್ಲಿಗೂ ಮುಂದೆ ಬಂದರು. ಈ ವಿಚಾರಗಳಿಗೆಲ್ಲಾ ಸ್ವತಃ ನಾನೆ ಕುಳಿತುಕೊಳ್ಳುತ್ತಿದ್ದೆ. ಈಗ ಏನಾಗಿದೆ ಎಂದರೆ ಈ ಪವರ್ ಜನರೇಶನ್ ವಿಚಾರದಲ್ಲಿ ಈಗ ಈ ವಿಚಾರದಲ್ಲಿ ಎಂ.ಓ.ಯು. ಸೈನ್ ಆಗಿ ಬಂದ ಮೇಲೆ ಕೋಲ್ ಬೇಸ್ಡ್ ಪವರ್ ಜನರೇಶನ್ ಇದೆಯಲ್ಲಾ ಅದು ಕಾಸ್ಟ್ ಜಾಸ್ತಿಯಾಗುತ್ತದೆ. ಕೋಲ್, ಡೀಸೆಲ್ ಇವೆಲ್ಲವೂ ಕೂಡ ಸಹಜವಾಗಿ ಕಾಸ್ಟ್ ಜಾಸ್ತಿಯಾಗುತ್ತಿದೆ. ಡೀಸೆಲ್ ಏನು ಬೆಲೆಗೆ ತೆಗೆದುಕೊಳ್ಳಬೇಕು ಇವೆಲ್ಲವೂ ಕೂಡ ಬರುತ್ತದೆ. ಅದಕ್ಕೋಸ್ಕರ ಒಂದೇ ಒಂದು ವಿಚಾರವನ್ನು ನಾನು ಹೇಳತಕ್ಕಂಥದ್ದು. ಒಂದು ಮಿಲಿಯನ್ ಟನ್ ಕೋಲ್ ನಾವು ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಜಾಯಿಂಟ್ ವೆಂಚರ್‌ನಲ್ಲಿ ಆಸ್ಟ್ರೇಲಿಯಾ ಮತ್ತು ಚೈನಾದಲ್ಲಿ ನಾನು ಸಹಿ ಮಾಡಿ ಬಂದೆ. ಇದೇ ವಿಧಾನ ಸೌಧದಲ್ಲಿ ನಾನು ಅಧಿಕಾರ

ಬಿಡುವುದಕ್ಕೆ ಒಂದು ಹತ್ತು ಹದಿನೈದು ದಿವಸದಲ್ಲಿ ಮುಂಚೆ ಇರಬೇಕು. ನಾನು ಆದಷ್ಟು ಮಟ್ಟಿಗೆ I may do something good for the State ಎನ್ನತಕ್ಕಂಥ ದೃಷ್ಟಿಯಿಂದ ನಾನು ಇದಕ್ಕೆ ಸಹಿ ಮಾಡಿದೆ. ಒಂದು ಮಿಲಿಯನ್ ಟನ್ ಕೋಲ್ ಇಂಪೋರ್ಟ್ ಮಾಡಿಕೊಳ್ಳುವುದಕ್ಕೆ ಅದರ ಮೇಲೆ ಇಂಪೋರ್ಟ್ ಡ್ಯೂಟಿ ಇದೆ. ನಾನು ಏನು ಮಾಡಿದೆ ಎಂದರೆ ಆ ಕಾಲದಲ್ಲಿ ಕುಮಾರಿ ಜಯಲಲಿತಾಜಿಯವರು, ತಮಿಳುನಾಡಿನ ಮುಖ್ಯ ಮಂತ್ರಿಗಳು, ಅವರೂ ಕೂಡ ಒಂದು ಮಿಲಿಯನ್ ಟನ್‌ಗೆ ಪ್ರಯತ್ನ ಪಟ್ಟರು. ಅವರದೆಲ್ಲಾ ಕೋಲ್ ಬೇಸ್ಡ್ ಪವರ್ ಜನರೇಶನ್, ತಮಿಳುನಾಡಿನವರು ಸೆಲ್ಫ್ ಸೆಫಿಷಿಯೆಂಟ್. ನಮ್ಮಲ್ಲಿ ಕೋಲ್ ಬೇಸ್ಡ್ ಮೇಲೆ ಇರತಕ್ಕಂಥದ್ದು ರಾಯಚೂರು ಥರ್ಮಲ್ ಪ್ಲಾಂಟ್ ಬಿಟ್ಟರೆ ನಮ್ಮದು ಬೇರೆ ಯಾವುದೂ ಇಲ್ಲ ಎನ್ನುವುದು ತಮಗೆಲ್ಲರಿಗೂ ಗೊತ್ತಿದೆ. ಅದಕ್ಕೆ ನಾವು ಏನು ಮಾಡಿದ್ದೆವು ಅಂದರೆ ಒಂದು ಮಿಲಿಯನ್ ಟನ್ coal to be imported from Australia ಏಕೆಂದರೆ ನಾವು ಇವೊತ್ತು ಯಾವುದೂ ಕಾಗದ, ಪೆನ್ನು, ನಾನು ಯಾವುದನ್ನು ಓದಬೇಕಾಗಿಲ್ಲ, ನನಗೆಲ್ಲಾ ಗೊತ್ತಿದೆ, ನಾನು ಸ್ಟಡಿ ಮಾಡಿ ಫೈಲ್ಸ್‌ಗಳನ್ನೆಲ್ಲಾ ಸರಿಸಿ ಸ್ಟಡಿ ಮಾಡಿರತಕ್ಕಂಥವನು. ಸ್ವಾಮಿ, ವಾಟಾಳ್‌ರವರೇ, ಇದನ್ನು ನಿಮಗೆ ಹೇಳುತ್ತಿರುವುದು, ಚೈನಾ ಮತ್ತು ಆಸ್ಟ್ರೇಲಿಯಾದವರು ಜಾಯಿಂಟ್ ವೆಂಚರ್ ಇರತಕ್ಕಂಥದ್ದು. ಎಂ.ಓ.ಯು. ಅನ್ನು ಸಹಿ ಮಾಡಿದ್ದೇವೆ ಒಂದು ಮಿಲಿಯನ್ ಟನ್‌ಗೆ ಇಂಪೋರ್ಟ್ ಡ್ಯೂಟಿ, ಭಾರತ ಸರ್ಕಾರದವರು, 50 ಪರ್ಸೆಂಟ್ ಕಟ್ ಮಾಡಿದರು. ನಾನು ಏನು ಮಾಡಿದೆ ಇನ್ನೂ 50 ಪರ್ಸೆಂಟ್ ನಮಗೆ ಬಿಟ್ಟು ಹಾಕಿಬಿಡಿ ಎಂದೆವು. ಏಕೆಂದರೆ ನಾವು ಕೋಲ್ ಬೇಸ್‌ನವರು. ನಾವು ಪವರ್ ಜನರೇಟ್ ಮಾಡದೇ ಭವಿಷ್ಯದಲ್ಲಿ ನಾವು ಪ್ರಗತಿ ಕಾಣುವುದಕ್ಕೆ ಕರ್ನಾಟಕ ರಾಜ್ಯದಲ್ಲಿ ಆಗುವುದಿಲ್ಲ. ಯಾವ ಪಕ್ಷ ಸರ್ಕಾರ ಬಂದುಕೊಂಡು ಹೋಗಲಿ ಎನ್ನತಕ್ಕಂಥ ವಿಚಾರವನ್ನು ನಾವು ಮಾಡಿದೆವು. ಸ್ವಾಮಿ, ಅದಕ್ಕಾಗಿ ಕದ್ರಾ ಎನ್ನತಕ್ಕಂಥ ಜಾಗ ಗೋಕರ್ಣದ ಹತ್ತಿರ ಇರುವುದು. ಅಲ್ಲಿ ಕಾಸ್ಟಿಕ್ ಸೋಡಾ ಫ್ಯಾಕ್ಟರಿ ಇದೆಯಲ್ಲಾ ಕಾರ್‌ವಾರ್ ಡಿಸ್ಟ್ರಿಕ್ಟ್‌ನಲ್ಲಿ. ಅದಕ್ಕೆ ಹಿಂದಿನ ಸರ್ಕಾರ ಕೊಟ್ಟಿರತಕ್ಕಂಥ ಒಂದೂವರೆ ಸಾವಿರ ಎಕರೆ, ಮಾನ್ಯ ವಾಟಾಳ್‌ರವರು ಸ್ವಲ್ಪ ಗಮನ ಕೊಡಬೇಕು, ಅಲ್ಲಿಗೆ ಕೋಲ್ ಹಡಗಿನಲ್ಲಿ ಬಂದರೆ ನೀವು ಅದನ್ನು ಎಲ್ಲಿಗೆ ಡಂಪ್ ಮಾಡುತ್ತೀರಿ? ಅದಕ್ಕೆ ಒಂದೂವರೆ ಸಾವಿರ ಎಕರೆ ಆ ಕಾಸ್ಟಿಕ್ ಸೋಡಾ ಫ್ಯಾಕ್ಟರಿಯಿಂದ ತೆಗೆದುಕೊಂಡು ಆ ಜಾಗವನ್ನು ಸೆಟ್ ಅಪಾರ್ಟ್ ಇದಕ್ಕಾಗಿ ಮಾಡಿದೆ. ನಾನೇ ಆರ್ಡರ್ ಬರೆದದ್ದು, ದಯವಿಟ್ಟು ಬೇಕಾದರೆ ತರಿಸಿ ನೋಡಿ. ಕ್ಯಾಬಿನೆಟ್‌ನಲ್ಲೂ ಕೂಡ ಚರ್ಚೆ ಮಾಡಿ. ನಾಳೆ ಕೋಲ್ ಇಲ್ಲಿ ಬಂದರೆ ಅದನ್ನು ಸ್ಟಾಕ್ ಮಾಡಬೇಕಾಗುತ್ತದೆ; ಆದ್ದರಿಂದ ಅದನ್ನು ಮಾಡಿದೆ. ಏಕೆಂದರೆ ನಾಳೆ ಎಂ.ಓ.ಯು. ಸಹಿ ಮಾಡುತ್ತೀರಿ, ಅಗ್ರಿಮೆಂಟ್ ಆಗುತ್ತದೆ, ವರ್ಕ್ ಸ್ಟಾರ್ಟ್ ಮಾಡುತ್ತಾರೆ. ನೀವು ಫ್ಯಾಕ್ಟರಿ ಜನರೇಟಿಂಗ್ ಸ್ಟೇಷನ್ ರೆಡಿಯಾಗುವ ಹೊತ್ತಿಗೆ ಕೋಲ್ ರೆಡಿಯಾಗಬೇಕು ಅಲ್ಲಿ. ಇಲ್ಲದಿದ್ದರೆ ಕೋಲ್‌ಗೆ

ಕಾಯುತ್ತಾ ಆಸ್ಟ್ರೇಲಿಯಾ ಕಡೆ ಮುಖ ಮಾಡುತ್ತಾ ಕುಳಿತುಕೊಳ್ಳುತ್ತೀರಾ? ಎಲ್ಲಿಂದ ತರುತ್ತೀರಿ? ಇದನ್ನೆಲ್ಲಾ ವಿಚಾರ ಮಾಡಿದರೆ ನಾನು ಹೇಳುತ್ತೇನೆ. ಕೋಲ್ ಬೇಸ್ಡ್ ಪವರ್ ಜನರೇಶನ್ ಮಾಡುವುದಕ್ಕಾಗಿ ಇಲ್ಲಿ ಯಾವುದೇ ರೀತಿಯ ಯೋಜನೆಗಳು ಯಾವುದು ಇಲ್ಲಿ ಕಾಣುತ್ತಾ ಇಲ್ಲ. ಈ ಬಡ್ಜೆಟ್‌ನಲ್ಲಿ ಬರಬೇಕು. ಮಾನ್ಯ ಸದಸ್ಯರಿಗೆ ಗೊತ್ತಾಗಬೇಕು. ಯಾವುದೇ ಪಕ್ಷದ ಸದಸ್ಯರಿರಲಿ ಅವರಿಗೆ ಗೊತ್ತಾಗಬೇಕು. ನಾಳೆ ದಿವಸ ಮಾತನಾಡುವುದಕ್ಕೆ ಅನುಕೂಲವಾಗುತ್ತದೆ. ಇದರ ಡೀಟೇಲ್ಸ್ ಬಗ್ಗೆ ನೀವು ಮಾತನಾಡುತ್ತಿಲ್ಲ. ಒಂದು ಮಿಲಿಯನ್ ಟನ್‌ಗೆ ಇಂಪೋರ್ಟ್ ಡ್ಯೂಟಿ ಬಗ್ಗೆ ಭಾರತ ಸರ್ಕಾರದವರಿಂದ ಎಕ್ಸಂಪ್‌ಷನ್ ನಾನು ತೆಗೆದುಕೊಂಡಿರುವುದರ ಬಗ್ಗೆಯೂ ನೀವು ಮಾತನಾಡುತ್ತಿಲ್ಲ. ನಾವು ಮುಂದೆ ಹೇಳುತ್ತೇವೆ, ಮುಂದೆ ಹೇಳುತ್ತೇವೆ ಎನ್ನತಕ್ಕಂಥದ್ದು ಇಲ್ಲಿ ಬರುವುದಿಲ್ಲ. ನಾನು ಇದರ ಬಗ್ಗೆ ಸ್ಪಷ್ಟಪಡಿಸುತ್ತೇನೆ. ನಾಳೆ ನೀವು ಅಗ್ರಿಮೆಂಟ್ ಮಾಡಿಕೊಂಡ ಮೇಲೆ ಫಾರೀನ್ ಕಂಟ್ರೀಸ್‌ನವರು ಏನು ಹಣವನ್ನು ಇನ್‌ವೆಸ್ಟ್ ಮಾಡುತ್ತಾರೆ, ಆ ಹಣ ತಕ್ಷಣ ಬರಲು ಎಲ್ಲಾ ಕಂಡೀಷನ್‌ಗಳನ್ನು ಹಾಕಿಕೊಂಡಿರುತ್ತಾರೆ. ಟರ್ಮ್ಸ್ ಅಂಡ್ ಕಂಡೀಷನ್‌ನಲ್ಲಿ ಬಹಳ ಕೇರ್‌ಫುಲ್ ಆಗಿ ಎಲ್ಲಾವನ್ನು ಸೇರಿಸಿರುತ್ತಾರೆ. ಏಕೆಂದರೆ ಬಹಳ ಒಳ್ಳೆಯವರ ಹಾಗೆ ಯಾರು ಇರುತ್ತಾರೋ ಅವರ ಹತ್ತಿರ ಬಹಳ ಕೇರ್‌ಫುಲ್ ಆಗಿ ಇರಬೇಕು. ಈ ಅಮೇರಿಕ, ಜಪಾನ್ ಈ ದೇಶಗಳೆಲ್ಲಾ ಇಂಡಸ್ಟ್ರೀಯಲ್ ಬೇಸ್ಡ್ ಕಂಟ್ರೀಸ್. ಇವರ ಹತ್ತಿರ ಹಣ ಯಥೇಚ್ಛವಾಗಿದೆ. ನೀವು ಎಂ.ಓ.ಯು.ಸಹಿ ಮಾಡಬೇಕಾದರೆ they will get their bankers and in their presence, they will only put their signatures.

ಅಲ್ಲಿಯವರೆಗೂ ಒಂದು ಸಹಿಯನ್ನೂ ಕೂಡ ಹಾಕುವುದಿಲ್ಲ ಅವರು. ಅಷ್ಟು ಕೇರ್‌ಫುಲ್ ಆಗಿ ಅವರಿರುತ್ತಾರೆ. ಬ್ಯಾಂಕರ್ಸ್ ಕೂಡ ಪಾರ್ಟಿ ಮಾಡಿದೆ ಓಡಿ ಹೋಗುತ್ತಾರೆ. ಬ್ಯಾಂಕಿನ ಹಣ ತೆಗೆದುಕೊಂಡು ಇಲ್ಲಿ ಬಂದು ಪವರ್ ಜನರೇಶನ್ ಬಂದರೆ ಏನಾಗುತ್ತದೆ ಎಂಬುದನ್ನು ಮಾನ್ಯ ಸಭಾಧ್ಯಕ್ಷರೇ ಗಮನಿಸಬೇಕು. ಬಡ್ಡಿ ಏನು ಅವರ ತಲೆ ಮೇಲೆ ಬೀಳಲು ಅವರೇನೂ ಸುಮ್ಮನೆ ಕುಳಿತುಕೊಳ್ಳುವುದಿಲ್ಲ. ಆದಕ್ಕಾಗಿ ಟರ್ಮ್ಸ್ ಅಂಡ್ ಕಂಡೀಷನ್‌ನಲ್ಲಿ ಎಲ್ಲವನ್ನು ಸೇರಿಸಿ ಇಟ್ಟಿರುತ್ತಾರೆ; ಬಹಳ ಕೇರ್‌ಫುಲ್ ಆಗಿ ನೀವು ಇರಬೇಕು. ಭಾರತ ಸರ್ಕಾರದವರು ಲಿಬರಲೈಸ್ ಪಾಲಿಸಿ ಎನ್ನತಕ್ಕದ್ದನ್ನು ಮಾಡಿದರೂ ಕೂಡ ಭಾರತ ಸರ್ಕಾರದ ಬಗ್ಗೆಯೂ ಕೂಡ ನಾನು ಹೇಳಿದ್ದೇನೆ. ಇದನ್ನು ಅವರು ವಿಚಾರ ಮಾಡುವುದು ಬಹಳ ಕಷ್ಟವಾಗುತ್ತದೆ. You will have to take up all these things with the Government of India. ಕೌಂಟರ್ ಗ್ಯಾರಂಟಿ ಕೊಡತಕ್ಕಂಥ ವಿಚಾರದಲ್ಲಿ ಕೇಂದ್ರ ಸರ್ಕಾರ ಒಪ್ಪಬೇಕು. I have got my own doubt to get all these things cleared by the Government of India. ಏಕೆಂದರೆ ಕೋಜೆಂಟ್ರಿಕ್ಸ್ ಕಂಪನಿ ಇರಬಹುದು, ಮತ್ತೊಂದು

ಇರಬಹುದು they will put lot of conditions. ನಾವು ಈ ಪವರ್ ಸೇಲ್ ಅಗ್ರಿಮೆಂಟ್ ಆಗತಕ್ಕಂಥ ಕಾಲದಲ್ಲಿ ಈ ಕೌಂಟರ್ ಗ್ಯಾರಂಟಿ ಕೊಡದೇ ಇದ್ದರೆ ಅವರು ಒಂದಕ್ಕೂ ಕೂಡ ಮಾಡುವುದಿಲ್ಲ. ಬಹಳ ಹುಷಾರಾಗಿರಿ. ನೀವು ಯಾವುದೋ ಸಿಕ್ಕಿ ಹಾಕಿಕೊಂಡು, ನಮ್ಮ ದೇಶಕ್ಕೆ ಏನೋ ಚಾಮನೂರು ತೋರಣಗಲ್ ನೆಕ್ಸ್ಟ್ ಸ್ಟೇಷನ್ ರಾಯಚೂರಿಗೆ ಬರುತ್ತದೆ ಎಂದು ಕೋಲ್ ಬೇಸ್ಡ್‌ಗೆ ನಾವು ಹೋಗಿ ಬಿಟ್ಟರೆ ನಾಳೆ ಕೋಲ್ ಇಲ್ಲ ಏನೂ ಇಲ್ಲ ಎಂಬ ಪರಿಸ್ಥಿಗೆ ಸಿಕ್ಕಿ ಹಾಕಿಕೊಂಡು ಬಿಡುತ್ತೇವೆ. I am just hurling a suggestion for your consideration. It is left to your choice.

ಸರ್ಕಾರದವರು ಇದನ್ನು ಏನು ಮಾಡುತ್ತೀರಿ ಅದನ್ನು ಮಾಡಿಕೊಳ್ಳಿ. ನನ್ನ ಕಾಲದಲ್ಲಿ ಈ ಪವರ್ ಪ್ರಾಜೆಕ್ಟ್ ವಿಚಾರದಲ್ಲಿ ಏನು ಮಾಡಿದೆ ಎಂಬುದನ್ನು ಹೇಳಿದ್ದೇನೆ. ಅದಕ್ಕೆಲ್ಲಾ ಹೆಚ್ಚಿನ ಗಮನವನ್ನು ಕೊಡಿ. 1990-91ರಲ್ಲಿ ಪ್ಲಾನ್ ಇನ್‌ವೆಸ್ಟ್‌ಮೆಂಟ್ ಇನ್ ಪವರ್ 212 ಕೋಟಿ ರೂಪಾಯಿಗಳು.

ಮಾನ್ಯ ಸಭಾಧ್ಯಕ್ಷರೇ, 1990-91 ಅಂದರೆ ಅದು ನನ್ನ ಕಾಲದ ಪ್ರಾರಂಭ, 1991 92 ನಾನೇ ಅಧಿಕಾರದಲ್ಲಿ ಇದ್ದಂಥ ಕಾಲ. ಆಗ ಕಂಪ್ಲೀಟ್ ಆಗಿ ಕೆ.ಪಿ.ಸಿ.ಡೆವಲಪ್ ಮಾಡಿದ್ದೇನೆ. ದಯವಿಟ್ಟು ಈ ಅಂಕಿ ಸಂಖ್ಯೆಗೆ ಮುಖಾಂತರ ನೋಡಿ. 431.ಕೋಟಿ ರೂಪಾಯಿಗಳು. ಹಿಂದಿನ ಸರ್ಕಾರದ ಬಗ್ಗೆ ನೀವು ಕಾಮೆಂಟ್ ಮಾಡುತ್ತೀರಿ. ಪ್ಲಾನ್ ಇನ್‌ವೆಸ್ಟ್‌ಮೆಂಟನ್ನು ನಾನು ಡಬಲ್ ಮಾಡಿದ್ದೆ. Please go through the figures.

ನನ್ನ ಕಾಲದಲ್ಲಿ this was the figure proposed by me before the Planning Commission

546 ಕೋಟಿ ರೂಪಾಯಿಗಳನ್ನು ಮಾಡಿದ್ದೇನೆ. The same thing was accepted after Mr. Moily became the Chief Minister. There has been a tremendous growth in the matter of investment in the power generation. ಇದು ಸಾಕಾಗುವುದಿಲ್ಲ. how to meet the total demand of the State of 7000 Mega Watts power?

ಇದಕ್ಕೋಸ್ಕರ ಈ ವಿಚಾರವನ್ನು ಇಟ್ಟುಕೊಂಡು ಹೋಗಬೇಕು ಎಂದು ನಾನು.

ಹೇಳುತ್ತೇನೆ. 1985 ರಿಂದ 1990ರವರೆಗೆ ನಿಮ್ಮದೇ ಕಾಲ. ಅದರ ಅಂಕಿ ಸಂಖ್ಯೆಗಳನ್ನು ಕೊಡುತ್ತೇನೆ. ನೀವು ಪವರ್ ಜನರೇಶನ್‌ಗೆ ಎಷ್ಟು ದುಡ್ಡು ಇಟ್ಟಿದ್ದೀರಿ ಎಂದು ನಾನು ಹೇಳುತ್ತೇನೆ. ಏಳು ವರ್ಷಗಳಲ್ಲಿ ನೀವು ಇಟ್ಟಿರತಕ್ಕಂಥದ್ದು ಕೇವಲ 177 ಕೋಟಿ ರೂಪಾಯಿಗಳನ್ನು ಮಾತ್ರ. 1992-97 ರವರೆಗೆ 743 ಕೋಟಿ ರೂಪಾಯಿಗಳು. ಈ ಅವಧಿಯಲ್ಲಿ ಪರ್ಸೆಂಟೇಜ್ ಯಾವ ರೀತಿ ಎಷ್ಟು ಆಗುತ್ತದೆ ಎಂಬುದನ್ನು ನೀವೇ ತಿಳಿದುಕೊಳ್ಳಬೇಕು.

ಇನ್ನು ರೂರಲ್ ಎಲೆಕ್ಟ್ರಿಫಿಕೇಶನ್. ಪಂಪ್ ಸೆಟ್ಟುಗಳಿಗೆ ಎನರ್‌ಜೈಸ್ ಮಾಡುವುದಕ್ಕೆ ಮೂರು ಕಂಬಗಳವರೆಗೆ ಮಾತ್ರ ಆಗುವುದು, ಮುಂದೆ ಆಗುವುದಿಲ್ಲ ಎಂದು ಇತ್ತು. ನನ್ನ ಕಾಲದಲ್ಲಿ ನಾನು ನಮ್ಮ ಕಾರ್ಯದರ್ಶಿಯವರಿಂದ ಎಲ್ಲಾ ಡೀಟೇಲ್ಸ್ ತೆಗೆದುಕೊಂಡು ಕೆ.ಇ.ಬಿ.ಯವರ ಜೊತೆ ಡಿಸ್‌ಕಸ್ ಮಾಡಿ ಮೂರು ಕಂಬಗಳವರೆಗೆ ಎನರ್‌ಜೈಸ್ ಮಾಡುವ ಕಾನೂನು ಇದ್ದುದ್ದನ್ನು ನಾನು ತೆಗೆದು ಹಾಕಿದೆ. I went beyond 5 poles, I went upto 8 poles, if I could remember correctly. ಏಕೆಂದರೆ ರೈತರು ಪಿ.ಎಲ್.ಡಿ. ಬ್ಯಾಂಕಿನಿಂದ ಸಾಲ ತೆಗೆದುಕೊಂಡಿರುತ್ತಾರೆ. ಬೋರ್‌ವೆಲ್ ಹಾಕಿಸುತ್ತಾರೆ, ಪಂಪ್‌ಸೆಟ್ ಹಾಕಿಸುತ್ತಾರೆ ನಾವು ಕನೆಕ್ಷನ್ ಕೊಡುವುದಿಲ್ಲ ಎಂದರೆ ಅವರಿಗೆ ತೊಂದರೆಯಾಗುತ್ತದೆ. ನೀವು ಮತ್ತೆ ತಪ್ಪು ಮಾಡಿದ ಹಾಗೆ ಆಗುತ್ತದೆ. ಇದು ಕರ್ನಾಟಕದಲ್ಲಿ ನೀರಾವರಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸುವುದಕ್ಕೆ ಸಂಬಂಧಪಟ್ಟಂತೆ, ನಿಮ್ಮ ಕಾಲದಲ್ಲಿ 83-84 ರಲ್ಲಿ ಮೂರು ಲಕ್ಷದ ತೊಂಬತ್ತಾರು ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸಿದ್ದೀರಿ. 84-85ರಲ್ಲಿ ನಾಲ್ಕು ಲಕ್ಷ, 85-86 ರಲ್ಲಿ ಐದು ಲಕ್ಷ ಹೀಗೆ ಹೆಚ್ಚಿಸುತ್ತಾ 89-90ರಲ್ಲಿ ಆರು ಲಕ್ಷಕ್ಕೆ ಬಂದಿದ್ದೀರಿ. ನಾನು ಅಧಿಕಾರಕ್ಕೆ ಬಂದ ಮೇಲೆ 90-91ರಲ್ಲಿ ಅಂದರೆ ಏಳು ಲಕ್ಷ ನಲವತ್ತು ಮೂರು ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೇವೆ. 91-92ರಲ್ಲಿ ಅಂದರೆ ನನ್ನ ಎರಡನೆ ವರ್ಷದ ಅವಧಿಯಲ್ಲಿ ಎಂಟು ಲಕ್ಷದ ಮೂರು ಸಾವಿರ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿ ಒದಗಿಸಿದ್ದೇವೆ. ಮೂರು ಕಂಬಗಳು ಎಂದು ಇದ್ದರೆ ಆಧರ ಮೇಲೆ ವಿದ್ಯುಚ್ಛಕ್ತಿ ಒದಗಿಸುತ್ತಿರಲಿಲ್ಲ. ನನ್ನ ಕಾಲದಲ್ಲಿ ಮೂರು ಕಂಬಗಳಿಗಿಂತ ಹೆಚ್ಚು 4, 5, 8 ಕಂಬಗಳು ಬರುವಲ್ಲಿ ವಿದ್ಯುಚ್ಛಕ್ತಿ ಒದಗಿಸುವ ಪ್ರಯತ್ನ ಮಾಡಿದ್ದೇವೆ. ಆ ನಿರ್ಬಂಧ ಹಾಕಬಾರದು ಎಂದು ತೆಗೆದು ಹಾಕಿ ಮೇಲೆ ಇಷ್ಟು ಪ್ರಮಾಣದಲ್ಲಿ ಪಂಪುಸೆಟ್ಟುಗಳಿಗೆ ವಿದ್ಯುಚ್ಛಕ್ತಿಯನ್ನು ಒದಗಿಸುವುದಕ್ಕೆ ಅನುಕೂಲವಾಯಿತು. ರೈತರು ತೆಗೆದುಕೊಂಡ ಸಾಲಕ್ಕೆ ಬಡ್ಡಿ ಕೊಡುವುದಕ್ಕೆ ಆಗುವುದಿಲ್ಲ ಎನ್ನುವ ಒಂದೇ ಒಂದು ಕಾರಣಕ್ಕೆ ಆ ನಿರ್ಬಂಧವನ್ನು ತೆಗೆದು ಹಾಕಿದೆ. ನೀವು ನನ್ನ ಮೇಲೆ ಟೀಕೆ ಮಾಡುತ್ತೀರಿ, ನಿಮ್ಮ ಕಾಲದ್ದು ಮರೆತು ಬಿಟ್ಟೀರಾ? ಬಜೆಟ್ ಭಾಷಣದಲ್ಲಿ ಪ್ರಿಂಟ್ ಮಾಡಿಸಿ ಹಂಚಿಬಿಟ್ಟಿರಿ. ನಿಮ್ಮ ಗ್ರಾಮೀಣ ವಿದ್ಯುದ್ದೀಕರಣ ಇರಬಹುದು, ಬೀದಿ ದೀಪ ಕೊಡುವ

ವ್ಯವಸ್ಥೆ ಇರಬಹುದು, ಮಜರೆ ಗ್ರಾಮಗಳಿರಬಹುದು, ಲಂಬಾಣಿ ತಾಂಡಗಳಿರಬಹುದು, ಹರಿಜನ ಕೇರಿಗಳಿರಬಹುದು, ಅವೆಲ್ಲಕ್ಕೆ ವಿದ್ಯುದ್ದೀಕರಣ ಮಾಡುವುದಕ್ಕೆ ನಾನು ಒಂದು ಹೊಸ ಪ್ಲಾನನ್ನೆ ತಯಾರು ಮಾಡಿಸಿದ್ದೆ. ಒಂದು ಮಜರೇ ಗ್ರಾಮವನ್ನು ಒಂದು ಯುನಿಟ್ ಆಗಿ ತೆಗೆದುಕೊಳ್ಳಬೇಕು. ರಸ್ತೆ ಇರಬಹುದು, ಕುಡಿಯುವ ನೀರಿರಬಹುದು, ಬೀದಿ ದೀಪಗಳಿರಬಹುದು, ಶಾಲೆ, ಹೆಲ್ತ್ ಸರ್ವೀಸ್ ಹೀಗೆ ಆ ಹಳ್ಳಿ ಅಭಿವೃದ್ಧಿ ಹೊಂದಿದ ಹಳ್ಳಿ ಎಂದು ಕರೆಯುವುದಕ್ಕೆ ಏನೇನೂ ಸೌಲತ್ತು ಬೇಕೋ ಅವೆಲ್ಲಾ ಇರುವಂತೆ ಒಂದು ಹೊಸದಾದ ಪ್ಲಾನನ್ನು ನಾನು ತಯಾರು ಮಾಡಿದ್ದೆ. ಈ ಹೊಸ ಯೋಜನೆಯನ್ನು ನನ್ನ ಮೂರನೇ ಬಜೆಟ್‌ನಲ್ಲಿ ಮಾಡಬೇಕಾಗಿತ್ತು. ಈ ಅಂಶವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಸೋಷಿಯಲ್ ಸರ್ವೀಸ್ ಇತ್ಯಾದಿ ವಿಚಾರಗಳಿಗೆ ನಾನು ಈಗ ಹೋಗುವುದಿಲ್ಲ. ಇಷ್ಟೆಲ್ಲಾ ವಿಚಾರ ಹೇಳಿದ ಮೇಲೆ ಪ್ಲಾನಿಂಗ್ ಕಮೀಷನ್ ಅಪ್ರೂ ಮಾಡಿರತಕ್ಕ ವಿಚಾರಗಳು ಮತ್ತು ನಾನು ಹೇಳಿರತಕ್ಕಂತಹ ವಿಚಾರಗಳ ಆಧಾರದ ಮೇಲೆ ಒಂದೇ ಒಂದು ವಿಷಯವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಚ್ಛೆಪಡುತ್ತೇನೆ. ಏನೆಂದರೆ, ತಾವು ಬಜೆಟ್ ತಯಾರು ಮಾಡತಕ್ಕಂಥ ಕಾಲದಲ್ಲಿ ಹಲವಾರು ವಿಷಯಗಳನ್ನು ತಾವು ಕೈಬಿಟ್ಟಿದ್ದೀರಿ ಎನ್ನು ಮಾತನ್ನು ಹೇಳುತ್ತೇನೆ. ನಿಮ್ಮ ಬಜೆಟ್ ಪುಸ್ತಕದ ಗಾತ್ರವನ್ನು ನೋಡಿ. ಹಿಂದಿನ ಪುಸ್ತಕಗಳ ಗಾತ್ರವನ್ನು ನೋಡಿ. ನಿಮ್ಮ ಬಜೆಟ್ ಪುಸ್ತಕದಲ್ಲಿ ಅರ್ಧದಷ್ಟು ನಮ್ಮ ಬಜೆಟ್ ಪುಸ್ತಕಗಳಿದ್ದವು. ಆದರೆ, ಅದರಲ್ಲಿ ಇದ್ದಂತಹ ವಿಷಯಗಳು ಮುಖ್ಯವೇ ವಿನಹ ಮತ್ತೇನೂ ಅಲ್ಲ. ನಿಮ್ಮ ಬಜೆಟ್ ಪುಸ್ತಕದ ಸೈಜು ಏತಕ್ಕೆ ದೊಡ್ಡದಾಗಿದೆ ಎಂದರೆ ನೀವು ಟ್ಯಾಕ್ಸ್ ಹಾಕಿದ್ದೀರಲ್ಲಾ ಅದಕ್ಕೆ. ಗೋಧಿ ಹಿಟ್ಟು, ರವೆ, ಬಸ್ಸುಗಳ ಬಿಡಿ ಭಾಗಗಳ ಮೇಲೆ ತೆರಿಗೆ ಹಾಕಿದ್ದೀರಿ; ಅದಕ್ಕಾಗಿ ಜಾಸ್ತಿಯಾಗಿದೆ. ಇವತ್ತು ಸೌತ್ ಕೆನರಾ ಮುಂತಾದ ಕಡೆ ಬಸ್‌ನವರು ಸ್ಟೈಕ್ ಮಾಡುತ್ತಾ ಕುಳಿತಿದ್ದಾರೆ. ಅದರ ಬಗ್ಗೆ ಪ್ರತ್ಯೇಕವಾಗಿ ಹೇಳಿಕೆ ಕೊಡುತ್ತೇವೆಂದು ಹೇಳುತ್ತಿದ್ದೀರಿ, ಅದನ್ನು ಸರಿಪಡಿಸುವುದಕ್ಕೆ ಪ್ರಯತ್ನ ಮಾಡಿ. ಏತಕ್ಕೆಂದರೆ ಶಾಲಾ ಕಾಲೇಜುಗಳಿಗೆ ಪರೀಕ್ಷೆಗಳು ನಡೆಯುತ್ತಿವೆ, ಮಕ್ಕಳು ಶಾಲೆಗೆ ಹೋಗುತ್ತಿದ್ದಾರೆ. ಟ್ಯಾಕ್ಸ್ ಹಾಕುವುದಕ್ಕೆ ನಿಮಗೆ ಅಧಿಕಾರವಿಲ್ಲ ಎನ್ನುವ ಮಾತನ್ನು ನಾನು ಹೇಳುತ್ತಿಲ್ಲ. ಆದರೆ ಅಧಿಕಾರ ಇದೆ ಎಂದು ನಿಮ್ಮ ಮನಸ್ಸೊ ಇಚ್ಛೆ ಟ್ಯಾಕ್ಸ್ ಹಾಕುವುದಕ್ಕೆ ಬರುವುದಿಲ್ಲ. ನಿಮಗೆ ಆ ಹಕ್ಕು ಬರುವುದಿಲ್ಲ. ನಮ್ಮ ಕಾಲದಲ್ಲಿ ಏತಕ್ಕೆ ನಾವು ಟ್ಯಾಕ್ಸ್ ಜಾಸ್ತಿ ಮಾಡಲಿಲ್ಲ. ಈ ಒಂದು ದೃಷ್ಟಿಯಿಂದ ಈ ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇನ್ನು ರಾಜ್ಯದ ಹಣಕಾಸಿನ ಪರಿಸ್ಥಿತಿ ವಿಚಾರದಲ್ಲಿ ತಾವು ಮಾತನಾಡಿದ್ದೀರಿ. ನಿಜವಾಗಿ ಹೇಳಬೇಕೆಂದರೆ, ಒಂದು ಹೊಸ ಸರ್ಕಾರ ಹೊಸದಾಗಿ ಬಂದಾಗ ಹಿಂದಿನ ಸರ್ಕಾರದ ಬಗ್ಗೆ ಬೈಯುವುದು. ನಿಮಗೆ ಅಂಕಿ ಅಂಶಗಳ ಸಹಿತ ಸಕಾರಣವಿದ್ದರೆ ನೀವು ಏನಾದರೂ ಹೇಳಿ, ಅದಕ್ಕೆ ನನ್ನ ಅಡ್ಡಿಯಿಲ್ಲ. ಯಾರಾದರೂ ಹಾಳು ಮಾಡಿದ್ದರೆ, ದುರಾಡಳಿತ ಮಾಡಿದ್ದರೆ, ಸಂಪನ್ಮೂಲ ಗಳಿಕೆ ಮಾಡುವ ವಿಚಾರದಲ್ಲಿ ಏನಾದರೂ ತಪ್ಪು ಮಾಡಿದ್ದರೆ ಟೀಕೆ ಮಾಡಿ. f they have gone astray, then you have

got a right to comment on such administration. ಆಡಳಿತದ ಬಗ್ಗೆ ನೀವು ಬೇಕಾದಷ್ಟು ಹೇಳಬಹುದು. ನಾನು ಆ ವಿಚಾರದಲ್ಲಿ ಅಡ್ಡಿ ಬರುವುದಿಲ್ಲ. ಆದರೆ ಒಂದು ಮಾತನ್ನು ಹೇಳುವುದಕ್ಕೆ ಇಷ್ಟಪಡುತ್ತೇನೆ, ನನ್ನ ಆಡಳಿತದ ಬಗ್ಗೆ ತಾವು ಹೇಳಿದ್ದೀರಿ, ನನ್ನ ಕಾಲದಲ್ಲಿ ಒಂದು ರೂಪಾಯಿಯನ್ನೂ ಕೂಡ ಓ.ಡಿ. ಎಂದು ರಿಸರ್ವ್ ಬ್ಯಾಂಕಿನಿಂದ ನಾನು ತಂದಿಲ್ಲ. ನೀವು ಬೇಕಾದರೆ ಕಡತಗಳನ್ನು ತೆಗೆಸಿ ನೋಡಿ. ಶ್ರೀ ವಿ.ಪಿ.ಸಿಂಗ್‌ರವರು ಪ್ರಧಾನಿಗಳಾಗಿದ್ದರು. ಓ.ಡಿ. ಕೊಡತಕ್ಕಂತಹ ವಿಚಾರದ ಬಗ್ಗೆ ಸಾಕಷ್ಟು ಚರ್ಚೆಯಾಯಿತು. ಶ್ರೀಮಾನ್ ವಿರೇಂದ್ರ ಪಾಟೀಲರು ಮುಖ್ಯ ಮಂತ್ರಿಗಳಾಗಿದ್ದಂಥ ಕಾಲದಲ್ಲಿ ಇಲ್ಲಿ ಬೇಕಾದಷ್ಟು ಚರ್ಚೆಯಾಯಿತು. I decided not to take even one Rupee from the Reserve Bank of India. ನಾನು ಹಣಕಾಸಿನ ಇಲಾಖೆಯನ್ನು ಹೊಂದಿದ್ದೆ, ಹಣಕಾಸು ಸಚಿವನಾಗಿ ಆದೇಶ ಕೊಟ್ಟಿದ್ದೆ; ಯಾವುದೇ ಪ್ರಪೋಸಲ್‌ಗೆ ಕೂಡ ಓ.ಡಿ. ಬಗ್ಗೆ ಆಗಲಿ, ಲೋನ್ ತೆಗೆದುಕೊಳ್ಳುವುದಕ್ಕೆ ಆಗಲಿ ನಾನು ಅವಕಾಶ ಕೊಡಲಿಲ್ಲ. ಸಚಿವ ಸಂಪುಟದ ಸಭೆಯಲ್ಲಿಯೂ ಕೂಡ ಈ ಬಗ್ಗೆ ಸವಿಸ್ತಾರವಾಗಿ ಹೇಳಿದ್ದೇನೆ. ನನ್ನ ಕಾಲದಲ್ಲಿ ನಾನು ಏನಾದರೂ ಓ.ಡಿ.ತೆಗೆದುಕೊಂಡಿದ್ದರೆ, ತಮ್ಮ ಹತ್ತಿರ ದಾಖಲೆ ಇದ್ದರೆ ದಯಮಾಡಿ ಹೇಳಿ. ನೀವು ಹೇಳಿದ ಉತ್ತರವನ್ನು ನಾನು ಒಪ್ಪುತ್ತೇನೆ. After I left, my successor has taken O.D. from the Reserve Bank of India, ನಾನು ಅಧಿಕಾರ ಬಿಟ್ಟು ಮೇಲೆ ಅವರು ತೆಗೆದುಕೊಂಡಿರತಕ್ಕಂತಹದು ಇದೆ. ನನ್ನ ಹತ್ತಿರ ಬೇಕಾದಷ್ಟು ದಾಖಲೆಗಳಿವೆ. ವಿ.ಪಿ.ಸಿಂಗ್‌ರವರು ಇದ್ದಂತಹ ಕಾಲದಲ್ಲಿ ಏನು ಮಾಡಿದರೆಂದರೆ ಓಡಿಗೀಡಿ ಎಲ್ಲಾ ಹೋಯಿತು. ಆ ಪದ್ಧತಿಯನ್ನು ಬದಲಾವಣೆ ಮಾಡಿದರು. ಸಿಸ್ಟಂ ಚೇಂಜ್ ಮಾಡಿ, ಒಂದು ಫಂಡ್ ಎಂದು ಮಾಡಿಕೊಂಡು, ಹಣ ತೆಗೆದುಕೊಂಡರೆ ತಕ್ಷಣ ಇದನ್ನು ವಾಪಸ್ ಮಾಡಬೇಕು, ಅದಕ್ಕಾಗಿ ಪಾರ್ಟನರ್, ಮೂರನೆ ಎರಡು ಭಾಗ ರಾಜ್ಯ ಸರ್ಕಾರದ್ದು, ಮೂರನೇ ಒಂದು ಭಾಗ ಕೇಂದ್ರ ಸರ್ಕಾರದ್ದು ಅದನ್ನೇನೋ ನಾನು ಮರೆತಿದ್ದೇನೆ ಅದನ್ನು ಲೆಕ್ಕಾಚಾರ ಮಾಡಿಕೊಂಡು ಹೋಗಬೇಕು ಎನ್ನತಕ್ಕಂತಹ ವಿಚಾರವನ್ನು ವೀರೇಂದ್ರ ಪಾಟೀಲ್‌ರವರು ಮುಖ್ಯ ಮಂತ್ರಿಯಾಗಿದ್ದಂಥ ಕಾಲದಲ್ಲಿ ಚರ್ಚೆಯಾಗಿ ಒಪ್ಪಿಕೊಳ್ಳತಕ್ಕಂತಹ ಹಂತಕ್ಕೂ ಕೂಡ ಬಂದಿತ್ತು. ಅದನ್ನು ನಾನು ಒಪ್ಪಿಕೊಂಡೆ. ನಾವು ಓವರ್‌ಡ್ರಾಫ್ಟ್ ತೆಗೆದುಕೊಳ್ಳದೇ ಇರುವುದಕ್ಕೆ ಕಾರಣವೇನೆಂದರೆ, ನಮ್ಮ ರಿಸೋರ್ಸ್ ಮೊಬಿಲೈಸೇಷನ್ ಅನ್ನು ಟಾಪ್‌ನಲ್ಲಿ ಇಟ್ಟಿರುವುದೇ ಕಾರಣ. ಅದಕ್ಕಾಗಿ ಪ್ಲಾನಿಂಗ್ ಕಮೀಷನ್‌ರವರು ನಮಗೆ ಮೆಚ್ಚುಗೆ ಪತ್ರವನ್ನು ಬರೆದಿದ್ದಾರೆ. ಅದರ ಬಗ್ಗೆ ಬೆಳಿಗ್ಗೆ ಹೇಳಿದ್ದೇನೆ. ಪದೇ ಪದೇ ಹೊಗಳಿಕೆ ಮಾಡತಕ್ಕಂತಹದ್ದು ನನಗೆ ಅವಶ್ಯಕತೆ ಇಲ್ಲ. ನನ್ನ ಕಾಲದಲ್ಲಿ ಹೊರಡಿಸಿರುವ ಸರ್ಕಾರ ಆಜ್ಞೆಗಳನ್ನು ತೆಗೆದು ನೋಡಿ. ನೀವು ಇರಿಗೇಷನ್‌ಗೆ ಹಣ ಕೊಟ್ಟಿರಿ; ಆದರೆ ಕೆಲಸ ಮಾಡಬೇಡಿ ಎಂದು ನಿಲ್ಲಿಸಿದ್ದೀರಿ. ಸ್ವಾಮಿ, ಮೊನ್ನೆ ಕೂಡ ನಾನು ಒಂದು ಪತ್ರಿಕೆಯಲ್ಲಿ

ಓದಿದೆ, ಸರ್ಕಾರದ ವತಿಯಿಂದ ದೇವೇಗೌಡರು ಪ್ರಶ್ನೆಗೆ ಉತ್ತರ ಕೊಟ್ಟಿದ್ದರು ಎಂದು ಕಾಣುತ್ತದೆ. ಇದಕ್ಕಿಂತ ಮುಂಚೆ ತಾವು ಕೂಡ ಹೇಳಿದ್ದೀರೆಂದು ಕಾಣುತ್ತದೆ. ಅದೇನೆಂದರೆ, ಕರ್ನಾಟಕ.ರಾಜ್ಯದಲ್ಲಿ ಯಾವುದೇ ಪೀಸ್ ವರ್ಕ್ ತೆಗೆದುಕೊಳ್ಳಬಾರದು. ಅಲ್ಲಿ ಪೀಸೂ ಉಳಿಯುವುದಿಲ್ಲ ಫ್ರೆಷ್ಷೂ ಉಳಿಯುವುದಿಲ್ಲ. ಏಕೆ ಇದನ್ನು ಮಾಡುವುದಕ್ಕೆ ಹೋಗುತ್ತೀರಿ? ಪೀಸ್ ವರ್ಕ್, ನಿಮ್ಮ ಕಾಲದಲ್ಲಿತ್ತು, ನಮ್ಮ ಕಾಲದಲ್ಲಿತ್ತು, ಮುಂದೆ ಬರತಕ್ಕಂತಹವರ ಕಾಲದಲ್ಲಿಯೂ ಇರುತ್ತದೆ. ಪೀಸ್ ವರ್ಕ್ ಇಲ್ಲದೆ ಇದ್ದರೆ You can not augment the work. ನಾವು ನಿರೀಕ್ಷಿಸಿದ ಪ್ರಮಾಣದಲ್ಲಿ ಕೆಲಸ ಮಾಡುವುದಕ್ಕೆ ಆಗುವುದಿಲ್ಲ. ನಾನು ಭೀಮರಾಯನ ಗುಡಿಗೆ ಹೋದಾಗಲೂ ಕೂಡ ಇದೆ ಸಮಸ್ಯೆ ಇತ್ತು. ಸಂಪೂರ್ಣವಾಗಿ ನಾನು ವೆರಿಫೈ ಮಾಡಿದಾಗ, ನಾವು ಈ ರೀತಿಯಾಗಿ ಹೋದರೆ ಬಚಾವತ್ ಅವಾರ್ಡ್ ಪ್ರಕಾರ ನಾವು ನೀರಾವರಿ ಯೋಜನೆಗಳನ್ನು ಮುಗಿಸುವುದಕ್ಕೆ ಆಗುತ್ತದೆಯೇ? ಕಾವೇರಿ ಬೇಸಿನಲ್ಲಿ ರತಕ್ಕಂತಹ ನಮ್ಮ ಶೇರಿನ ನೀರನ್ನು ಯಾವ ರೀತಿ ಬಳಸಿಕೊಳ್ಳುವುದು ಹಾಗೆಯೇ ಹಾರಂಗಿ, ಹೇಮಾವತಿ ಈ ಯೋಜನೆಗಳನ್ನು ಯಾವ ರೀತಿಯಾಗಿ ಮುಗಿಸಬೇಕು ಎನ್ನುವುದು ನನಗೆ ಅರ್ಥವಾಗದ ವಿಚಾರ. ಪೀಸ್ ವರ್ಕ್ ಕೊಡಬೇಕಾದರೆ ರೂಲ್ಸ್ ಫ್ರೇಮ್ ಮಾಡಿಕೊಳ್ಳಿ. ಪೀಸ್ ವರ್ಕ್ ಕೊಡಿ, ಪೀಸ್ ವರ್ಕ್ ಯಾವ ದೇಶದಲ್ಲಿ, ಯಾವ ರಾಜ್ಯದಲ್ಲಿ, ಯಾವ ಸರ್ಕಾರದಲ್ಲಿ ಕೊಟ್ಟಿಲ್ಲ? ಕಾನೂನು ಪ್ರಕಾರ ಬಿಗಿಯಾದ ಹಿಡಿತವನ್ನು ಇಟ್ಟುಕೊಂಡು ನೀವು ಪೀಸ್ ವರ್ಕನ್ನು ಕೊಡಬೇಕು ಎನ್ನುವುದನ್ನು ಸ್ಪಷ್ಟಪಡಿಸುತ್ತೇನೆ. ಇದು ನನ್ನ ನಿಲುವು, ಹಾಗೂ ನನ್ನ ನೀತಿ ಕೂಡ ಆಗಿತ್ತು. ಪ್ರತಿಯೊಂದು ಕೆಲಸವನ್ನು ಪೀಸ್ ವರ್ಕ ಮೇಲೆ ಕೊಡಬೇಕೆಂದು ನಾನು ಹೇಳುವುದಿಲ್ಲ. ಟೆಂಡರನ್ನು ದೊಡ್ಡ ದೊಡ್ಡ ಕೆಲಸಗಳಿಗೆ ಕೊಡಿ. ಕೆಲವೊಂದು ಅರ್ಜೆಂಟ್ ಆಗಬೇಕಾಗುತ್ತದೆ. ಅರ್ಜೆಂಟ್ ಕೆಲಸಗಳನ್ನು ಮಾಡಿ ಜಮೀನಿಗೆ ನೀರು ಒದಗಿಸಬೇಕಾಗುತ್ತದೆ. ಒಂದು ವರ್ಷದಲ್ಲಿ ಪ್ರೊಡಕ್ಷನ್ ತೆಗೆದುಕೊಳ್ಳಬೇಕಾದರೆ ಎಂಬ ವಿಚಾರದಲ್ಲಿ ನೀರಾವರಿ ಮಾಡಬಾರದು. ಪೀಸ್ ವರ್ಕ್ ಮಾಡಿ. ನನ್ನ ಕಾಲದಲ್ಲಿ ಎಕಾನಮಿ ಆರ್ಡರ್ಸನ್ನು ಇಷ್ಯೂ ಮಾಡಿರಲಿಲ್ಲ. ನೀವು ಪೆಂಡಿಂಗ್ ಬಿಲ್ಲಿನ ಮೊತ್ತವನ್ನು ಕಂಟ್ರಾಕ್ಟ್‌ದಾರರಿಗೆ ಕೊಡಬಾರದು ಎಂದು ಹೇಳುತ್ತೀರಿ. ಮೊನ್ನೆ ಒಬ್ಬ ಕಂಟ್ರಾಕ್ಟ್‌ದಾರರು ಬಂದು, ಸರ್, ನನ್ನ ಮನೆ ಮಾರಿಕೊಂಡೆ, ಕಾರು ಮಾರಿಕೊಂಡೆ ಎಂದು ಹೇಳಿದರು. ಹೀಗೆ ಅನೇಕ ಕಂಟ್ರಾಕ್ಟ್‌ದಾರರು ಬಂದು ಶಾಸಕರನ್ನು ಕಾಣುತ್ತಾರೆ. ನಾವು ಹಣವನ್ನು ಬಡ್ಡಿಗೆ ತೆಗೆದುಕೊಂಡು ಬಂದು ಇದಕ್ಕೆಲ್ಲಾ ಹಾಕಿ ನಮ್ಮ ತಲೆ ಬೋಳಿಸಿ ಹೋಯಿತು. ಕಳೆದ ಎರಡು ವರ್ಷಗಳಿಂದ ನಮಗೆ ಹಣ ಬರುತ್ತಿಲ್ಲ ಎನ್ನುವ ಮಾತನ್ನು ಹೇಳಿದ್ದಾರೆ. ನೀವು ಹಿರಿಯಕ್ಕನ ಚಾಳಿ ಮನೆ ಮಂದಿಗೆಲ್ಲಾ ಎಂದು ಹೇಳಿ ನೀವು ಕೂಡ ಎಕಾನಮಿ ಆರ್ಡರ್ ಇಷ್ಯೂ ಮಾಡಿದ್ದೀರಿ. ಜನ ಓಟು ಕೊಟ್ಟು ನಿಮ್ಮನು ಅಧಿಕಾರಕ್ಕೆ ತಂದಿಟ್ಟಿದ್ದಾರೆ. ಪೆಂಡಿಂಗ್ ಬಿಲ್ಸ್‌ಗೆ ಹಣ ಕೊಡುತ್ತಿಲ್ಲ ಇರಿಗೇಷನ್ ವರ್ಕ್ ಆಗುತ್ತಿಲ್ಲ ಎಂದು ಜನ ನಿಮಗೆ ಓಟು ಕೊಟ್ಟರೆ ನೀವೂ ಕೂಡ ಅದನ್ನೆ ಏತಕ್ಕೆ ಮಾಡುತ್ತೀರಿ? ಇದು

ಪೀಸ್ ವರ್ಕ್ಸ್ ಅಲ್ಲ. ನೀವು ಇವತ್ತು ಟ್ರೆಜರಿ ಬಿಲ್ಸನ್ನು ಆನರ್ ಮಾಡಬೇಕು. When I was the Chief Minister, I removed that because it is anti-development.

ಇದು ಪ್ರಗತಿಗೆ ಮಾರಕವಾದಂಥ ನೀತಿಯಾಗಿರುತ್ತದೆ. ಆದರೆ ಇವತ್ತು ನಮ್ಮಲ್ಲಿ ಹಣವಿಲ್ಲವೆಂದು ನೀವೇ ಹೇಳಿಕೊಂಡಿದ್ದೀರಿ. ಬಜೆಟ್‌ನಲ್ಲಿ ಹೇಳಿದ್ದೀರಿ. ನಮ್ಮಲ್ಲಿ ಹಣವಿಲ್ಲವೆಂದು ಹೇಳಿರತಕ್ಕ ಮಾತು ನಿಜವಿರಬಹುದೇನೋ ನನಗೆ ಗೊತ್ತಿಲ್ಲ. ಅವರು ಸರ್ಕಾರವನ್ನು ಬಿಟ್ಟು ಹೋಗಿದ್ದಾರೆ, ಅದನ್ನು ನೀವು ತೆಗೆದುಕೊಂಡಿದ್ದೀರಿ. ಕಳೆದ ಎರಡು ವರ್ಷ ಚಿಲ್ಲರೆಯಲ್ಲಿ ಏನಾಗಿದೆ ನನಗೆ ಗೊತ್ತಿಲ್ಲ. ನಿಮ್ಮಲ್ಲಿ ಹಣವಿಲ್ಲ ಎಂದರೆ, ಏತಕ್ಕೆ ಇಲ್ಲ ಎಂಬುದು ಚರ್ಚೆ ಮಾಡಬೇಕಾಗುತ್ತದೆ ಎಂಬುದನ್ನು ಹೇಳಬೇಕು. ನಾನು ಒಂದು ಮಾತನ್ನು ಹೇಳುತ್ತೇನೆ. ತಕ್ಷಣ ಪವರ್ ಪ್ರಾಜೆಕ್ಟ್, ಇರಿಗೇಷನ್ ಸೆಕ್ಟಾರ್, ಶರಾವತಿ ಟೇಲ್ ರೇಸ್ ಪ್ರಾಜೆಕ್ಟ್ ಅದಕ್ಕೆ ಹಣವಿಲ್ಲವೆಂದು ಹೇಳುತ್ತಿದ್ದೀರಿ. ಅದು ನನಗೆ ಗೊತ್ತಿಲ್ಲ. ಕೇಂದ್ರ ಸರ್ಕಾರದಿಂದ ಎನ್‌ವೈರ್ನಮೆಂಟ್ ಕ್ಲಿಯರೆನ್ಸ್ ನಿಮಗೆ ಸಿಕ್ಕಿದೆಯೋ ಇಲ್ಲವೋ ಗೊತ್ತಿಲ್ಲ. ಸುಪ್ರಿಮ್ ಕೋರ್ಟಿನ ಜಡ್ಜ್‌ಮೆಂಟ್ ಆಗಿದೆ, ಹೈಕೋರ್ಟ್‌ನ ಜಡ್ಜ್‌ಮೆಂಟ್ ಆಗಿದೆ. ಇಷ್ಟಾದರೂ ಕೂಡ ಯಾರಾದರೂ ಹೋಗಿ ಅದಕ್ಕೆ ಒಂದು ಅರ್ಜಿಯನ್ನು ಹಾಕಿಕೊಂಡು ಕೂತುಬಿಡುವುದು. ಅದನ್ನೆಲ್ಲಾ ನೀವು ಕ್ಲಿಯರ್ ಮಾಡಿಸಬೇಕು. ಅಲ್ಲಿ ಬಿಲ್ಸ್ ಪೇಮೆಂಟ್ ಮಾಡುವುದಕ್ಕೂ ಕೂಡ ಬರುವುದಿಲ್ಲ. ಈ ದೃಷ್ಟಿಯಿಂದ ನಾನು ಹೇಳುತ್ತಿದ್ದೇನೆ. ಎಕಾನಮಿ ಆರ್ಡರ್ಸನ್ನು ತರುವುದಾದರೆ ಆಗುವುದಿಲ್ಲ. ನಿಮ್ಮ ಹಣೆಬರಹಕ್ಕೆ ಓಲ್ಡ್ ಏಜ್ ಪೆನ್‌ಷನ್ ಬಗ್ಗೆ ಒಂದು ಆರ್ಡರ್ ಹೊರಡಿಸಿದ್ದೀರಿ. ವೃದ್ಧಾಪ್ಯ ವೇತನ, ವಿಧವಾ ವೇತನ ಕೊಡುವುದಕ್ಕೆ ನಿಮ್ಮಲ್ಲಿ ಹಣ ಇಲ್ಲ. ನೀವು ಕೊಡತಕ್ಕದ್ದು ಕೇವಲ 50-60 ಅಥವಾ 70 ರೂ. ಅದನ್ನು ಕೊಡುವುದಕ್ಕೆ ನಿಮ್ಮಲ್ಲಿ ಹಣವಿಲ್ಲ. ಇದನ್ನು ಕೊಡಬೇಕಾದರೆ 3 ತಿಂಗಳು ಬೇಕಾಗುತ್ತದೆ. ನಾನು ಅಧಿಕಾರ ವಹಿಸಿಕೊಂಡಾಗ ನನ್ನ ಕಾಲ ಭಾರಿ ಸ್ವರ್ಗ ಆಗಿತ್ತು ಎಂದು ನಾನು ಹೇಳುವುದಿಲ್ಲ. ಆದರೆ ನನ್ನ ಕಾಲದಲ್ಲಿ ನರಕ ಅಂತೂ ಅಲ್ಲಿ ಹತ್ತಿರ ಇರಲಿಲ್ಲ. ನಾನು ಒಳ್ಳೆಯ ಕೆಲಸ ಮಾಡಿ ಬಡವರಿಗೆ ಹಣ ತಲುಪಿಸಬೇಕಾದ ವಿಚಾರವನ್ನು ನಾನು ಸ್ಪಷ್ಟವಾಗಿ ಇಟ್ಟುಕೊಂಡಿದ್ದೆ ಎಂಬ ಮಾತನ್ನು ಹೇಳುತ್ತಿದ್ದೇನೆ. ಇವತ್ತು ನಿಮ್ಮಲ್ಲಿ ಹಣ ಇಲ್ಲವೆಂಬ ಮಾತನ್ನು ಹೇಳುತ್ತಿದ್ದೀರಿ. ಇನ್ನು ಒಂದೇ ಒಂದು ಮಾತನ್ನು ಹೇಳುವುದಾದರೆ, ಡಿಫಿಸಿಟ್ ಬಜೆಟಿಂಗ್ ಅಂದರೆ ಡಿಫಿಸಿಟ್ ಫೈನಾನ್‌ಸಿಂಗ್ ವಿಚಾರದಲ್ಲಿ ನೀವು ಬಹಳ ಎಚ್ಚರಿಕೆಯನ್ನು ವಹಿಸಬೇಕು. Deficit budget has become an order of the day not only here but in several countries of the world.

ನೀವು ಇದಕ್ಕೆ ಹೆದರಬೇಕಾದ ಅವಶ್ಯಕತೆ ಏನೂ ಇಲ್ಲ. But while filling up the gap between deficit and other kind of budget,

ಬಂದಾಗ ನೀವು ಬಹಳ ಎಚ್ಚರಿಕೆಯಿಂದ ಬಜೆಟನ್ನು ಮಾಡಬೇಕಾಗುತ್ತದೆ. ನನ್ನ ಆಡಳಿತದ ಬಗ್ಗೆ ಕೂಡ ನೀವು ಕಾಮೆಂಟ್ ಮಾಡಿದ್ದೀರಿ. ಎನ್.ಎಸ್.ಡಿ.ಪಿ.ಗೆ ಸಂಬಂಧಪಟ್ಟಂತೆ ಡಿಫಿಸಿಟ್ ಗೆ ಸಂಬಂಧಪಟ್ಟಂತೆ ಶೇಕಡಾವಾರು ಪ್ರಮಾಣವನ್ನು ನಿಮ್ಮ ಗಮನಕ್ಕೆ ತರುತ್ತೇನೆ. ಈ ಶ್ವೇತಪತ್ರ ನಿಮ್ಮದು. ನೀವು ಹಣಕಾಸಿನ ಮಂತ್ರಿಗಳಾದ ಕೂಡಲೇ ಮೈಸೂರಿನಲ್ಲಿ ಒಂದು ಹೇಳಿಕೆಯನ್ನು ಕೊಟ್ಟಿರಿ. ನಾನು ರಾಜ್ಯದ ಹಣಕಾಸಿನ ಬಗ್ಗೆ ಒಂದು ಶ್ವೇತಪತ್ರವನ್ನು ಹೊರಡಿಸುತ್ತೇನೆ ಎಂದು. ನೀವು ಹೇಳಿದ್ದೇ ಒಂದು ದೊಡ್ಡ ಚರ್ಚೆ ವಿಷಯವಾಯಿತು. ನಂತರ ಮಾನ್ಯ ಯಡಿಯೂರಪ್ಪನವರೋ ಅಥವಾ ಬೇರೆಯವರೋ ನೀವು ಒಂದು ಶ್ವೇತಪತ್ರವನ್ನು ಹೊರಡಿಸಬೇಕೆಂದರು. ನಾವು ಹೊರಡಿಸುತ್ತೇವೆಂದು ನೀವೂ ಹೇಳಿದಿರಿ. ಬಜೆಟ್ ಗಿಂತ ಮುಂಚೆ ಶ್ವೇತಪತ್ರವನ್ನು ನಾವು ಹೊರಡಿಸುತ್ತೇವೆಂದು ಗುಲ್ಬರ್ಗಾದಲ್ಲಿ ಹೇಳಿದಿರಿ. ಆನಂತರ ನಾವು ಭಜೆಟ್ ಆದ ಮೇಲೆ ಶ್ವೇತಪತ್ರವನ್ನು ಹೊರಡಿಸುತ್ತೇವೆಂದು ಹೇಳಿದಿರಿ. ನನಗೆ ಒಂದೂ ಗೊತ್ತಾಗುವುದಿಲ್ಲ.....

ಶ್ರೀ ಸಿದ್ಧರಾಮಯ್ಯ :- ಬಜೆಟ್ ಜೊತೆಯಲ್ಲೇ ಹೊರಡಿಸುತ್ತೇವೆಂದು ಹೇಳಿದ್ದೆ.

ಶ್ರೀ ಎಸ್.ಬಂಗಾರಪ್ಪ :- ಬಜೆಟ್ ಆದವೇಲೆ ಎಂದು ಪತ್ರಿಕೆಗಳಲ್ಲಿ ಬಂದಿದ್ದುದನ್ನು ನಾನು ನೋಡಿದ್ದೆ. ಅದನ್ನು ಅವರು ತಪ್ಪಾಗಿ ಬರೆದುಕೊಂಡಿದ್ದರೆ ಅದು ಅವರಿಗೂ ನಿಮಗೂ ಬಿಟ್ಟ ವಿಚಾರ. ನಾನಾದರೂ ಕೇಳುವುದೇನೆಂದರೆ ಶ್ವೇತಪತ್ರ ಎಂದರೆ ಅರ್ಥವೇನು? ನಾವು ಇಷ್ಟೆಲ್ಲಾ ಮಾತನಾಡುತ್ತೇವೆ. White Paper on a particular subject, what is it that we mean by that?

ಶ್ವೇತಪತ್ರ ಎಂದರೆ ರಾಜ್ಯದ ಹಣಕಾಸಿನ ಪರಿಸ್ಥಿತಿಯನ್ನು ಒಂದು ನೋಟದಲ್ಲಿ ಹೇಳತಕ್ಕ ವಿಚಾರ. ಸ್ವಾಮಿ, ನೀವು 95-96ನೇ ಸಾಲಿಗೆ ಅಯವ್ಯಯ ಪತ್ರವನ್ನು ಮಂಡನೆ ಮಾಡಿದಾಗ ವಿವರವಾಗಿ ಮಂಡಿಸಿದಾಗ ಇದಕ್ಕಿಂತ ದೊಡ್ಡ ಶ್ವೇತಪತ್ರ ಬೇರೆ ಎಲ್ಲಾದರೂ ಸಿಕ್ಕುತ್ತದೆಯೇ? ನಿಮಗೆ ಇದನ್ನು ಯಾರು ಹೇಳಿಕೊಟ್ಟವರು? ಸರ್ಕಾರವನ್ನು ನಡೆಸುವ ನೀವು ಶ್ವೇತಪತ್ರವನ್ನು ಬಜೆಟ್ ಜೊತೆಯಲ್ಲಿ ಇಟ್ಟಿದ್ದನ್ನು for the first time I am seeing this after Independence in this country, not only in our State of Karnataka. Is it a thing that can be done bu you? I can never understand this.

ನಿಮಗೆ ಇದನ್ನು ಯಾರು ಹೇಳಿಕೊಟ್ಟರೋ ನನಗಂತೂ ಅರ್ಥವಾಗುವುದಿಲ್ಲ. This is the biggest and better document than any kind of white Paper.

ನಿಮಗೆ ಇದನ್ನು ಯಾರು ಹೇಳಿಕೊಟ್ಟರೋ ಅರ್ಥವಾಗುವುದಿಲ್ಲ.

SRI H.N.NANJE GOWDA :- Sir, the Government have become a laughing stock in the eyes of the academicians for placing this White Paper along with this budget document.

ಶ್ರೀ ಸಿದ್ಧರಾಮಯ್ಯ :- ಯಾವ ಎಕನಾಮಿಸ್ಟ್, ಅಕೆಡೆಮಿಷಿಯನ್ಸ್ ಕೂಡ ಈ ತರಹ ಹೇಳಿಲ್ಲ.

SRI H.N.NANJE GOWDA :- So we have to take it that your White Paper is more valid than the budget document?

ಶ್ರೀ ಸಿದ್ಧರಾಮಯ್ಯ :- ಮಾನ್ಯ ಅಧ್ಯಕ್ಷರೆ, ವೈಟ್ ಪೇಪರನ್ನು ಇಟ್ಟಿದ್ದು ನಾವು ಅಧಿಕಾರವನ್ನು ತೆಗೆದುಕೊಂಡಾಗ ಈ ರಾಜ್ಯದ ಆರ್ಥಿಕ ಪರಿಸ್ಥಿತಿ ಹೇಗಿತ್ತು ಎಂಬುದನ್ನು ಹೇಳುವುದಕ್ಕಾಗಿಯೇ ಹೊರತು ಬೇರೆ ಅಲ್ಲ. 95-96ನೇ ಸಾಲಿಗೆ ನಾವು ಏನು ಹಣವನ್ನು ಖರ್ಚು ಮಾಡುತ್ತೇವೆಂಬ ಬಗ್ಗೆ ಒಂದು ಫೈನಾನ್ಷಿಯಲ್ ಸ್ಟೇಟ್‌ಮೆಂಟ್. ಅದರಿಂದ ಈ ಬಜೆಟ್‌ಗೂ ಶ್ವೇತಪತ್ರಕ್ಕೂ ಯಾವುದೇ ಸಂಬಂಧವಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ:- ನಿಮ್ಮ ಬಜೆಟ್‌ನಲ್ಲಿ ಕೇಂದ್ರ ಸರ್ಕಾರದಿಂದ ಹಿಡಿದು ಎಲ್ಲಾ ಸರ್ಕಾರಗಳನ್ನೂ ಬೈಯ್ದುಕೊಂಡು ಬಂದಿದ್ದೀರಿ. ಆದರಲ್ಲಿ ಇದನ್ನೂ ಹೇಳುವುದಕ್ಕೆ ನಿಮಗೆ ಆಗುತ್ತಿರಲಿಲ್ಲವೇ?

SRI H.N.NANJE GOWDA :- Again I beg to differ from the Hon'ble Minister for Finance and Planning.

ನಾನು ಒಂದೇ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರಬಯಸುತ್ತೇನೆ. ನಿಮ್ಮ ಬಜೆಟ್‌ನಲ್ಲಿ ಅಂದರೆ 1995-96 ಮತ್ತು 94-95 ಈ ಎರಡು ವರ್ಷದ್ದು ಬಿಟ್ಟು ಬೇರೆ ಇನ್ನೇನನ್ನೂ ಹೇಳಿಲ್ಲವೇ? ಈ ಬಜೆಟ್ ಪುಸ್ತಕದಲ್ಲಿರುವ ಅನೇಕ ಪುಟಗಳ ಬಗ್ಗೆ ನಿಮ್ಮ ಗಮನವನ್ನು ಸೆಳೆಯಬಯಸುತ್ತೇನೆ. ಏಕೆಂದರೆ, ಕೋಷಗಳನ್ನು, ಅನೆಕ್ಷರ್‌ಗಳನ್ನು ಕೊಡುವಾಗ You will have to go back to several years. Of course, you don't want to go back to the period of your Party's regime: 1983-84 up to 1989, ನೀವು ಮುಟ್ಟುವುದಿಲ್ಲ. ಆದ್ದರಿಂದಲೇ ನಾನು ಇಲ್ಲಿ ಹೇಳಿದ್ದು. ನೀವು ಮುಟ್ಟುವುದಿಲ್ಲವೆಂದರೂ ನಾವು

ಮುಟ್ಟುವುದಕ್ಕೆ ಸಿದ್ಧವಾಗಿರುತ್ತೇವೆ. ಆದ್ದರಿಂದ ನೀವು ಬರೆಯುವಾಗ ಬಹಳ ಎಚ್ಚರಿಕೆಯಿಂದ ಇರಬೇಕು. ಅದು ಏನೇ ಇರಲಿ. ಅದು ಒಳ್ಳೆಯ ಸಂಪ್ರದಾಯವಲ್ಲ ಎಂದು ನಾನು ತಮಗೆ ಹೇಳುತ್ತೇನೆ. ಏಕೆಂದರೆ That undermines the value of presenting a budget for the current year. ಅದು ಒಳ್ಳೆಯದಲ್ಲ. ಇದು ಒಂದು ಸಲಹೆ. ಇದನ್ನು ನೀವು ಒಪ್ಪಿ, ಇಲ್ಲ ನಾನು ಡಿಫರ್ ಆಗುತ್ತೇನೆ ಎಂದು ಹೇಳುವುದಾದರೆ, ಅದನ್ನೆ ಮಾಡಿ. Again, presentation of White Paper along with the budget estimates is a good practice ಎನ್ನತಕ್ಕದ್ದನ್ನು if you are going to establish, I am sorry, it is left to you. We differ from that.

ಅದರ ಬಗ್ಗೆ ನಿಮಗೆ ಅನುಮಾನ ಬೇಡ. ಡಿಫಿಸಿಟ್ ಬಜೆಟ್ಟನ್ನು ತಯಾರು ಮಾಡುವ ಸಂದರ್ಭದಲ್ಲಿ ನೀವು ಬಹಳ ಎಚ್ಚರಿಕೆಯಿಂದಿರಬೇಕು. ನಾನು ಹೆಚ್ಚು ಕಾಲವನ್ನು ಈ ಸಂದರ್ಭದಲ್ಲಿ ತೆಗೆದುಕೊಳ್ಳುವುದಿಲ್ಲ. ಒಂದೇ ಒಂದು ವಿಚಾರವನ್ನು ಮಾತ್ರ ಪ್ರಸ್ತಾಪ ಮಾಡುತ್ತೇನೆ. ನನ್ನ ಕಾಲದಲ್ಲಿ 1990-91, again I stand on facts approved by the Planning Commission.

ಡಿಫಿಸಿಟ್ ಫೈನಾನ್ಸಿಂಗ್ ವಿಚಾರದಲ್ಲಿ ಹೇಳುವುದಾದರೆ, ಹಣಕಾಸು ಕೊರತೆ; ಇಲ್ಲಿ ಪರ್ಸೆಂಟೇಜ್ 2.38 ಇದೆ. ಅದಕ್ಕಿಂತ ಹಿಂದೆ ಎಂದರೆ 89-90ನೇ ಇಸವಿ ಅಂದರೆ ಅದು ಮಾನ್ಯ ವೀರೇಂದ್ರ ಪಾಟೀಲ್‌ರವರ ಕಾಲ 3.07 ಪರ್ಸೆಂಟೇಜ್ ಇದೆ. 623 ಕೋಟಿ ರೂ. ಇದ್ದು ಪರ್ಸೆಂಟೇಜ್ 3.07 ಇದ್ದರೆ ನನ್ನ ಕಾಲದಲ್ಲಿ ಈ ಕೊರತೆಯನ್ನು ಇಳಿಸಿದ್ದೇನೆ. 558.44ಗೆ ಇಳಿಸಿದ್ದೇನೆ. ಅದರ ಶೇಕಡ ಪ್ರಮಾಣ 2.38 ಇದೆ. ನನ್ನ ಕಾಲದ್ದು ಅತ್ಯುತ್ತಮ ಬಜೆಟ್ ಎಂದು ನಾನು ಹೇಳಿಕೊಳ್ಳುತ್ತೇನೆ. ಇನ್ನು 91-92 ಅಂದರೆ ನನ್ನದೇ ಎರಡನೇ ವರ್ಷ. 917 ಕೋಟಿ ರೂ. ಇದ್ದರೂ ಕೂಡ ರಿಸೋರ್ಸಸ್ ಮೊಬಲೈಸೇಷನ್ ಕೆಪ್ಯಾಸಿಟಿ ಮೇಲಕ್ಕೆ ಹೋಗಿದೆ. ಇದು ಕಮರ್ಷಿಯಲ್ ಟ್ಯಾಕ್ಸ್ ಮುಂತಾದವುಗಳಿಂದ ಬಂದಿದ್ದರಿಂದ. ಕೊರತೆ 3.07 ಇದೆ. ನಾನು ಮೇಲಕ್ಕೆ ಹೋಗಿಯೇ ಇಲ್ಲ. ಅನಂತರ 9293ನೇ ಸಾಲು ಎಂದರೆ ಅಧಿಕಾರವನ್ನು ಬಿಟ್ಟ ಮೇಲೆ; 4.20ನಿಂದ ಮೇಲಕ್ಕೆ ಹೋಗಿದೆ. ಇದು ತಮಗೇ ಗೊತ್ತಾಗುತ್ತದೆ. ಅನಂತರ 93-94ನೇ ಸಾಲೂ ಕೂಡ ಅಷ್ಟೇನೂ ಕೆಟ್ಟದಾಗಿಲ್ಲ.

ಅದು ಮಾನ್ಯ ಮೊಯ್ಲಿಯವರ ಕಾಲದ್ದು. ಅದು 3.34 ಇದೆ. ನಾನು ಇದನ್ನು ಏತಕ್ಕೆ ಹೇಳುತ್ತಿದ್ದೇನೆಂದರೆ, ಎನ್.ಎಸ್.ಡಿ.ಪಿ.ಗೆ ಸಂಬಂಧಪಟ್ಟಂತೆ ನೀವು ಯಾವಾಗಲೂ ಕೂಡ ಬಹಳ ಎಚ್ಚರಿಕೆಯಿಂದ ಮಾಡಬೇಕಾಗುತ್ತದೆ. ಡಿಫಿಸಿಟ್ ಫೈನಾನ್ಸಿಂಗ್ ವಿಚಾರದಲ್ಲಿ ಕೊರತೆಯನ್ನು ತುಂಬುವುದಕ್ಕಾಗಿ ಈ ರೀತಿ ಹೆವಿ ಟ್ಯಾಕ್ಸೇಷನ್ ತರುವ ವಧಿ

ವಿಧಾನ ಸರಿಯಲ್ಲ. On the other hand you will have to augment the collection capacity in respect of the revenue earning departments like Commercial Taxes, Excise, Motor vehicles taxes and Stamp & registration.

ಆದರ ಮೇಲೆ ನೀವು ಹೆಚ್ಚಾಗಿ ಹಾಕಬೇಕು. ಇದು ನನಗೆ ಅರ್ಥವಾಗುವುದಿಲ್ಲ. ದಯವಿಟ್ಟು ಕ್ಷಮಿಸಬೇಕು. beg to differ from my successor, Mr. Moily. ಪಿಯರ್‌ಲೆಸ್ ಕಂಪನಿಯಿಂದ ಸಾಲವನ್ನು ತಂದಿದ್ದನ್ನು ಅವರು ಜಸ್ಟಿಫೈ ಮಾಡಿಕೊಂಡರು. I don't know why he routed this money through K.E.B.

ಕರ್ನಾಟಕ ಎಲೆಕ್ಟ್ರಿಸಿಟಿ ಬೋರ್ಡ್ ಮುಖಾಂತರ ಅವರು ಏತಕ್ಕೆ ತಂದರೋ ನನಗೆ ಗೊತ್ತಿಲ್ಲ. ಸರ್ಕಾರದವರು ಸಾಲವನ್ನು ತರುವುದಕ್ಕೆ ಅನೇಕ ರೀತಿಯ ದಾರಿಗಳಿವೆ. ನಮಗೆ ಹಕ್ಕೇ ಇದೆ ಸಾಲವನ್ನು ತೆಗತದುಕೊಳ್ಳುವುದನ್ನು ಯಾರೂ ಬೇಡವೆಂದು ಹೇಳುವುದಿಲ್ಲವಲ್ಲ. ಸರ್ಕಾರದವರೂ ಕೂಡ ಓಪನ್ ಡಿಬೆಂಚರ್ಸ್ ಕಲೆಕ್ಟ್ ಮಾಡುತ್ತಾರೆ. ಲೋನ್ ಫ್ಲೋಟ್ ಮಾಡುತ್ತಾರೆ, ಸ್ಟೇಟ್ ಗೌರ್ನಮೆಂಟ್‌ನವರೂ ಮಾಡುತ್ತಾರೆ. It has been an accepted practice in a country like ours. ಇದು ನನಗೆ ಅರ್ಥವಾಗದ ವಿಚಾರ. Why this money was routed through KEB, I cannot understand.

ಅವರು ಹೇಳಿದರು, 50-60 ಕೋಟಿ ರೂಪಾಯಿಗಳನ್ನು ನಾವು ತೆಗೆದುಕೊಂಡು ಅನಂತರ ಅವರಿಗೆ ಕೊಟ್ಟೆವು ಎಂದು. When K.E.B. was suffering from shortage of funds ಇದ್ದಾಗ ಹಾಗೆ ತೆಗೆದುಕೊಂಡು ಅವರಿಗೆ ಏತಕ್ಕೆ ಕೊಡಬೇಕು? ನನ್ನ ಕಾಲದಲ್ಲಿ ಒಂದೇ ಸಾರಿ ಒಂದು ನೂರು ಕೋಟಿ ಚಿಲ್ಲರೆಯನ್ನು ಕೊಟ್ಟಿದ್ದೇನೆ. ನಿಮ್ಮ ತುಮಕೂರು ಜಿಲ್ಲೆಯ ಕೆ.ವಿ.ಸ್ಟೇಷನ್ ಯಾವುವು ನಾನು ಮಾಡಿದ್ದೆ ಅಂದರೆ ಕಿಬ್ಬನಳ್ಳಿ ಕ್ರಾಸ್, ತುಮಕೂರು, ಕಳ್ಳಂಬೆಳ್ಳ ಕ್ಷೇತ್ರದ ಬೋಳೂರು, ನಿಮ್ಮ ಗುಲಬರ್ಗಾದ ಸೇಡಂ. ನಮ್ಮ ಕಾಲದಲ್ಲಿ ಕೆ.ವಿ. ಜಾಸ್ತಿ ಕೆಪಾಸಿಟಿ ಮಾಡದಿದ್ದೆ ಪಂಪುಸೆಟ್ಟು ಮತ್ತೊಂದು ಡ್ರಿಂಕಿಂಗ್ ವಾಟರ್‌ಗೆ ತೊಂದರೆಯಾಗುತ್ತದೆಂಬ ದೃಷ್ಟಿಯಿಂದ ನಮ್ಮ ಕಾಲದಲ್ಲಿ ಮಾಡಿರುವುದು. ಮಾನ್ಯ ಮೊಯಿಲಿಯವರು ಹೇಳುತ್ತಿದ್ದರು, ಹೇಳಲಿ ಎಂದು ನಾನು ಸುಮ್ಮನಿದ್ದೆ. ನಾನು ಆ ವಿವರಗಳಿಗೆ ಹೋಗುವುದಿಲ್ಲ. ಯಾರೂ ನನ್ನನ್ನು ಹೊಗಳುವ ಅವಶ್ಯಕತೆ ಇಲ್ಲ. ಯಾರೂ ಕೂಡ ಹೊಗಳಬೇಕಾಗಿಲ್ಲ. ಇನ್ನೂ ಬೇಕಾದರೆ ಮಾಡಿರತಕ್ಕ ಪಟ್ಟಿ ಇದೆ, ದಯವಿಟ್ಟು ಅದನ್ನು ತರಿಸಿಕೊಂಡು ನೋಡಿಕೊಳ್ಳಿ. ಆದರೆ

ವಿದ್ಯುಚ್ಛಕ್ತಿ ಮಂಡಳಿಯ ಮೂಲಕ ಪಿಯರ್‌ಲೆಸ್ ಕಂಪನಿಯಿಂದ ತೆಗೆದುಕೊಳ್ಳತಕ್ಕ ಅವಶ್ಯಕತೆ ಏನಿತ್ತು ಎಂಬುದು ನನಗೆ ಅರ್ಥವಾಗದೆ ಇರತಕ್ಕ ವಿಚಾರ. ನಾನು ಒಂದು ಕಾಲದಲ್ಲಿ ಸಾಲ ತೆಗೆದುಕೊಳ್ಳಲು ಹಿಂದೇಟು ಹಾಕುತ್ತಿದ್ದೆ. ನಾನು ನನ್ನ ರಿಸೋರ್ಸ್‌ಅನ್ನು ಆಗ್‌ಮೆಂಟ್ ಮಾಡಿದರೆ ನಾನು ಸಾಲ ತೆಗೆದುಕೊಳ್ಳತಕ್ಕ ಅವಶ್ಯಕತೆ ಬರುವುದಿಲ್ಲ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನೀವು ಉತ್ತರ ಕೊಡಬೇಕಾಗುತ್ತದೆ. ಏಕೆಂದರೆ ಒಂದು ಗಾದೆ ಮಾತು ಇದೆ: You children and my children are quarelling with our children ಅನ್ನುವ ಹಾಗೆ ಆಗಿದೆ. ಅದಕ್ಕೆ ಉತ್ತರ ನೀವೇ ಕೊಡಬೇಕಾಗುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ಮೊಯಿಲಿಯವರು ತಮ್ಮ ಕಾಲದಲ್ಲಿ ಏನು ನಡೆಯಿತು ಎಂಬುದನ್ನು ಹೇಳಿದ್ದಾರೆ. ಹಾಗೆಯೇ ಇವರು ತಮ್ಮ ಕಾಲದಲ್ಲಿ ಏನು ನಡೆಯಿತು ಎಂಬುದನ್ನು ಹೇಳುತ್ತಿದ್ದಾರೆ. ಇವರಿಬ್ಬರಿಗೆ ನಾವು ಏನು ಮಾಡುತ್ತಿದ್ದೇವೆಂಬುದು ಗೊತ್ತಿಲ್ಲ. ನಾವು ಮಧ್ಯೆ ಎಷ್ಟು ಅಪಾಯದಲ್ಲಿ ಸಿಕ್ಕಿದ್ದೇವೆ ಎಂದರೆ ಬಹಳ ಅಪಾಯದಲ್ಲಿ ಸಿಕ್ಕಿದ್ದೇವೆ.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ಏನು ಮಾಡಿದರೂ ಕೂಡ ಬಂಗಾರಪ್ಪನವರ ಕಾಲ ಇರಲಿ, ಮೊಯಿಲಿಯವರ ಕಾಲ ಇರಲಿ, ವೀರೇಂದ್ರ ಪಾಟೀಲರ ಕಾಲ ಇರಲಿ, ಎಲ್ಲದಕ್ಕೂ ಸೇರಿಸಿ ಅವರು ಹೇಳಿದ್ದಾರೆ. ಉತ್ತರ ಕೊಡುವವರು ಬೇರೆ ಬೇರೆ ಕೊಡುತ್ತಿದ್ದಾರೆ ಅಷ್ಟೆ.

ಶ್ರೀ ವಾಟಾಳ್ ನಾಗರಾಜ್ :- ಮೂರು ಜನ ಮುಖ್ಯ ಮಂತ್ರಿಗಳು, ಅದರಲ್ಲಿ ಇಬ್ಬರು ಮಾಜಿ ಮುಖ್ಯ ಮಂತ್ರಿಗಳು ಅವರವರ ಕಾಲದಲ್ಲಿ ಏನೇನು ನಡೆಯಿತು ಎಂದು ಹೇಳಿಕೊಂಡಿದ್ದಾರೆ. ವೀರೇಂದ್ರ ಪಾಟೀಲರು ಇಲ್ಲ, ಅವರು ಹೇಳುವುದಕ್ಕಾಗುವುದಿಲ್ಲ. ನಿಮಗೆ ಕಾಲ ಬರುವುದಿಲ್ಲವೆಂದು ಮಾನ್ಯ ಸಿದ್ಧರಾಮಯ್ಯನವರು ಹೇಳುತ್ತಾರೆ. ಕಾಲ ಹಾಗೆಯೇ ಇರುತ್ತದೆಂದು ತಿಳಿದುಕೊಳ್ಳಬೇಡಿ. ಮಾನ್ಯ ದೇವೇಗೌಡರು ಹೋದ ಸಾರಿ ಚುನಾವಣೆಗೆ ನಿಂತಾಗ ಇಬ್ಬರೇ ಇಬ್ಬರು ಗೆದ್ದರು. ಮುಂದಿನ ಚುನಾವಣೆಯಲ್ಲಿ ನಾವೇ ಗೆದ್ದು ನಮ್ಮ ಸರ್ಕಾರ ಬಂದರೆ ನೀವು ಏನು ಮಾಡುತ್ತೀರಿ?

(ನಗು)

ಏಕೆ ನಗುತ್ತೀರೆಂಬುದು ಅರ್ಥವಾಗುವುದಿಲ್ಲ.

ಒಬ್ಬ ಮಾನ್ಯ ಸದಸ್ಯರು :- ಅಷ್ಟು ಹೊತ್ತಿಗೆ ವಾಟಾಳ್ ನಾಗರಾಜ್ ಅವರು ಬಿ.ಜೆ.ಪಿ.ಸೇರಿರುತ್ತಾರೆ ಎಂದು ಕಾಣುತ್ತದೆ.

ಶ್ರೀ ವಾಟಾಳ್ ನಾಗರಾಜ್ :- ನಾನು ತಮ್ಮನ್ನೂ ಅಹ್ವಾನ ಮಾಡುತ್ತಿದ್ದೇವೆ. ತಾವು ತಪ್ಪು ತಿಳಿದುಕೊಳ್ಳಬೇಡಿ. ಪರಿಸ್ಥಿತಿ ಹೀಗೆಯೇ ಇರುತ್ತದೆಂದು ತಿಳಿದುಕೊಳ್ಳಬೇಡಿ. ಇದು ಬದಲಾವಣೆಯಾಗುತ್ತದೆ. ಇದರಲ್ಲಿ ಹಾಸ್ಯ ಏನು ಇದೆ? ಕಳೆದ ಚುನಾವಣೆಯಲ್ಲಿ ಬೈರೇಗೌಡರು ಮತ್ತು ವೆಂಕಟೇಶ ಇಬ್ಬರೇ ಗೆದ್ದವರು. ಇವತ್ತು ನಿಮ್ಮಲ್ಲಿ 115 ಜನ ಗೆದ್ದಿದ್ದೀರಿ. ನಾಳೆ ಪರಿಸ್ಥಿತಿ ಏನೇನು ಆಗುತ್ತದೆಂದು ಹೇಳಲಿಕ್ಕೆ ಸಾಧ್ಯವಿಲ್ಲ.

ಉಪಾಧ್ಯಕ್ಷರು :-. ಸಾಕು.

ಶ್ರೀ ವಾಟಾಳ್ ನಾಗರಾಜ್ :- ಏನು ಸಾಕು? ಸಾಕು ಎಂದರೇನು? ತಮ್ಮ ಭಾಷೆ ನನಗೆ ಅರ್ಥವಾಗುವುದಿಲ್ಲ.

ಉಪಾಧ್ಯಕ್ಷರು :- ಈಗ ಆಯವ್ಯಯದ ಮೇಲೆ ಚರ್ಚೆ ಇದೆ. ಆದ್ದರಿಂದ ಆ ಚರ್ಚೆ ಬೇಡ. ಯಾವ ಸರ್ಕಾರ ಬರುತ್ತದೆ ಎಂಬ ಬಗ್ಗೆ ಚರ್ಚೆ ಈಗ ಅನಾವಶ್ಯಕ ಇದೆ.

ಶ್ರೀ ವಾಟಾಳ್ ನಾಗರಾಜ್ :- ಚರ್ಚೆ ಮಧ್ಯೆದಲ್ಲಿ ನಾವು ಮಾತನಾಡಲಿಲ್ಲ ಎಂದರೆ ತಪ್ಪಾಗುತ್ತದೆ. ಈ ಚರ್ಚೆ ಏಕೆ ಎಂದರೆ ಹೇಗೆ? ಬಂಗಾರಪ್ಪನವರು ಅವರ ಕಾಲ, ಎಂದು ಹೇಳಿ ಅವರು ಕುಳಿತುಕೊಳ್ಳುತ್ತಾರೆ. ಮೊಯಿಲಿಯವರು ತಮ್ಮ ಕಾಲ ಕಾಲ ಎಂದು ಹೇಳುತ್ತಾರೆ. ಯಾರ ಕಾಲದಲ್ಲಿ ಏನು ಪರಿಸ್ಥಿತಿ ನಮ್ಮದು.

ಒಬ್ಬ ಮಾನ್ಯ ಸದಸ್ಯರು :- ಬಜೆಟ್‌ನಲ್ಲಿ ಏನು ಲೋಪದೋಷ ಇದೆಯೆಂಬುದರ ಬಗ್ಗೆ ಮಾತನಾಡಿ.

ಶ್ರೀ ಎಸ್.ಬಂಗಾರಪ್ಪ :- ಮಾತನಾಡುವುದು ಇನ್ನೇನು. ಆಗ ನಮ್ಮ ಕಾಲ ಇತ್ತು. ನಾವು ಹೇಳಿದೆವು. ಮೊಯಿಲಿಯವರ ಕಾಲ ಇತ್ತು. ಅವರು ಹೇಳಿದರು. ನಿಮ್ಮ ಕಾಲ ಬಂದರೆ ಮಾಡಿ; ನಾವು ನೋಡಿ ಸಂತೋಷಪಡುತ್ತೇವೆ. ಹೌದು, ನಕ್ಕುಬಿಟ್ಟರಲ್ಲಾ ಎಂದರೆ ಅಳುತ್ತಾ ಕೂರುವುದಕ್ಕೆ ಆಗುತ್ತದೆಯೇ? ಒಳ್ಳೆಯ ಚೆನ್ನಾಗಿ ಇದೆಯಲ್ಲಾ!

ಶ್ರೀ ವಾಟಾಳ್ ನಾಗರಾಜ್ :- ಬಂಗಾರಪ್ಪನವರು ಪ್ರತಿ ಸಾರಿ ನಿಜ ಹೇಳಬೇಕಲ್ಲಾ ನಿಜ ಹೇಳಬೇಕಲ್ಲಾ ಎಂದು ಹೇಳುತ್ತಾರೆ. ಒಂದು ಸಾರಿಯಾದರೂ ಸುಳ್ಳು ಹೇಳಿ ಎಂದು

ನಾನು ಅವರನ್ನು ಪ್ರಾರ್ಥಿಸುತ್ತೇನೆ. ಪ್ರತಿ ಭಾಷಣಕ್ಕೂ ನಾನು ನಿಜ ಹೇಳಬೇಕೆಂದರೆ ಅನ್ನುತ್ತಾರೆ. ಒಂದು ಸಾರಿ ಸುಳ್ಳು ಹೇಳಿದರೆ ಸಾಕು.

(ನಗು)

ಶ್ರೀ ಎಸ್. ಬಂಗಾರಪ್ಪ:- ಇದು ನಡೆದದ್ದು ನಿಜ. ನಾನು ಮುಖ್ಯಮಂತ್ರಿ ಇದ್ದಾಗ ಒಂದು ಸುಳ್ಳು ಹೇಳಿ ಎಂದರು. ಆಗ ನಾನು ಏನೆಂದರೆ ಅಂದರೆ ಸತ್ಯ ಹೇಳುತ್ತಾ ಇದ್ದರೂ ಕೂಡ ನೀವು ಸತ್ಯ ಹೇಳುತ್ತಿಲ್ಲ ಸುಳ್ಳು ಹೇಳುತ್ತಿದ್ರಿ ಅಂದ ಮೇಲೆ ನಾನು ನಿಜ ಹೇಳುತ್ತೇನೆ ಎಂದು ಹೇಳಿ ಒಂದು ಸಾರಿಯಾದರೂ ನಿಜ ನಿಮಗೆ ತಟ್ಟಬಹುದೆಂದು ಯೋಚನೆ ಮಾಡಿ ನಾನು ಹೇಳಿದೆ ಎಂದು ಅಂದಿದ್ದೆ. ಆಗ ಸಂತೋಷವಾಗಿ ಇಡೀ ಸದನವೇ ನಕ್ಕಿತು. ಆ ಪ್ರಶ್ನೆ ಬೇರೆ. ಇನ್ನು ಒಂದೆರಡು ವಿಚಾರ ಹೇಳಿ ನನ್ನ ಮಾತು ಮುಗಿಸುತ್ತೇನೆ. ರಾಜಸ್ವ ತೆರಿಗೆ ಪರ್ಸಂಟೇಜ್ ನೋಡಿದರೆ 91-92ರಲ್ಲಿ 24 ಪರ್ಸಂಟ್, 93-94ರಲ್ಲಿ 23 ಪರ್ಸಂಟ್ ಎಲ್ಲಾ ಇದೆ. ಕೇಂದ್ರ ಪಾಲು 80.43 ಪರ್ಸಂಟ್‌ಗೆ ಏರಿದೆ. 91-92ರಲ್ಲಿ, 92-93ರಲ್ಲಿ 90.17 ಪರ್ಸಂಟ್. 93-94ರಲ್ಲಿ 10 ಪರ್ಸಂಟ್ ಕಡಿಮೆಯಾಗಿದೆ. ಕೇಂದ್ರದ ಅನುದಾನ 30.37 ಪರ್ಸೆಂಟ್. ಆ ಮೇಲೆ 90.81 ಆಗಿದೆ, ಕೇಂದ್ರದ ಪಾಲು ಕೂಡ ಅಲ್ಲಿ ಬರುವುದಿಲ್ಲ. ಆ ಮೇಲೆ ರಿಯಾಯಿತಿ, ರೈತರ ಬಗ್ಗೆ ನಾವು ಮಾತನಾಡುತ್ತೇವೆ. ಏಕೆಂದರೆ ಚುನಾವಣೆ ಕಾಲದಲ್ಲಿ ನಿಮ್ಮ ಚುನಾವಣೆ ಪ್ರಣಾಳಿಕೆಯಲ್ಲಿ ನಾವು ಆ ರೀತಿ ಮಾಡುತ್ತೇವೆ ಈ ರೀತಿ ಮಾಡುತ್ತೇವೆ ಎಂದು ಹೇಳಿರುತ್ತೀರಿ. ಸಹಜವಾಗಿ ಎಲ್ಲಾ ಪಕ್ಷಗಳೂ ಹೇಳತಕ್ಕ ಮಾತು ಇದು. ತಾವು ಅಧಿಕಾರಕ್ಕೆ ಬಂದ ಮೇಲೆ ರಿಯಾಯಿತಿ ಯಾವ ರೀತಿ ಕೊಟ್ಟಿದ್ದೀರಿ, ಎಷ್ಟು ಕೊಟ್ಟಿದ್ದೀರಿ? ಇನ್ನೂ ಮೂರು ತಿಂಗಳು ಆಗಿಲ್ಲ. ಮೂರು ತಿಂಗಳಿಗೆ ಒಂದು ಬಜೆಟ್ ಇಟ್ಟಿದ್ದೀರಿ. ಹಾಗಾದರೆ ಒಂದು ವರ್ಷದಲ್ಲಿ ಎಷ್ಟು ಬಜೆಟ್ ಇಡಬೇಕಾಗಿತ್ತು? ಈಗ ಬಜೆಟ್ ಇಟ್ಟಿದ್ದರಿಂದ ಮಾತನಾಡಬೇಕಾಯಿತು. ಇಲ್ಲದಿದ್ದರೆ ನಾನು ಏನೂ ಹೇಳುತ್ತಿರಲಿಲ್ಲ. ಈಗ ನಿಮ್ಮ ಟ್ಯಾಕ್ಸ್ ಸ್ಟ್ರಕ್ಚರ್‌ನಲ್ಲಿ ಯಾವ ರೀತಿ ರಿಯಾಯಿತಿ ಇಟ್ಟಿದ್ದೀರಿ ಎಂಬುದನ್ನು ವಿಚಾರ ಮಾಡಿ. ತಾವು ಹೇಳಿದಿರಿ ಹಿಂದಿನ ಸರ್ಕಾರ ಮಾಡಿದ ಅನ್ಯಾಯ ಎಂದು. 90-91 again my period, it was never heard of in Karnataka's financial history.

ಇಲ್ಲಿ ನೋಡಿ ಪರ್ಸೆಂಟೇಜ್ 654.45 ಇದೆ. ಹುಡುಕಿ, ನಿಮ್ಮ ಡ್ಯಾಕ್ಯುಮೆಂಟ್ ತೆಗೆಯಿರಿ. 654.45 ಪರ್ಸೆಂಟೇಜ್ ರಿಯಾಯಿತಿಗಳನ್ನು ಟ್ಯಾಕ್ಸೇಷನ್ ಮತ್ತೊಂದು ಕೊಡತಕ್ಕದ್ದು ರಾಜ್ಯದ ಜನ ಹಿತಕ್ಕಾಗಿ. ನಾವು ರಿಯಾಯಿತಿ ಕೊಟ್ಟಿರತಕ್ಕದ್ದು ನಿಜ. ನಾನು ಹೇಳುತ್ತೇನೆ ಭವಿಷ್ಯದಲ್ಲಿ ಮತ್ತೆ ಅಧಿಕಾರಕ್ಕೆ ಬಂದರೆ ನಾವು resources augment depending upon that, ಗಮನದಲ್ಲಿಟ್ಟು ರಿಯಾಯಿತಿ ಕೊಡದಿದ್ದರೆ

You can not give supporting hand to a poor man living in the rural area or in the urban areas. ಮಾಡುವುದಕ್ಕೆ ಎಂದೂ ಸಾಧ್ಯವಿಲ್ಲ. ಒಂದು ದೃಷ್ಟಿಯಿಂದ ಹೇಳುತ್ತಿದ್ದೇನೆ. ಇನ್ನು ಮೈನಾರಿಟೀಸ್ ಕಾರ್ಪೊರೇಷನ್, ಕೇಂದ್ರದ ಮೈನಾರಿಟೀಸ್ ಕಾರ್ಪೊರೇಷನ್‌ನಿಂದ ನೀವು ಸಿಕ್ಕಾಬಟ್ಟೆ ಹಣ ತೆಗೆದುಕೊಳ್ಳುತ್ತಿದ್ದೀರಿ ಎಂದು ಬಜೆಟ್ ಭಾಷಣದಲ್ಲಿ ಇದೆ. ನನಗೆ ಅರ್ಥವಾಗದೇ ಇರತಕ್ಕ ವಿಚಾರ ಇದು. ಮಾನ್ಯ ನರಸಿಂಹರಾಯರು ಕೇಂದ್ರ ಸರ್ಕಾರದಲ್ಲಿ ಹಣ ಇಲ್ಲವೆಂದು ನಮ್ಮಿಂದ ಕೊಡುವುದಕ್ಕಾಗುವುದಿಲ್ಲವೆಂದು ಹೊಡೆದು ಕೊಳ್ಳುತ್ತಿದ್ದಾರೆ. ಆದರೆ ನೀವು ಅವರಿಂದ ಹಣ ತೆಗೆದುಕೊಳ್ಳುತ್ತೇವೆಂದು ಹೇಳುತ್ತಿದ್ದೀರಿ. ಅದೇ ರೀತಿ ಬ್ಯಾಕ್‌ವಾರ್ಡ್ ಕ್ಲಾಸ್ ಕಮೀಷನ್ ಮತ್ತು ಷೆಡ್ಯೂಲ್ಡ್ ಕ್ಯಾಸ್ಟ್ ಕಾರ್ಪೊರೇಷನ್‌ಗಳು. ಹಣ ಇಡಬೇಕಾದರೆ ಯಾವಾಗಲೂ ಧೈರ್ಯವಾಗಿ ಇಡಬೇಕಾಗುತ್ತದೆ. ಯುವಕರಿಗೆ ಎಂಪ್ಲಾಯಿಂಟ್‌ಮೆಂಟ್ ಕೊಡತಕ್ಕ ವಿಚಾರದಲ್ಲಿ ತಾವು ಹೇಳಿದ್ದೀರಿ. ಎಲ್ಲಾ ಕಡೆಯೂ ಕೂಡ ಆ ಶಕ್ತಿಯನ್ನು ತುಂಬಬೇಕಾಗುತ್ತದೆ. ಆ ದೃಷ್ಟಿಯಿಂದ ನಾನು ಹೇಳಿದ್ದುದು. 92-93ರಲ್ಲಿಯೂ ಕೂಡ ಅದೇ ರೀತಿ ಅಂಕಿ ಅಂಶಗಳು ಇವೆ. 93-94ರಲ್ಲಿ ಕೂಡ ಹಾಗೆ ಇದೆ. ಕೊನೆಯದಾಗಿ ಒಂದು ಮಾತನ್ನು ತಮ್ಮ ಗಮನಕ್ಕೆ ತರುತ್ತೇನೆ. ಕರ್ನಾಟಕ ರಾಜ್ಯದ ಸಂಪೂರ್ಣ ಹಿತಕಾಕಗಿ ನೀವು ಮೊದಲು ಟ್ಯಾಕ್ಸೇಷನ್ ವಿಚಾರದಲ್ಲಿ ಭಾರತ ಸಂವಿಧಾನದ ಆರ್ಟಿಕಲ್ 323ನಲ್ಲಿ ಏನಿದೆ ಅದರ ಪ್ರಕಾರ ಒಂದು ಟ್ಯಾಕ್ಸೇಷನ್ ಟ್ರಿಬ್ಯೂನಲ್ ರಚನೆ ಮಾಡಬೇಕು. ಅದು ಲೀಗಲ್ ಅಥಾರಿಟಿ. ಅದನ್ನು ಮಾಡಿ ಮುಂದಕ್ಕೆ ಹೋದರೆ ಮಾತ್ರ ಸಾಧ್ಯ. ಇಲ್ಲದಿದ್ದರೆ ಆಗುವುದಿಲ್ಲ ಎಂಬ ಮಾತನ್ನು ನಾನು ತಿಳಿಸಿದ್ದೇನೆ. ಆ ನಂತರ ಸೈಟ್ ಕೊಡತಕ್ಕ ವಿಚಾರದಲ್ಲಿ ನಾನು ಸಲಹೆ ಕೊಡುವುದು ಏನೆಂದರೆ, ಇವತ್ತು ಎಲ್ಲಿಯೂ ಸರ್ಕಾರಿ ಜಾಗ ಸಿಗುವುದಿಲ್ಲ. ಗೋಮಾಳಗಳು ಹೋದವು, ಎಲ್ಲಾ ಹೋದವು. ಈ ರೆಗ್ಯುಲರೈಸೇಷನ್ ಕಾನೂನು ಏನು ಮಾಡಿದ್ದೀರಿ, ಅದರಿಂದ ಅವು ಸಿಗುವುದಿಲ್ಲ. ಒಂದು ಸಾರಿ ಒಂದು ಕಡೆ ಆ ಕಾನೂನು ಮಾಡುತ್ತೀರಿ. ಇನ್ನೊಂದು ಕಡೆ ಸೈಟಿಗೆ ಜಾಗ ಹುಡುಕಿಕೊಂಡು ಸರ್ಕಾರಿ ಭೂಮಿಗೆ ಹೋಗುತ್ತೀರಿ. ಎಲ್ಲಿದೆ ಸರ್ಕಾರಿ ಜಮೀನು? ಹಿಂದೆ ಇದ್ದ ಹಾಗೆ ಗ್ರಾಮಗಳಲ್ಲಿ ಭೂಮಿ ಇಲ್ಲವೇ ಇಲ್ಲ. ಎಲ್ಲಾ ಮುಕ್ತಾಯವಾಗಿದೆ. That is why during my regime, I took up a decision to purchase the land from the private individuals who are owning the land, closer to the village. ಅದಕ್ಕೆ, 70-80 ಕೋಟಿ ಅಥವಾ 10 ಕೋಟಿ ಇರಬಹುದು. ನಾನು ಬಿಟ್ಟ ಮೇಲೆ ಎಷ್ಟೋ ಹಣ ಬಿಡುಗಡೆ ಆಯಿತು ಗೊತ್ತಿಲ್ಲ. ಹಣ ಬಿಡುಗಡೆ ಮಾಡಿದ ಮೇಲೆ ಜಿಲ್ಲಾಧಿಕಾರಿಗಳು ಅಂತಿಮ ಅಥಾರಿಟಿ ಆಗಿರಬೇಕು, ಶಾಸಕರೂ ಕೂಡ ಇರಬೇಕು ಅಲ್ಲಿ ಅಸಿಸ್ಟೆಂಟ್ ಕಮಿಷನರುಗಳು ಇರುತ್ತಾರೆ. ಎಲ್ಲರೂ ಸೇರಿ ಕೆಲಸ ಮಾಡಬೇಕು ಎಂಬ ಮಾತು ಆಡಿದೆ. ನಿಜ ಹೇಳಬೇಕೆಂದರೆ ಶಾಸಕರ ಬಗ್ಗೆ ಒಂದೇ ಒಂದು, ಅದರ ಬಗ್ಗೆ ಚರ್ಚೆಯಾಗತಕ್ಕ ಕಾಲದಲ್ಲಿ

ನಾನು ಇರಲಿಲ್ಲ. ನಾನು ಬಜೆಟ್ ಬಗ್ಗೆ ಮಾತನಾಡುವುದಕ್ಕೆ ಹೋಗುವುದಿಲ್ಲ. ಇವತ್ತು ಒಬ್ಬರು ಶಾಸಕರು ಆ ಪಾರ್ಟಿ ಇರಬಹುದು ಈ ಪಾರ್ಟಿ ಇರಬಹುದು ಯಾರೇ ಇರಬಹುದು, We are all elected representatives of the people. yes. It is true. Even in Taulak Panchayath elections to whichever party one may be belong.

ಅದೇ ರೀತಿ ಜಿಲ್ಲಾ ಪರಿಷತ್ತು ಮತ್ತೊಂದು ಇದೆ. ಎಂ.ಎಲ್.ಎ. ರವರ ಜವಾಬ್ದಾರಿ ಬಹಳ ದೊಡ್ಡದು. ನನ್ನ ಕಾಲದಲ್ಲಿ ಶಾಸಕರನ್ನು ಎಷ್ಟು ಕಮಿಟಿಗಳಿಗೆ ಅಧ್ಯಕ್ಷರನ್ನಾಗಿ ಮಾಡಿದ್ದೆ ಎಂಬುದನ್ನು ಹೇಳಿಬಿಡುತ್ತೇನೆ. ಕರ್ನಾಟಕ ರಾಜ್ಯದ ಇತಿಹಾಸದಲ್ಲಿ ನೀವೂ ಎಲ್ಲೂ ಕೂಡ ನೋಡುವುಧಕ್ಕಾಗುವುದಿಲ್ಲ. ಅದರಲ್ಲಿ ನಂಬಿಕೆಯುಳ್ಳವನು ನಾನು. ನಾನು ಸೋಷಲಿಸ್ಟ್ ಪಾರ್ಟಿಯಿಂದ ಬಂದವನು. ಆ ನಂಬಿಕೆ ಇಟ್ಟುಕೊಂಡೇ ಬಂದಿದ್ದೇನೆ ನಾನು. ಮಾನ್ಯ ಸಭಾಧ್ಯಕ್ಷರೇ, 20 ಅಂಶಗಳ ಆರ್ಥಿಕ ಕಾರ್ಯಕ್ರಮ ಇದೆ. 20 ಅಂಶಗಳ ಆರ್ಥಿಕ ಕಾರ್ಯಕ್ರಮ ಕಮಿಟಿಗೆ ಎಂ.ಎಲ್.ಎ. ಅಧ್ಯಕ್ಷರು. ತಮಗೆಲ್ಲರಿಗೂ ಗೊತ್ತಿದೆ, ಬಿ.ಜೆ.ಪಿ. ಯವರಿದ್ದರು. ನಾನು ಹೇಳಿದ್ದೆ. ನಾನು ಮುಖ್ಯ ಮಂತ್ರಿಯಾಗಿದ್ದಾಗ ಹೇಳಿದ ಮಾತು. ನೋಡಪ್ಪ, ಇವತ್ತೇನೋ ನಾವು 180 ಜನ ಇರಬಹುದು. ಈ ಕಡೆ 24-25 ಜನ ನೀವು ದಳದವರು ಕುಳಿತುಕೊಂಡಿದ್ದೀರಿ. ಬಿ.ಜೆ.ಪಿ. ಯವರು ಮೂರು ನಾಲ್ಕು ಜನ ಇಲ್ಲಿ ಕುಳಿತಿದ್ದರು. ಸ್ವತಂತ್ರ ಸದಸ್ಯರಿದ್ದರು. ಮಾನ್ಯ ವಾಟಾಳ್ ನಾಗರಾಜ್ ಅವರು ಕನ್ನಡ ಚಳುವಳಿಯಿಂದ ಇದ್ದರು. ಎಂ.ಇ.ಎಸ್. ನವರಿದ್ದರು. ನಾನು ಹೇಳಿದೆ. ನೋಡಿ ಅವೆಲ್ಲಾ ಗೊತ್ತಿಲ್ಲ. ಜನ ಆರಿಸಿ ಕಳುಹಿಸಿದ ಮೇಲೆ ಜನ ವರ್ಡಿಕ್ಟ್ ಅನ್ನು ನಾವು ಮಾನ್ಯತೆ ಮಾಡಬೇಕು. ಆದ್ದರಿಂದ ಇಲ್ಲಿ ನಮ್ಮ ಪಾರ್ಟಿಯವರನ್ನು ಹಾಕಿ, ನಿಮ್ಮ ಪಾರ್ಟಿಯವರನ್ನು ತೆಗೆದು ಹಾಕುತ್ತೇನೆ ಎಂಬ ಮಾತನ್ನು ನಾನು ಆಡಲಾರೆ. ಅದೆಲ್ಲಾ ಆಗುವುದಿಲ್ಲ, equal treatment to all MLAs. as far as my government's administration is concerned, ಎನ್ನುವ ಮಾತನ್ನು ಆಡಿ 20 ಅಂಶದ ಆರ್ಥಿಕ ಕಾರ್ಯಕ್ರಮಕ್ಕೆ ಅಧ್ಯಕ್ಷ ಎಂ.ಎಲ್.ಎ. ಆರಾಧನಾ ಸಮಿತಿಗೆ ಅಧ್ಯಕ್ಷ ಎಂ.ಎಲ್.ಎ., ಆಶ್ರಯ ಯೋಜನೆಗೆ, ಸೈಟು ಕೊಡುವುದು ಮನೆ ಕೊಡತಕ್ಕದ್ದು ಇದಕ್ಕೆ ಅಧ್ಯಕ್ಷ ಎಂ.ಎಲ್.ಎ. ಆಮೇಲೆ ಟಾಸ್ಕ್ ಫೋರ್ಸ್ ಅಧ್ಯಕ್ಷ ಎಂ.ಎಲ್.ಎ. ಆಮೇಲೆ ಅಕ್ರಮ ಸಾಗುವಳಿಯನ್ನು ಸಕ್ರಮಗೊಳಿಸುವುದು. ಏಕೆಂದರೆ ಜನ ಬಂದು ನಿಮಗೆ ಅರ್ಜಿ ಕೊಡುತ್ತಾರೆ. ಅದೊಂದು ಗೋಳಿನ ಕೆಲಸ. ಆಮೇಲೆ ಲ್ಯಾಂಡ್ ಗ್ರ್ಯಾಂಟ್ ಕಮಿಟಿ. ಸ್ವಾಮಿ, ನಾನು ಒಂದು ಹೇಳುತ್ತೇನೆ ನಾನು. ಇವತ್ತು ಆ ಕಡೆ ಕುಳಿತುಕೊಂಡಿದ್ದೀರಿ ನೀವು, ನಾವು ಈ ಕಡೆ ಕುಳಿತುಕೊಂಡಿದ್ದೇವೆ. ನನಗೆ ಅದರ ಬಗ್ಗೆ ಅಲ್ಲ. ಮಾನ್ಯ ಸಭಾಧ್ಯಕ್ಷರೇ, ಒಂದೇ ಒಂದು. ನಾವೆಲ್ಲಾ ಜವಾಬ್ದಾರಿಯಿಂದ ಕಾರ್ಯ ನಿರ್ವಹಣೆ ಮಾಡಬೇಕು. ಇವತ್ತು ನೀವು....

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಬಂಗಾರಪ್ಪನವರ ಕಾಲದಲ್ಲಿ ನಿಜ, ಅವರು ಹೇಳಿದ್ದುದು ಶಾಸಕರನ್ನು ಛೇರ್ಮನ್ನರನ್ನಾಗಿ ಮಾಡಿದ್ದೆವು ಎಂದು. ಆಗ ನಾವಿದ್ದೆವಲ್ಲಾ ವಿರೋಧ ಪಕ್ಷದಲ್ಲಿ, ನಾವು ನಾಮಕಾವಸ್ತೆ ಛೇರ್ಮನ್ನರು. 4 ಜನ ಅವರ ಪಾರ್ಟಿಯವರು. ಅವರು 4 ಜನ ಕೈ ಎತ್ತಿದರೆ ನಾನೇನೂ ಮಾಡುವ ಹಾಗಿಲ್ಲ. ಅವರು ಹೇಳಿದ್ದೇ ಬರೆಯಬೇಕು ನಾನು. ಇಲ್ಲದೇ ಇದ್ದರೆ ಎದ್ದು ಬರಬೇಕು. ಈ ಸ್ಥಿತಿ ಇತ್ತು ಆಗ. ಅದನ್ನು ಈಗ ಬೇಡ ಎಂದು ಅಧಿಕಾರಿಗಳಿಗೆ ಕೊಟ್ಟಿದ್ದುದು.

ಶ್ರೀ ಎಂ.ಮಲ್ಲಿಕಾರ್ಜುನ ಖರ್ಗೆ :- ನೀವು ಈಕ್ವಲ್ ಮಾಡುತ್ತೀರಾ?

ಶ್ರೀಮತಿ ಪ್ರಮಿಳಾ ನೇಸರಗಿ :- ಯಾವುದೂ ಇಲ್ಲ ಈಗ. ಎಲ್ಲಾ ತೆಗೆದು ಹಾಕಿದ್ದೀರಿ. ಏನೂ ಇಲ್ಲವಲ್ಲಾ. ಏನೇನೂ ಇಲ್ಲ ಈಗ.

ಶ್ರೀ ಆರ್.ಎಲ್.ಜಾಲಪ್ಪ :- ಇವತ್ತು ಒಂದು ಬಿಲ್ ಇಂಟ್ರೊಡ್ಯೂಸ್ ಮಾಡುತ್ತಿದ್ದೇನೆ.

ಶ್ರೀ ವಾಟಾಳ್ ನಾಗರಾಜ್ :- ಆಶ್ರಯ ಸಮಿತಿ ಇತ್ತು ನಿಜ. ಅವರ ತಾಲ್ಲೂಕಿನಲ್ಲಿ ಹಾಗಾಗಿರಬಹುದು. ಎಲ್ಲಾ ಕಡೆ ಬೇರೆ ಬೇರೆ ಪಕ್ಷದವರಿದ್ದರು. ಒಂದೇ ಪಕ್ಷದವರು ಇರಲಿಲ್ಲ. ಮತ್ತು ನಾನು ತಿಳಿದುಕೊಂಡ ಪ್ರಕಾರ ಆಶ್ರಯ ಸಮಿತಿಯ ಅಧ್ಯಕ್ಷರಾಗಿ ಶಾಸಕರು ಪರಿಣಾಮಕಾರಿಯಾಗಿ ಉಪ ವಿಭಾಗಾಧಿಕಾರಿಯನ್ನು ನೇಮಿಸಿ ಅದಕ್ಕೆ ಶಾಸಕರನ್ನು ಸದಸ್ಯರನ್ನಾಗಿ ಮಾಡಬೇಕು ಎಂದು ಹೊರಟಿದ್ದೀರಲ್ಲಾ ನಿಮ್ಮ ತಾಲ್ಲೂಕಿನ ಕೋಪ ತೆಗೆದುಕೊಂಡು ಇಡೀ ಎಲ್ಲಾ ಶಾಸಕರ ಮೇಲೆ ತೋರಿಸುವುದಕ್ಕೆ ಹೊರಟಿದ್ದೀರಲ್ಲ ನೀವು ಅದು ಒಳ್ಳೆಯದಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಇಲ್ಲ, ನನ್ನ ತಾಲ್ಲೂಕಿನ ಕೋಪ ಅಲ್ಲ. ಅಕ್ಚುಯಲ್ಲಾಗಿ ಹಾಗೆ ಆಗಿರುವುದು. ಈಗ ಅದಕ್ಕೆ ಒಂದು ಬಿಲ್ ಇಂಟ್ರೊಡ್ಯೂಸ್ ಮಾಡುತ್ತಾ ಇದ್ದೇನೆ. ಆಗ ಹೇಳುತ್ತೇನೆ. ಮಾನ್ಯ ಸದಸ್ಯರು ಕೆಲವರು ಎಷ್ಟೆಷ್ಟು ಮೀಟಿಂಗ್‌ಗಳಿಗೆ ಅಟೆಂಡ್ ಮಾಡಿದ್ದಾರೆ, ಎಷ್ಟೆಷ್ಟು ಕೇಸ್ ಅದರೊಳಗೆ ಡಿಸ್ಪೋಸ್ ಮಾಡಿದ್ದಾರೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ತರುತ್ತೇನೆ. ಸ್ವಲ್ಪ ಕಾಯಿರಿ.

ಶ್ರೀ ವಾಟಾಳ್ ನಾಗರಾಜ್ :- ಕೆಲವು ಕಡೆ ಆಗಿರುತ್ತವೆ. ಅಂದಾಕ್ಷಣ ನೀವು ಸಂಪೂರ್ಣವಾಗಿ ಎಲ್ಲಾ ಸಮಿತಿಗಳೂ ರದ್ದಾಗಿ ಬಿಡಬೇಕು ಈ ಸಮಿತಿಗಳೆಲ್ಲಾ ಸರಿಯಿಲ್ಲ, ಮತ್ತು ಈ ವ್ಯವಸ್ಥೆ ಸರಿಯಿಲ್ಲ ಎಂದು ಹೇಳುತ್ತೀರಾ?

ಶ್ರೀ ಆರ್.ಎಲ್.ಜಾಲಪ್ಪ :- ಎಲ್ಲಾ ಸಮಿತಿಗಳೂ ರದ್ದಾಗಬೇಕು ಎಂದು ಹೇಳುತ್ತಿಲ್ಲ. ಲ್ಯಾಂಡ್ ಗ್ರಾಂಟ್ ಕಮಿಟಿಗೆ ತಹಸೀಲ್ದಾರರೇ ಅಧ್ಯಕ್ಷರಾಗಿದ್ದರು.

ಶ್ರೀ ವಾಟಾಳ್ ನಾಗರಾಜ್ :- ಇಲ್ಲ, ಇಲ್ಲ.

ಶ್ರೀ ಆರ್.ಎಲ್.ಜಾಲಪ್ಪ :- ಹೌದು. ತೆಗೆಸಿ ನೋಡಿ ದಯವಿಟ್ಟು. ತಹಸೀಲ್ದಾರ್‌ರೇ ಅಧ್ಯಕ್ಷರು ಅದಕ್ಕೆ. ಲ್ಯಾಂಡ್ ಟ್ರಿಬ್ಯುನಲ್‌ಗೆ ಅಸಿಸ್ಟೆಂಟ್ ಕಮಿಷನರ್ ಅಧ್ಯಕ್ಷರು. ಆರಾಧನಾ ಸಮಿತಿಗೆ ತಹಸೀಲ್ದಾರರು ಅಧ್ಯಕ್ಷರು. ತೆಗೆದು ನೋಡಿ.

ಶ್ರೀ ಎಸ್.ಬಂಗಾರಪ್ಪ :- ಮಾನ್ಯ ಸಭಾಧ್ಯಕ್ಷರೇ, ನಾನು ಏತಕ್ಕೆ ಹೇಳುತ್ತೇನೆ ಅಂದರೆ....

ಶ್ರೀ ಬಸವರಾಜ ರಾಯರೆಡ್ಡಿ :- ಹೌಸಿಂಗ್ ಪಾಲಿಸಿ ಹೊಸದಾಗಿ ತರುತ್ತಿದ್ದೇನೆ. ಆಗ ಎಲ್ಲಾ ಸರಿ ಹೋಗುತ್ತದೆ. ತಾತ್ಕಾಲಿಕವಾಗಿ ಅಸಿಸ್ಟೆಂಟ್ ಕಮಿಷನರ್‌ರನ್ನು ನೇಮಿಸಿದ್ದಾರೆ. ಮುಂದೆ ಎಲ್ಲಾ ಸರಿ ಹೋಗುತ್ತದೆ.

ಶ್ರೀ ಎಸ್.ಬಂಗಾರಪ್ಪ :- ನೀವು ಎಷ್ಟು ಹೊತ್ತಿಗೆ ಬಂದಿರಿ?

ಶ್ರೀ ಬಸವರಾಜ ರಾಯರೆಡ್ಡಿ :- ಈಗ.

ಶ್ರೀ ಎಸ್.ಬಂಗಾರಪ್ಪ :- ಈಗ ಬಂದರಾ? ಸ್ವಲ್ಪ ರೆಸ್ಟ್ ತೆಗೆದುಕೊಳ್ಳಿ. ಏಕೆಂದರೆ ಬೆಳಿಗ್ಗೆಯಿಂದ ಚರ್ಚೆ ಮಾಡಿದ್ದೇವೆ. ಏಕೆಂದರೆ ಹೌಸಿಂಗ್ ಮಿನಿಸ್ಟರ್ ಅವರು. ಹೌಸಿಂಗ್ ನೆನಪು ಬಂದು ಬಿಟ್ಟಿದೆ ನಮ್ಮ ರಾಯರೆಡ್ಡಿ ಅವರಿಗೆ. ಮಾನ್ಯ ಸಭಾಧ್ಯಕ್ಷರೇ, ನಾನು ಹೇಳುವುದಿಷ್ಟೆ ವಿಷಯ. ಇವತ್ತು ಏನಾಗಿದೆ ಎಂದರೆ ಗ್ರಾಮ ಪಂಚಾಯಿತಿಯಲ್ಲಿರತಕ್ಕ ಒಬ್ಬ ಮಾನ್ಯ ಸದಸ್ಯರು. ನನಗೆ ಅವರ ಬಗ್ಗೆ ಅಪಾರವಾದ ಗೌರವವಿದೆ. ನಾನು ಗೌರವ ಕೊಟ್ಟೇ ಮಾತನಾಡುವುದು. ಏಕೆಂದರೆ ಅವೆಲ್ಲಾ ಚುನಾಯಿತ ಸಂಸ್ಥೆಗಳು. ನಾವೇ ಅಲ್ಲಿ ಓಟು ಕೊಡುತ್ತೇವೆ, ನಾವೆ ಅಲ್ಲಿ ಗೆಲ್ಲಿಸುತ್ತೇವೆ, ಅವರಿಗೆ ಗೌರವ ಕೊಡುವುದಿಲ್ಲ ಎಂದು ಹೇಳುವುದಕ್ಕಾಗುವುದಿಲ್ಲ. ಎಲ್ಲದಕ್ಕಿಂತ ಹೆಚ್ಚಾಗಿ ಡೀಸೆಂಟ್ರಲೈಸೇಷನ್ ಆಫ್ ಪವರ್ಸ್ ಬಗ್ಗೆ ನಾವು ಒಪ್ಪಿದ್ದೇವೆ. And it is more over decentralisation of powersm devolution of funds through all the local bodies created under law. ಅದಕ್ಕೆ ನಾವು ಹಣ ಕೊಡಬೇಕು ಎನ್ನತಕ್ಕ ವಿಚಾರದ ಬಗ್ಗೆ ಮತ್ತೊಂದು ಭಿನ್ನಾಭಿಪ್ರಾಯ

ಕೂಡ ಅಲ್ಲಿ ಬರುವುದಕ್ಕೆ ಸಾಧ್ಯವಿಲ್ಲ. ಒಬ್ಬ ಶಾಸಕ ಆ ತಾಲ್ಲೂಕಿನಲ್ಲಿ ಗೆದ್ದು ಹೋಗಿರತಕ್ಕವನು ಒಬ್ಬ ಗ್ರಾಮ ಪಂಚಾಯಿತಿ ಸದಸ್ಯ ಅಥವಾ ತಾಲ್ಲೂಕಾ ಪಂಚಾಯಿತಿಯವರು ಒಂದು ಸೈಟು ಕೊಡತಕ್ಕ ಅಧಿಕಾರವನ್ನು ಅವರಿಗೆ ಕೊಟ್ಟು ಇವನು ನೋಡುತ್ತಾ ಕುಳಿತುಕೊಳ್ಳಬೇಕು ಒಂದು ಪೇಪರ್ ಹಿಡಿದುಕೊಂಡು. ಅರ್ಜಿ ತಂದು ಇವನಿಗೆ ಕೊಡುತ್ತಾರೆ. ಅವನು ನೋಡುತ್ತಾ ಕುಳಿತುಕೊಳ್ಳಬೇಕು. ನೀವೆಲ್ಲರೂ ಕುಳಿತುಕೊಂಡಿದ್ದೀರಲ್ಲಾ ನೀವು, ಎಲ್ಲಾ ಪಾರ್ಟಿಯವರ ಹಣೆಬರಹವೇ ಅಷ್ಟೇ ನೀವೆಲ್ಲಾ ಕುಳಿತುಕೊಂಡಿದ್ದೀರಲ್ಲಾ. ನಿಮಗೆ ಒಂದು ಸೈಟ್ ಕೊಡಿಸುವುದಕ್ಕೂ ಆಗುವುದಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ :- ಹಾಗಾದರೆ ಸನ್ಮಾನ್ಯ ಮಾಜಿ ಮುಖ್ಯ ಮಂತ್ರಿಗಳು ಪಂಚಾಯಿತಿಗಳಿಗೆ ಈಗ ಅಧಿಕಾರ ಏನೂ ಕೊಡುವುದು ಬೇಡ ಎಂದು ಹೇಳುತ್ತೀರೇನು?

ಶ್ರೀ ಎಸ್.ಬಂಗಾರಪ್ಪ :- ನಾನು ಕೊಡುವುದು ಬೇಡ ಎಂದು ಹೇಳಲಿಲ್ಲ.

ಶ್ರೀ ಆರ್.ಎಲ್.ಜಾಲಪ್ಪ:- ಅವರು ಕೊಡುತ್ತಾ ಇದ್ದರೆ ನೀವು ನೋಡಿಕೊಂಡು ಕುಳಿತುಕೊಳ್ಳಬೇಕೆ? ಅಧಿಕಾರ ವಿಕೇಂದ್ರೀಕರಣ ಮಾಡಿದ ಉದ್ದೇಶ ಅದು. ಪಂಚಾಯಿತಿಗಳು, ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳನ್ನು ಮಾಡಿದ ಉದ್ದೇಶವೇ ಅದು. ಅವರಿಗೆ ಮನೆ, ಸೈಟು ಹಂಚುವುದು ಕೊಡುವುದು ಬೇಡ ಎಂದು ಹೇಳಿ ಎಲ್ಲಾ ನಾವು ಸೆಂಟ್ರಲೈಸ್ ಮಾಡಿಕೊಂಡು ಕುಳಿತುಕೊಳ್ಳೋಣ ಎಂದು ಹೇಳುತ್ತೀರೇನು?

ಶ್ರೀ ಎಸ್. ಬಂಗಾರಪ್ಪ:- ನಾನು ಹೇಳಿದೆ. I am a believer of theory called decentralisation of powers and develution of funds also to the local bodies like Grama Panchayat, Taluk Panchayaths and Zilla Panchayaths.

ಶ್ರೀ ಸಿದ್ಧರಾಮಯ್ಯ :- ಕಳೆದ ಒಂದು ವರ್ಷದಿಂದ ಗ್ರಾಮ ಪಂಚಾಯಿತಿ ಚುನಾವಣೆ ಮಾಡಿ ಗ್ರಾಮ ಪಂಚಾಯಿತಿಗಳು ಕೆಲಸ ಮಾಡುತ್ತಿವೆ. ಗ್ರಾಮ ಪಂಚಾಯಿತಿ ಸದಸ್ಯರು ಕೆಲಸ ಮಾಡುತ್ತಿದ್ದಾರೆ. ಈಗ ತಾಲ್ಲೂಕು ಪಂಚಾಯಿತಿಗಳು ಮತ್ತು ಜಿಲ್ಲಾ ಪಂಚಾಯಿತಿಗಳು ಅಸ್ತಿತ್ವಕ್ಕೆ ಬಂದಿವೆ. ಸೈಟುಗಳನ್ನು ಕೊಡತಕ್ಕದ್ದು, ಫಲಾನುಭವಿಗಳನ್ನು ಗುರುತಿಸುವುದು ಎಂ.ಎಲ್.ಎ.ಗಳು ಮಾಡಬೇಕೆ? ಅಲ್ಲಿ ಗ್ರಾಮ ಪಂಚಾಯಿತಿ ಸದಸ್ಯರುಗಳು ಆ ಊರಿನವರು ಗುರುತಿಸುವುದಿಲ್ಲವೇ? ಅವರು ಜನಗಳ

ಪ್ರತಿನಿಧಿಗಳಲ್ಲವೇ? ನಾವು ಹೇಗೆ ಗೆದ್ದು ಬಂದಿರುತ್ತೇವೆ, ಹಾಗೆಯೇ ಅವರೂ ಓಟು ತೆಗೆದುಕೊಂಡು ಬಂದಿರುತ್ತಾರೆ.

ಶ್ರೀ ವಾಟಾಳ್ ನಾಗರಾಜ್ :- ಶಾಸಕರು ಏನು ಮಾಡಬೇಕು ಸ್ವಾಮಿ?

ಶ್ರೀ ಸಿದ್ಧರಾಮಯ್ಯ :- ಶಾಸಕರಿಗೆ ಅದಕ್ಕಿಂತ ಒಳ್ಳೆಯ ಕೆಲಸಗಳಿವೆ.

ಶ್ರೀ ವಾಟಾಳ್ ನಾಗರಾಜ್ :- ಯಾವುದು ಒಳ್ಳೆಯ ಕೆಲಸಗಳು ನೀವು ಕೊಟ್ಟಿರುವುದು?

ಶ್ರೀ ಸಿದ್ಧರಾಮಯ್ಯ:- ಅವರು ಮಾಡತಕ್ಕ ಕೆಲಸಗಳು ಸರಿಯೋ ಇಲ್ಲವೋ ಎಂದು ನೋಡತಕ್ಕದ್ದು, ಕಾನೂನು ಮಾಡತಕ್ಕಂಥದ್ದು, ಈ ಕೆಲಸಗಳೆಲ್ಲಾ ಇರುತ್ತವೆ. ಅದನ್ನು ಬಿಟ್ಟು ಬಿಟ್ಟು ಗ್ರಾಮ ಪಂಚಾಯಿತಿ ಸದಸ್ಯ ಊರಿನವನು, ಯಾವ ಬೆನಿಫಿಷರೀಸ್‌ಗೆ ಕೊಡಬೇಕು ಎನ್ನುವ ಅವನ ಅಧಿಕಾರವನ್ನು ನೀವು ಏತಕ್ಕೆ ಕಿತ್ತುಕೊಳ್ಳುತ್ತೀರಿ? ಕೇಂದ್ರಿಕೃತ ಮಾಡುವುದಕ್ಕೆ ಏತಕ್ಕೆ ಹೋಗುತ್ತೀರಿ? ಗ್ರಾಮ ಪಂಚಾಯಿತಿ ಸದಸ್ಯ ತಾಲ್ಲೂಕು ಪಂಚಾಯಿತಿ ಸದಸ್ಯ, ಜಿಲ್ಲಾ ಪಂಚಾಯಿತಿ ಸದಸ್ಯ ಯಾರಿಗೆ ಕೊಡಬೇಕು, ಯಾರು ನಿಜವಾದಂಥ ಬೆನಿಫಿಷರಿ ಎಂಬುದನ್ನು ನೋಡತಕ್ಕದ್ದನ್ನು ಅವನಿಗೆ ಬಿಡಿ. ನೀವು ನಾವು ಎಂ.ಎಲ್.ಎ.ಗಳೇ ಅದನ್ನು ಮಾಡಬೇಕು ತಾಲ್ಲೂಕಿನಲ್ಲಿ ಕುಳಿತುಕೊಂಡು ಎಂದು ಹೇಳುವುದು ಸರಿಯಲ್ಲ. ನಾವು ಜನಗಳಿಂದ ಆಯ್ಕೆಯಾಗಿ ಬಂದಿರುತ್ತೇವೆ. ನಮ್ಮಷ್ಟೇ ಜವಾಬ್ದಾರಿಯುತವಾಗಿ ಅವರೂ ಕೂಡ ಆಯ್ಕೆಯಾಗಿ ಬಂದಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ :- ಒಂದು ಏನಾಗಿದೆಯೆಂದರೆ ಈಗ ಜಾಲಪ್ಪನವರು ಮತ್ತು ಸಿದ್ಧರಾಮಯ್ಯನವರು ಈಗ ಮಂತ್ರಿಗಳು. ಶಾಸಕರಾಗಿದ್ದರೆ ನಿಮಗೆ ಗೊತ್ತಾಗಿರುತ್ತಿತ್ತು. ಶಾಸಕನಾಗಿದ್ದೆ ಎಂದು ಹಳೇ ಕಾಲದ ಕಥೆ ಹೇಳಬೇಡಿ. ಈಗ ನೀವು ಮಂತ್ರಿಗಳು. ಮಂತ್ರಿಗಳಾಗಿರುವುದರಿಂದ ನಿಮಗೆ ಏನಾಗಿದೆ ಗೊತ್ತೇನು? ಅಧಿಕಾರ ಎಂಬುದು ನಿಮಗೆ ಅಪಾರವಾಗಿ ಸಿಕ್ಕಿಹೋಗಿದೆ. ಆದ್ದರಿಂದ ಶಾಸಕರನ್ನು ಕಟ್ಟಿಕೊಂಡು ನಿಮಗೇನಾಗಬೇಕಾಗಿದೆ? ಆದ್ದರಿಂದ ನೀವು ಏನು ಮಾಡುತ್ತೀರಿ, ಇನ್ನೊಬ್ಬರ ಬಗ್ಗೆ ಉಪದೇಶ ಹೇಳುತ್ತಿದ್ದೀರಿ.

ಶ್ರೀ ಸಿದ್ಧರಾಮಯ್ಯ :- ಅಧಿಕಾರ ವಿಕೇಂದ್ರಿಕರಣದ ಬಗ್ಗೆ ವಾದ ಮಾಡುತ್ತೀರಿ. ಕೆಳ ಹಂತದಲ್ಲಿರತಕ್ಕ ಪ್ರತಿನಿಧಿಗಳಿಗೆ ಅಧಿಕಾರ ಬೇಡವೇ?

ಶ್ರೀ ವಾಟಾಳ್ ನಾಗರಾಜ್ :- ಶಾಸಕರನ್ನು ನೀವು ಕಡೆಗಣಿಸುವುದು ಸರಿಯಲ್ಲ.

ಶ್ರೀ ಸಿದ್ಧರಾಮಯ್ಯ:- ಯಾರು ಶಾಸಕರನ್ನು ಕಡೆಗಣಿಸಿಲ್ಲ. ಶಾಸಕರ ಜವಾಬ್ದಾರಿ ಇನ್ನೂ ಕೂಡ ಎತ್ತರವಾದ ಜವಾಬ್ದಾರಿ ಎಂದು ಅಷ್ಟೆ ಹೇಳಿರುವುದು.

ಶ್ರೀ ಆರ್.ಎಲ್.ಜಾಲಪ್ಪ:- ಮಾನ್ಯ ಅಧ್ಯಕ್ಷರೇ, ಈ ಮೂರು ಸಮಿತಿಗಳು ಅಂದರೆ ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿ ಹಾಗೂ ಗ್ರಾಮ ಪಂಚಾಯಿತಿಗಳು ಸರಿಯಾಗಿ ಕೆಲಸ ಮಾಡಿದರೆ ಮಂತ್ರಿಗಳಿಗೆ ಏನೂ ಕೆಲಸ ಇರುವುದಿಲ್ಲ. ಶಾಸಕರಿರಲಿ ನಮಗೂ ಏನೂ ಇರುವುದಿಲ್ಲ. ಒಬ್ಬ ಅರ್ಜಿ ಕೊಡುವವನು ಇರುವುದಿಲ್ಲ. ಏನೋ ಹಾರ ಹಾಕಬಹುದು, ಒಂದೆರಡು ಬಿಸ್ಕತ್ ಕೊಟ್ಟು ಕಳುಹಿಸುವುದು ಬಿಟ್ಟರೆ ನಮಗೇನೂ ಅಧಿಕಾರ ಇರುವುದಿಲ್ಲ. ನಮ್ಮ ಉದ್ದೇಶವೂ ಅಷ್ಟೆ ತಾನೇ? ಡೀಸೆಂಟ್ರಲೈಸ್ ಮಾಡುವ ಉದ್ದೇಶ ಅದೇ.

ಶ್ರೀ ವಾಟಾಳ್ ನಾಗರಾಜ್ :- ಅಧ್ಯಕ್ಷರೇ, ಈಗ ಚರ್ಚೆ ಮುಗಿದಿದೆ. ನಿನ್ನೆ ಸಾಯಂಕಾಲ ನಮಗೆ ಸಭೆ ಕರೆಯುತ್ತೇನೆ ಎಂದು ಹೇಳಿದ್ದರು.

ಶ್ರೀ ಆರ್.ಎಲ್.ಜಾಲಪ್ಪ:- ನಮಗೆ ಮಾತ್ರ ಅಧಿಕಾರ ಬೇಕು, ಅವರು ಎಲೆಕ್ಟೆಡ್ ರೆಪ್ರಸೆಂಟಿಟೀವ್ಸ್ ಅವರಿಗೆ ಅಧಿಕಾರ ಬೇಡವೇ? ರಾಜ್ಯಾಂಗದತ್ತವಾಗಿ 73ನೇ ತಿದ್ದುಪಡಿಯಲ್ಲಿ ನಾವು ಒಪ್ಪಿಕೊಂಡಿದ್ದೇವೆ. ಕಾನೂನನ್ನು ಇಲ್ಲಿ ರೂಪಿಸಿಕೊಂಡಿದ್ದೇವೆ. ಅದರ ಪ್ರಕಾರ ಅವರಿಗೆ ಅಧಿಕಾರ ಕೊಡಬೇಕು. ನಾವು ಅಲ್ಲಿ ಕುಳಿತಾಗ ಒಂದು ಮಾತು ಆಡಿ ಇಲ್ಲಿ ಕುಳಿತಾಗ ಒಂದು ಆಡುವುದು ಬೇಡ. ಆ ತುತ್ತೂರಿ ಘೋಷಣೆಯವರ ಮೇಲೆ ಸಿಕ್ಕಾಪಟ್ಟೆ ಕೂಗಾಡಿ ಇಲ್ಲಿ ಬಂದು ಅಧಿಕಾರ ಕೊಡುವುದಿಲ್ಲ ನಾವೇ ಇಟ್ಟುಕೊಳ್ಳುತ್ತೇವೆ ಎಂದರೆ ಅವರು ಸುಮ್ಮನೆ ಕುಳಿತುಕೊಳ್ಳುತ್ತಾರಾ? ನಾವು ಆತ್ಮ ಸಾಕ್ಷಿಯಾಗಿಯಾದರೂ ಕೆಲಸ ಮಾಡಬೇಕಲ್ಲ.

ಶ್ರೀ ವಾಟಾಳ್ ನಾಗರಾಜ್ :- ನಾವು ಯಾರೂ ತಾಲ್ಲೂಕು ಪಂಚಾಯಿತಿ, ಜಿಲ್ಲಾ ಪಂಚಾಯ್ತಿ ಅಧಿಕಾರ ಏನು ಇದೆ, ಅದನ್ನೆಲ್ಲಾ ನಮಗೆ ಕೊಟ್ಟು ಬಿಡಿ ಎಂದು ನಾವು ಪಟ್ಟಿ ಹಾಕಿ ಕೊಟ್ಟಿಲ್ಲ. ನಾವು ಈಗಾಗಲೇ ಮಾತನಾಡಿದ್ದೇವೆ. ಇದರ ಬಗ್ಗೆ ಸಾಕಷ್ಟು ಚರ್ಚೆಯಾಗಿದೆ. ಮತ್ತೆ ಮುಖ್ಯ ಮಂತ್ರಿಗಳೇ ನಿನ್ನೆ ಸಾಯಂಕಾಲವೇ ಅಧ್ಯಕ್ಷರ ಕೊಠಡಿಯಲ್ಲಿ ಮಿಟಿಂಗ್ ಕರೆಯಬೇಕು ಎಂದು ಇದ್ದರು. ಕರೆದಿಲ್ಲ. ಕರೆಯಲೇಬೇಕಾಗುತ್ತದೆ. ಕರೆದು ತೀರ್ಮಾನವಾಗುತ್ತದೆ. ಇವತ್ತು ಆಗಲಿಲ್ಲ ಅಂದರೆ ನಾಳೆ ನಾಡಿದ್ದಾರೂ ಅವರು ಕರೆಯಲೇಬೇಕು.

ಶ್ರೀ ಎಸ್.ಬಂಗಾರಪ್ಪ :- ನಾನು ಒಂದು ಅಭಿಪ್ರಾಯವನ್ನು ಇಟ್ಟು ಹೇಳಿದೆ. ದಯವಿಟ್ಟು ಯಾರೂ ತಪ್ಪು ತಿಳಿದುಕೊಳ್ಳಬಾರದು. ಮಾನ್ಯ ಸದನದ ಮಾನ್ಯ ಸದಸ್ಯರು am a believer of that theory whether you agree or not that is left to you.

ಇವತ್ತು ನಾನು ಅಧಿಕಾರ ಬಿಟ್ಟ ಮೇಲೆ ಕಮಿಟಿ ಅಧ್ಯಕ್ಷರು, ಎಂ.ಎಲ್.ಎ. ಬದಲಾವಣೆಯಾದರೆ ಅದಕ್ಕೆ ನಾವು ಏನೂ ಮಾಡುವುದಕ್ಕಾಗುವುದಿಲ್ಲ. Don't held me responsible. After all this ನಾನು ಒಂದು ನೀತಿಯನ್ನು ನಂಬಿದ ಮೇಲೆ ಆ ನೀತಿಯನ್ನು ಜಾರಿಗೆ ಕೊಟ್ಟೆವು ನಾವು. ಕೊಟ್ಟಿರತಕ್ಕ ಕಾಲದಲ್ಲಿ ಶಾಸಕರಿಗೆ ಪ್ರಾಮುಖ್ಯತೆಯನ್ನು ಜನರ ಜೊತೆ ಸಂಪರ್ಕ ಇರತಕ್ಕಂತಹವರು, ಕೆಲಸ ಕಾರ್ಯಗಳನ್ನು ಮಾಡಿಕೊಂಡಿರಕ್ಕಂತಹವರು ಯಾವುದೇ ಪಕ್ಷಪಂಗಡಕ್ಕೆ ಸೇರಿರತಕ್ಕಂತಹವರು ಇದ್ದರೂ ಉಪಯೋಗವಾಗುತ್ತದೆ ಎನ್ನತಕ್ಕಂತಹ ದೃಷ್ಟಿಯಿಂದ ನಾನು ಮಾಡಿದೆ. ಇಲ್ಲ ಇಲ್ಲ, ಅದು ಅಭಿಪ್ರಾಯ ಬೇರೆ ರೀತಿಯಲ್ಲಾಗುತ್ತದೆ ಎಂದು ಮತ್ತೊಬ್ಬರು ಬೇರೆ ಅಭಿಪ್ರಾಯ ಇಟ್ಟುಕೊಂಡರೆ I am sorry I can not vouch for this. Now point is this. ಏನು ತಾಲ್ಲೂಕು ಪಂಚಾಯಿತಿ, ಗ್ರಾಮ ಪಂಚಾಯಿತಿ ಜಿಲ್ಲಾ ಪಂಚಾಯಿತಿ ಏನು ಇವೆ, ಅವುಗಳ ಅಧಿಕಾರವನ್ನು ಸ್ವಲ್ಪ ಮೊಟಕು ಮಾಡಬೇಕು ಎಂದು ನಾನು ಹೇಳುತ್ತಿಲ್ಲ. ನಾನು ಎಂದೂ ಕೂಡ ಅದನ್ನು ಹೇಳಲಾರೆ. ಏಕೆಂದರೆ they are our representatives. ನಾವು ಅವರ ರೆಪ್ರೆಸೆಂಟಿಟೀವ್ಸ್ ಹೇಗೋ ಹಾಗೆ ಅವರು ನಮ್ಮ ರೆಪ್ರೆಸೆಂಟಿಟೀವ್ಸ್ in their respective body. ಹಲವರು ಇದ್ದಾರೆ. ಆದರೆ ಶಾಸಕರಿಗೆ ಯಾವ ರೀತಿ ಪ್ರಾಮುಖ್ಯತೆಯನ್ನು ಕೊಟ್ಟು, ಅವರ ಜೊತೆ ಇವರಿಗೂ ಕುಂದು ಬರದ ಹಾಗೆ ಯಾವ ರೀತಿ ಇನ್ವಾಲ್ವ್ ಮಾಡುತ್ತೀರಿ ಎನ್ನತಕ್ಕಂತಹದರಲ್ಲೇ ನಿಮ್ಮ ಬುದ್ಧಿವಂತಿಕೆ ಇರುವುದು. ನೀವು ಅದನ್ನು ಮಾಡಿಕೊಡಿ ನಮಗೆ. ಅಷ್ಟು ಮಾಡಿಕೊಟ್ಟರೆ ಸಾಕು. ಯಾವುದೇ ಪಕ್ಷಕ್ಕೆ ಸೇರಿದ್ದರೂ ಶಾಸಕರು ಸಂಬಂಧಪಟ್ಟವರು ಸಂತೋಷ ಪಡುತ್ತಾರೆ. ನೀವು ಅದನ್ನು ಬಿಟ್ಟು ಅವರು ಹೆಚ್ಚು, ಇವರು ಹೆಚ್ಚು ಅಂತ ನಾವ್ಯಾರು ಹೇಳುವುದಕ್ಕೆ ಹೋಗುವುದಿಲ್ಲ. ಅದಕ್ಕೋಸ್ಕರ ನಾನು ಅಕಾಡೆಮಿಕ್ ಇಂಟ್ರೆಸ್ಟ್‌ನಿಂದ ಎತ್ತಿಲ್ಲ. ಪ್ರಾಕ್ಟಿಕಲ್ಲಾಗಿ ಇದನ್ನು ಮಾಡಬೇಕು ಎನ್ನುವ ದೃಷ್ಟಿಯಿಂದ ಈ ಮಾತನ್ನು ಆಡಿದ್ದೇನೆ. ಈ ಸಂದರ್ಭದಲ್ಲಿ ಒಂದು ಸಂಪೂರ್ಣವಾಗಿರತಕ್ಕ ಗೌರವವನ್ನು ಅವರಿಗೆ ಕೊಡತಕ್ಕ ಗೌರವವನ್ನು ಇವರಿಗೂ ಕೂಡ ಕೊಟ್ಟು ಮುಂದೆ ತೆಗೆದುಕೊಂಡು ಹೋಗಬೇಕು ಎನ್ನುವ ಅಭಿಪ್ರಾಯವನ್ನು ತಮ್ಮ ಮುಂದೆ ಹೇಳುತ್ತಿದ್ದೇನೆ. On taxation measures of each of the item coning under all these annexures, I am sorry I can not do that but I will stop now.... ಪ್ರತಿಯೊಂದಕ್ಕೂ ನಾನು ಹೋದರೆ ನನಗೆ ಮತ್ತೊಂದು ಗಂಟೆ ಅವಕಾಶ

ಬೇಕಾಗುತ್ತದೆ. ಈಗ ನಾವು ನನ್ನ ಕಾಲದಲ್ಲಿ ಕೆಲವು ಕಾರ್ಯಕ್ರಮಗಳನ್ನು ಮಾಡಿದ್ದೆ. ಹನಿ ತೆನೆ ಎಂಬ ಸ್ಕೀಮನ್ನು ಮಾಡಿದ್ದೆ. ಡ್ರಿಫ್ ಇರಿಗೇಷನ್ ಸ್ಕೀಮಿಗಾಗಿ ಬಜೆಟ್ ಅಲೋಕೇಷನ್ ಕೂಡ ನಾನು ಮಾಡಿದ್ದೇನೆ. ಅದೇ ರೀತಿ ನೀವು ಡ್ರಿಫ್ ಇರಿಗೇಷನ್. ಎಷ್ಟು ಏನು ಎಂದು ಬಜೆಟ್ ಅಲೋಕೇಷನ್ ಮಾಡದೇ ಇದ್ದರೆ ನೀವು ಎಷ್ಟು ಹೇಳಿದರೂ ಅದರಿಂದ ಉಪಯೋಗ ಬೀಳುವುದಿಲ್ಲ ಎನ್ನತಕ್ಕಂತಹ ಅಭಿಪ್ರಾಯವನ್ನು ಈ ಸಂದರ್ಭದಲ್ಲಿ ನಾನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಅದೇ ರೀತಿ ಪ್ರೋಗ್ರಾಂ ಇದೆ. ಅದರ ಬಗ್ಗೆ ಭಾಷಣ ಮಾಡಿದರೆ ಬರುವುದಿಲ್ಲ. ಸಿದ್ಧರಾಮಯ್ಯನವರೇ, ನೀವು ಅದನ್ನು ಗಮನದಲ್ಲಿಟ್ಟುಕೊಂಡು ಹೋಗಬೇಕಾಗುತ್ತದೆ. ಬಜೆಟ್ ಏನೂ ಪಾಸಾಗಿಲ್ಲ. ಈಗ ಓಟ್ ಆನ್ ಅಕೌಂಟ್ ತೆಗೆದುಕೊಳ್ಳುತ್ತಾ ಇದ್ದೀರಿ. ಮಾಡಿಕೊಳ್ಳೋಣ. ನಡೆಯಬೇಕಾಗುತ್ತದೆ. ಸರ್ಕಾರ. ಆದರೆ ಬಜೆಟ್ ಪಾಸಾಗದರೊಳಗಾಗಿ ಅದರ ಬಗ್ಗೆ ಸೀರಿಯಸ್ಸಾಗಿರಿ ಎಂಬ ಮಾತು ಹೇಳುತ್ತಿದ್ದೇನೆ. ಏಕೆಂದರೆ ಎಲ್ಲಾ ಕಡೆ ಮಳೆ ಪ್ರಮಾಣ ಕಡಿಮೆಯಾಗುತ್ತದೆ, ಇತ್ಯಾದಿ. ಅನುಭವದ ಮಾತುಗಳು. ಅದಕ್ಕಾಗಿ ನೀವು ಇದರ ಬಗ್ಗೆ ಹೆಚ್ಚಿನ ಗಮನ ಇಡಬೇಕು ಎನ್ನತಕ್ಕಂತಹ ದೃಷ್ಟಿಯಿಂದ ಹೇಳಿದ್ದೇನೆ.

ಇನ್ನು ಎಜುಕೇಷನ್ ಬಗ್ಗೆ ಅಕ್ಷಯ ಎಂಬು ಒಂದು ಕಾರ್ಯಕ್ರಮವನ್ನು ನಾನು ಇಟ್ಟೆ. ಸ್ವಾಮಿ ನನ್ನ ಕಾಲದಲ್ಲಿ ಒಂದು ಮಗು ಪ್ರೈಮರಿ ಸ್ಕೂಲ್‌ಗೆ, ಗೌರ್ನಮೆಂಟ್ ಪ್ರೈಮರಿ ಸ್ಕೂಲ್ ಪ್ರೈವೇಟ್ ಏಡೆಡ್ ಸ್ಕೂಲಿಗೆ ಅಲ್ಲ ನಾನು ಹೇಳುವುದು, ಹೋದರೆ ಒಂದು ದಿವಸಕ್ಕೆ ಒಂದು ರೂ.ಅನ್ನು ಕೊಡತಕ್ಕಂತಹ ವಿಚಾರದಲ್ಲಿ ನೀವು ಈಗಲೂ ಟೀಚರ್ಸ್ ಕಮ್ಯುನಿಟಿ ಹತ್ತಿರ ಮಾತನಾಡಿ ನೋಡಿ. ಅದು ಏನಾಯಿತೆಂದರೆ ಮಕ್ಕಳು ಸ್ಕೂಲಿಗೆ ಹೋಗುವುದಕ್ಕೆ ಸಿಕ್ಕಾಪಟ್ಟೆ ಬೆಂಬಲ ಕೊಟ್ಟು ಬಿದ್ದು; ಹಣದಾಸೆಗೆ ತಂದೆ ತಾಯಿಗಳಿಗೆ, ಬಡತನ ಇರತಕ್ಕ ಸಮಾಜ ನಮ್ಮದು. ನನಗೆ ಗೊತ್ತಿತ್ತು. I know that. That is why I formulated and implemented with my heart and soul at my command. ಏನು ಮಾಡಿದೆ ನಾನು. ಜೂನ್, ಜುಲೈ, ಆಗಸ್ಟ್, ನಾನು ಅಕ್ಟೋಬರ್ ನವಂಬರ್‌ಗೆ ನಾನು ರಾಜಿನಾಮೆಯನ್ನು ಕೊಟ್ಟಿದ್ದೇನೆ. 3 ತಿಂಗಳ ಹಣವನ್ನು ಬಿಡುಗಡೆ ಮಾಡಿದ್ದೇನೆ. ನನ್ನ ಕಾಲದಲ್ಲಿ ಹಣವನ್ನೂ ಕೂಡ ನಾನು ಆ ತಂದೆ ತಾಯಿಗಳ ಕೈಗೆ ಕೊಡಿಸಿಬಿಟ್ಟೆ. ಮಕ್ಕಳ ತಲೆಗೆ ಎಣ್ಣೆ ಬರುತ್ತದೆ. ಸ್ಲೇಟು ಪುಸ್ತಕ ಬರುತ್ತದೆ. ಬಟ್ಟೆ ಬರೆ ಬರುತ್ತದೆ. ಇವತ್ತು ಹೋಗಿ ನೋಡಿ. ಮಕ್ಕಳ ಮೈ ಮೇಲೆ ಇರತಕ್ಕಂತಹ ಬಟ್ಟೆಗಳನ್ನು. ನೋಡಿ. ಈ ಕಾರ್ಯಕ್ರಮದಿಂದ ಮಕ್ಕಳು ಸ್ಕೂಲಿನ ಹಾಜರಾತಿ ಸಂಖ್ಯೆ ಸಿಕ್ಕಾಪಟ್ಟೆ ಏರಿ ಬಿಟ್ಟಿತು. ಆಮೇಲೆ ನಾನು ಅಧಿಕಾರವನ್ನು ಬಿಟ್ಟ ಮೇಲೆ ಇವರು ಅದನ್ನು ತೆಗೆದು ಕ್ಷೀರ ಯೋಜನೆ ಎಂದು ಇಟ್ಟರು. ಅದನ್ನು ಇಟ್ಟಿದ್ದರಿಂದ ಮಕ್ಕಳ ಹಾಜರಾತಿ ಪ್ರಮಾಣ ಕಡಿಮೆಯಾಗಿದೆ ಎನ್ನತಕ್ಕದ್ದು ಅಂಕಿ ಅಂಶಗಳಿಂದ ಗೊತ್ತಾಗಿದೆ. ಮತ್ತೆ ಆ ಡೀಟೆಲ್ಸ್‌ಗೆ ನಾನು ಹೋಗುವುದಿಲ್ಲ. ನನ್ನನ್ನು ದಿವಂಗತ ರಾಜೀವ್ ಗಾಂಧಿಯವರ

ಪ್ರತಿಷ್ಠಾನ ಟ್ರಸ್ಟ್‌ನವರು ಇನ್‌ವೈಟ್ ಮಾಡಿದ್ದರು. I was invited to deliver a speech in that Trust meeting in Delhi....

ಶ್ರೀಮತಿ ಸೋನಿಯಾ ಗಾಂಧಿಯವರು ಅವರ ಧರ್ಮಪತ್ನಿಯವರು ಕರೆದಾಗ ನಾನು ಅಲ್ಲಿಗೆ ಹೋದಾಗ, ಈ ವಿಚಾರವನ್ನು ಹೇಳುವುದಕ್ಕೆ ಹೋಗಿರಲಿಲ್ಲ. Your own party Chief Minister Sri Laloo PrasadM the present Chief Minister of Bihar where elections are going on.... ನಿಮ್ಮ ಪಕ್ಷದವರೇ, ಅವರು ಏನು ಮಾಡಿದರು ಗೊತ್ತೇನು; ಈ ಅಕ್ಷಯ ಕಾರ್ಯಕ್ರಮವನ್ನು ನಮ್ಮ ರಾಜ್ಯ ಸರ್ಕಾರದಿಂದ ತರಿಸಿಕೊಂಡರು. ನಾನು ಅಧಿಕಾರ ಬಿಟ್ಟ ಮೇಲೆ ನನಗೆ ಗೊತ್ತ ಇರಲಿಲ್ಲ. ಅವರು he paid very heavy tributes and encomiums to my administration. It is on record. Please try to know.... ಏನು ಹೇಳಿದರು ಗೊತ್ತೇನು? ಒಂದು ರೂಪಾಯಿ ಕೊಡತಕ್ಕಂತಹ ನಿಮ್ಮ ಕಾರ್ಯಕ್ರಮ ಎ- 1 ಕಾರ್ಯಕ್ರಮ; ನನಗೆ ಅದನ್ನು ಯಾರೋ ಹೇಳಿದ ಮೇಲೆ ನೀವು ಅಧಿಕಾರವನ್ನು ಬಿಟ್ಟು ಬಿಟ್ಟಿದ್ದೀರಿ. ತರಿಸಿಕೊಂಡಿದ್ದೆ. ಆ ಮೇಲೆನಿಂದ ನಿಮಗೆ ಕಂಗ್ರಾಚ್ಯುಲೇಟ್ ಮಾಡುವುದಕ್ಕೆ 2 ಸಾರಿ ಫೋನ್ ಮಾಡಿದೆ. but you were on tour in Karnataka State.... ನೀವು ಸಿಕ್ಕಲಿಲ್ಲ. ನಿಜವಾಗಿಯೂ I commend your honest efforts wherein school going attendance in the schools in their respective areas has gone up like anything.... ಎನ್ನತಕ್ಕಂಥಾದ್ದು. ಸ್ಟಾಂಡರ್ಡ್ ಕೂಡ ಮೇಲೆ ಬರುತ್ತದೆ ಎನ್ನುವ ಅಭಿಪ್ರಾಯವನ್ನು ಇಟ್ಟು ಅವರೇ ಭಾಷಣ ಮಾಡಿದರು. ನಾನು ಇಷ್ಟೇ ಥ್ಯಾಂಕ್ಸ್ ಎಂದು ಹೇಳಿದೆ. ಅವರ ಹೊಗಳಿಕೆ ನನಗೇನೂ ಬೇಕಾಗಿರಲಿಲ್ಲ. ಅದು ನಿಮ್ಮ ಪಕ್ಷದ ಚೀಫ್ ಮಿನಿಸ್ಟರ್ ಹೇಳಿದ್ದನ್ನು ನಾನು ಹೇಳಿದೆ. ಆ ಸರ್ಕಾರ ನಿಮ್ಮದಲ್ಲ. ನಿಮ್ಮ ಸರ್ಕಾರ ಅವರದ್ದಲ್ಲ. ಆದರೆ ಒಂದೇ ಪಾರ್ಟಿಯವರ ಸರ್ಕಾರ. ನಾನು ಸುಮ್ಮನೆ ನಿಮ್ಮ ಗಮನಕ್ಕೆ ತಂದಿದ್ದೇನೆ. ಇದರ ಮೇಲೆ ನಿಮ್ಮ ಇಷ್ಟ. ಬೇಕಾದರೆ ಫೋನಿನಲ್ಲಿ ಮಾತನಾಡಿಕೊಳ್ಳಿ. ಬೇಡ ಅಂದರೆ ಬಿಡಿ. ಇದು ನಿಮಗೆ ಬಿಟ್ಟಿರತಕ್ಕಂತಹ ವಿಚಾರಗಳು. ಆಮೇಲೆ ಶುಶ್ರೂಷೆ ಎಂದು ಮಾಡಿದೆ. ಏನಾಗಿದೆ ಕ್ಯಾನ್ಸರ್ ಮತ್ತೊಂದು ಅದು ಇನ್ನೂ ಪಿಕಪ್ ಆಗಿರಲಿಲ್ಲ. ನನ್ನ ಕಾಲಕ್ಕೆ ಅಷ್ಟರೊಳಗೆ ರಾಜಿನಾಮೆ ಕೊಡಬೇಕಾಗಿತ್ತು. ಏಕೆಂದರೆ ಅಲ್ಲಿ ಏನಾಗಿದೆ ಅಂದರೆ ಕ್ಯಾನ್ಸರ್ ಅಂದರೆ ಸೊಪ್ಪಿನ ರಸ ಬಿಟ್ಟುಕೊಂಡು ಕೂತುಕೊಂಡು, ಕೊನೆ ಸ್ಟೇಜಿಗೆ ಹೋದ ಮೇಲೆ ಬಂದು ಬಿಡುತ್ತಾರೆ. ಏಕೆಂದರೆ ಎಜ್ಯುಕೇಷನ್ ಇರುವುದಿಲ್ಲ ಅವರಿಗೆ. ಯಾವುದೇ ಭಾಗದಲ್ಲಿದ್ದರೂ ಕೂಡ ಅವರು ಸತ್ತು ಹೋಗಿ ಬಿಡುತ್ತಾರೆ. ಅದಕ್ಕೆ ಪೀರಿಯಾಡಿಕಲ್ ಚೆಕಪ್ ಇರಬೇಕು. ಮೂರು ತಿಂಗಳಿಗೊಮ್ಮೆ ಎಂದು ನಾವು ಮಾಡಿದ್ದೇವೆ. ಅದನ್ನು ತೆಗೆದು ನೋಡಿ. ಅದು ಎಲ್ಲಾ ಹಾಳಾಗಿ

ಹೋಯಿತು. ಆಮೇಲೆ ನೇತ್ರ ಎಂದು ಒಂದು ಮಾಡಿದೆ. ಕಂಪಲ್ಸರಿಯಾಗಿ ಕಣ್ಣಿನ ದೃಷ್ಟಿಯನ್ನು ಚೆಕಪ್ ಮಾಡಿಸಿಕೊಳ್ಳಬೇಕು. ವಯಸ್ಸಾಗಿರತಕ್ಕ ವೃದ್ಧರು ಏನು ಇದ್ದಾರೆ, ಹೆಣ್ಣು ಮಕ್ಕಳು, ಗಂಡು ಮಕ್ಕಳು, ಅವರಿಗೆ ಫ್ರೀಯಾಗಿ ಕನ್ನಡಕ ಕೊಡಬೇಕು ಎನ್ನತಕ್ಕಂಥದ್ದು. ಅದನ್ನು ನಾವು ಮಾಡಿದ್ದೇವೆ. ಅದನ್ನು ಜಾರಿಗೆ ಕೊಡುವುದಕ್ಕೆ ನನ್ನಿಂದ ಆಗಲಿಲ್ಲ. ಅಲೋಕೇಷನ್ ಕೂಡ ಅದಕ್ಕೆ ಹಣವನ್ನೂ ಕೂಡ ತೆಗೆದಿಟ್ಟಿದ್ದೇನೆ. ಬರೀ ಭಾಷಣ ಮಾಡಿ ಬಿಟ್ಟಿಲ್ಲ. ಯಾವ ಐಟಂನ್ನೂ ಬಿಟ್ಟಿಲ್ಲ. ಅದೇ ರೀತಿ ಹನಿ ತೆನೆ ಡ್ರಿಫ್ ಇರಿಗೇಷನ್ ಎಂದು ನಾನು ಹೇಳಿದೆ. ಭಾಷಣ ಎಂದು ಇಟ್ಟೆ. ಸಾಯಿಲ್ ಟೆಸ್ಟಿಂಗ್ ಬಗ್ಗೆ ಈ ಒಂದು ಮಾತನ್ನು ತಾವು ಹೇಳಿದ್ದೀರಿ. ಸಾಯಿಲ್ ಟೆಸ್ಟಿಂಗ್ ಮೊಬೈಲ್ ವ್ಯಾನುಗಳನ್ನು ಹಾಕತಕ್ಕಂತಹದ್ದು. ನೀವು ಪ್ರತಿಯೊಂದು ತಾಲ್ಲೂಕಿನಲ್ಲೂ ವ್ಯಾನುಗಳನ್ನು ಇಟ್ಟುಕೊಳ್ಳುವುದಕ್ಕಾಗುವುದಿಲ್ಲ. ಜಿಲ್ಲಾ ಹೆಡ್ ಕ್ವಾರ್ಟರ್‌ನಲ್ಲಿಟ್ಟು, ಮೊಬೈಲ್ ವ್ಯಾನ್ ಹಾಕಿ ಏರಿಯಾ ವೈಸ್ ಮಾಡಿದರೆ ಸರಿಹೋಗುತ್ತದೆ. ಜಿಯಾಲಜಿಕಲ್ ಸರ್ವೆ ವಿವರಗಳು ಅಗ್ರಿಕಲ್‌ಚರಲ್ ಡಿಪಾರ್ಟ್‌ಮೆಂಟ್‌ನಲ್ಲಿ ಇವೆ. ಅದನ್ನು ಮಾಡಿದರೆ, higher growth on the foodfront and ultimately at the national level... ಅದು ಬರುತ್ತದೆ. ಅದನ್ನು ಇಟ್ಟುಕೊಳ್ಳಿ. ಇವೆಲ್ಲಾ ಸಲಹೆಗಳನ್ನು ನಾನು ಕೊಡುತ್ತಾ ಇರತಕ್ಕಂಥದ್ದು. ಆಮೇಲೆ ಸಮಗ್ರ ವಿಕಾಸ ಎಂದು ಹೇಳಿದೆ. ಒಂದು ಹಳ್ಳಿಗೆ ನಾವು ಕಾಲಿಟ್ಟರೆ ಅಲ್ಲಿ ಏನೇನು ಇರಬೇಕು ಸೌಲಭ್ಯಗಳು. ಹರಿಜನವಾದ, ಲಂಬಾಣಿವಾದ. ಮತ್ತೊಂದು ಪಾಪ ಅವರು ಕೇಳುತ್ತಲೇ ಇರುತ್ತಾರೆ. ಅರ್ಜಿ ಕೊಡುತ್ತಲೇ ಇರುತ್ತಾರೆ. ಕಂಪಲ್‌ಸರಿಯಾಗಿ ಮಾಡಲೇಬೇಕು. ಆ ಕಾನೂನು. ಆಮೇಲೆ ರಾಜೀವಗಾಂಧಿ ಕೃಷಿ ಶ್ರಮ ನಿಧಿ ಎಂದು ನಾನು ಮಾಡಿದೆ. ಮೊದಲು 5 ಕೋಟಿ ರೂ. ಇಟ್ಟೆ. ಆಮೇಲೆ 30 ಕೋಟಿಗೆ ಏರಿಸಿದೆ. ದುರ್ದೈವ ಅದರ ಬಗ್ಗೆ ಹೇಳುವವರೂ ಕೂಡ ಗತಿ ಇಲ್ಲ. ಇನ್ನೊಬ್ಬರ ಭೂಮಿಗೆ ಹೋಗಿ ಕೂಲಿ ಮಾಡುತ್ತಾರೆ. ಯಾವುದೇ ಜಾತಿ ಮತದವರ ಬಗ್ಗೆ ಮಾತನಾಡುತ್ತಿಲ್ಲ. ಯಾವ ಕಾರಣಕ್ಕಾದರೂ ಕೂಡ ನಾನು ಮಾತನಾಡುತ್ತಿಲ್ಲ. ಗ್ರೂಪ್ ಇನ್ಶೂರೆನ್ಸ್ ಸ್ಕೀಮ್ಸ್ ಇತ್ಯಾದಿ ತರತಕ್ಕ ಒಂದು ವಿಚಾರ ಇಟ್ಟು ಬಿಲ್ಲೂ ಕೂಡ ಅಲ್ಲಿ ಬಿದ್ದಿದೆ. ದಯಮಾಡಿ ತರಿಸಿಕೊಂಡು ಓದಿ. If you want to touch the soul and heart and want to help them i.e., poor, oppressed and depressed class of the society, do something for them... ಇಲ್ಲದಿದ್ದರೆ ಬರೀ ಹಿಂದಿನವರನ್ನು ಅಷ್ಟೆ ಬಯ್ಯುತ್ತಾ ಬಜೆಟ್ಟನ್ನು ಇಟ್ಟರೆ ಅದರಿಂದ ಏನೂ ಬರುವುದಿಲ್ಲ ಎನ್ನತಕ್ಕ ಮಾತನ್ನು ನಾನು ಸಲಹೆ ರೂಪದಲ್ಲಿ ನಿಮಗೆ ಕೊಡುತ್ತಿದ್ದೇನೆ. ಇನ್ನು ಕೃಷಿ ಪ್ರಶಸ್ತಿ ಎಂದು ಮಾಡಿದೆ. ತಾಲ್ಲೂಕು ಮಟ್ಟಕ್ಕೆ 1, 2 3 ಪ್ರೈಜ್ ಎಷ್ಟು? ಅದು ಒಳ್ಳೊಳ್ಳೆ ಬೆಳೆ ಬೆಳೆದವರಿಗೆ. ಜಿಲ್ಲಾ ಮಟ್ಟಕ್ಕೆ, ರಾಜ್ಯ ಮಟ್ಟಕ್ಕೆ, ಇವನ್ನೆಲ್ಲಾ ಮಾಡಿದೆವು ನಾವು. ಅವೆಲ್ಲಾ ಕಿತ್ತುಕೊಂಡು ಹೊರಟು ಹೋಯಿತು. ಈ ಯುವಕರಿಗಾಗಿ ಏಕಲವ್ಯ ಪ್ರಶಸ್ತಿ ಎಂದು ನಾವು ಮಾಡಿದ್ದೆವು.

ಅದು ಕೂಡ ಕಿತ್ತುಕೊಂಡು ಹೋಯಿತು. ಆಮೇಲೆ ಕೆರೆ ಕಲ್ಯಾಣ. Desilting of tanks especially in the Western Ghat area... ಇವೆಲ್ಲಾ ಸಲಹೆಗಳು. ನಿಮ್ಮ ಬಜೆಟ್‌ನಲ್ಲಿ ಕಾಣಬೇಕಾಗಿತ್ತು. ಒಂದು ಮಾತು ಇಲ್ಲ ಎಂದು ನಾನು ಹೊಡೆದುಕೊಳ್ಳುತ್ತಾ ಇದ್ದೇನೆ. ಇವು ಅಭಿವೃದ್ಧಿ ಬಗ್ಗೆ ಮಾತನಾಡತಕ್ಕಂತಹವರು ಇದರ ಗಮನ ಕೊಡಬೇಕು especially in the Western Ghat area. ಮೈದಾನ್ ಏರಿಯಾದಲ್ಲಿ ದೊಡ್ಡ ದೊಡ್ಡ ಕೆರೆಗಳು ಇವೆ. ಅವೆಲ್ಲಾ ಹೂಳು ತುಂಬಿ ಹೋಗಿವೆ. ಹಾಳಾಗಿ ಹೋಗಿ ಬಿಟ್ಟಿದ್ದಾರೆ. ಅನಂತರ ಬೀದಿ ಭಾಗ್ಯ ಎಂದು ಮಾಡಿದೆ. ಬೀದಿ ಮಕ್ಕಳನ್ನು ಹೋಗಿ ಆ ಎಂಜಲು ತಿನ್ನುತ್ತವೆ. ನಾಯಿಗಳು ಮತ್ತು ಮಕ್ಕಳು ಅಲ್ಲಿ ಕಚ್ಚಾಡುವುದನ್ನು ನೋಡಬೇಕು. ಈಗಲೂ ಕೂಡ ನೀವು ನೋಡಬಹುದು. ಕಲ್ಯಾಣ ಮಂಟಪಗಳು. ಹೋಟೆಲ್‌ಗಳು ಹೊರಗಡೆ ಇಲ್ಲಿ ಸಮಾಜ ತಲೆ ತಗ್ಗಿಸಬೇಕು. ಇದರಂಥ ಒಂದು ನಾಚಿಕೆಗೇಡಿನ ಪರಿಸ್ಥಿತಿಯನ್ನು ನಾವು ಎದುರಿಸದೆ ಇರತಕ್ಕಂತಹದ್ದು ಬೇರೆ ಯಾವುದೂ ಇಲ್ಲ. ಬೀದಿ ಭಾಗ್ಯ ಯೋಜನೆ ನಾವು 1 ಕೋಟಿ ಹಣವನ್ನು ಬಜೆಟ್ ಅಲೋಕೇಷನ್‌ನಲ್ಲಿ ತೆಗೆದಿಟ್ಟಿದ್ದೇನೆ. ದಯವಿಟ್ಟು ನನ್ನ ಬಜೆಟ್ಟನ್ನು ಓದಿ ನೋಡಿ. ಕ್ಷಮಿಸಬೇಕು. ನಾನು ಅನ್ಯಥಾ ವೀರಪ್ಪ ಮೊಯ್ಲಿ ಸರ್ಕಾರದ ಮೇಲೆ ಮತ್ತೊಬ್ಬರ ಮೇಲೆ ಹೇಳಬೇಕು ಎಂದು ನನಗೆ ಆಸೆ ಇಲ್ಲ. ಆದರೆ ಅಂತ ಸಮಾಜದ ತುಳಿತಕ್ಕೆ ಸಿಕ್ಕಿರತಕ್ಕ ವರ್ಗವನ್ನು ಮೇಲಕ್ಕೆ ಎತ್ತತಕ್ಕ ವಿಚಾರದಲ್ಲಿ ನಿಮ್ಮ ನೀತಿ ನಿಮ್ಮ ಕಮಿಟ್‌ಮೆಂಟ್ ನಿಮ್ಮ ನಿಲುವು ಏನು? ನಿಮ್ಮ ಹೃದಯ ಏನು ಎನ್ನತಕ್ಕಂತಹ ಮಾತನ್ನು ಈ ಸಂದರ್ಭದಲ್ಲಿ ಕೇಳುತ್ತಿದ್ದೇನೆ. ನಿಮ್ಮ ಉತ್ತರದಲ್ಲ ಬರಬೇಕು. ಬಜೆಟ್ ಭಾಷಣ ಆಗುವುದರೊಳಗೆ ದಯವಿಟ್ಟು ಮಾಡಿ. Do something for them and get their support and rule the State, I don't mind. ಇದೇ ಸಂದರ್ಭದಲ್ಲಿ ಮತ್ತೊಂದು ಅನಿಲಾ ಯೋಜನೆಯೆಂದು ಬಂತು. ಅದಕ್ಕೆ ಸಪರೇಟ್ ಬಜೆಟ್ ಅಲೋಕೇಷನ್ ಮಾಡಲಾಗಿತ್ತು. ಅದು ಯಾವುದು ಗೊತ್ತೇ, ಕಾಡಿಗೆ ಜನರು ಹೋಗಿ ಮರಗಳನ್ನು ಕಡಿದು ಫಾರೆಸ್ಟ್ ಹಾಳಾಗುತ್ತದೆಂದು ಅನಿಲಾ ಯೋಜನೆಯ ವಿಚಾರ ಬಂತು. ಇದನ್ನು ಚೈನಾದವರು ಮಾಡಿದ್ದಾರೆ. ಅದಕ್ಕಾಗಿ ಇಲ್ಲೂ ಮಾಡಿದ್ದೇವೆ. ಗೋಬ್ಬರ್ ಗ್ಯಾಸ್ ಪ್ಲಾಂಟ್ ಆಗಿದೆ, ಅನಿಲಾ ಯೋಜನೆ ವಿಚಾರ ಮಾಡದಿದ್ದರೆ ಹಳ್ಳಿಗಳಲ್ಲಿ ಜನರು ಕಾಡಿಗೆ ಹೋಗಿ ಮಾರ ಕಡಿದು ಕಾಡು ಹಾಳಾಗುತ್ತದೆ. ಅದನ್ನು ತಪ್ಪಿಸಬೇಕೆಂದು ಈ ಯೋಜನೆ ಮಾಡಲಾಗಿದೆ. ದನಗಳ ಸಗಣಿಯಿಂದ ಮಾಡತಕ್ಕದ್ದು. ಅದರಿಂದ ಅನಿಲ ಉತ್ಪತ್ತಿ ಮಾಡಿಕೊಂಡು ಜೀವನ ಮಾಡಬಹುದು. ಆಮೇಲೆ ರುದ್ರಭೂಮಿ ಏನಿದೆ ಅದಕ್ಕೂ ಒಂದು ಯೋಜನೆ ಮಾಡಿದ್ದೇವೆ. ಅದಕ್ಕೂ ಕೂಡ ಬಜೆಟ್ ಅಲೋಕೇಷನ್ ಇಟ್ಟಿದೆ. ದಯವಿಟ್ಟು ಅದನ್ನು ತೆಗೆದು ನೋಡಿ. ರುದ್ರಭೂಮಿ ವಿಚಾರದಲ್ಲಿ ಮನುಷ್ಯ ಹುಟ್ಟುತ್ತಾನೆ, ಸಾಯುತ್ತಾನೆ ಹರಿಜನರು ಕೆಲವು ಊರುಗಳಲ್ಲಿ ಸತ್ತರೆ ಹೆಣ ಹೂಳುವುದಕ್ಕೆ ಜಾಗವಿರಲಿಲ್ಲ. ತುಮಕೂರು ಜಿಲ್ಲೆಯಲ್ಲಿ ಇದೇ ಪರಿಸ್ಥಿತಿ

ಬಂತು. I have sent the police to the spot... ಇದು ಹರಿಜನರ ಬಗ್ಗೆ ಮಾತ್ರವಲ್ಲ, ನಾಳೆ ಲಿಂಗಾಯಿತರಿಗೆ ಈ ಪರಿಸ್ಥಿತಿ ಬರಬಹುದು. ನಾಳೆ ಒಕ್ಕಲಿಗರಿಗೆ ಆಗಬಹುದು ಹಿಂದುಳಿದ ವರ್ಗದವರಿಗೆ ಆಗಬಹುದು ಬ್ರಾಹ್ಮಣರಿಗೆ ಆಗಬಹುದು ಅವೆಲ್ಲಾ ನನಗೆ ಗೊತ್ತಿಲ್ಲ. ಯಾವುದೇ ಮನುಷ್ಯ ಸತ್ತ ಮೇಲೆ ಗೌರವಯುತವಾಗಿ ಹೂಳಬೇಕು. ನಿಜ ಹೇಳಬೇಕೆಂದರೆ, ಕೆಲವರು ಆಸ್ತಿ ಇದ್ದವರು ತಮ್ಮ ತೋಟಗಳಲ್ಲಿ ಹೊಲಗದ್ದೆಗಳಲ್ಲಿ ಹೂಳುತ್ತಾರೆ ಅಥವಾ ಸುಡುತ್ತಾರೆ. What about a man who doesn't have property of his own? ಏನು ಮಾಡಬೇಕು? ರುದ್ರಭೂಮಿ ಎಂದು ಮಾಡಿ ಕಂಪಲ್ಸರಿಯಾಗಿ ಪ್ರತಿಯೊಂದು ಗ್ರಾಮಕ್ಕೆ ಇಷ್ಟು ಎಕರೆ ಇರಲೇಬೇಕು ಅದಕ್ಕೆ ಅಕ್ವಿಸಿಷನ್ ಪ್ರೊಸಿಡಿಂಗ್ಸ್ ಮಾಡುವುದು ಜಾಗವಿಲ್ಲದಿದ್ದರೆ ಯಾರ ಹತ್ತಿರವಾದರೂ ಜಾಗ ತೆಗೆದುಕೊಳ್ಳುವುದು. ಆಶ್ರಯ ಸ್ಕೀಮ್‌ನಲ್ಲಿ ಸೈಟಿಗೆ ಜಾಗ ತೆಗೆದುಕೊಂಡ ಹಾಗೆ ನಾನು ಇದನ್ನೆಲ್ಲಾ ಮಾಡುತ್ತಿದ್ದೆ. ನಾನು ಹೇಳುತ್ತೇನೆ, ಪ್ರೊಗ್ರೆಸ್ಸಿವ್ ಎಂದು ಹೇಳತಕ್ಕ ಭಾಷಣ ಮಾಡಿ ದೊಡ್ಡ ದೊಡ್ಡ ಪದ ಪ್ರಯೋಗ ಮಾಡಿದರೆ ಇದು ಬರುವುದಿಲ್ಲ. ಫ್ರೀ ಎಲೆಕ್ಟ್ರಿಸಿಟಿ ಪೆಂಪ್‌ಸೆಟ್ಟುಗಳಿಗೆ ಅದನ್ನು ನನ್ನ ಕಾಲದಲ್ಲಿ ಮಾಡಿದ್ದೇನೆ. ಇಂಡಿಯಾದಲ್ಲಿ ಎಲ್ಲೂ ಒಬ್ಬರು ಮಾಡಿರಲಿಲ್ಲ. ಇದು ದೊಡ್ಡ ಹೊಲಗಳಿಗೆ ಅಲ್ಲ; ನೀವು ಏನೆಲ್ಲಾ ತರುತ್ತೀರಿ ಅದು ಜಾರಿಗೆ ಬಂದಾಗ ನಾನು ಉತ್ತರ ಕೊಡೋಣ. ಉಳಿದಿರತಕ್ಕ ವಿಚಾರ ಸಪರೇಟ್ ಚರ್ಚೆಗೆ ಬರುತ್ತದೆ. ಪಾಸ್ ಬುಕ್ ಕೊಡುವ ವ್ಯವಸ್ಥೆಯನ್ನು ಜಾರಿಗೆ ತಂದಿದ್ದೇವೆ. ಇನ್ನು ಅಗ್ರಿಕಲ್ಚರಲ್ ಯೂನಿವರ್ಸಿಟಿ ನಮ್ಮ ಕಾಲದಲ್ಲಿ ಧಾರವಾಡದಲ್ಲಿ ಆಯಿತು. ಅಗ್ರಿಕಲ್ಚರಲ್ ಕಾಲೇಜು ಬಿಜಾಪುರ, ಶಿವಮೊಗ್ಗ, ಮಂಡ್ಯದಲ್ಲಿ ನಮ್ಮ ಕಾಲದಲ್ಲಿ ಆಗಿರತಕ್ಕದ್ದು. ಕನ್ನಡ ವಿಶ್ವವಿದ್ಯಾ ನಿಲಯವನ್ನು ಹಂಪೆಯಲ್ಲಿ ಮಾಡಿದ್ದೇನೆ. ಓಪನ್ ಯೂನಿವರ್ಸಿಟಿ ನಮ್ಮ ಕಾಲದಲ್ಲಿ ಆಯಿತು. ನಾನು ಏಕೆ ಹೇಳುತ್ತಿದ್ದೇನೆಂದರೆ ನಾವು ನಮ್ಮ ಕರ್ತವ್ಯವನ್ನು ಮಾಡುತ್ತಾ ಹೋಗಬೇಕೆನ್ನುವ ದೃಷ್ಟಿಯಿಂದ ನಾವು ಎಲ್ಲಾ ಹೋಗಬೇಕು. ನಾನು ಭಾರಿ ಮಾಡಿದ್ದೇನೆ ಎನ್ನುವ ದೃಷ್ಟಿಯಿಂದ ನಾನು ಮಾತನಾಡಲಿಲ್ಲ. ಕೊನೆಯ ಒಂದು ಮಾತನ್ನು ಆಡಿ ನನ್ನ ಭಾಷಣವನ್ನು ಮುಕ್ತಾಯ ಮಾಡುತ್ತಿದ್ದೇನೆ. ಕ್ಷಮಿಸಬೇಕು ನನ್ನ ಮಾತಿನಿಂದ ನಿಮಗೆ ನೋವಾಗಿದ್ದರೆ ಕ್ಷಮಿಸಿ ಅದು ಒಂದು ಕಡೆಗೆ ಇರಲಿ. ಆದರೆ ಒಂದು ಮಾತು, ಇದು ನನ್ನ ಮನಸ್ಸಿಗೆ ನೋವು ಮಾಡತಕ್ಕ ಮಾತು; ಒಬ್ಬರನ್ನು ಹರ್ಟ್ ಮಾಡಬೇಕು ಅಥವಾ ಮತ್ತೊಂದು ಭಾವನೆಯಿಂದ ನಾನು ಎಂದೂ ಕೂಡ ಮಾತನಾಡುವುದಕ್ಕೆ ಹೋಗುವುದಿಲ್ಲ. ಆದರೆ ರಾಜಕೀಯ ಬೆರಸುವುದು ಬೇಡ ಅದು ಒಳ್ಳೆಯದಲ್ಲ. ಬಡತನ ರೇಖೆಗಿಂತ ಕೆಳಗಡೆ ಇರತಕ್ಕ ಜನ ದಿನೇ ದಿನೇ ಬೆಳೆಯುತ್ತಿದ್ದಾರೆ you have gone completely astray. You are not on the track. ಎನ್ನುವ ಮಾತನ್ನು ಮರೆಯುವುದು ಬೇಡವೆನ್ನತಕ್ಕ ಮಾತನ್ನು ಅಂಕಿ ಅಂಶಗಳ ಸಹಿತ ನಾನು ಹೇಳಿದ್ದೇನೆ. ಸಲಹೆ ರೂಪದಲ್ಲಿ ಹೇಳಿದ್ದೇನೆ. ಹಿಂದಿನ ಸರ್ಕಾರ ಏನು ಮಾಡಿದೆ ಒಳ್ಳೆಯ ಕೆಲಸಗಳನ್ನು ಮಾಡಿದ್ದರೆ ಅವುಗಳನ್ನು ನೀವು

ತೆಗೆದುಕೊಳ್ಳಿ, ಕೆಟ್ಟದ್ದು ಇದ್ದರೆ ಬಿಟ್ಟು ಬಿಡಿ, ನಾನು ಬೇಡವೆಂದು ಹೇಳುವುದಿಲ್ಲ. ಈ ವಿಚಾರವನ್ನು ಇಟ್ಟು ನಾನು ಹೇಳುತ್ತಿದ್ದೇನೆ. ನಾನು ಕೊಟ್ಟಿರತಕ್ಕ ಸಲಹೆಗಳು ಉಪಯುಕ್ತವಾಗಿರತಕ್ಕ ಸಲಹೆಗಳು. ನಮ್ಮ ಕಾಲದಲ್ಲಿ ಮಾಡಿರತಕ್ಕ ಒಳ್ಳೊಳ್ಳೆಯ ಕಾರ್ಯಕ್ರಮಗಳನ್ನು ನಿಮ್ಮ ಮನಸ್ಸಿಗೆ ಹಿಡಿಸಿದರೆ ಮುಂದುವರೆಸಿ, ಇಲ್ಲ ಅದಕ್ಕಿಂತ ಒಳ್ಳೊಳ್ಳೆಯ ಕಾರ್ಯಕ್ರಮಗಳು ನಮ್ಮ ಹತ್ತಿರ ಇವೆ ಅಂದರೆ I don't mind taking them up and move forward. ಇಡೀ ರಾಜ್ಯದ ಸರ್ವಾಂಗೀಣ ಪ್ರಗತಿಯ ಬಗ್ಗೆ ನಾವು ಬಜೆಟ್ ಇಟ್ಟಿದ್ದೇವೆ ಎನ್ನುವ ಮಾತನ್ನು ಆಡಿದರೆ, ಪ್ಲಾನ್ ಮತ್ತು ನಾನ್‌ಪ್ಲಾನ್ ನಾನು ನೋಡಿದ್ದೇನೆ. ಬಡಬಗ್ಗರ ಬಗ್ಗೆ ನೀವು ಯಾವ ಕಾರ್ಯಕ್ರಮಗಳನ್ನು ಕೂಡ ಹಾಕಲಿಲ್ಲ. ಯುವ ಜನರ ಬಗ್ಗೆ ನೀವು ಯಾವುದೇ ಕಾರ್ಯಕ್ರಮವನ್ನು ಹಾಕಿಲ್ಲ. ಮೈನಾರಿಟಿ ಮತ್ತು ಷೆಡ್ಯೂಲ್ಡ್ ಕಾಸ್ಟ್ ಷೆಡ್ಯೂಲ್ಡ್ ಟ್ರೈಬ್ ಮತ್ತು ಎಲ್ಲಾ ಜಾತಿಯ ಬಗ್ಗೆ ಕಾರ್ಯಕ್ರಮಗಳನ್ನು ಹಾಕದೆ ಸಪರೇಟ್ ಬಜೆಟ್ ಅಲೋಕೇಷನ್ ಅದು ಏನೂ ಇಲ್ಲದೆ ಬರೀ ಭಾಷಣ ಮಾಡಿದರೆ ನಾನು ಅನಿವಾರ್ಯದಿಂದ ಹೇಳಬೇಕಾಗಿದೆ the entire budget is based on your political mockings... ಎನ್ನತಕ್ಕ ಮಾತನ್ನು ಅನಿವಾರ್ಯವಾಗಿ ಹೇಳಬೇಕಾಗಿದೆ. ನೀವು ಬಜೆಟ್ ಇಟ್ಟಿದ್ದೀರಿ ಇದನ್ನು ನಾನು ಸಂಪೂರ್ಣವಾಗಿ ವಿರೋಧಿಸಿ ಮಾತನಾಡಿದ್ದೇನೆ. ಅನಿವಾರ್ಯವಾಗಿ ವಿರೋಧಿಸಬೇಕಾಗಿದೆ. ಇರಿಗೇಷನ್ ಪವರ್ ಇತ್ಯಾದಿ ಎಲ್ಲಾ ಕೋರ್ ಸೆಕ್ಟಾರ್ ಕೂಡ ಗಮನದಲ್ಲಿಟ್ಟು ಇಷ್ಟು ಮಾತನ್ನು ಹೇಳಿ, ಕ್ಷಮಿಸಬೇಕು ಸಭಾಧ್ಯಕ್ಷರೇ ಹಲವಾರು ಸೂಚನೆಗಳನ್ನು ವಿಚಾರಗಳನ್ನು ಅಂಕಿ ಅಂಶಗಳ ಸಹಿತ ಹೇಳುವುದಕ್ಕೆ ಅವಕಾಶ ಮಾಡಿಕೊಟ್ಟಿದ್ದಕ್ಕಾಗಿ ನಾನು ತಮಗೆ ಮತ್ತು ಸಭೆಗೆ ಅಭಿನಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಖಾಸಗೀ ಬಸ್ ಮಾಲೀಕರ ಮುಷ್ಕರಕ್ಕೆ ಮಂತ್ರಿಗಳ ಹೇಳಿಕೆಗೆ ಒತ್ತಾಯ :-

ಶ್ರೀ ಎಂ.ವೀರಪ್ಪ ಮೊಯಿಲಿ :- ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಹಣಕಾಸು ಮಂತ್ರಿಗಳು 3 ಗಂಟೆಗೆ ಖಾಸಗೀ ಬಸ್ ಮಾಲೀಕರು ಮುಷ್ಕರ ಮಾಡಿರುವ ಬಗ್ಗೆ ಹೇಳಿಕೆ ಕೊಡುತ್ತೇನೆಂದು ಹೇಳಿದ್ದಾರೆ. ಅವರ ಇನ್ನೂ ಹೇಳಿಕೆಯನ್ನು ಕೊಡಲಿಲ್ಲ.

ಶ್ರೀ ವಾಟಾಳ್ ನಾಗರಾಜ್ :- ಮಾನ್ಯ ಉಪಾಧ್ಯಕ್ಷರೆ, ಇವತ್ತು ಬಹಳ ಭೀಕರ ಪರಿಸ್ಥಿತಿ ನಿರ್ಮಾಣವಾಗಿದೆ. ಖಾಸಗೀ ಬಸ್‌ಗಳ ಮಾಲೀಕರು ಮುಷ್ಕರ ಮಾಡಿರುವುದರಿಂದ ರಾಜ್ಯದಲ್ಲಿ ಬಹಳ ತೊಂದರೆಯಾಗಿದೆ. ಸಾವಿರಾರು ಬಸ್‌ಗಳನ್ನು ನೇಮಕ ಮಾಡಿದ್ದೇವೆಂದು ಹೇಳಿದರು. ಸಾವಿರ ಬಸ್ಸುಗಳು ಬೀದಿಯಲ್ಲಿ ಇಲ್ಲದೆ ಜನ ಅಲ್ಲಲ್ಲೇ ತೊಂದರೆಗೆ ಸಿಕ್ಕಿದ್ದಾರೆ. ಮಾನ್ಯ ಹಣಕಾಸು ಸಚಿವರಿಗೆ ಯಾರು ಹೇಳಿದರೋ